ಜನಪ್ರಿಯ ಪುಸ್ತಕ ಮಾಲೆ

ವರಪ್ರದಾನ

ಕಂದಗಲ್ಲ ಹಣಮಂತರಾಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕಮಾಲೆ

ವರ ಪ್ರದಾನ

ಕಂದಗಲ್ಲ ಹಣಮಂತರಾಯರು

ಕಂದಗಲ್ಲ ಹಣಮಂತರಾಯರು ೧೮೭೬ರಲ್ಲಿ ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೋಕಿನ ಕಂದಗಲ್ಲ ಗ್ರಾಮದಲ್ಲಿ ಜನಿಸಿದರು. ಇವರ ಮನೆತನದ ವೃತ್ತಿ ಕುಲಕರ್ಣಿಕೆ. ಕಂದಗಲ್ಲದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ವಿಜಾಪುರದಲ್ಲಿ ಪ್ರೌಢಶಾಲೆಯಲ್ಲಿ ಅಭ್ಯಾಸ. ಓದಿನ ಜತೆ ಜತೆಗೆ ನಾಟಕಗಳ ರಚನೆ ಹಾಗೂ ನಾಟಕಗಳಲ್ಲಿ ಪಾತ್ರ. ವಿದ್ಯೆಯಲ್ಲಿ ಒಲವಿಲ್ಲದ್ದರಿಂದ ಮ್ಯಾಟ್ರಿಕ್ಯುಲೇಷನ್‌ವರೆಗೆ ಕಲಿತು ಪುಣೆಗೆ ಹೋಗಿ ಮಿಲಿಟರಿ ಸೇರಿಕೊಂಡರು. ಅಲ್ಲಿ ಮರಾಠಿ ನಾಟಕಗಳೇ ನಡೆಯುತ್ತಿದ್ದುದರಿಂದ ಮರಾಠಿ ಹಿರಿಯ ನಾಟಕಕಾರರ ಪರಿಚಯ.

ಪುಣೆಯಿಂದ ಹಿಂದಿರುಗಿದ ಮೇಲೆ ಬ್ಯಾಂಕೊಂದರಲ್ಲಿ ನೌಕರಿಗೆ ಸೇರಿದರು. ನಂತರ ರಾಜೀನಾಮೆ ನೀಡಿ ಗುಳೇದಗುಡ್ಡದ ರಂಗ ಕಲಾವಿದರ ಸಂಪರ್ಕ ಹೊಂದಿ ಪರ್ವತಿಕರ (ಕಾರಕೂನ) ಮನೆತನದ ಶ್ರೀಮತಿ ಅಂಬಾಬಾಯ್ ಜೊತೆ ವಿವಾಹವಾದರು. ನಂತರ ಗಂಗೂಬಾಯಿಯವರು ಕಟ್ಟಿದ ಶ್ರೀಕೃಷ್ಣ ನಾಟಕ ಕಂಪನಿಯಲ್ಲಿ ಸೇರಿದರು. ತದನಂತರ ಗದುಗಿನ ಭರಮಪ್ಪನ ಕಂಪನಿಗೆ ನಾಟಕ ನಿರ್ದೇಶಕರಾಗಿ ಅದೇ ಸಮಯದಲ್ಲಿ (೧೯೩೬ರಲ್ಲಿ) "ವರ ಪ್ರದಾನ" ಐತಿಹಾಸಿಕ ನಾಟಕ ರಚನೆ. ಸ್ವಂತ ಕಂಪನಿ ಕಟ್ಟಿ 'ಮಾತಂಗ ಕನ್ಯೆ', 'ಬಡತನದ ಭೂತ', 'ಬೆಳ್ಳಿಚಿಕ್ಕಿ' 'ನೆತ್ತರದೌತಣ', 'ಅದ್ಭುತ ರಾಮಾಯಣ' ಮುಂತಾದ ನಾಟಕಗಳ ರಚನೆ. ಅನೇಕ ನಾಟಕಕಾರರಿಗೆ ಮಾರ್ಗ ದರ್ಶನವನ್ನು ನೀಡಿ ರಂಗಭೂಮಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇವರ ಸಾಮಾಜಿಕ ನಾಟಕಗಳಲ್ಲಿ ಪೌರಾಣಿಕ ನಾಟಕಗಳಲ್ಲಿಯೂ ಸಾಮಾಜಿಕ ಚಿತ್ರಣಗಳ ಸಮಸ್ಯೆಯನ್ನು ಬಿಡಿಸಿದ್ದಾರೆ. ಅವರೇ ಬರೆದ 'ಬಡತನದ ಭೂತ' ಅವರು ಸಾಯುವವರೆಗೂ ಅವರ ಬೆನ್ನು ಬಿಡಲಿಲ್ಲ.

ಜನಪ್ರಿಯ ಪುಸ್ತಕಮಾಲೆ

ವರ ಪ್ರಧಾನ

ಕಂದಗಲ್ಲ ಹಣಮಂತರಾಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

VARA PRADANA: A reference Drama by Kandagalla Hanamantharaya, Published by Kannada Pustaka Pradhikara [Kannada Book Authority] Pampa Mahakavi Road, Chamarajapet, Bangalore - 560 018.

Pages : VIII + 164

ಪ್ರಥಮ ಮುದ್ರಣ : ೧೯೯೬

ಬೆಲೆ : ರೂ ೨೧-೦೦

ಮುದ್ರಕರು

ಕೈಲಾಸ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೯/೪, ನಾಗಪ್ಪ ಬೀದಿ, ಪ್ಯಾಲೆಸ್ ಗುಟ್ಟಹಳ್ಳಿ
ಬೆಂಗಳೂರು - ೫೬೦ ೦೦೩, ✆ : ೩೪೪೦೨೦೨

ಮುನ್ನುಡಿ

ಜ್ಞಾನಾರ್ಜನೆಗೆ ಅಕ್ಷರ ಮಾಧ್ಯಮವೇ ಪ್ರಮುಖ ಸಾಧನ. ಆಧುನಿಕ ಕಾಲದಲ್ಲಿ ತಿಳುವಳಿಕೆಯನ್ನು ನೀಡಲು ಅನೇಕ ಮಾಧ್ಯಮಗಳು ಸಿದ್ಧವಾಗಿದ್ದರೂ ಸಾಹಿತ್ಯ ಕೃತಿಗಳಿಗೆ ಮಾತ್ರ ಅಪೂರ್ವವಾದ ಅನನ್ಯತೆ ಇದೆ. ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಅನುಭವಜ್ಞಾನದಿಂದ ಮಾನವನ ಹೃದಯದಲ್ಲಿ ಆತ್ಮಸೌಂದರ್ಯ ವೃದ್ಧಿಸುತ್ತದೆ. ಭವ್ಯವಾದ ಪರಂಪರೆಯ್ನು ನಿರಂತರವಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಜೀವಂತವಾಗಿ ಸಾಗಬೇಕಾಗುತ್ತದೆ. ಈ ಸಾಗುವಿಕೆಯಲ್ಲಿ ಮಾನವರು ತಂತಮ್ಮ ನಡುವಿನ ತಿಳುವಳಿಕೆಯನ್ನು ಪರಸ್ಪರ ಅರಿಯುತ್ತ ವಿಸ್ತರಿಸುತ್ತ ಸಾಮರಸ್ಯಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಇಂತಹ ಅಪರೂಪದ ಜ್ಞಾನಶಕ್ತಿಯನ್ನು ಒಳಗೊಂಡ ಸಾಹಿತ್ಯವನ್ನು ವಾಚಕರಿಗೆ ತಲುಪಿಸುವ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ' ಹೊತ್ತಿದೆ.

ಕರ್ನಾಟಕ ಸರ್ಕಾರ ಬಹುದಿನಗಳಿಂದ ಇಂತಹ ಮೌಲಿಕವಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಯ ಪ್ರಸರಣ ಕಾರ್ಯಕ್ಕೆ ಒತ್ತಾಸೆಯಾಗಿದ್ದರು. ಕುವೆಂಪು ಮತ್ತು ಮಾಸ್ತಿ ಅವರು ಸೇರಿ ಸಂಪಾದಿಸಿಕೊಟ್ಟ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಈ ಇಲಾಖೆಯಿಂದ ಪ್ರಕಟವಾದ 'ಕುಮಾರ ವ್ಯಾಸ ಭಾರತ' ಗ್ರಂಥ ಇಂದಿಗೂ ವಿದ್ವಾಂಸರ, ಜನಸಾಮಾನ್ಯರ ಮೆಚ್ಚಿಗೆಗೆ ಪಾತ್ರವಾಗಿದೆ. ಅನಂತರ 'ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ' ಕಾಲಕ್ಕೆ ಕರ್ನಾಟಕ ಸರ್ಕಾರವು ಇದೇ ಇಲಾಖೆಯ ಮೂಲಕ ಕನ್ನಡದ ಮೌಲಿಕವಾದ ಹಾಗೂ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಆಯ್ದು ಪ್ರಕಟಿಸಿ ಓದುಗರ ಮೆಚ್ಚಿಗೆ ಗಳಿಸಿತು.

ಕರ್ನಾಟಕ ಸರ್ಕಾರ ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಪ್ರಕಟಿಸುತ್ತಿದ್ದ ಇಂತಹ ಅಪರೂಪದ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಲಿದೆ. ಅಲಭ್ಯವಾದ ಕನ್ನಡದ ಗ್ರಂಥಗಳನ್ನು ಜನಸಾಮಾನ್ಯರಿಗೆ ಎಟುಕುವ ಬೆಲೆಯಲ್ಲಿ ಮತ್ತೆ ಪ್ರಕಟಿಸಿ ತಲುಪಿಸುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯ ಗುರಿ. ಹಿಂದಿನ ಪೀಳಿಗೆಗಳ ಅನೇಕ ಉತ್ತಮ ಕೃತಿಗಳು ಇಂದಿನ ಪೀಳಿಗೆಯ ಓದುಗರಿಗೆ ಲಭ್ಯಗೊಳಿಸುವುದೇ ಈ ಯೋಜನೆಯ ಆಶಯವಾಗಿದೆ. ಅಲಭ್ಯವಾಗಿರುವ ಇತ್ತೀಚಿನ ಉತ್ತಮ ಕೃತಿಗಳನ್ನೂ ಈ ಮಾಲೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ.

ಈ ಮಾಲೆಯಲ್ಲಿನ ಪುಸ್ತಕಗಳನ್ನು ಪ್ರಕಟಿಸಲು ನೆರವಾದ ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೆ, ಪುಸ್ತಕ ಪ್ರಾಧಿಕಾರದ ಸದಸ್ಯರಿಗೆ , ವರ ಪ್ರದಾನ ಪುಸ್ತಕವನ್ನು ಪ್ರಕಟಿಸಲು ಅನುಮತಿ ನೀಡಿದ ಶ್ರೀಮತಿ ಸೋನುಬಾಯಿ ಬಿ. ಕಾರಕೂನ ಅವರಿಗೆ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಕೈಲಾಸ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಅವರಿಗೆ ಕೃತಜ್ಞತೆಗಳು.

ನೆಲಮನೆ ಕೆ. ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ವರ ಪ್ರದಾನ

ವರ ಪ್ರದಾನ

ಅರ್ಥಾತ್

ವಿಜಯನಗರ ಸಾಮ್ರಾಜ್ಯ

೧ನೇ ಅಂಕ

೧ನೇ ಪ್ರವೇಶ

(ಸ್ಥಳ :- ತುಂಗಾತಟಾಕ ಸಮಯ :- ಸಂಧ್ಯಾಕಾಲ)
(ಮಾಧವಾರ್ಯರು ಭುವನೇಶ್ವರಿಯ ಸ್ತೋತ್ರ ಮಾಡುವರು)

(ಮೂರು ಕಮಲಗಳು)

ಮಾಧವಾಚಾರ್ಯ : ॥ಸೀಸ ಪದ್ಯ॥

ಪರಮ ಮಂಗಲ ದೇವಿ । ಕರಿನಾಡ ಕುಲದೇವಿ।
ಕರುಣಿಪುದು ನೀ । ವರಧರ್ಮದೇವಿ ॥೧॥

ವರವೇದಧಾರೆ । ದುರಿತ ತಾಪ ವಿದೂರೆ।
ಸರಿ ನಿನ್ನ ಸಮನಾರೆ । ತ್ರಿಜಗದೊಳು ॥೨॥

ಮೂರು ತೆರ ಶಕ್ತಿಗಳು
ಕೋರುವೆನು ವರ ಜನನಿ ನಿಮ್ಮ ಬಳಿಯೇ।
ಧರುಣಿಯನುಮುತ್ತಿರುವ ಕಾಳಿಮೆಯ ತೆರೆಯಲಿ । ಪೊರೆ ದೇವಿ.
ಶ್ರೀದೇವಿ ಮಮಭಾಗ್ಯ ದೇವಿ ॥೩॥

ಜಗನ್ಮಂಗಲೇ ಈ ಮಾಧವನ ಹೃದಯವನ್ನು ಎಷ್ಟು ಪರೀಕ್ಷಿಸಬೇಕೆನ್ನುವಿ ನಿನ್ನ ಮಾಯೆಯ ನಾಟಕ ಪ್ರಯೋಗಕ್ಕೆ ಪ್ರಧಾನ ರಂಗಭೂಮಿಯೆನಿಸುವ ಈ

ಭೂಮಿಯ ಮೇಲೆ ಅನೀತಿ, ಅತ್ಯಾಚಾರ, ಅಧರ್ಮಗಳು, ಅವ್ಯಾಹತವಾಗಿ ತಾಂಡವ ನೃತ್ಯವನ್ನು ಮಾಡುತ್ತಿರುವವು. ಧರ್ಮ ಗ್ಲಾನಿಯ ಕಾಳಿಮೆಯು ಭಾರತವನ್ನು ಮುತ್ತಲಾರಂಭಿಸಿದೆ. ಈ ಭಾರತದ ದುರ್ದೆಶೆಯ ಚಿತ್ರವು ಮುತ್ತಲಾರಂಭಿಸಿದೆ. ಈ ಭಾರತದ ಚಿತ್ರವು ನಿನಗೆ ಕಾಣುವದಿಲ್ಲವೆ? ಅಮ್ಮಾ! ಪರಬ್ರಹ್ಮನು ಶ್ರೀ ರಾಮಕೃಷ್ಣರ ಹೆಸರಿನಿಂದ ಈ ಭಾರತಾಂಬೆಯ ತೊಡೆಯ ಮೇಲೆ ಆಡಲಿಲ್ಲವೆ? ಮಾತೆ! ಭಾರತ ದೇಶವು ಶಿಬಿ, ಶಿರಿಯಾಳ, ಯುಧಿಷ್ಠಿರರ ಪುಣ್ಯಭೂಮಿ. ಭಗವಾನ್ ಶ್ರೀ ಕೃಷ್ಣ- ನರವೀರ ಪಾರ್ಥರ ಕರ್ಮಭೂಮಿ. ವಶಿಷ್ಟ, ವಿಶ್ವಾಮಿತ್ರ, ಬುದ್ಧ, ಶಂಕರಾರ್ಯ ಧರ್ಮಭೂಮಿ. ಮಾತೆ! ಇದು • ನನ್ನ ಜನ್ಮಭೂಮಿ, ಮಂಗಲಪ್ರದಳೇ! ಕೃಪಾಳುವನ್ನು ಸುರಿಸಿ ನನ್ನ ಮನದಿಚ್ಛೆಯನ್ನು ಪೂರ್ಣಗೊಳಿಸು.

ಭುವನೇಶ್ವರಿ: ಬಾಳಾ ಮಾಧವಾ! ನಿನ್ನ ಇಚ್ಛೆಯು ಪೂರ್ಣವಾಗುವದು. ಆದರೆ.................................. (ಅದೃಶ್ಯಳಾಗುವಳು)

ಮಾಧವಾಚಾರ್ಯ : (ಆನಂದದ ಅತಿರೇಕದಿಂದ) ॥ ಸೀಸ ಪದ್ಯ॥

(ಭಾಮಿನಿ ಷಟ್ಪದಿ)

ವಾಣಿ ವೀಣಾ ಪಾಣಿ ಕಮಲಜೆ
ಕಾಣಿ ಪನ್ನಗ ವೇಣಿ ಶಾರದೆ.
ಜ್ಞಾನ ಕೌಸ್ತುಭ ಖಣಿಯೇ ! ಸುರುಚಿರ ಕಲೆಯ ಕಲ್ಯಾಣಿ
ವಾಣಿ ನಿಮ್ಮಯ ಕರುಣ ಕರುಣಿಸೆ
ಜಾಣ ನೆನಪನು ಜಗದಿ ಒಡಮತಿ.
ಗಾನ ಗೈಯುವನು ತಣಿಸಿ ಸಾಮವ ಕುಣಿಸಿ ಕ್ಷೋಣಿಯನು

ಕಂಡೆ ಕಂಡೆನು ರವಿ ಕೋಟಿ ರಣದಿಂ । ಮಂಡಿತವಾದ ವಿಮಲ ಮೂರ್ತಿಯನ್ನು

ಲಕ್ಷ್ಮಿ (ಕಮಲದಿಂದೆದ್ದು) ಬಾಳಾ ಮಾಧವಾ ನಿನ್ನ ಇಚ್ಛೆಯು ಪೂರ್ಣವಾಗುವದು.

ಆದರೆ... (ಅದೃಶ್ಯಳಾಗುವಳು)

॥ ಸೀಸ ಪದ್ಯ ॥ (ಭಾಮಿನಿ ಷಟ್ಪದಿ)

ಕಂಡೆ ಕಂಡೆನು ಕೋಟಿ ಶತಶತ.
ಚಂಡಕರ ಮಾನಿನಿಯ ಕಂಡೆನು
ಕಂಡಿಹ ನೆಲವೋ ಪಾಲ್ಗಡ ಕುವರಿಯಂಬುದನು

ಪುಂಡರೀಕಾ ನೆನೆಯ ಕರುಣದಿ
ಕುಂಡಲಂಗಳು ಬೆಳಕು ಚಲ್ಲಿದೆ.
ಬೆಂದ ಹೊನ್ನಿನ ಜಣಯ ಜನಕೆ ಸಿರಿಯ ಕರುಣೆಯಲಿ.

ಸರಸ್ವತಿ (ಕಮಲದಿಂದೆದ್ದು) ಬಾಳಾ ಮಾಧವಾ ನಿನ್ನ ಇಚ್ಛೆಯು ಪೂರ್ಣವಾಗುವದು.

ಆದರೆ... (ಅದೃಶ್ಯಳಾಗುವಳು)

ಮಾಧವ ||ಸೀಸಪದ್ಯ|| (ಭಾಮಿನಿ ಷಟ್ಪದಿ)

ಶಿವನ ಮೆಚ್ಚಿಸಿ। ಅವನ ಕುಣಿಸಿಹ
ಭುವನ ಸುಂದರೀ ನೀನೆ ಪಾರ್ವತಿ.
ಧವಳೆ ಶೈಲದ ಹೃದಯ ಕಠಿಣತೆ
ಹೊಯ್ದು ಕೋಮಲೆಯೇ
ಶಿವೆಯ ದರ್ಶನದಿಂದ ಹೃದಯವು
ದಿವಸ ಮಣಿಧವಲಿಮೆಯಗೊಳ್ಳತೆ
ಭುವನ ವಿಜಯದ ದಾರಿ ಕಂಡಿತು. ತಾಯ ಜಗಕಾಯ

ಸಾಕು ಜಗನ್ಮಂಗಲೇ ! ಸಕೃತ ದರ್ಶನಕ್ಕೆ ಇಷ್ಟೇ ಸಾಕು. ನನ್ನ ಮನದಾಶೆಯನ್ನು ಪೂರೈಸಲಿಕ್ಕೆ ಯೋಗ್ಯರಾದವರೆಂದರೆ ಹುಕ್ಕಬುಕ್ಕರೇ. ತಾಯಿನಾಡಿನ ದುಃಖವನ್ನು ದೂರೀಕರಿಸುವುದಕ್ಕಾಗಿ ಬೇಕಾಗುವ ಕ್ಷಾತ್ರ ತೇಜವು ಹುಕ್ಕಬುಕ್ಕರಿಂದಲೇ ಪ್ರಕಟಿಸಲ್ಪಡುವುದು (ನೋಡಿದಂತೆ ನಟಿಸಿ) ನನ್ನ ಸಚ್ಛಿಷ್ಯನು ಬರುತ್ತಿರುವನು ಅಹಹ ಮುಖದ ಮೇಲೆ ಕ್ಷಾತ್ರ, ತೇಜವು ಉಕ್ಕುತ್ತಿರುವುದು. ಬಾ! ಹುಕ್ಕ ಕುಮಾರಾ : ಸದೈವ ವಿಜಯಶಾಲಿಯಾಗು. ಆನೇಗುಂದಿಯಲ್ಲಿ ಕ್ಷೇಮವಷ್ಟೇ? ಜಂಬುಕೇಶ್ವರ ಮಹಾರಾಜರು ಒಳಿತಾಗಿದ್ದಾರೆಯೆ?

ಹುಕ್ಕ ಭಗವಾನರ ಅನುಗ್ರಹಕ್ಕೆ ಪಾತ್ರವಾದ ಆನೇಗುಂದಿಯ ವಾತಾವರಣವು ಪ್ರಮೋದ ಪರಿಮಳಗಳಿಂದ ಪುನೀತವಾಗಿ ಗಂಭೀರವಾಗಿರುವುದು. ಗುರುಮಹಾರಾಜ ಜಂಬುಕೇಶ್ವರ

ಪ್ರಭುಗಳು ಸರ್ವಾಧಿಕಾರಿಯ ಪದವನ್ನು ನನಗೆ ಕೊಡುವವರಿದ್ದಾರೆ.

ಮಾಧವ — ಬಹು ಆನಂದ! ಕುಮಾರ, ಸರ್ವಾಧಿಕಾರಿಯ ಪದಕ್ಕೆ ನೀನು ಯೋಗ್ಯನೇ ಇರುತ್ತೀ.

ಹುಕ್ಕ — ಗುರುಮಹಾರಾಜ! ಇಷ್ಟರಿಂದಲೇ ಹೃದಯಕ್ಕೆ ಶಾಂತಿಯಾಗಲಾರದು. ಭಾರತಿಯ ಬವಣೆಯು ದೂರವಾಗುವವರೆಗೆ ಹೃದಯದ ತಳಮಳವು ಹರಿದು ಹೋಗಲಾರದು. ಪರಮಪಾವನೆಯಾದ ಭಾರತಿಯ ಮೇಲೆ ದಿನವೂ ರಕ್ತವು, ಸುರಿಸಲ್ಪಡುತ್ತದೆ. ಧರ್ಮಗ್ಲಾನಿಯ ಹೊಗೆಯಿಂದ ಜನತೆಯ ಪವಿತ್ರ ದೃಷ್ಟಿಯು ಮಂದವಾಗುತ್ತ ನಡೆದಿದೆ. ಒಟ್ಟಾರೆ ಹಿಂದೂ ಮಾತೆಯ ಹಿಂದುತ್ವವು ಲಯವಾಗುವ ಚಿನ್ಹೆ ತೋರುತ್ತಿದೆ.

ಮಾಧವಾ — ಕುಮಾರಾ! ಭರತ ಭೂಮಿಯನ್ನು ಕಾಯುವದಕ್ಕಾಗಿ ಪರಬ್ರಹ್ಮನು ಹಿಮಾಚಲ ರೂಪದಿಂದ ಉತ್ತರದಲ್ಲಿ ನೆಲೆಸಿರುವನು. ಜಗನ್ಮಾತೆಯು ಕನ್ಯಾಕುಮಾರಿಯ ರೂಪದಿಂದ ದಕ್ಷಿಣದಲ್ಲಿ ನಿಂತಿರುವಳು. ಸಮುದ್ರ ರಾಜನಂತೂ ಭಾರತದ ಮೂರು ಕಡೆಯ ಕಾವಲದ ಗುತ್ತಿಗೆಯನ್ನು ಹೊತ್ತಿರುವನು. ಭಾರತದ ಉದ್ಧಾರಕ್ಕಾಗಿ ಪರಬ್ರಹ್ಮಶಕ್ತಿಯು ಸದೈವ ಜಾಗೃತವಾಗಿರುತ್ತದೆ. ಕುಮಾರಾ, ಸೃಷ್ಟಿಮಾತೆಯ ಮಕ್ಕಳಾದ ನಾವು ಬೆಳಕು ಕತ್ತಲೆಗಳಂತಿರುವ ಸುಖ ದುಃಖಗಳನ್ನು ಅನುಭೋಗಿಸದಿಲ್ಲವೆ? ಆದ್ದರಿಂದ...........

ಹುಕ್ಕ — ಗುರು ಮಹಾರಾಜ - ಸದ್ಯದ ಪರಿಸ್ಥಿತಿ ಹರಿದು ಹೋಗಲಿಕ್ಕೆ ಇನ್ನೂ ಕಾಲಾವಧಿಯುಂಟೆ? ಅಲ್ಲಾವುದ್ದೀನ, ಮಲೀಕ ಕಾಫರನು ನಿರ್ಮಿಸಿದ ಅನಾಹುತದ ಮಂದಿರಕ್ಕೆ ತುಘಲಕ ಸುಲ್ತಾನನು ಕಳಸವನ್ನಿಟ್ಟಿರುವನು. ಭಾರತಾಂಬೆಯು ಪರಚಕ್ರಗಳ ಆಘಾತದಿಂದ ಗಡಗಡನೆ ನಡುಗುತ್ತಿರುವಳು. ಉತ್ತರ

ಭಾರತೀಯರ ಗೋಳಕ್ಕಂತೂ ಮಿತಿಯೇ ಇಲ್ಲದಂತಾಗಿದೆ. ಮಹಾರಾಜ!

ಮಾಧವ ಹೀಗೆ ನಿರಾಶೆಯ ಉದ್ಗಾರಗಳನ್ನು ತೆಗೆಯಬೇಡ. ಭಾರತೀಯ ಬವಣೆಯನ್ನು ಬಿಡಿಸುವದಕ್ಕಾಗಿ ಭಗವಂತನು ಭೂಮಿಗಿಳಿದು ಬರಲಿಲ್ಲವೆ? ಯಶೋಧರಳಾದ ಭಾರತಿಯ ಪುಣ್ಯರಾಶಿಯು ಎಂದೂ ಕ್ಷಯವಾಗಲಾರದು. ಅಂತೇ ಭರತಭೂಮಿಯನ್ನು ಅಮೃತ ಭೂಮಿಯೆಂದೂ, ಭಾರತ ಪುತ್ರರನ್ನು ಅಮೃತ ಪುತ್ರರೆಂದೂ ಸ್ರುತಿ, ಸ್ಮೃತಿಗಳೇ ಘೋಷಿಸುತ್ತವೆ. ಕುಮಾರಾ! ರಾಷ್ಟ್ರಮಾತೆಯ ಈ ದುಃಖಸ್ಥಿತಿಯನ್ನು ದೂರೀಕರಿಸುವದಕ್ಕಾಗಿ ದಿವ್ಯಶಕ್ತಿಯನ್ನು ಭುವನೇಶ್ವರಿದೇವಿಯು ದಯಪಾಲಿಸಿರುವಳೆಂದು ತಿಳಿ (ಬುಕ್ಕ ಬರುವನು).

ಮಗುವೆ ಚಿರಾಯುವಾಗು. ಉತ್ತರ ಭಾರತದ ವೃತ್ತಾಂತವೇನು? ಸುಲ್ತಾನನು ತನ್ನ ದಾನವೀ ಕೃತಿಯನ್ನು ಹಾಗೆ ಸಾಗಿಸಿರುವನೇ?

ಬುಕ್ಕ ಉತ್ತರ ಭಾರತವು ಸಂಕಟದ ಬೇಗೆಯಲ್ಲಿ ಸುಟ್ಟು ಹೋಗುತ್ತಲಿದೆ. ದಕ್ಷಿಣ ಭಾರತವು ಕೂಡಾ ಆ ಸೆಕೆಯಿಂದ ಕಂದಿ ಹೋಗುತ್ತಲಿದೆ. ಆದರೆ ತಮ್ಮ ದಿವ್ಯವಾದ ಸದ್ಬೋಧಾಮೃತವನ್ನು ದಕ್ಷಿಣ ಭಾರತಕ್ಕೆ ಪಾನಮಾಡಿಸಿರುವೆ. ಕರ್ನಾಟಕದ ಹೃದಯ ಕರಂಡಕದಲ್ಲಿ ಸದ್ಬೋಧ ಸುಧೆಯು ತುಂಬಿದ್ದರಿಂದ ಕರ್ನಾಟಕವು ಸ್ವಾತಂತ್ರ್ಯ ಮಂದಿರವನ್ನು ನಿರ್ಮಿಸುವದಕ್ಕಾಗಿ ಹುರಿದುಂಬಿ ತಮ್ಮ ಆಜ್ಞೆಯ ಹಾದಿಯನ್ನು ನೋಡುತ್ತಲಿದೆ ಗುರುಮಹಾರಾಜ!

ಮಾಧವ ಧನ್ಯ ! ಧನ್ಯ ! ರಾಮಲಕ್ಷ್ಮಣರಂತೆ ಕಂಗೊಳಿಸುವ ನಿಮ್ಮ ಗುರುತ್ವವನ್ನು ನಾನು ವಹಿಸಿದ್ದರಿಂದ ನನಗೆ ಅತ್ಯಾನಂದವಾಗುತ್ತಲಿದೆ.

ಬುಕ್ಕ ಭಗವಾನ್! ಪರಮತಪಸ್ವಿಗಳಾದ ವಿಶ್ವಾಮಿತ್ರರು ಆ ರಾಮಲಕ್ಷ್ಮಣರಿಗೆ ಲಭಿಸಿದಂತೆ ತಾವು ನಮಗೆ ಲಭಿಸಿದ್ದು ನಮ್ಮ ಜನ್ಮಗಳ ಸಾರ್ಥಕವಾಯಿತು.

-: ಪದ್ಯ :-

ಜ್ಞಾನ ಕಲಾನಿಧಿ ತಾ ಕೃಪಾಮಯ
ಧ್ರುತಿಯ ಮೇರು ಗುರು ಗುರುದೇವ.
ಹರಿಹರ ಮೂರ್ತಿ ಸಮಾ ಗುರುದೇವಾ.
ಸುರತು ನೀನೇ ಗುರುವೆನುತಲಿ ನಂಬಿರುವೆ.

ಮಾಧವ — ನಿಮ್ಮ ಸಾಹಸ ಶೌರ್ಯಗಳಿಂದ ಧರ್ಮಸಾಮ್ರಾಜ್ಯವು ಕರ್ನಾಟಕದಲ್ಲಿ ಬೇಗನೇ ಸ್ಥಾಪಿಸಲ್ಪಡುವುದೆಂದು ಭುವನೇಶ್ವರಿ ಮಾತೆಯು ವರಪ್ರದಾನ ಮಾಡಿರುವಳ "ಭುವನೇಶ್ವರೀ ಮಾತಾಕಿ ಜೈ"

ಹುಕ್ಕ ಬುಕ್ಕ : "ಭುವನೇಶ್ವರೀ ಮಾತಕೀ ಜಯ"

೨ನೇ ಪ್ರವೇಶ

ಸ್ಥಳ : ಕುಂಜವನದ ಮುಂಭಾಗ

ಕರಾಳ — (ಪ್ರವೇಶಿಸಿ) ನಿಜವಾಗಿ ನೋಡಿದರೆ ನಾನಿಷ್ಟು ದೊಡ್ಡ ಮನುಷ್ಯನಾಗುವೆನೆಂಬುದನ್ನು ಕನಸ್ಸಿನಲ್ಲಿ ಸಹ ಕಂಡಿದ್ದಿಲ್ಲ. ರೌದ್ರದಾಮರ ಚಾಕರಿಯನ್ನು ಕನಸ್ಸಿನಲ್ಲಿ ಸಹ ಕಂಡಿದ್ದಿಲ್ಲ. ಅವರ ಚಾಕರಿಯ ಬದಲಾಗಿ ಗೆಳೆತನದ ಲಾಭವಾಯಿತು. ಈ ಅಪೂರ್ವವಾದ ಯೋಗಕ್ಕೆ ಈ ನನ್ನ ಲೆಕ್ಕಣಿಕೆಯೇ ಕಾರಣವಾಗಿದೆ. ಜಗತ್ತಿನ ಸಕಲಜೀವ ರಾಶಿಗಳ ಪಾಪಪುಣ್ಯಗಳ ಲೆಕ್ಕವನ್ನಿಡುತ್ತಿರುವ ಆ ಚಿತ್ರಗುಪ್ತರ ಲೆಕ್ಕಣಿಕೆಗಳು ಸಹ ನನ್ನ ಲೆಕ್ಕಣಿಕೆಯ ಪಾಸಂಗಕ್ಕೆ ಸಹ ಬರಲಾರವು. ನಾನು ಒಬ್ಬರ ಅಕ್ಷರದಂತೆ, ಅಕ್ಷರಗಳನ್ನು ಬರೆಯುವೆ. ಈ ಕಲೆಯಲ್ಲಿ ನಾನೊಳ್ಳೆ ನಿಷ್ಣಾತನಾಗಿದ್ದೇನೆ. ನನ್ನ ಮುಖದ ಮೇಲಾದರೂ ಶ್ರೀಮಂತಿಕೆಯ ಕಳೆಯು ಇರುವದೋ ಹೇಗೆ ನೋಡುವಾ (ಕಿಸೆಯೊಳಗಿನ ಕನ್ನಡಿ ತೆಗೆದು ನೋಡಿ) ಅದೆ! ಅದೆ !

ಸೌಂದರ್ಯವಾದ ಮುಖಲಕ್ಷಣವದೇ. ಶ್ರೀಮಂತಿಕೆಯ ಕಳೆ ಅದೇ! (ಎಂದು ವಕ್ರದಿಂದ ನಿಲ್ಲುವನು)

ಶಿವಾಂಗಿ (ಪ್ರವೇಶಿಸಿ) ಕರಾಳರಾವ?

ಕರಾಳ ಯಾರು? ನನ್ನ ಮೋಹದ ಅರಗಿಳಿಯು.

ಕರಾಳ : ಪದ್ಯ

ಬಾರೆಸ್ಮರರಾಣಿ। ಭಾಮಾರತ್ನ ಕೋಕಿಲವಾಣಿ। ಚಾರುಪಂಕಜ ಪಾಣಿ। ದಾರಿಯುನೊಳ್ಪ ನಿನ್ನ ಜಾಣು॥ ಟೊಂಕ ಬಲು ಸಂಣೂ। ಇರುವದು ಬಂಣಾತೊಳೆದ ಚಿನ್ನಾ। ಕಮಲ ಪುಷ್ಪದ ಕಣ್ಣು। ನಾಡಿಗೆ ಮಿಗಿಲು ಈ ಹೆಣ್ಣೂ। ಚಾರು ಜಲಧಾತ್ರಿ ಚಂದ್ರ ತಾನು ನಭದಿ ಹೊಳೆವಂತೆ। ತಾರೆ ಬಿದ್ದಂತೆ ರತ್ನ ಹೊಳೆವಂತೆ ಪ್ರೇಮಲೇ। ಕೋಮಲೇ, ಮೋಹಿನಿಯೇ ಚಂದ್ರಿಕೆಯೇ!

ವರ್ಣ ನೋಡಿ ನಿನ್ನ ತಾಳಿತು ಮನದಿ ಚಿನ್ನಾ ಬಿನ್ನಾ ! ಚಾರು ಭಾಗ್ಯದ ರನ್ನಾ। ಪಾಡುವೆ ಬಾಯ್ತುಂಬ ನಿನ್ನ ॥ ....

ಏ ಶಿವಾಂಗಿ ! ನನ್ನ ಭಾಗ್ಯಕ್ಕೆ ಮೇರೆಯೇ ಇಲ್ಲ.

ಶಿವಾಂಗಿ ಅದು ಹೇಗೆ?

ಕರಾಳ ನನ್ನ ಮುಖದ ಮೇಲೆ ರಾಜಲಕ್ಷಣವುಂಟು. ಒಂದಿಲ್ಲೊಂದು ದಿನ ನಾನು ಸಿಂಹಾಸನವ ಏರುವದೇ ನಿಶ್ಚಯ. ನೋಡು! ನಾನು ಒಂದು ಹೊಸ ರಾಜ್ಯ ಸ್ಥಾಪಿಸುವೆ "ರಾಜಾ ಕರಾಳರಾವ ರೌದ್ರದಾಮ ಕರ್ನಾಟಕದ ಪದಶಾಹಿ" ಎಂಬ ಪದವಿಯನ್ನು ಧರಿಸುವೆ. ನೀನು ಆ ಹೊಸ ರಾಜ್ಯದ ಸಾಮ್ರಾಜ್ಞಿಯಾಗುವಿ ಚಿಂತಿಸಬೇಡ.

ಶಿವಾಂಗಿ (ಸ್ವಗತ) ಇಂಥ ಶುಂಭನಿಂದ ರೌದ್ರದಾಮರು ಆವಕಾರ್ಯವನ್ನು ಮಾಡಿಸಿಕೊಳ್ಳುವರೋ ಏನೋ...

ಕರಾಳ ಯಾಕೆ ಮೌನವನ್ನು ಧರಿಸಿದಿರಿ? ನಿಜವಾಗಿ ನಿನ್ನನ್ನು ನನ್ನ ಅರ್ಧಾಂಗಿಯನ್ನಾಗಿ ಮಾಡಿಕೊಳ್ಳುವೆ.

ಶಿವಾಂಗಿ ಕರಾಳರಾವ! ನಿನ್ನಿನ ದಿನ ನೀವು ಪ್ರಧಾನರ ಜೊತೆಯಲ್ಲಿ ಕಾಣುತ್ತಿರಲಿಲ್ಲ. ತಮ್ಮ ಸವಾರಿಯು ಬೇರೆ ಕಡೆಗೆ ಹೋಗಿತ್ತೇನು?

ಕರಾಳ ಅಹುದು ಶಿವಾಂಗಿ ನಾನು ಆ ಸ್ಥಳವನ್ನು ಮಾತ್ರ ಹೇಳಲಾರೆ....

ಶಿವಾಂಗಿ ಅದೇಕೆ?

ಕರಾಳ ಪುರುಷರ ಕಾರಭಾರದಲ್ಲಿ ಸ್ತ್ರೀಯರು ಮನಸ್ಸು ಹಾಕಕೂಡದು. ನನಗಂತೂ ಸ್ತ್ರೀಯರ ಹೆಚ್ಚಾದ ಕಾರಭಾರವೇ ಸೇರುವದಿಲ್ಲ. ನನ್ನ ಪತ್ನಿಯಾಗುವವಳಿಗೆ ನನ್ನ ಈ ಸ್ವಭಾವವನ್ನು ಮೊದಲೇ ತಿಳಿಸಿಕೊಡುತ್ತೇನೆ.

ಶಿವಾಂಗಿ ಹೀಗೋ ...... (ಎಂದು ಹೋಗಹತ್ತವಳು)

ಕರಾಳ ನಿಲ್ಲು ಬಂಗಾರಿ ! ಸಿಟ್ಟಿಗೇಳಬೇಡ. (ಸ್ವ) ಸಿಟ್ಟಂತೂ ಮೂಗಿನ ಮೇಲೆ (ಪ್ರ) ಶಿಂಗಾರದೊಳಗಿನ ಬಂಗಾರವಾದ ಶಿವಾಂಗಿಯೇ ಹಟತೊಟ್ಟು ನನ್ನ ಗುಟ್ಟಿನ ಹುಟ್ಟನ್ನು ತಿಳಿಯಬೇಕೆಂದು ಮಾಡಿರುವಿಯಾ?

ಶಿವಾಂಗಿ (ಸ್ವ) : ಸ್ಪಷ್ಟವಾಗಿ ಕೇಳಿದರೆ ಈ ಮೂರ್ಖನು ಹೇಳುವದಿಲ್ಲಾ; ಮಾತಿನ ಭರದಲ್ಲಿ ಎಲ್ಲವನ್ನು ಸಾದ್ಯಂತವಾಗಿ ಹೇಳದೆ ಬಿಡುವದಿಲ್ಲ. (ಪ್ರ) ಕರಾಳರಾವ! ರೌದ್ರದಾಮಪ್ರಧಾನರು ಸಹ ತಮ್ಮಂತೆ ಹೊಸ ರಾಜ್ಯವನ್ನು ಸ್ಥಾಪಿಸುವ ವಿಚಾರದಲ್ಲಿರುವರು.

ಕರಾಳ ಛೀ ಹುಚ್ಚಿ! ಅವರ ವಿಚಾರವು ಹೀಗಲ್ಲಾ. ಅವರು ಈ ರಾಜ್ಯದ ಒಡೆಯರಾಗಬೇಕೆಂದು ಇಚ್ಛಿಸುತ್ತಿರಬಹುದು. ನನಗೇನು ಗೊತ್ತಿಲ್ಲ. ಗೊತ್ತಿದ್ದರೂ ಹೇಳುವಂತೆಯಿಲ್ಲ.

ಶಿವಾಂಗಿ ಹೇಳದಿದ್ದರೆ ಬಿಡಿ. ನನಗೇನು ಮಾಡತಕ್ಕದ್ದು, ಅಂತೂ ಪ್ರಧಾನರು ಪ್ರಧಾನಿಕೆಯನ್ನು ದೂಡಿ ಅರಸೊತ್ತಿಗೆಯನ್ನು ಎತ್ತಿ ಹಾಕಬೇಕೆನ್ನುವಿರೋ?

ಕರಾಳ ಅವರ ಇಚ್ಛೆಯ ಹೀಗೆಯಲ್ಲಾ. ಮಹಾರಾಜರೇ ಅವರಿಗೆ ರಾಜದಂಡವನ್ನು ಒಪ್ಪಿಸಬೇಕೆಂದು ಮಾಡಿರುವರು.

ಶಿವಾಂಗಿ ಅದು ಹೇಗೆ?

ಕರಾಳ ಜಂಬುಕೇಶ್ವರ ಪ್ರಭುಗಳು ತಮ್ಮ ಮಗಳಾದ ಲಲಿತಾಂಬಿಕೆಯನ್ನು ರೌದ್ರದಾಮ ಪ್ರಧಾನರಿಗೆ ಲಗ್ನ ಮಾಡಿಕೊಡುವವರಿದ್ದಾರೆ. ಆ ರಾಜ ಹಂದರದಲ್ಲಿ ನಮ್ಮಿಬ್ಬರ ಲಗ್ನವಾಗಿ ಹೋಗಲಿ.

ಶಿವಾಂಗಿ (ಸ್ವಗತ) ಹೀಗೆಹಾದಿಗೆಬಾ. ರೌದ್ರದಾಮನ ಕೃಷ್ಣ ಕಾರಸ್ಥಾನ ಒಡೆಯುವದೇ ನನ್ನ ಉದ್ದೇಶವಾಗಿದೆ (ಪ್ರಕಟ) ಕರಾಳರಾವ! ಲಲಿತಾಂಬಿಕಾದೇವಿಯವರು ಹುಕ್ಕ ಕುಮಾರರನ್ನು ಪ್ರೀತಿಸುತ್ತಿರುವರು. ಅವರನ್ನು ವರಿಸುವೆ ಎಂದು ಕುಮಾರಿಯವರು ಹಟತೊಟ್ಟಿರುವಂತೆ. ಮಗಳ ವಿರುದ್ಧವಾಗಿ ಹೋಗುವದು ಮಹಾರಾಜರಿಗೆ ಆಗದ ಮಾತು.

ಕರಾಳ ವರಂಗೋಳದಿಂದ ಓಡಿ ಬಂದ ಆ ಹುಕ್ಕನ ಕುಲಗೋತ್ರಗಳು ಯಾರಿಗೆ ಗೊತ್ತುಂಟು? ತಾನು ಉಚ್ಚ ಕುಲದವನೆಂದು ಆತನು ಹೇಳುತ್ತಿರಬಹುದು. ಅವನ ಮಾತಿಗೆ ಕುಮಾರಿಯು ಮರುಳಾದರೆ ಮಹಾರಾಜರು ಮರಳಾಗುವರೆ? ಇದೆಂದಿಗೂ ಆಗದ ಮಾತು. ಇತ್ತಿತ್ತಲಾಗಿ ಹುಕ್ಕರು ಮಾಧವನೆಂಬ ತಲೆ ತಿರುಕ ಬ್ರಾಹ್ಮಣರ ಶಿಷ್ಯನಾಗಿರುವನು. ಆ ಹಾರವನ ಮನಸ್ಸಿನಲ್ಲಿ ಸದಾ ರಾಜ್ಯ ಕ್ರಾಂತಿಯ ವಿಚಾರ ಅಂಥವನ ಬೆನ್ನು ಹತ್ತಿದ ಹುಕ್ಕನಿಗೆ ತಮ್ಮ ಹೊಟ್ಟೆಯ ಕರುಳನ್ನು ಕೊಡುವರೆ?

ಶಿವಾಂಗಿ ಏನೇ ಆಗಲಿ ರೌದ್ರದಾಮರ ಲಗ್ನಕ್ಕೆ ಹುಕ್ಕ ಕುಮಾರರು ಅಡ್ಡಾಗುವರೆ?

ಕರಾಳ ಏನು? ಏನು ? ಆ ಹುಕ್ಕನು ಅಡ್ಡೈಸುವನೋ! ಶಿವಾಂಗಿ ರೌದ್ರದಾಮರ ಲಗ್ನಕ್ಕೆ ವಿಘ್ನ ಬರಬಾರದೆಂದು ವಿಘ್ನೇಶ್ವರನ ಪ್ರಸಾದವನ್ನು ದೊರಕಿಸಿರುವೆನು (ಕಿಸೆಯೊಳಗಿನ ಎರಡು ಪತ್ರ ತೋರಿಸಿ) ಈ ಪ್ರಸಾದದ ಮಹಿಮೆಯಿಂದ ಹುಕ್ಕನ ಪಕ್ಕೆಲುಬುಗಳು ಮುರುಯುವವು ತಿಳಿಯಿತೆ? ಬೆಳದಿಂಗಳ ಮೊಗದ ಶಿವಾಂಗಿಯೊಡನೆ ನನ್ನ ಲಗ್ನಕ್ಕೆ .... (ಮರಾಳ ಬರುವನು)

ಮರಾಳ ಶಿವಾಂಗಿಯೊಡನೆ ಲಗ್ನವಾರದು? ನನ್ನ ಶಿವಾಂಗಿ

ಕರಾಳ ಏನು ನನ್ನ ಶಿವಾಂಗಿ......

ಮರಾಳ ಅಹುದು ನನ್ನ ಶಿವಾಂಗಿ......

ಕರಾಳ ಅಲ್ಲ ನನ್ನ ಶಿವಾಂಗಿ.....

ಮರಾಳ ಮೂಢಾ ನನ್ನ ಶಿವಾಂಗಿ

ಕರಾಳ ಮರಾಳಾ! ಬೀದಿಯಲ್ಲಿ ಹೀಗೆ ವಾದಿಸುವದು ತರವಲ್ಲ. ಶಿವಾಂಗಿಯನ್ನೇ ಕೇಳೋಣ ಶಿವಾಂಗೀ ನೀನು ನನ್ನ ಶಿವಾಂಗಿ ಅಹುದಲ್ಲವೋ?

ಶಿವಾಂಗಿ ಅಹುದು

ಮರಾಳ ಶಿವಾಂಗಿ ನನ್ನ ಶಿವಾಂಗಿ ಅಹುದಲ್ಲೋ?

ಶಿವಾಂಗಿ ಅಹುದು.

ಕರಾಳ ಅಹುದಹುದು ನಮ್ಮಿಬ್ಬರ ಶಿವಾಂಗಿ! ಇಬ್ಬರು ಕೂಡಿಯೇ ಲಗ್ನವಾಗೋಣ.

ಶಿವಾಂಗಿ : ಕರಾಳಾ.....

ಕರಾಳ ಕರಾಳರಾವ ಕರಾಳರಾವ ಎಂದು ಕರೆಯುವದನ್ನು ಬಿಟ್ಟಿಯೇನು? ಮರಾಳನಿಗೆ ಅಂಜಿದೆಯಾ?

ಶಿವಾಂಗಿ ಇನ್ನು ಮೇಲೆ ನಿಮ್ಮಿಬ್ಬರನ್ನು ಒಂಟಿ ಹೆಸರಿನಿಂದ ಕರೆಯುವೆ ಲಗ್ನವಾದ ಮೇಲೆ ಕರಾಳರಾವ, ಗೋಮೇಜೀರಾವ ಏನೇ ಆಗಲಿ ರಾವ ಪದವನ್ನು ಹಚ್ಚಿ ಕರೆಯುವೆ.

ಮರಾಳ ಪೂಂ! ಹೂಂ! ಅವೇನಿಲ್ಲ. ಕರಾಳನಿಗೆ ಕರಾಳ ಎಂದು ಕರೆಯಬೇಕು. ನನಗೆ ಮರಾಳರಾವ ಎಂದು ಕರೆಯಬೇಕು.

ಕರಾಳ ಅದೇಕೆ ? ಅವಳು ನಿಮ್ಮಪ್ಪನ ಗಂಟು ತಿಂದದ್ದು.

ಮರಾಳ ನಮ್ಮಪ್ಪನ ಗಂಟು ತಿಂದಿದ್ದಕ್ಕಾಗಿಯೇ ನನಗೆ ಅವಳು ಮರಾಳ ರಾವ ಎಂದು ಕರೆಯಬೇಕು. ಯಾಕೆ ಶಿವಾಂಗಿ ಹೇಳು! ರಾಜ ಕುಮಾರಿಯಾದ ಲಲಿತಾಂಬಿಕಾದೇವಿಯವರ ಲಗ್ನವು ಹುಕ್ಕ ಕುಮಾರರೊಡನೆ ಆಗುವ ಲಗ್ನ ಮಂಟಪದಲ್ಲಿ ನಮ್ಮಿಬ್ಬರ ಲಗ್ನವಾಗತಕ್ಕದ್ದು.

ಶಿವಾಂಗಿ ಹುಕ್ಕ ಕುಮಾರರಿಗೆ ಮಹಾರಾಜರು ಮಗಳನ್ನು ಕೊಡುವರೆ?...

ಮರಾಳ ಸಂಶಯವುಂಟೆ?

ಶಿವಾಂಗಿ ರೌದ್ರದಾಮರಿಗೆ ಲಲಿತಾ ದೇವಿಯವರನ್ನು ಕೊಡುವರೆಂದು ಇದೀಗ ಕರಾಳ ಹೇಳಿದನು.

ಕರಾಳ ನಾನೆಲ್ಲಿ ಹೇಳಿದೆನೆ ಶಿವಾಂಗಿ. ಸುಳ್ಳು ಮಾತಾಡಬೇಡ. ನನಗೇನು ಗೊತ್ತಿಲ್ಲ ಗೊತ್ತಿದ್ದರೂ ಕೂಡಾ ಹೇಳುವದಿಲ್ಲ.

ಮರಾಳ ಕರಾಳ್ಯ ! ನಿನ್ನಂಥ ಅರೆ ಹುಚ್ಚನನ್ನು ರೌದ್ರದಾಮರು ಏತಕ್ಕೆ ಸಾಕಿರುವರೋ?

ಕರಾಳ ಎಲಾ ಕಳ್ಳಾ! ನಾನು ಅರೆಹುಚ್ಚನೇ. ನಿನ್ನಂಥ ಅನೇಕ ಜನರಿಗೆ ಹುಚ್ಚು ಹಿಡಿಸುವೆ. ಪ್ರಧಾನರ ಪ್ರೇಮ ಲಾಭವು ನಿನಗೆ ದೊರೆಯದಿದ್ದುದ್ದಕ್ಕಾಗಿ ನೀನಿಷ್ಟು ಹೊಟ್ಟೆಕಿಚ್ಚನ್ನು ನನ್ನ ಮೇಲೆ ಕಾರುತ್ತಿರುವೆಯಾ? ಕಾರು ಬಡ್ಡಿ ಮಗನೇ.

ಮರಾಳ	ಪ್ರಧಾನರ ಮನೆಯ ಅನ್ನವನ್ನು ಉಂಡು ನಾಲಿಗೆಯನ್ನು ಉದ್ದವಾಗಿ ಚಾಚುತ್ತಿರುವೆಯ ತಡೆ? ನಿನ್ನ ನಾಲಿಗೆಯನ್ನು ತುಂಡರಿಸಿ ಚೆಲ್ಲುವೆನು

ಕರಾಳ	ಮರಾಳ್ಯಾ ಕಾಲು ಕೆದರಿ ಜಗಳಾ ತೆಗೆಯುತ್ತಿರುವೀ. ಬಾ! ನಿನ್ನ ಭುಜದ ತಿಂಡಿಯನ್ನು ತೀರಿಸುತ್ತೇನೆ. (ಸಡ್ಡು ಹೊಡೆದು) ಶಿವಾಂಗಿ ಮಲ್ಲ ಯುದ್ಧದಲ್ಲಿ ಜಯಶಾಲಿಯಾಗುವ ನನಗೆ ಮಾಲೆಯನ್ನು ಹಾಕಬೇಕು. ಬಾ ಮರಾಳ್ಯಾ (ಸಡ್ಡು ಹೊಡೆಯುವನು)

ಮರಾಳ	ಕರಾಳ್ಯಾ! ನಿನ್ನ ತಾಯಿಯ ಹೊಟ್ಟೆಯ ಪುಣ್ಯ ಮುಗಿಯಿತು. (ಸಡ್ಡು ಹೊಡೆದು)

ಕರಾಳ	ಮರಾಳ್ಯ! ನಮ್ಮಮ್ಮನು "ಶತಾಯುಷ್ಯ ಭವ" "ಚಿರಂಜೀವಿ ಭವ" ಎಂದು ನನಗೆ ಆಶೀರ್ವಾದ ಮಾಡಿದ್ದಾಳೆ. ಹೂಂ ಸಿದ್ಧನಾಗು. ಶಿವಾಂಗಿ. ನೀನು ನೋಡುತ್ತಿರು ವಿಜಯಶಾಲಿ-ಯಾದವನಿಗೆ ಮಾಲೆ ಹಾಕು.

ಮರಾಳ	ಕರಾಳ್ಯಾ ನಿನ್ನನ್ನು ಅರೆಕ್ಷಣದಲ್ಲಿ ಕೆಡವಿ ತಿಕ್ಕಿ- ತಿಕ್ಕಿ ಮಣ್ಣು -ಮುಕ್ಕಿಸಿ, ಶಿವಾಂಗಿಯ ಪಾದಗಳ ಮೇಲೆ ಹಾಕುವೆ. (ಸಡ್ಡು ಹೊಡೆದು)

ಶಿವಾಂಗಿ	(ಸ್ವ) ನಾನು ಸುಮ್ಮನೆ ನಿಂತುಕೊಂಡರೆ ಪ್ರಕರ್ಣ ಬೆಳೆಯುವದು (ಪ್ರ) ಕರಾಳಾ ಮರಾಳಾ ತಡೆಯಿರಿ. ನಿಮ್ಮ ಗುಣ ಪರೀಕ್ಷೆ ಮಾಡುವೆ. ಪರೀಕ್ಷೆಯಲ್ಲಿ ತೇರ್ಗಡೆಯಾದವನಿಗೆ ಮಾಲೆ ಹಾಕುವೆ.

ಕರಾಳ	ಶಿವಾಂಗಿಯ ಈ ಶರತ್ತುಗಳು ನನಗೆ ಮಾನ್ಯವಿದೆ.

ಮರಾಳ	ಶಿವಾಂಗಿಯ ಮಾತಿಗೆ ಸಮ್ಮತಿಯುಂಟು. ಕರಾಳಾಜೀ ನಮಸ್ಕಾರ (ಶಿವಾಂಗಿ, ಮರಾಳ ಹೋಗುವರು).

ರೌದ್ರದಾಮ: (ಪ್ರವೇಶಿಸಿ) ಕರಾಳಜಿ ಆ ಪತ್ರಗಳನ್ನು ಕೊಡಿ (ಕೊಡುವನು) ಕೊಂಚ ತಡೆದು ಬನ್ನಿ (ಹೋಗುವನು)

ಜಂಬುಕೇಶ್ವರ : (ಪ್ರವೇಶಿಸಿ) ಪ್ರಧಾನಜೀ! ನೀವು ಹೇಳುವದು ದಿಟವಾಗಿದೆಯೇ?

ರೌದ್ರದಾಮ : ಮಹಾರಾಜ! ನಾನು ಈ ಪಾದ ಸಾಕ್ಷಿಯಾಗಿ ಸತ್ಯವನ್ನು ನುಡಿಯುವೆ.

ಜಂಬುಕೇಶ್ವರ : ರೌದ್ರದಾಮ!! ಹುಕ್ಕ ಕುಮಾರನ ವಿಷಯವಾಗಿ ನಿಮ್ಮ ಮನಸ್ಸು ಕಲುಷಿತವಾಗಿದೆ.

ರೌದ್ರದಾಮ : ವರಂಗೂಳದಲ್ಲಿ ರಣರಂಗವು ರಂಜಿಸುತ್ತಿರುವಾಗ ಓಡಿ ಬಂದ ಹುಕ್ಕರಾಯನು ಕ್ಷಾತ್ರ ಕುಲೋದ್ಭವನೋ....

ಜಂಬುಕೇಶ್ವರ : ರೌದ್ರದಾಮ! ಕುಮಾರನನ್ನು ದೂಷಿಸಿ ಜಿವ್ಹೆಯನ್ನು ಕೆಡಿಸಿಕೊಳ್ಳಬೇಡ. ಆತನು ಪುಣ್ಯಾತ್ಮನಾಗಿರುವನು.

ರೌದ್ರದಾಮ : ಮಹಾರಾಜ! ಅಜಾತಶತ್ರುವಾದ ಧರ್ಮರಾಯನಿಗೆ ದುರ್ಯೋಧನನು ಸುಯೋಧನನಾಗಿ ಕಾಣುವದು ಸಹಜವಾಗಿದೆ. ಪುಣ್ಯಾತ್ಮನ ಸದ್ಭಾವವೆಂಬ ಸುಲೋಚನದಿಂದ ದೃಶ್ಯ ವಿಶ್ವವನ್ನು ನೋಡುತ್ತಿರುವದರಿಂದ ಅವರಿಗೆ ಪಾಪಿಗಳು ಸಹ ಪುಣ್ಯಾತ್ಮರಾಗಿ ಕಾಣುವರು. ಮಹಾರಾಜ ನಾನು ಸೂಕ್ಷ್ಮವಾಗಿ ಹುಕ್ಕನ ಹೃದಯವನ್ನು ಪರೀಕ್ಷಿಸಿರುವೆ. ನಾನು ಮತ್ಸರಗ್ರಸ್ಥನಾಗಿ ಹೀಗೆ ತರ್ಕವಾಗುವದನ್ನು ಕೋರುತ್ತಿರುವೆನೆಂದುತಿಳಿಯಬೇಡಿ. ನನ್ನ ಮಾತಿನ ಸತ್ಯತೆಯ ಬಗ್ಗೆ ಆಧಾರಗಳಿವೆ. (ಪತ್ರ ಕೊಡುವನು)

ಜಂಬುಕೇಶ್ವರ : (ಪತ್ರ ಓದುವನು) ಮಹಮ್ಮದ ತುಘಲಕನ ಸೇನಾನಾಯಕನಿಂದ ಮಲೀಕ ಸಾಯಬನಿಗೆ ದಕ್ಷಿಣ ಭಾರತದಲ್ಲಿ ಇನ್ನು ಸಣ್ಣ ಪುಟ್ಟರಾಜ್ಯಗಳಿರುವವು. ಆದರೆ ಅವುಗಳಲ್ಲಿ ಅರ್ಥವಿಲ್ಲ. ಮಧುರೆಯು ಮರಣೋನ್ಮುಖವಾಗಿದೆ. ದ್ವಾರ

ಸಮುದ್ರದ ರಾಜ್ಯದಲ್ಲಿ ಜೀವ ಇಲ್ಲ ಕಂಪ್ಲಿರಾಜ್ಯಕ್ಕೆ ಕ್ಷಯ ರೋಗವಾಗಿದೆ. ಆನೆಗುಂದಿಯ ರಾಜನು ವೃದ್ಧನಾಗಿದ್ದಾನೆ. ಸೇನಾಪತಿಗಳೇ ಈ ಸಮಯವು ಸುಸಮಯವಾಗಿದೆ. ತಮ್ಮ ಅಮೂಲ್ಯವಾದ ಸಹಾಯಕೊಟ್ಟರೆ ನಾನು ತಮ್ಮ ಮಾಂಡಲಿಕನಾಗಿ ಯಾವತ್ತೂ ದಕ್ಷಿಣ ಭಾರತವನ್ನು ತುಘಲಖ ರಾಜ ದಂಡದ ಅಧಿಪತ್ಯಕ್ಕೊಳಪಡಿಸುವೆ. ಉತ್ತರದ ದಾರಿಯನ್ನು ನೋಡುತ್ತಿರುವ ತಮ್ಮ ನಮ್ರ ಸೇವಕ ಹುಕ್ಕ... ರೌದ್ರದಾಮ ನಾನು ಇದನ್ನು ಸ್ವಪ್ನದಲ್ಲಿ ಓದುತ್ತಿರುವೆನೇನು?

ರೌದ್ರದಾಮ : (ಸ್ವಗತ) ಚೆನ್ನಾಗಿ ಬಾಣ ತಗುಲಿತು (ಪ್ರಕಟ) ಮಹಾರಾಜ ! ತಾವು ಜಾಗ್ರತಾವಸ್ಥೆಯಲ್ಲಿರುರುವಿರಿ. ಜಾಗೃತಾವಸ್ಥೆಯಿಂದ ಜಾಗೃತರಾಗಿರಿ.

ಜಂಬುಕೇಶ್ವರ : ಹುಕ್ಕಾ ! ಆಶ್ರಯವನ್ನು ಕೊಟ್ಟಿದುದಕ್ಕಾಗಿ ಚೆನ್ನಾಗಿ ಕೈ ತೋರಿಸಿದಿ ನರಾಧಮಾ! ಆನೆಗುಂದಿಯ ರಾಜನು ವೃದ್ಧನಾಗಿರುವನೋ... ಈ ವೃದ್ಧನು ಕೃದ್ಧನಾದರೆ ಬ್ರಹ್ಮಾಂಡಕಟಾಹವೇ ಒಡೆಯುವದೆಂದು ತಿಳಿ.

ರೌದ್ರದಾಮ : (ಸ್ವ) ಬೆಂಕಿಯು ಹೊತ್ತಹತ್ತಿತು. (ಪ್ರ) ಮಹಾರಾಜ ! ಶಾಂತರಾಗಿರಿ.

ಜಂಬುಕೇಶ್ವರ : ವರಂಗೊಳದಿಂದ ಓಡಿ ಬಂದ ಕೋತಿಯೇ ರಣಹೇಡಿಯೇ! ಸುಲ್ತಾನನ ಮಾಂಡಲಿಕನಾಗಿ ಮೆರೆಯಬೇಕೆಂದು ಮಾಡಿರುವೆಯಾ? ತಡೆ! ಮೃತ್ಯುವಿನ ದವಡೆಯಲ್ಲಿ ನಿನ್ನನ್ನು ನೂಕುವೆನು. (ಖಡ್ಗ ಹಿರಿಯುವನು)

ರೌದ್ರಾದಾಮ : ಮಹಾರಾಜ ! ಈ ಸೇವಕನು ಸಿದ್ಧನಾಗಿರುವನು ತಮ್ಮ ಹಣ್ಣಾದ ದೇಹಕ್ಕೆ ತಾಪವಾಗುವುದು. ಶಾಂತರಾಗಿರಿ. ಮಹಾರಾಜ ! ಅಕುಮತಿಯು ಬರೆದ ಮತ್ತೊಂದು ಪತ್ರವಿದೆ.

ಜಂಬುಕೇಶ್ವರ : ಮತ್ತೊಂದು ಪತ್ರವಿರುವುದೇ ? ಕೊಡಿ.

ರೌದ್ರಾದಾಮ : (ಸ್ವ) ಪ್ರಜ್ವಲಿತವಾದ ಅಗ್ನಿಯಲ್ಲಿ ಎಣ್ಣೆಯನ್ನು ಹಾಕುವುದೇ ನನ್ನ ಕರ್ತವ್ಯವಾಗಿದೆ (ಪ್ರ) ಸರ್ಕಾರ ಸ್ವೀಕರಿಸಬೇಕು. (ಪತ್ರ ಕೊಡುವನು)

ಜಂಬುಕೇಶ್ವರ : (ಪತ್ರ ತಕ್ಕೊಂಡು) ಆ ನೀಚನಾದ ಹುಕ್ಕನು ಈ ಪತ್ರವನ್ನು ನನ್ನ ಮಗಳಿಗೆ ಬರೆದಿರುವನು. ಪ್ರಿಯ ಲಲಿತಾ! ನಿನ್ನ ಮುದಿ ತಂದೆಯು ನನ್ನ ಇಚ್ಛೆಯನ್ನು ಬೇಗನೆ ಪೂರ್ಣ ಮಾಡುವ ಲಕ್ಷಣ ಕಾಣುವುದಿಲ್ಲ. ಜರಠನ ಮೌನ ವೃತ್ತಿಯು ನನ್ನನ್ನು ಭಾಧಿಸುತ್ತಿರುವುದು. ನಾಳೆ ಸಾಯಂಕಾಲಕ್ಕೆ ಪುಷ್ಪೋದ್ಯಾನಕ್ಕೆ ಬಂದು ಭೇಟಿಯನ್ನು ಕೊಟ್ಟರೆ ಮುಂದಿನ ವಿಚಾರವನ್ನು ತಿಳಿಹಿಸುವೆ. ನಿನ್ನ ಪ್ರಾಣ ಪ್ರಿಯಾ ರೌದ್ರದಾಮ ! ದುಷ್ಟನಾದ ಹುಕ್ಕನು ನನ್ನ ಕುತ್ತಿಗೆಯನ್ನು ಕೊಯ್ಯಲು ಸಿದ್ಧನಾಗಿರುವನು, ಹುಕ್ಕನಿಗೆ ಸರ್ವಾಧಿಕಾರ ಪದವನ್ನು ಅರ್ಪಿಸಿ ನನ್ನ ನಾಶವನ್ನು ನಾನೇ ಮಾಡಿಕೊಳ್ಳುತ್ತಿದ್ದೀನಲ್ಲಾ. ರೌದ್ರದಾಮ ಸಿಂಹಾಸನದ ಸ್ವಾಮಿ ನಿಷ್ಠೆಯ ಸೇವಕ. ಬುದ್ಧಿಯನ್ನು ಕಳೆದುಕೊಳ್ಳುತ್ತಿದ್ದ ನಿನ್ನ ಪ್ರಭುವನ್ನು ಚೆನ್ನಾಗಿ ಎಚ್ಚರಗೊಳಿಸಿದಿ.

ರೌದ್ರದಾಮ : (ಸ್ವ) ಬುದ್ಧಿಯನ್ನು ಈಗ ಕಳೆದುಕೊಂಡಿ. ಇನ್ನು ಮೇಲೆ ಬೇಕಾದ ಹಾಗೆ ಈ ಮುದಿ ಮಂಗವನ್ನು ಕುಣಿಸುವೆ. ನಿನ್ನ ಮಗಳಾದ ಲಲಿತಾಂಬಿಕೆಯನ್ನು ಬಲಾತ್ಕಾರದಿಂದಾಗಿ ಲಗ್ನವಾಗಿ ನಿನ್ನ ಸಿಂಹಾಸನದ ಮೇಲೆ ನಾನು ಕುಳಿತುಕೊಳ್ಳುವೆ. ನಿನ್ನ ಕೈಯಿಂದಲೇ ಹುಕ್ಕನ ಕೊಲೆ ಮಾಡಿಸುವೆ.

ಜಂಬುಕೇಶ್ವರ : ರೌದ್ರದಾಮ! ಸುಮ್ಮಗೇಕೆ ನಿಂತುಕೊಂಡೆ. ನೀನು ನಿಜವಾಗಿ ನನ್ನನ್ನು ಎಚ್ಚರಿಸಿದಿ. ಬಾ! ರೌದ್ರದಾಮ. ಈ ನಿನ್ನ ವೃದ್ಧ ರಾಜನಿಗೆ ಆಲಿಂಗನವನ್ನು ಕೊಡು (ಆಲಂಗಿಸಿ). ನೀಚನಾದ ಹುಕ್ಕನೇ ನಿನ್ನ ಗಂಟಲವನ್ನು ಸೀಳಿ ನಿನ್ನ ರಕ್ತವನ್ನು ಗಟ ಗಟನೆ ಕುಡಿಯುವೆ (ಹೋಗುವನು)

ರೌದ್ರದಾಮ : (ನಗುವನು) ಜಗವೆಂದರೆ ಹುಚ್ಚರ ಆಸ್ಪತ್ರೆ, ಜಗತ್ತಿನ ಬಾಲ ಬುದ್ಧಿಗೆ ನನ್ನಂಥ ಸಾಹಸಿಯ ಕೃತಿಗಳ ರಹಸ್ಯವು ತಿಳಿಯಲಾರದು. ಲಲಿತೆ! ನಿನ್ನ ಪ್ರಿಯಕರನಾದ ಹುಕ್ಕನ ವಿಷಯವಾಗಿ ನಿನ್ನ ತಂದೆಯ ಮುದಿ ತಲೆಯಲ್ಲಿ ವಿಷಮಯ ವಿಕಾರಗಳ ಬೀಜವನ್ನು ಬಿತ್ತಿರುವೆ. ನನ್ನ ಸ್ವಾಮಿನಿಷ್ಠೆಯೆಂಬ ಮಂತ್ರದಿಂದ ಮಂತ್ರಿತನಾದ ಜಂಬುಕೇಶ್ವರನ ತಾಪದಾಯಕವಾದ ನಿಟ್ಟುಸಿರುಗಳಿಂದ ಹುಕ್ಕನ ಪ್ರೇಮ ಪುಷ್ಪವು ಹುರಪಳಿಸಿ ಹೋಗುವದು, ಹುಕ್ಕನೇ! ಈ ಪತ್ರಗಳು ಸೌಭಾಗ್ಯ ಶಿಖರದಿಂದ ನಿನ್ನನ್ನು ದಬ್ಬಿ ದುಃಖದ ದರಿಯಲ್ಲಿ ನಿನ್ನ ಪ್ರಾಣವನ್ನು ತೆಗೆಯುವವು(ಕರಾಳ ಬರುವನು). ಬನ್ನಿ ಕರಾಳಜೀ ತಾವು ಶ್ರಮವಹಿಸಿ ಲೇಖಿಸಿರುವ ಈ ಪತ್ರಗಳು ಜಂಬುಕೇಶ್ವರನ ಕಣ್ಣುಗಳಲ್ಲಿ ಧೂಳಿಯನ್ನು ಹಾಕಿದವು. ಇದರೊಳಗಿನ ಅಕ್ಷರಗಳು ಹುಕ್ಕನ ಹಸ್ತಾಕ್ಷರಗಳಾಗಿ ತೋರುತ್ತಿರುವವು, ಕರಾಳಜೀ! ಘಟೋದ್ಗಜನ ಮರಣದ ನಂತರ ಈವರೆಗೆ ಹವೆಯ ಹೊದಿಕೆಯಲ್ಲಿ ಸೇರಿಕೊಂಡಿದ್ದ ಐಂದ್ರಜಾಲಶಕ್ತಿಯೇ ನಿಮ್ಮ ಲೆಕ್ಕಣಿಕೆಯ ಆಶ್ರಯವನ್ನು ಮಾಡಿಕೊಂಡಿರುವದೆಂದು ನನಗೆ ತೋರುತ್ತಿದೆ.

ಕರಾಳ ಇಷ್ಟು ಪ್ರಶಂಸೆಗೆ ನಾನಿನ್ನೂ ಪಾತ್ರನಾಗಿಲ್ಲ. ಈ ಪಾದಗಳ ಪುಣ್ಯದಿಂದ ಇದಕ್ಕು ಹೆಚ್ಚಾದ ಚಮತ್ಕಾರಗಳನ್ನು ಮಾಡಿತೋರಿಸುವೆ. ಸರ್ಕಾರ ನನ್ನನ್ನು ಘನತೆಗೇರಿಸುವದು ತಮ್ಮನ್ನೇ ಕೂಡಿದೆ. ಇರಲಿ. ಮುಂದಿನ ಕಾರ್ಯಕ್ಕೋಸ್ಕರವಾಗಿ ಹೊರಡುವೆ.

ರೌದ್ರದಾಮ ಕರಾಳಜೀ ಕರ್ನಾಟಕದ ಇತಿಹಾಸದಲ್ಲಿ ತಮ್ಮ ಹೆಸರನ್ನು ಸುವರ್ಣಾಕ್ಷರಗಳಿಂದ ಬರೆಯುವಂತೆ ಮಾಡುವೆ ನಡೆಯಿರಿ, ನಾನೀಗಲೇ ಬರುವೆ, (ಕರಾಳ ಹೋಗುವನು) ಹೋಗು ಕಪಿಯೇ ಹೋಗು, ಕಾಗೆಗೆ ರತ್ನ ಖಚಿತವಾದ ಪಂಜರದ ಬಯಕೆಯೇಕೆ? ಹಾವಾಡಿಗನು ತನ್ನ ಉದರ ಪೋಷಣಾರ್ಥ

ಕೃಷ್ಣಸರ್ಪವನ್ನು ಸಾಕುವನು. ಆದರೆ ಆತನು ಅದರ ವಿಷ ದಂತಗಳನ್ನು ಮುರಿಯಲಿಕ್ಕೆ ತಪ್ಪಲಾರನು. ನನ್ನ ಇಚ್ಛೆಯು ಪೂರ್ಣವಾದ ಮೇಲೆ ನಿನ್ನ ಕರಗಳನ್ನು ಕಡಿಸಿ ನಿನ್ನ ಗುಣಕ್ಕೆ ತಕ್ಕಂಥ ಪ್ರಾಯಶ್ಚಿತವನ್ನು ಕೊಡುವೆ. (ಭುಜಂಗ ಬರುವನು) ಬರಬೇಕು. ಸೇನಾಪತಿಗಳಿಗೆ ಜಯವಾಗಲಿ.

ಭುಜಂಗ ಆನಂದ ಚಂದ್ರನ ಪೂರ್ಣಕಲೆಯು ತಮ್ಮ ಮುಖ ಮಂಡಲದ ಮೇಲೆ ರಾರಾಜಿಸುತ್ತಿರುವದನ್ನು ಕಂಡ ನನ್ನ ಮನಸ್ಸಿಗೆ ಅತ್ಯಾನಂದವಾಯಿತು. ತಾವು ತಮ್ಮ ಕಾರ್ಯದಲ್ಲಿ ಜಯವನ್ನು ದೊರಕಿಸಿದಂತೆ ಕಾಣುತ್ತದೆ.

ರೌದ್ರದಾಮ : ಸೇನಾಪತಿಗಳೇ! ಹುಕ್ಕನ ಭವಿತವ್ಯತೆಯ ಭೀಕರವಾದ ಚಿತ್ರವು ನಮ್ಮ ಭಾಗ್ಯದ ವೈಜಯಂತಿಯ ಚಿತ್ರವೂ ಈ ಪತ್ರಗಳಲ್ಲಿ ಚಿತ್ರಿಸಲ್ಪಟ್ಟಿರುವವು ನೋಡಿ.

ಭುಜಂಗ (ಪತ್ರಗಳನ್ನೋದಿ) ತಮ್ಮ ಮುತ್ಸದ್ದಿತನಕ್ಕೆ ಬೆಲೆಯಿಲ್ಲಾ. ತಮ್ಮ ರಾಜ್ಯಕಾರಣ ನೈಪುಣ್ಯಕ್ಕೆ ತ್ರಿಭುವನ ಸಾರ್ವಭೌಮತ್ವದ ಆಡಳಿತೆಯು ಕೂಡಾ ಬಾಲಲೀಲೆಯೆನಿಸಬಹುದು. ಪ್ರಧಾನಜೀ, ಈ ಪತ್ರಗಳನ್ನು ಹೇಗೆ ದೊರಕಿಸಿದಿರಿ.

ರೌದ್ರದಾಮ : ಇವು ಕೃತ್ರಿಮ ಪತ್ರಗಳಿರುವವೆಂದು ಈ ಖಡ್ಗ ಬಹದ್ದೂರನಿಗೆ ತಿಳಿಯಲಾರದು. ಭುಜಂಗರಾಯ ಹುಕ್ಕನ ದುಷ್ಟ ವೃತ್ತಿಯೇ ಈ ಪತ್ರಗಳನ್ನು ನಮ್ಮ ಕೈಯಲ್ಲಿ ಕೊಟ್ಟಿತು. ಭುಜಂಗರಾವ ನಿಮಗೊಂದು ಕೆಲಸವನ್ನೊಪ್ಪಿಸಬೇಕಾಗಿದೆ. ಸ್ವಲ್ಪ ಗುಪ್ತವಾಗಿ ಹೇಳಬೇಕಾಗಿದೆ. ಇತ್ತ ಬನ್ನಿ (ಕಿವಿಯಲ್ಲಿ ಹೇಳುವನು)

ಭುಜಂಗ ಏನು? ರಾಜಾ ಜಂಬುಕೇಶ್ವರನನ್ನು ನಾನು ಬಂಧಿಸಬೇಕೆ?

ರೌದ್ರದಾಮ ಹುಕ್ಕನ ಸೊಕ್ಕನ್ನು ಮುರಿಯಬೇಕಾಗಿದ್ದರೆ....

ಭುಜಂಗ ನನಗೆ ಬೇಕಾಗಿಲ್ಲ ಕಪಟಾಚರಣೆಯಿಂದ ಹುಕ್ಕನ ಸೇಡನ್ನು ತೆಗೆಯುವದು ಬೇಕಾಗಿಲ್ಲಾ. ಇಂಥ ಅನ್ಯಾಯದ ಕೃತಿಯು ನನ್ನಿಂದಾಗದು.

ರೌದ್ರದಾಮ : ಈ ಕೆಲಸವನ್ನು ನಿನ್ನಿಂದಲೇ ಮಾಡಿಸದಿದ್ದರೆ ನನ್ನ ಹೆಸರನ್ನು ಪಲ್ಲಟಿಸಬೇಕಾದೀತು.

ಭುಜಂಗ ಪ್ರಧಾನಜೀ ತಮ್ಮ ದೇಹದಲ್ಲಿ ಪಿಶಾಚಿ ಸಂಚಾರವಾಗಿರುವದೋ? ಅನ್ಯಾಯದ ತಳಹದಿಯ ಮೇಲೆ ನಿರ್ಮಿಸಲ್ಪಡುವ ಭಾಗ್ಯ ಮಂದಿರವು ಕೊಂಚ ಕಾಲದಲ್ಲಿ ಕಡಕೊಂಡು ಬಿದ್ದು ನೆಲಸಮವಾಗುವದು.

ರೌದ್ರದಾಮ : ಭುಜಂಗರಾವ! ತಮಗೆ ದೂರ ದೃಷ್ಟಿಯಿಲ್ಲ ಹಾಗೂ ಜಗತ್ತಿನ ಪರಿಚಯವು ತಮಗೆ ಆಗಿರುವದಿಲ್ಲ ನೋಡಿ! ನನ್ನ ತಂಗಿಯಾದ ಗೌರಾಂಬಿಕೆಯ ವಿವಾಹವು ತಮ್ಮೊಡನೆಯೆ......

ಭುಜಂಗ ಗೌರಾಂಬಿಕೆಯ ಪಾಣಿಗ್ರಹಕ್ಕೋಸ್ಕರ ಈ ಸೇನಾಸಾಗರನು ಬೇಕಾದ ಕಾರ್ಯವನ್ನು ಮಾಡಲು ಸಿದ್ಧನಿರುವನೆಂಬುದನ್ನು ಮರೆಯಬೇಡಿ. ನಾನಿನ್ನುಹೋಗುವೆ. (ಹೋಗುವನು)

ರೌದ್ರದಾಮ : ಹೇಗಿದೆ ರೌದ್ರದಾಮನ ಪ್ರತಾಪ. ಭುಜಂಗರಾಯನ ಸಹಾಯ ಸಂಪತ್ತನ್ನು ದೊರಕಿಸುವದಕ್ಕಾಗಿ ನನ್ನ ತಂಗಿಯನ್ನು ಇವನೊಡನೆ ವಿವಾಹ ಮಾಡಿಕೊಡುವೆನು. ನನ್ನ ಕೃಷ್ಣ ಕಾರಸ್ಥಾನ ನಾಟಕದ ಮೊದಲನೇ ಪ್ರವೇಶ (ಹೋಗುವನು).

೩ನೇ ಪ್ರವೇಶ

ಸ್ಥಳ : ಕುಂಜವನ ಸಮಯ : ಸಂಧ್ಯಾಕಾಲ

ಲಲಿತಾಂಬಿಕಾ : -: ಪದ್ಯ :-

(ರಾಗ- ಮಾಂಡ ತಾಲ- ದಾದರ)

ರಾಧಾ ಸ್ವರ ಕೇಳಿ ಶಾರೀ.
ಓಡಿ ಬರ್ಪ ರೀತಿ ॥ ಪ ॥
ಪ್ರೀಯ ಮಾನಸ ಸೆಳೆಯುತಲಿ

ನಾರೀ ! ಸಾಥ ನೆದೆರ್ಯಲಿ
ಪತಿದೇವನ ಬಯಕೆಗೋಲಿ
ಸಾಧ್ವಿ ಕಲೆಯ ಕಲಿ

ವನದೇವತೆ ನನ್ನ ಪ್ರೇಮೋದ್ಯಾನದಲ್ಲಿಯ ರಮಣೀಯತೆಯು ಕುಮಾರರ ಮನವನ್ನು ಮುದಿಸಲಿಕ್ಕಿಲ್ಲವೆ? ಪ್ರಿಯಕರನು ಇನ್ನೂ ಬರಲಿಲ್ಲವಲ್ಲ. ಹೃದಯವೇ ಅಧೀರತೆಯನ್ನು ತಳೆಯಬೇಡ. ಮನಸ್ಸೇ ಹಾತೊರೆಯಬೇಡ. ಪ್ರೇಮವೆ ಹೋಗು, ಪವನಗತಿಯಿಂದ ಕಾಂತನನ್ನು ಕರೆದು ತಾ! ತಿರುಗುತ್ತಿರುವ ವಿಶ್ವಗೋಲವನ್ನು ತಡೆಯುವಷ್ಟು ಶಕ್ತಿಯು ನಿನ್ನಲ್ಲಿದೆ. ಯಾಕೆ? ನೀನೆನ್ನ ಹೃದಯದಲ್ಲಿ ನಿಂತೇ ಕಾಂತನನ್ನು ಕೂಗುವೆಯಾ? ನಿನ್ನ ಕೂಗು ಅವರನ್ನಿಲ್ಲಿಗೆ ಬರಮಾಡುವದೆ? ಅವರು ಬರುವರೆ? ನಿಜವಾಗಿ ಅವರು ಬರುವರು. ಅದು ನಿಜ.

ಹೃದಯ ದೇವನು ಬಂದೇ ಬಿಟ್ಟನು.

ಹುಕ್ಕ — ರಾಜಕುಮಾರಿ! ಸ್ವಲ್ಪ ತಡವಾದುದಕ್ಕೆ ಕ್ಷಮಿಸುವದಾಗಲಿ. ಪ್ರಭುಗಳು ಚೆನ್ನಾಗಿರುವರೆ?

ಲಲಿತಾ — ಯಾಕೆ ತಾವು ರಾಜಧಾನಿಗೆ ಬರುವದಿಲ್ಲವೇನು?

ಹುಕ್ಕ — ಸದ್ಗುರುವಿನ ಆಜ್ಞೆಯು ದೊರಕಿಲ್ಲ.

ಲಲಿತಾ — ಹಾಗಾದರೆ ಇಷ್ಟು ಅವಸರದ ಭೇಟಿಯು ನನಗೆಲ್ಲಿ ಬೇಕಾಗಿತ್ತು. ಮಹಾರಾಜ ತಾವು ರಾಜಧಾನಿಯನ್ನು ಬಿಟ್ಟು ಎರಡು ವಾರಗಳಾದವು. ಇನ್ನೂ ತಮ್ಮ ಕಾರ್ಯವು ಮುಗಿಯಲಿಲ್ಲವೆ?

ಹುಕ್ಕ — ರಾಜಕುಮಾರಿ! ನಮ್ಮ ಕಾರ್ಯವು ಸಣ್ಣದಾಗಿಲ್ಲಾ ನನ್ನ ಆಯುರ್ಮರ್ಯಾದೆಯಲ್ಲಿ ಅದು ಪೂರ್ಣವಾಗುವದೋ ಅಥವಾ ಇಲ್ಲವೋ ಆ ನನ್ನ ಸದ್ಗುರುವಿಗೆ ಗೊತ್ತುಂಟು.

ಲಲಿತಾ — ಇರಲಿ ಮಹಾರಾಜ ಇತ್ತ ನೋಡಿ ಸೂರ್ಯ ದೇವರು ಮರೆಯಾಗುತ್ತಲೆ ಕಮಲಿನಿಯ ಮುಖವು ಬಾಡಿತು. ಭಾಸ್ಕರನಿಗೆ ಕೊಂಚ ಕೂಡಾ ಕನಿಕರವೆನಿಸುವದಿಲ್ಲವೆ?

ಪುಕ್ಕ ಭಾಸ್ಕರನಿಗೆ ತನ್ನ ಕರ್ತವ್ಯವನ್ನುಮಾಡಲಿಕ್ಕೆ ಬೇಕಾಗಿದೆ. ಅವನು ತನ್ನ ನಿಸರ್ಗ ಗುರುವಿನ ಆಜ್ಞೆಯನ್ನು ಉಲ್ಲಂಘಿಸಬಹುದೆ? ಲಲಿತಾ! ಕಮಲಿನಿಯ ವಿಷಯವಾಗಿ ಅವನಲ್ಲಿ ಪ್ರೇಮವಿಲ್ಲೆಂದು ಭಾವಿಸುವೆಯಾ? ನೋಡು ಆತನು ಕಮಲ ಪ್ರಿಯನೆಂಬ ಹೆಸರನ್ನು ಧಾರಣ ಮಾಡಿರುವನು.

-: ಪದ್ಯ :-

(ರಾಗ - ಶಂಕರಾ ತಾಲ - ತ್ರಿತಾಲ)

ಮನಿಸಲೆ ಬೇಕೇ ಬೇಕು
ವಿಧಿ ನಿಯಮಾ - ರವಿಯಾ ಸುಜಾತೆ
ಸೃಷ್ಟಿರಸ ನಿಯಮದಲಿ
ಚರಿಪವು ತಾರಾಗ್ರಹ ರವಿ ಶಶಿಗೋಲಾ ॥

ಲಲಿತಾ ನಾನು ಜಾಗ್ರತಳಾದೆ ಆರ್ಯ ಪುತ್ರ. ಕಾರ್ಯವು ಪೂರ್ಣವಾಗುವವರೆಗೆ ನಾನು ಪ್ರೇಮ ಯೋಗವನ್ನು ಆಚರಿಸುವೆ. ಮಹಾರಾಜ ಹೃದಯೇಶ್ವರನಿಗೆ ಅರ್ಪಿಸುವದಕ್ಕಾಗಿ ಪೂಮಾಲೆಯನ್ನು ಮಾಡಿ ಆ ಕಾರಂಜಿಯ ಹತ್ತಿರ ಶಿಲಾಶಾಸನದ ಮೇಲೆ ಇಟ್ಟಿರುವೆ. ಅದನ್ನು ತಕ್ಕೊಂಡು ಬರುವೆ. (ಹೋಗುವಳು)

ರೌದ್ರದಾಮ : (ಪ್ರವೇಶಿಸಿ) ವೃದ್ಧನ ಹೆಚ್ಚಾದ ಅಚ್ಚೆಯಿಂದ ಬೆಳೆಯಿಸಲ್ಪಟ್ಟಿರುವ ಪ್ರೇಮಮದಿರೆಯ ಪಾನದಿಂದ ಎಚ್ಚರ ತಪ್ಪಿದ ಲಲಿತೆಯನ್ನು ನೋಡುವದು ನನ್ನಿಂದಾಗದು. ಇವನು ನನ್ನ ಕಡು ಹಗೆಯು. ಇವರ ಪ್ರೇಮ ಚಂದ್ರನ ಪೂರ್ಣ ಕಲೆಯನ್ನು ನೋಡಿ ನಾನೆಂತು ಸಹಿಸಲಿ. ಇವರ ಭಾಗ್ಯ ವೈಜಯಂತಿ ಕಾಂತಿಯನ್ನು ವರ್ಧಿಸುವ ದಿವ್ಯ ಪ್ರೇಮವು ಹೃದಯದ ಮತ್ಸರಾಗ್ನಿಯನ್ನು ಹೊತ್ತಿಸುತ್ತಿರುವದು.

ಲಲಿತಾ ಮಹಾರಾಜ......

ರೌದ್ರದಾಮ : ಮಹಾರಾಜ, ನೋಡಿ ನೋಡಿ ಕುಮಾರಿಯು ಕುಲಕಂಟಕನ ಕೊರಳಲ್ಲಿ ಮಾಲೆಯನ್ನು ಹಾಕಲು ಸಿದ್ಧಳಾಗಿ ನಿಂತಿರುವಳು.

ಹುಕ್ಕ : ರಾಜಕುಮಾರಿ! ಹೀಗೇಕೆ ಮೌನವೃತ್ತಿಯನ್ನು ಧಾರಣ ಮಾಡಿರುವಿ?

ಲಲಿತಾ : ಹೃದಯವು ಹರ್ಷದಿಂದ ಉಕ್ಕೇರಿರುವದು. ಮುಖದಿಂದ ಶಬ್ದಗಳು..... (ಮಾಲೆ ಹಾಕಲು ಹೋಗುವಳು)

ಜಂಬುಕೇಶ್ವರ : ಹಾ ! ತಡೆ ಅಥಟೆ ಈ ಕುಲಹೀನನ ಕೊರಳಿಗೆ ಪೂಮಾಲೆಯನ್ನು ಹಾಕಿ ನನ್ನ ಕುಲಕ್ಕೆ ಕಲಂಕವನ್ನು ಮತ್ತಬೇಕೆನ್ನುವಿಯಾ? (ಮಾಲೆ ಹರಿಯುವನು)

ಲಲಿತಾ : ಪಿತಾಜಿ! ಜೀವನೇಶ್ವರನನ್ನು ಪೂಜಿಸುವದಕ್ಕಾಗಿ ಪ್ರೇಮದಿಂದ ಪೋಣಿಸಲ್ಪಟ್ಟ ಪೂಮಾಲೆಯನ್ನು ನನ್ನ ಸೌಭಾಗ್ಯ ಸುಮನದ ಮಾಲೆಯನ್ನು ಹರಿದು ಹಾಕಬೇಡಿ.

ಜಂಬುಕೇಶ್ವರ : ಲಲಿತೆ! ವಾದವನ್ನು ಮಾಡದೆ ಹಾದಿಯನ್ನು ಹಿಡಿ. ಈ ಕಳ್ಳನ ಹೃದಯದ ಅಂತರಂಗವು ನಿನಗೆಂತು ತಿಳಿದೀತು? ಇವನ ಪೌರುಷದ ಪುರಾಣಕ್ಕೆ ನಾನು ಸಹ ಮೋಸ ಹೋಗಿದ್ದೇ. ವರಂಗೋಳದಿಂದ ಕಾಲ್ದೆಗೆದು ಬಂದ ನಿನ್ನನ್ನು ಶೂರನೆಂದು ತಿಳಿದು ಕೊಂಡಿರುವದೇ ನನ್ನ ತಪ್ಪಾಯಿತು. ದುರಾತ್ಮಾ! ರಾಜದ್ರೋಹಾತ್ಮಕವಾಗ ಪತ್ರಗಳನ್ನು ಬರೆಯಲಿಕ್ಕೆ ನಿನ್ನ ಕರವು ಹೇಗೆ ಸಿದ್ಧವಾಯಿತು. ನಿನ್ನ ಕಪಟ ಹೃದಯದ ಚಿತ್ರವನ್ನು....

ಹುಕ್ಕ : ಅಭದ್ರವಾದ ಶಬ್ದಗಳನ್ನು ಕೇಳಿ ಪ್ರತ್ಯುತ್ತರಗಳನ್ನು ಕೊಡಲು ನಾಲಿಗೆಯು ಸಿದ್ಧವಾಗಲೊಲ್ಲದು.

ಜಂಬುಕೇಶ್ವರ ; ದುರ್ಮುಖಾ! ಹೇಗೆ ಉತ್ತರವನ್ನು ಕೊಡುವಿ. ಅಪರಾಧಿಯ ಬಾಯಿಯು ಬೀಳಲಿಕ್ಕೆ ಬೇಕು. ಅನ್ನವನ್ನು ಕೊಟ್ಟು ಕಾಪಾಡಿದ ಪ್ರತಾಪದ ರುದ್ರನನ್ನು ಕಾಲನ ಉಡಿಯಲ್ಲಿ ಹಾಕಿ ಕಾಲ್ದೆಗೆದ ಪಾಪೀ, ನಿನ್ನ ದುರ್ಗುಣವು ಎಲ್ಲಿಯವರೆಗೆ ಮುಚ್ಚುವುದು.

ಕೊನೆಗೆ ಸೋಗು ಜಗತ್ತಿನ ದೃಷ್ಟಿಗೆ ಬೀಳುವುದು. ಸಾರಾ ಸಾರ ವಿಚಾರ ಮಾಡದೇ ನಿನಗೆ ಅತ್ಯುಚ್ಚ ಪದವಿಯನ್ನು ಕೊಟ್ಟು ಪದರಿನಲ್ಲಿ ಬೆಂಕಿಯನ್ನು ಕಟ್ಟಿಕೊಳ್ಳುತ್ತಿದೆ. ಆದರೆ ಸಿಂಹಾಸನದ ಪುಣ್ಯ ಬಲದಿಂದ ಜಾಗ್ರತನಾದೆನು.

ಹುಕ್ಕಾ ಇವೆಲ್ಲಾ ಶಬ್ದಗಳು ರಾಜಾ ಜಂಬುಕೇಶ್ವರನ ಮುಖದಿಂದ ಹೊರೆ ಬೀಳುತ್ತಿರುವವೊ? ನಾನಿದನ್ನೇನು ಕೇಳುತ್ತಿರುವೆ ಮಹಾರಾಜ. ನಾನಾವ ಕಪಟಾಚರಣೆಯನ್ನು ಮಾಡಿರುವೆ. ಮಹಾತ್ಮಾ ಮಾಧಾವಾರ್ಯರ ಸದ್ಭಾವದಿಂದ ಪುನೀತವಾದ ಈ ಹೃದಯದಲ್ಲಿ ಕಪಟದ ಕಣವೂ ಕೂಡಾ ಕಾಣಲಾಗದು.

ರೌದ್ರದಾಮ : ತಮ್ಮ ನೀಚ ವೃತ್ತಿಯು ಪ್ರಭುಗಳಿಗೆ ಚೆನ್ನಾಗಿ ಕೈ ತೋರಿಸಿರುತ್ತದೆ. ಮಾನಿನಿಯು ಮಧುರವಾದ ಮಾತುಗಳಿಗೆ ಮೋಸ ಹೋಗಬಹುದು. ಆದರೆ ರಾಜ ಲಕ್ಷ್ಮಿಯು ನಿಜವಾದ ಕ್ಷಾತ್ರ ವೃತ್ತಿಗೆ ಮೋಹಿಸುವಳು.

ಹುಕ್ಕ (ಸ್ವ) ನಮ್ಮ ಭಾವೀ ಸುಂದರವಾದ ವೈಭವ ಚಿತ್ರವು ಇವನ ದ್ವೇಷಾಂಧವಾದ ದೃಷ್ಟಿಗೆ ಸಹನವಾಗಿಲ್ಲ. (ಪ್ರ) ರೌದ್ರದಾಮಜೀ ಹುಟ್ಟುಗುರುಡನು ಹಗಲನ್ನು ರಾತ್ರಿಯೆಂದು ತಿಳಿಯುವದು ಸಹಜವಲ್ಲವೆ?

ರೌದ್ರದಾಮ : ಅಂದರೆ.....

ಹುಕ್ಕ ಪಾಪಿಗಳು ಪುಣ್ಯಾತ್ಮರಲ್ಲಿ ಸಹ ಪಾಪವಿರುತ್ತದೆಂದು ಭಾವಿಸುತ್ತಾರೆ. ರೌದ್ರದಾಮ ಕಪಟಪಟುವಾದ ನಿಮಗೆ ನಾನು ಕಪಟಿಯಾಗಿ ತೋರುವದು ಸಹಜವಲ್ಲಾ. ನಿಮ್ಮ ಹೃದಯಮಾತ್ಸರ್ಯದಿಂದ ಜನಿತವಾದ ಮಾಲಿನ್ಯತೆಯ ಪರದೆಯು ಪ್ರಭುಗಳ ದೃಷ್ಟಿಯನ್ನು ಆವರಿಸಿ ಬಿಟ್ಟಿರುತ್ತದೆ.

ಜಂಬುಕೇಶ್ವರ : ದೌರ್ಭಾಗ್ಯನೇ! ರೌದ್ರದಾಮನನ್ನು ನಿಂದಿಸುವಿಯೇಕೆ? ಸ್ವಾರ್ಥದ ಮೋಹಕ್ಕೆ ಸಿಲುಕಿದ ನೀನು ಹೂಡಿದ ಕಪಟ ಕಾರಸ್ಥಾನವು ನಮಗೆ ತಿಳಿಯದೆ ಹೋಗಿದ್ದರೆ ಆನೆಗುಂದಿಯ

ಸಿಂಹಾಸನವು ಪರರ ಪಾಲಾಗುತ್ತಿತ್ತು. ಆನೆಗುಂದಿಯ ರಾಜ್ಯಲಕ್ಷ್ಮಿಯು ಪಳಪಳನೇ ಕಣ್ಣೀರನ್ನು ತೆಗೆಯುವ ಪ್ರಸಂಗವು ಬರುತ್ತಿತ್ತು. ಆನೇಗುಂದಿಯ ಕಿಲ್ಲೆಯ ಮೇಲೆ ಹಾರಾಡುವ ಶುಭ್ರ ಪತಾಕೆಯು ಮಾಯವಾಗುವ ಪ್ರಸಂಗವು ಬರುತ್ತಿತ್ತು.

ಹುಕ್ಕ — ಮಹಾರಾಜ! ತಾವೇನನ್ನು ನುಡಿಯುತ್ತಿರುವಿರಿ. ಕಪಟಕಾರಸ್ಥಾನದ ಆರೋಪವೆ? ದೇಶದ್ರೋಹ ರಾಜದ್ರೋಹಗಳ ಆರೋಪವೆ? ಸಮ್ಮಗ್ರು ಇದನ್ನೇನು ಕೇಳುತ್ತಿರುವೆನು? ಮಹಾರಾಜ ನಿರಪರಾಧಿಯನ್ನು ಅಪರಾಧಿಯೆಂದು ದೂಷಿಸುವದು ಯೋಗ್ಯವಲ್ಲ.

ರೌದ್ರದಾಮ — ಪ್ರಭುಗಳ ಪದರಿನಲ್ಲಿ ದೋಷ ಹಾಕಲು ಸಿದ್ಧನಾದೆಯ? ನಿನ್ನ ರಾಕ್ಷಸಿ ಮಹಾತ್ವಾಕಾಂಕ್ಷೆಯು ಆನೇಗುಂದಿಯ ರಾಜ ಮುಕುಟಕ್ಕೆ ಕೈ ಹಾಕುವದು ದುರ್ಮುಖನೆ.

ಹುಕ್ಕ — ತಡೆ! ನರಾಧಮಾ! ದುರಾಶೆಗಾಗಿ ಶೀಲವನ್ನು ತ್ಯಜಿಸುವಷ್ಟು ಘಾತುಕನು ನಾನಲ್ಲ. ರೌದ್ರದಾಮ ನನ್ನ ಮಸ್ತಕವು ರಾಜ ಮುಕುಟದಿಂದ ಭೂಷಿಸಬೇಕೆಂಬ ಇಚ್ಛೆ ನನಗಾದರೆ ಆನೆ ಗುಂದಿಯಂಥ ಚಿಕ್ಕ ರಾಷ್ಟ್ರದ ಮುಕುಟವೇಕೆ? ಯಾವತ್ತು ಭಾರತ ದೇಶದ ಸಾರ್ವಭೌಮತ್ವದ ರತ್ನ ಖಚಿತವಾದ ಮುಕುಟದಿಂದ ಸಿರವನ್ನೂ ಭೂಷಿಸುವಷ್ಟು ಶಕ್ತಿಯ ಗುರುವನುಗ್ರಹದಿಂದ ಪ್ರಾಪ್ತವಾಗಿರುವದು. ಆದರೆ ರೌದ್ರದಾಮಾ ಖಿಲಜಿ ಮಲೀಕ ಕಾಫರರು ಭಾರತೆಯ ರಾಜಾಂಗಣದಲ್ಲಿ ಗೈದ ದಾನವ ನರ್ತನೆಯ ಕರ್ಕಶ ನಿನಾದವು ಇನ್ನು ಮಂದವಾಗಿಲ್ಲ. ವರಂಗೊಳದ ವಿನಾಶದ ಚಿತ್ರವು ಹೃತ್ಪಟಲದ ಮೇಲೆ ಮೂಡಿ ಹೋಗಿದೆ. ರೌದ್ರದಾಮಾ ಜಾಗೃತಾವಸ್ಥೆಯಲ್ಲಿಯೂ ನಿದ್ರಾವಸ್ಥೆಯಲ್ಲಿಯೂ ಈ ಹುಕ್ಕನಿಗೆ ಒಂದೇ ಒಂದು ಧ್ಯೇಯ ಚಿತ್ರವು ಕಾಣುವದು. ಆ ಚಿತ್ರವೆಂದರೆ ಭಾರತೀಯರ ಕಲ್ಯಾಣ ಚಿಂತನೆಯ ಚಿತ್ರ ಕನ್ನಡ ಮಾತೆಯ ಸೌಭಾಗ್ಯ ಚಿತ್ರ.

ಜಂಬುಕೇಶ್ವರ : ಘೋರವಾದ ತೃಷ್ಣೆಯಿಂದ ಚಡಪಡಿಸುತ್ತಿರುವ ನಿನ್ನ ಹೃದಯ ಚಿತ್ರವನ್ನು ನಾನು ಕಣ್ಣಾರೆ ಕಂಡಿರುವೆ. ಜೀವಗಳ್ಳಾ ನಿನಗೇಕೆ ಬೇಕು, ರಾಷ್ಟ್ರದ ಬಗ್ಗೆ ಕಳಕಳಿಯು.

ಪುಕ್ಕ ಪ್ರಭೋ! ವಾಗ್ಬಾಣಗಳಿಂದ ನನ್ನನ್ನು ಘಾಸಿಗೊಳಿಸಬೇಡಿ. ಇಂಥ ಅಭದ್ರ ಶಬ್ದಗಳು ನಿಮ್ಮ ಮುಖದಿಂದಲೇ ಇಲ್ಲವೆ ರೌದ್ರದಾಮನ ಮುಖದಿಂದಾಗಲೀ ಹೊರಟರೆ.....

ರೌದ್ರದಾಮ : ನೀನೇನು ಮಾಡುವಿ?

ಜಂಬುಕೇಶ್ವರ : ಶಠನೇ! ನಿನ್ನ ದಾನವೀ ಹೃದಯದ ದುರ್ಗಂಧವನ್ನು ಬೀರುತ್ತಿರುವ ನಿನ್ನ ದುರ್ಭಾವನೆಯನ್ನು ಜಗತ್ತಿಗೆ ಮುಕ್ತ ಕಂಠದಿಂದ ಸಾರುತ್ತಿರುವ ಇದೋ ಈ ಪತ್ರಗಳನ್ನು ನೋಡು (ಕೊಡುವನು ಪುಕ್ಕ ಪತ್ರ ಓದುವನು)

ರೌದ್ರದಾಮ : ಉತ್ತರ ಕುಮಾರನ ಮುಖವು ಕಪ್ಪಿಟ್ಟಿತೇಕೆ?

ಪುಕ್ಕ ರೌದ್ರದಾಮ ನನ್ನ ಮುಖವು ಕಪ್ಪಿಟ್ಟಿಲ್ಲ. ನಿನ್ನ ದೌರ್ಜನ್ಯದ ಕಪ್ಪನ್ನು ನನ್ನ ಮುಖಕ್ಕೆ ಮೆತ್ತಲು ಬಂದಿರುವ ನಿನ್ನ ಕರಗಳನ್ನು ಮಾತ್ರ ಕಗ್ಗೆ ಮಾಡಿಕೊಳ್ಳುವಿ. ಮಹಾರಾಜ ಈ ಪತ್ರದಲ್ಲಿಯ ಅಕ್ಷರಗಳು ನನ್ನ ಹಸ್ತಾಕ್ಷರಗಳನ್ನು ಹೋಲುವವು. ಆದರೆ ನಾನೀ ಪತ್ರಗಳನ್ನು ಬರೆದಿರುವದಿಲ್ಲಾ.

ಜಂಬುಕೇಶ್ವರಾ : ಶಠನೇ ಮುದ್ದಾಂ ಮಾಲು ಸಹಿತವಾಗಿ ಹಿಡಿಯಲ್ಪಟ್ಟ ಚೋರನು ತಾನು ಅಪರಾಧಿಯಾಗಿಲ್ಲವೆಂದು ಸಾಧಿಸುವಂತೆ ನೀನು ಸಾಧಿಸುತ್ತಿರುವಿ.

ಪುಕ್ಕ ಪ್ರಭೋ ನಾನು ಈ ಪತ್ರಗಳನ್ನು ಬರೆದಿರುವದಿಲ್ಲಾ, ನಾನು ನನ್ನ ಸದ್ಗುರುವಿನ ಸಾಕ್ಷಿಯಾಗಿ ಸಾರಿ ಸಾರಿ ಹೇಳುವೆ.

ರೌದ್ರದಾಮ : ನೀನು ಒಂದು ವೇಳೆ ಕಪಟಿಯಾದರೆ ಆ ನಿನ್ನ ಸದ್ಗುರುವು....

ಹುಕ್ಕ : ತಡೆ ನರಾಧಮಾ- ನನ್ನ ಸದ್ಗುರುವಿನ ವಿಷಯವಾಗಿ ಒಂದೇ ಒಂದು ದುಷ್ಟ ಶಬ್ದವನ್ನು ನೀನು ಉಚ್ಚರಿಸಿದರೆ ನಿನ್ನ ನಾಲಿಗೆಯನ್ನು ಸೀಳಿ ಹಾಕುವೆನು. (ಖಡ್ಗ ಹಿರಿಯುವನು)

ಜಂಬುಕೇಶ್ವರ : ವ್ಯರ್ಥವಾಗಿ ಗರ್ಜಿಸಬೇಡ, ಈ ವೃದ್ಧನ ಖಡ್ಗದಲ್ಲಿ ಇನ್ನುಶಕ್ತಿ ಇರುತ್ತದೆಂದು ತಿಳಿ (ಕರಾಳ, ಶಿಪಾಯಿಯರು ಬರುವರು) ಎಲೋ ಇವನನ್ನು ಬಂಧಿಸಿರಿ.

ಹುಕ್ಕ : ಈ ಕ್ಷಾತ್ರ ದೇವತೆಯು ನನ್ನ ಕೈಯಲ್ಲಿರುವವರೆಗೆ ನನ್ನನ್ನು ಬಂಧಿಸುವಷ್ಟು ಶಕ್ತಿಯು ಅದಾವ ಮಾನವನಲ್ಲಿರುವದು?

ಜಂಬುಕೇಶ್ವರ : ರಾಜಾ ಜಂಬುಕೇಶ್ವರನು ನಿನಗೆ ಖಡ್ಗವನ್ನು ಕೆಳಗಿಳಿಸುವವಕ್ಕೆ ಆಜ್ಞಾಪಿಸುತ್ತಿರುವನು.

ಹುಕ್ಕ : ಖಡ್ಗವನ್ನು ಕೆಳಗಿಡುವವದಕ್ಕೂ ಸದ್ಗುಣಿಯಾದ ಕ್ಷತ್ರಿಯನಿಗೆ ಆಜ್ಞಾಪಿಸಲಿಕ್ಕೆ ಯಾವ ರಾಜನಿಗೂ ಅಧಿಕಾರವಿಲ್ಲ.

ರೌದ್ರದಾಮ : (ಗುಪ್ತವಾಗಿ) ಇವನಿಗೆ ಆ ಹಾರುವನ ಆಣೆಯನ್ನು ಹಾಕಿರಿ ಅಂದರೆ ಮಾತ್ರ ಈತನು ಖಡ್ಗವನ್ನು ಕೆಳಗಿಡುವನು.

ಜಂಬುಕೇಶ್ವರ : ಹುಕ್ಕನೇ ಆ ಮಾಧವನ ಆಣೆಯಾಗಿದೆ ಖಡ್ಗವನ್ನು ಕೆಳಗಿಡು.

ಹುಕ್ಕ : ರಾಜನ್! ತಮ್ಮ ದೇಹದಲ್ಲಿ ಪಿಶಾಚಿ ಸಂಚಾರವಾಗಿರುವದೆ? ಇಂದಿಗೆ ಆನೆಗುಂದಿಯ ಪುಣ್ಯವು ಸರಿದು ಹೋಯಿತೆ? ಆನೆಗುಂದಿಯ ಪವಿತ್ರವಾದ ಸಿಂಹಾಸನಕ್ಕೆ ನಂದ ರಾಜರ ಕೀರ್ತಿಯ ಸ್ಥಾನಕ್ಕೆ ಪಿಶಾಚಿಯ ಸ್ಪರ್ಶವಾಯಿತೆ? ಯಾವ ಆನೆಗುಂದಿಯು ತ್ರೇತಾಯುಗದಲ್ಲಿ ಸತ್ವಶಾಲಿಯಾದ ಶ್ರೀ ರಾಮನಿಗೆ ಸಾತ್ವಿಕಾಶ್ರಯವನ್ನು ಕೊಟ್ಟು ಕಿಷ್ಕಿಂಧೆಯೆಂಬ ಹೆಸರಿನಿಂದ ಶೋಭಿಸಿತು, ಯಾವ ಆನೆಗುಂದಿಯ ದ್ವಾಪರ ಯುಗದಲ್ಲಿ ದಕ್ಷಿಣ ಹಸ್ತಿನಾವತಿ ಎಂದು ಸಂಭೋದಿಸಲ್ಪಟ್ಟ ತನ್ನ ವಿಮಲ ಛತ್ರವನ್ನು ಸತ್ವ ಶಾಲಿಗಳಾದ ಪಾಂಡವರ ಮೇಲೆ

ಹಿಡಿಯಿತು, ಯಾವ ಆನೆಗುಂದಿಯು ಕಲಿಯುಗದಲ್ಲಿ ವೀರ ಶಿರೋಮಣಿಯಾದ ನಂದ ರಾಜರ ಕೀರ್ತಿಯ ಮಂದಿರವಾಯಿತು, ಆ ಆನುಗೆಂದಿಯು ಈಗ ರಾಜಾ ಜಂಬುಕೇಶ್ವರನ ಆಳ್ವಿಕೆಯಲ್ಲಿ ಸತ್ವಹೀನವಾಯಿತೆ? ರಾಜಾ! ನನ್ನ ಸದ್ಗುರುವಿನ ಆಣೆಯನ್ನು ಇಟ್ಟಿದ್ದರಿಂದ ಇದೋ ಖಡ್ಗ ತಕ್ಕೊಳ್ಳಿ (ಖಡ್ಗ ಒಗೆದು) ಮಹಾರಾಜ ಯಾವ ದುರಾತ್ಮನ ದುರಪದೇಶದಲ್ಲಿ ವಿಶ್ವಾಸವನ್ನಿಟ್ಟು ನನ್ನನ್ನು ಶಸ್ತ್ರಹೀನನ್ನಾಗಿ ಮಾಡಿದಿರಿ ಆ ದುರಾತ್ಮನ ಸೇಡು ತೀರಿಸಿಕೊಳ್ಳುವದಕ್ಕೆ ಪುನಃ ಖಡ್ಗವನ್ನು ನನ್ನ ಕೈಯಲ್ಲಿ ನೀವು ಸದ್ಗುರುವಿನ ಸಾಕ್ಷಿಯಾಗಿ ಕೊಡುವವರೆಗೆ ನಾನು ಖಡ್ಗವನ್ನು ಧರಿಸುವದಿಲ್ಲ.

ಲಲಿತ ಪಿತಾಜಿ ಇದನ್ನೇನು ನಡೆಸಿರುವಿ. ವಿನಾಶ ಕಾಲದಲ್ಲಿ ವಿಪರೀತ ಬುದ್ಧಿ ಹುಟ್ಟುವದು ಸಹಜ. ಆದರೆ ಇದೇ ಭವಿತವ್ಯತೆಯ ಚಿತ್ರವೆಂಬುದನ್ನು ಮರೆಯಲಾಗದು. ಆನೆಗುಂದಿಯ ರಾಜೋಪಭೋಗದ ತೃಷ್ಣೆಯು ರೌದ್ರದಾಮನಿಗಾಗಿರುವದು.

ಜಂಬುಕೇಶ್ವರ : ರೌದ್ರದಾಮನ ಹೃದಯವನ್ನು ನಾನು ಚೆನ್ನಾಗಿ ಪರೀಕ್ಷಿಸಿರುವೆ. ನೀನು ಮಾತ್ರ ಮಕ್ಕನ ಹೃದಯವನ್ನು ಪರೀಕ್ಷಿಸಿ ನೋಡಿಲ್ಲಾ. ರೌದ್ರದಾಮನ ಹೃದಯವು ನಿಜವಾಗಿ ಕ್ಷತ್ರಿಯನ ಹೃದಯವಾಗಿರುವದು.

ಲಲಿತ ಪಿತಾಜೀ ಕೇತಕಿಯ ಪರಿಮಳವನ್ನು ಬಯಸಿ ಕೃಷ್ಣ ಸರ್ಪವು ತಡೆದಿರುವಂತೆ ಆನೆಂಗುಂದಿಯ ಸಿಂಹಾಸನದ ಲಾಲಸೆಯಿಂದ ಮಾನವರೂಪಿ ಕೃಷ್ಣ ಸರ್ಪವು ತಡೆದಿರುವಂತೆಕಾಯ್ದಿರುವುದು. ಖಗರಾಜನು ಮರೆಯಾದ ಕೂಡಲೇ ಈ ಕೃಷ್ಣಸರ್ಪದ ಫೂತ್ಕಾರವು ಪ್ರಾರಂಭವಾಗುವದು. ಪಿತಾಜಿ, ಸುಜನ ದ್ರೋಹ ಬಗೆಯಬೇಡಿ ನನ್ನ ಆಶಾ ಪುಷ್ಪವನ್ನು ಹರಿದು ಹಾಕಬೇಡಿ.

ಜಂಬುಕೇಶ್ವರ : (ಸ್ವಗತ) ನನ್ನ ಹೃದಯದಲ್ಲಿ ಹೀಗೇಕೆ ದ್ವಿವಿಧ ವಿಚಾರಗಳು ಉದ್ಭವಿಸಿರುವವು. ಮಗಳ ಮಾತಿನಲ್ಲಿ ವಿಶ್ವಾಸವನ್ನಿಡಲಾ ಅಥವಾ ರೌದ್ರದಾಮನ ಸ್ವಾಮಿನಿಷ್ಠೆಯಲ್ಲಿ ವಿಶ್ವಾಸವಿಡಲಾ...

ರೌದ್ರದಾಮ ಮಹಾರಾಜ, ಹೃದಯದಲ್ಲಿ ಅಪತ್ಯ ಪ್ರೇಮವು ಉದಯವಾಗಿದ್ದರೆ ಅದನ್ನು ಕರ್ತವ್ಯವೆಂಬ ಕತ್ತರಿಯಿಂದ ಚೆಲ್ಲಿರಿ. ಹುಕ್ಕನನ್ನು ಸೆರೆಮನೆಗೆ ತೆಗೆದುಕೊಂಡು ಹೋಗಲು ಆಜ್ಞೆಯನ್ನು ಕೊಡಿ.

ಕರಾಳ ಮಹಾರಾಜ ಬೇಗನೆ ಆಜ್ಞೆಯನ್ನು ಮಾಡಿರಿ.

ಜಂಬುಕೇಶ್ವರ : ಲಲಿತೇ ಹುಕ್ಕನಿಗೆ ತಕ್ಕ ಶಾಸನವಾಗಲಿಕ್ಕೆಬೇಕು ಎಲೋ ಇವನನ್ನು ರುದ್ರಮಂದಿರದಲ್ಲಿ ಬಂಧಿಸಿಡಿರಿ.

ಲಲಿತ ಪಿತಾಜೀ ಮಗಳ ಸುಖ-ಸೌಭಾಗ್ಯಗಳನ್ನು ನೀವೇ ಕುಳಿತು ನಾಶಮಾಡಬೇಕೆ? ನಾನು ಸೆರಗೊಡ್ಡಿ ಬೇಡಿಕೊಳ್ಳುವೆ ಪಿತಾಜೀ ಕುಮಾರನನ್ನು ವಲಿಸದೆ ಬಿಟ್ಟು ಬಿಡಿ.

ಜಂಬುಕೇಶ್ವರ : ಇದೆಂದಿಗೂ ಆಗದ ಮಾತು.

ಹುಕ್ಕ ರಾಜಕುಮಾರೀ! ಭವಿತವ್ಯತೆಯನ್ನು ತಪ್ಪಿಸುವರಾರು? ಹೂ ನಡೆಯಿರಿ ರುದ್ರಮಂದಿರಕ್ಕೆ

ಲಲಿತಾ ತಾತಾ! ಸುಜನ ಛಲನೆಯ ವೃತ್ತಾಂತವು ಮಹಾತ್ಮಾ ಮಾಧವಾರ್ಯರಿಗೆ ಗೊತ್ತಾದರೆ ನಮ್ಮ ಗತಿಯೇನಾದೀತು? ನಿಗ್ರಾನುಗ್ರಹ ಶಕ್ತಿಯುಳ್ಳ ಮಾಧವ ಮುನಿಗಳ ಕೋಪದಿಂದ ಆನೆಗುಂದಿಯ ಹುರುಪಳಿಸಿ ಹೋಗುವದು ಪಿತಾಜೀ.

ಜಂಬುಕೇಶ್ವರ : ಲಲಿತೆ ಮೇರೆದಪ್ಪಿ ಮಾತಾಡಲಾರಂಭಿಸಿದಿ, ನಾನು ಆ ಮಾಧವನನ್ನು ಚೆನ್ನಾಗಿ ಬಲ್ಲೆ.

ರೌದ್ರದಾಮ : ಆ ಮಾಧವನು ಸಂಸಾರಕ್ಕಂಜಿ ಸನ್ಯಾಸಿಯ ಸೋಗನ್ನು ಹಾಕಿರುವನು. ದುಡಿಯಲಾರದ ದುರ್ಬಲ ಬ್ರಾಹ್ಮಣರ ಕೆಲಸವೇ ಇದು. ಜಗತ್ತು ಮಿಥ್ಯವೆಂದು ಬೊಬ್ಬೆ ಹೊಡೆದು ಮುಂಗು ಹಿಡಿದುಕೊಂಡು ಮೂಲೆಯಲ್ಲಿ ಕುಳಿತುಕೊಳ್ಳಲಿಕ್ಕ ಉಪದೇಶ ಮಾಡುವರು. ಅವರ ಹಾಳು ಉಪದೇಶವೇ ನಮ್ಮ ಹೇಡಿತನದ ಕಾರಣವು.

ಜಂಬುಕೇಶ್ವರ : ಏಲೋ ತಡಮಾಡುವಿರೇಕೆ?

ರೌದ್ರದಾಮ : ಸುಮ್ಮನೆ ಬರದಿದ್ದರೆ ದರದರನೆ ಎಳೆಯುತ್ತಾ ಒಯ್ಯಿರಿ.

ಯಕ್ಷ : ನೀಚಾ ನಿನ್ನ ನಾಲಿಗೆಗೆ ನಾಚಿಕೆಬರುವದಿಲ್ಲವೊ? ಮಿತ್ರ ದ್ರೋಹದ ತಳಹದಿಯ ಮೇಲೆ ಕಾರಸ್ಥಾನದ ಕಟ್ಟಡವನ್ನು ಕಟ್ಟಬೇಕೆನ್ನುವಿಯಾ? ಮಹಾರಾಜ ಅಪತ್ಯ ಪ್ರೇಮವನ್ನು ತ್ಯಜಿಸಿರುವದು, ಸದ್ಗುರುವಿನ ಹೃದಯವನ್ನು ನೋಡದಿರುವದು ಅಂಧ ವಿಶ್ವಾಸದ ಪರಿಣಾಮವೋ ಅಥವಾ ಭವಿತವ್ಯತೆಯ ಭೀಕರವಾದ ಛಾಯೆಯೋ! ನಡೆಯಿರಿ ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ತುಂಬಿಹೋದ ನೀಚ ಮಾನವನ ಹೃದಯಂಧಕಾರಕ್ಕಿಂತ ಮಂದಿರದ ನೆಲಮನೆಯ ಅಂಧಕಾರವು ಹೆಚ್ಚು ಒಳಿತಾಗಿರುವದು.

ಜಂಬುಕೇಶ್ವರ : ಎಂಥ ಅದ್ಭುತ ಪ್ರಕಾಶವಿದು ರೌದ್ರದಾಮಜೀ. ಪ್ರಕಾಶದ ತಾಪವನ್ನು ಸಹಿಸಲಾರೆ ಈ ಪುಷ್ಪೋದ್ಯಾನದ ಭೂಮಿಯು ಭಂಗವಾಗುತ್ತಿರುವದು ಯಾರಾದರೂ ನನ್ನನ್ನು ಹಿಡಿಯಿರಿ (ಬೀಳುವನು) ಲಲಿತೇ ಛ... ಲಿ... ತೇ..

ರೌದ್ರದಾಮ : ನನ್ನ ಮೈಗೆ ಪಂಜು ಹಚ್ಚಿದಂತಾಗಿದೆ ಹೊಟ್ಟೆಯಲ್ಲಿ ಭಯಂಕರ ತಾಪಜ್ವಾಲೆ.

ಕರಾಳ : ಆ ಮಾಯವಿಯಾದ ಮಾಧವ ಭಟ್ಟನಿಂದ ಈತನು ಮಂತ್ರವನ್ನೇನಾದರೂ ಕಲಿತಿರುವನೋ ಏನೋ. ಅಯ್ಯೋ ಅಮ್ಮಾ ಹೊಟ್ಟೆಯಲ್ಲಿ ಭಯಂಕರವಾದ ಉರಿ ಎದ್ದಿತು. ಅಯ್ಯೋ ಅಮ್ಮಾ ತುಂಗೆಯಲ್ಲಿ ಹಾರಿಕೊಳ್ಳಲಾ (ಹೋಗುವನು)

ಲಲಿತಾ : ಮಹಾರಾಜ! ಇದೇನು ವಿಚಿತ್ರ. ಜಗತ್ತನ್ನು ಆನಂದಗೊಳಿಸುವ ಚಂದ್ರಿಕೆಯಲ್ಲಿ ಪ್ರಖರತೆಯ ಉದ್ಭವಿಸಬಹುದೆ? ಈ ಮೂವರ ಹೊಟ್ಟೆಯಲ್ಲಿ ಭಯಂಕರವಾದ ಯಾತನೆಯ ಒಮ್ಮೆಲೆ ಹುಟ್ಟಬೇಕಾದರೆ ಕಾರಣವೇನು?

ಶುಕ್ಕ   ದೇವಿ ಇದೆಲ್ಲ ಅದೋ ಅಲ್ಲಿ ಬರುತ್ತಿರುವ ತೇಜಃ ಪುಂಜವಾದ ವ್ಯಕ್ತಿಯ ಪ್ರಭಾವ. ಆತನ ಕೃಪೆಯಿಂದ ಚಂದ್ರಿಕೆಯು ದ್ವಾದಶ ಸೂರ್ಯನ ಪ್ರಖರತೆಯಾಗಿ ಪರಿಣಮಿಸಿರುವದು. ನೋಡು ನೋಡು ತಪೋರಾಶಿಯೇ ನಡೆತರುವಂತೆ ಕಾಣುತ್ತಿರುವದು. ಆತನನ್ನು ಗುರುತಿಸಲಾರೆಯಾ? ಆತನೇ ನನ್ನ ಸದ್ಗುರುವು. ಆತನೇ ಮಹಾತ್ಮಾ ಮಾಧವಾರ್ಯ. ಇಡೀ ಬ್ರಹ್ಮಾಂಡವನ್ನು ತನ್ನ ಹೃದಯ ಬ್ರಹ್ಮಾಂಡದಲ್ಲಿ ಕಾಣುತ್ತಿರುವ ಮಹಾ ಯೋಗೀಶ್ವರ.

ಮಾಧವಾಚಾರ್ಯ: ಶುಕ್ಕ ಕುಮಾರಾ ನಿನ್ನ ಮನೋಭೀಷ್ಟವು ಪೂರ್ಣವಾಗಲಿ ವತ್ಸೆ ಪರಮಮಂಗಲವಾಗಲಿ ಯಾಕೆ, ಮುಖವು ಬಾಡಿರುವದೇಕೆ? ಸರಿ ಸರಿ ಪಿತನ ಸ್ಥಿತಿಯನ್ನು ಕಂಡು ದುಹಿತಾ ಹೃದಯವು ತಳಮಳಿಸುವದು ಸಹಜ. ಇದೋ ನಿನ್ನ ಪಿತನಿಗೆ ಆನಂದವಾಗಲಿ ಶಾಂತಿ! ಶಾಂತಿ! ಶಾಂತಿ!

ಜಂಬುಕೇಶ್ವರ : ಬಾವನ್ನ ದಂಪನ್ನ ಬೀರುವ ಶಾಂತಿ ಶಬ್ದಗಳಿಂದ ಹೃದಯ ತಾಪವು ಹರಿದು ಹೋಯಿತು. ಮಹಾತ್ಮಾ! ನಿನ್ನ ಮಹಿಮೆಯನ್ನು ಕಾಣದ. ಪಾಮರನನ್ನು ಕ್ಷಮಿಸು.

ಮಾಧವ   ರಾಜಾ! ನಿನ್ನಂಥ ನ್ಯಾಯ ಪ್ರಿಯ ರಾಜನು ಸಹ ದುಷ್ಟರ ನುಡಿಗಳಿಗೆ ಮನಸೋಲುವದರಿಂದ ಅನ್ಯಾಯದ ಕತ್ತಲೆಯು ಬೀಳುವದು. "ರಾಜಾ ಕಾಲಸ್ಯ ಕಾರಣಂ" ಎಂಬ ತತ್ವ ರಹಸ್ಯವನ್ನು ಕಂಡು ಹಿಡಿದು ವಿವೇಕದಿಂದ ವರ್ತಿಸು. ಶಾಂತಿ, ಶಾಂತಿಯನ್ನು ಅವಲಂಬಿಸು. ಶಾಂತಿಯೇ ಸೌಭಾಗ್ಯ. ಶಾಂತಿಯೇ ನಿಜ ಸುಖ ಸಾಧನ. ಶಾಂತಿಯೇ ಶಕ್ತಿ, ಶಾಂತಿಯೇ ಮುಕ್ತಿ, ಶಾಂತಿ! ಶಾಂತಿ! (ಹೋಗುವನು) (ತೆರೆ ಬೀಳುವದು)

-: ಪದ್ಯ :-

(ರಾಗ -ದೇಶ ಝಪತಾಲ)

ದ್ವೈತವಾ ಭಾವ ಮಾಡಿ ಕ್ಷಿತಿಪಾ ಉಮಲ ಜ್ಞಾನ

ಶಾಂತ-ತಾನೆ ಭಾಗ್ಯ । ಶಾಂತಿದಯಾ ಕಾಂತಿ
ಶಾಂತಿಯೇ ಸುಮತಿ ಸಾರಾ । ಸದಯಾ ಸದಾ

೪ನೇ ಪ್ರವೇಶ

ಸ್ಥಳ : ಅರಮನೆಯ ಮಂದಿರದ ಬೀದಿ

ಕರಾಳ ಆದೆನು ಆದೆನು

ಶಿವಾಂಗಿ ಏನಾದಿರಿ?

ಕರಾಳ ಆನೆಗುಂದಿಯ ದಂಡನಾಯಕನಾದೆನು. ಏ ಶಿವಾಂಗಿ! ಇಂದಿನಿಂದ ದಂಡನಾಯಕ ಕರಾಳಜೀ ಎಂದು ಕರೆಯತಕ್ಕದ್ದು. ನಾನೆಂಥಾ ಪೋಷಾಕದಲ್ಲಿರುವೆ. ನನ್ನ ಠೀವಿ ಎಂಥಾದ್ದು?

ಶಿವಾಂಗಿ ದಂಡನಾಯಕತ್ವದ ದಂಡವು ತಮಗೆ ಈಗಾಗಲೇ ದೊರೆಯಿತೆ?

ಕರಾಳ ದೊರೆಯದೇನು ಮಾಡೀತು. ಅಂಥ ಪ್ರಸಂಗವೇ ಮೈದೋರಿದೆ.

ಶಿವಾಂಗಿ ಅದೆಂಥಾ ಪ್ರಸಂಗಾ?

ಕರಾಳ ಅಬಲೆಯಾದ ನಿನಗೆ ಅದು ಹೇಗೆ ತಿಳಿಯಬೇಕು ಆನೆಗುಂದಿಯನ್ನು 'ಆ' ಎಂದು ನುಂಗಲಿಕ್ಕೆ ಸುಲ್ತಾನ ಸೇನೆಯು ಬರುತ್ತಿದೆ.

ಶಿವಾಂಗಿ ಸುಲ್ತಾನನು ಪ್ರಚಂಡವಾದ ಸೇನೆಯನ್ನು ಕಟ್ಟಿಕೊಂಡು ನಮ್ಮ ಪ್ರಾಂತಕ್ಕೇಕೆ ಬರುವನು. ದಕ್ಷಿಣ ಭಾರತವನ್ನು ಹಾಳು ಗೆಡವಬೇಕೆಂದು ಮಾಡಿರುವನೇನು?

ಕರಾಳ ಬೆದರಬೇಡ ಚದುರಿಯೇ. ಆತನು ದಂಡೆತ್ತಿ ಬಂದ ಕಾರಣವೇ ಬೇರೆಯಾಗಿದೆ. ಸುಲ್ತಾನ ಮಹಮ್ಮದ ತುಘಲಕರ ಅಣ್ಣನ ಮಗನಾದ ಬಾವುದ್ದೀನನು ಬಂಗಾಲದಲ್ಲಿ ಬಂಡಾಯ-ವೆಬ್ಬಿಸಿದನು.

ಶಿವಾಂಗಿ ಬಂಗಾಲದಲ್ಲಿ ಬಂಡಾಯವಾದರೆ ಸುಲ್ತಾನನೇಕೆ ದಕ್ಷಿಣಕ್ಕೆ ಬರಬೇಕು.

ಕರಾಳ ಹೂಂ! ಹೂಂ! ಸ್ವಲ್ಪ ತಡೆ. ಅದನ್ನೇ ಹೇಳುವೆ. ಪರಾಜಿತನಾದ ಬಾವುದ್ದೀನನು ದಕ್ಷಿಣ ಭಾರತಕ್ಕೆ ಓಡಿಬಂದನು. ಕಂಪಲಿಯ ರಾಯನು ಅವನಿಗೆ ಆಶ್ರಯಕೊಟ್ಟನು. ಇದನ್ನು ಕೇಳಿ ಸುಲ್ತಾನನು ಸಿಟ್ಟಿಗೆದ್ದು ಬಂದಿರುವನು. ಇನ್ನು ೭೮ ದಿನಗಳಲ್ಲಿ ಸುಲ್ತಾನನು ಕಂಪಲಿಯ ಹೊಟ್ಟನ್ನು ಹಾರಿಸುವನು. ಶಿವಾಂಗಿ ಕಂಗಾಲವಾದ ಕಂಪಲಿಗೆ ಈ ಇಲ್ಲದ ಗಲಾಟೆ ಏತಕ್ಕೆ ಬೇಕಾಗಿತ್ತು. ಸುಲ್ತಾನನು ಬರುವ ಸುದ್ದಿಯನ್ನು ಕೇಳಿ ಬಾವುದ್ದೀನನು ಕಂಪಲಿಯನ್ನು ಸಹ ಬಿಟ್ಟಿರುವನು.

ಶಿವಾಂಗಿ ಕರಾಳಜೀ ಕಂಪಲಿಯಿಂದ ಎರಡೇ ಎರಡು ಗಾವುದ ಅಂತರದಲ್ಲಿರುವ ಆನೆಗುಂದಿಯ ಪರಿಣಾಮವೇನು?

ಕರಾಳ ರೌದ್ರದಾಮರು ಹಂಚಿಕೆಯನ್ನು ಹಾಕಿದ್ದಾರೆ. ನೀನೇನು ಚಿಂತಿಸಬೇಡ. ನಾನಿಷ್ಟು ದೊಡ್ಡ ನಸುಕಿನಲ್ಲಿ ಪ್ರಯಾಣದ ಗಂಟನ್ನು ಕಟ್ಟಿರುವದು ನಿನಗೆ ಗೊತ್ತಾಗಲಿಲ್ಲವೆ? ಗರ್ಗಾಚಾರ್ಯರ ಮೂಹೂರ್ತದ ಮೇಲೆ ಯಾವ ಕೆಲಸಕ್ಕೆ ಮನುಷ್ಯನು ಪ್ರಯಾಣ ಬೆಳೆಸುವನು, ಆ ಕೆಲಸಕ್ಕೆ ಜಯವು ಕಟ್ಟಿಟ್ಟ ಹಾಗೆ. ಸ್ವಲ್ಪ ಇತ್ತ ಕಡೆಗೆ ಬಾ ಆಮಾತನ್ನು ಗುಪ್ತವಾಗಿಡಬೇಕಾಗಿದೆ. (ಕಿವಿಯಲ್ಲಿ ಹೇಳಿ) ಶಿವಾಂಗಿ, ಬಾವುದ್ದೀನನು ನಮ್ಮ ಕೈಯಲ್ಲಿ ಸಿಕ್ಕರೆ ಕೇಳುವದೇನು? ರೌದ್ರದಾಮರ ಕಾರ್ಯವು ಪೂರ್ಣವಾಯಿತೆಂದು ತಿಳಿ.

ಶಿವಾಂಗಿ ಹಃ' ಹಃ! ಕರಾಳಜೀ ರೌದ್ರದಾಮರು ಆನೆಗುಂದಿಯ ಸಿಂಹಾಸನಕ್ಕಾಗಿ....

ಕರಾಳ ಹಃ!ಹಃ! ಹೀಗೇಕೆ ಬಡಬಡಿಸಲಾರಂಭಿಸಿದಿ. ಹುಚ್ಚುಗಿಚ್ಚು ಹಿಡಿಯಿತೋ ದೆವ್ವ ಬಡಿಯಿತೋ ತಡೆಯ ಭೂತನಾಡಿಯನ್ನು ಪರೀಕ್ಷಿಸುವೆ (ತಲೆ ಹಿಡಿಯ ಹೋಗುವನು)

ಶಿವಾಂಗಿ — (ಸರಿದು) ಹ ಕರಾಳಜೀ ದೂರ ಸರಿದು ನಿಲ್ಲಿರಿ ನಾಡಿಯು ಶಿರದಲ್ಲಿರುವದೆ?

ಕರಾಳ — ಸಂಶಯವುಂಟೆ? ಮುತ್ಸದ್ದಿಯಾದ ಈ ಕರಾಳನ ಭಾವಿ ಪತ್ನಿಯಾದ ನಿನ್ನನಾಡಿ ಶಿರದಲ್ಲಿರದೆ ಮತ್ತೇತರಲ್ಲಿರಬೇಕು. ಶಿವಾಂಗಿ ಮುತ್ಸದ್ದಿಗಳ ನಾಡಿ ಶಿರದಲ್ಲಿ, ವೀರರ ನಾಡಿ ಬಾಹುಗಳಲ್ಲಿ, ಗಾಯಕರ ನಾಡಿಯು ಕಂಠದಲ್ಲಿ ಅದಕ್ಕೋಸ್ಕರವಾಗಿ..... (ಪುನಃ ಕೈ ಹಿಡಿಯ ಹೋಗುವನು)

ಮರಾಳ — ಕರಾಳ್ಯ ಜೋಕೆ? ಶಿವಾಂಗಿಯ ಮೈ ಮುಟ್ಟಲು ಹೋಗುವಿಯಾ?

ಕರಾಳ — ಯಾಕೆ ಜಗಿ ಜಗಿದು ಮಾತಾಡುವಿ? ನಾಡಿಯನ್ನು ಪರೀಕ್ಷಿಸುವದರ ದೆಶೆಯಿಂದ ಶಿವಾಂಗಿಯ ಶಿರವನ್ನು ಹಿಡಿಯಲಿಕ್ಕೆ ಹೋದೆ.

ಮರಾಳ — ಏನು ನಾಡಿಯು ಶಿರದಲ್ಲಿರುವದೆ? ದಡ್ಡ ನನ್ನ ಮಗನೇ ಹ! ಹ! (ಇಬ್ಬರೂ ನಗುವರು)

ಕರಾಳ — ಹೂ ನಗರಿ! ನಗರಿ! ಹೊಟ್ಟೆ ತುಂಬಾ ನಗರಿ. ನಗೆ ಹೋಗಿ ಹೊಗೆಯಾದಾಗ ತಿಳಿದೀತು. ಈ ಕರಾಳನ ಕೈ. ಮರಾಳ್ಯಾ ಬಹುಜೋಕೆಯಿಂದ ವರ್ತಿಸು ಈಗ ನಾನಾವ ಪೋಷಾಕದಲ್ಲಿರುವೆ ಇದು ನಿನಗೆ ತಿಳಿಯುವದಿಲ್ಲ? ನಾನು ಈ ಪೋಷಾಕದಲ್ಲಿದ್ದಾಗ ಶಿವನನ್ನು ಸಹ ನನ್ನ ಸೇವಕನೆಂದು ತಿಳಿಯುವೆ, ಇದೊಂದು ಸಲ ಕ್ಷಮಿಸಿ ನಿನ್ನನ್ನು ಬಿಡುತ್ತೇನೆ. ಶಿವಾಂಗಿ ಹೋಗುವಾ.

ಮರಾಳ — ಶಿವಾಂಗಿ ನಡೆ ಹೋಗುವಾ!

ಕರಾಳ — ಹು. ಶಿವಾಂಗಿ ನಡೆ ಹೋಗುವಾ

ಮರಾಳಾ — ಹು. ಶಿವಾಂಗಿ ನಡೆ ಹೊರಡುವಾ

ಕರಾಳ : ಅಣಕಿಸುವಿಯೇನು ಮಂಗನ ಮಗನೇ. ನೀನೊಬ್ಬನೇ ಹೋಗು ಬೇಕಾದರೆ ಆ ಹುಕ್ಕನ ಬೆನ್ನು ಹತ್ತಿ.

ಮರಾಳ : ಯಾಕೆ ನಾಲಿಗೆಯನ್ನು ಉದ್ದಾಗಿ ಬಿಡುತ್ತಿರುವಿ. ನಿನ್ನ ನಾಲಿಗೆಯನ್ನು ತುಂಡರಿಸಿ ಚೆಲ್ಲುವೆ (ಖಡ್ಗ ಹಿರಿದು)

ಕರಾಳ : ಮರಾಳ್ಯಾ ಈ ಪೋಷಾಕದಲ್ಲಿರುವ ನನ್ನ ಮೈಗೆ ಕೈಯೆತ್ತಿರುವೆಯಾ? ಇರಲಿ ಇದೊಂದು ಸಲ ಕ್ಷಮಿಸುತ್ತೇನೆ.

ಶಿವಾಂಗಿ : (ಸ್ವ) ಕರಾಳನ ಮೇಲೆ ಪ್ರೇಮ ತೋರಿಸಿದಂತೆ ಮಾಡಬೇಕು. ಅಂದರೆ ಈತನು ಹಿಗ್ಗುವನು ಹಿಗ್ಗಿನ ಭರದಲ್ಲಿ ಎಲ್ಲವನ್ನು ಸಾದ್ಯಂತವಾಗಿ ಹೇಳುವನು (ಪ್ರಕಟ) ಕರಾಳಾ! ಮರಾಳಾ! ನೀವಿಬ್ಬರೂ ಕೂಡಿ ನನ್ನನ್ನು ಕರೆಯಿರಿ ನಾನು ನನ್ನ ಮನಸ್ಸಿಗೆ ಬಂದವರೊಡನೆ ಹೊರಡುವೆನು. ಸುಮ್ಮನೆ ಜಗಳಾಡಬೇಡಿ.

ಕರಾಳ : ಶಿವಾಂಗಿಯ ಸವಿಯಾದ ಶಬ್ದಗಳೂ ಮನ್ನಿಸಲರ್ಹ-ವಾಗಿರುವವು.

ಶಿವಾಂಗಿ : ಹೂಂ ಕೂಗಿರಿ.

ಕರಾಳ : ಮರಾಳಜಿ ಅಂದವಾದ ಶಬ್ದಗಳನ್ನು ಪ್ರಯೋಗಿಸಿ ಶಿವಾಂಗಿಯನ್ನು ಕೂಗತಕ್ಕದ್ದು ತಿಳಿಯಿತೆ?

ಮರಾಳ : ಹಾಗೆ ಆಗಲಿ!

ಕರಾಳ : ಪಂಚಮ ಸ್ವರಕ್ಕೆ ಸರಿಯಾದ ಕಂಠವುಳ್ಳ ಕೋಮಲಾಂಗಿಯೇ ದಾಡಿಮ ಬೀಜಗಳನ್ನು ಧಿಕ್ಕರಿಸುವ ರದನ ಪಂಕ್ತಿಯಿಂದೊಪ್ಪುವ ಸೂವದನೆಯೇ, ನಿನ್ನ ಪ್ರೇಮ ಪರ್ಜನ್ಯದ ದಾರಿಯನ್ನು ನೋಡುತ್ತಿರುವ ಕಲಾಳ- ಮರಾಳರಿಗೆ ತೃಷಿತ ಚಾಕತ ಮೇಘಮಾಲೆಯೇ ಸವಿಯಾದ ಶಬ್ದಗಳನ್ನು ಸುರಿಸುವ ಶುಕವಾಣಿಯೇ, ಶಿವಾಂಗಿಯೇ ನಮ್ಮೊಡನೆ ಹೊರಡು.

ಶಿವಾಂಗಿ : ನಡೆಯಿರಿ ಕರಾಳರಾವ!

ಕರಾಳ ಹೇಗಿದೆ ಮರಾಳಾ ಶಿವಾಂಗಿಯ ಹವ್ಯಾಸವನ್ನು ಬಿಟ್ಟು ಬಿಡು. ಅಹಹ! ಪಂಪಾಪತೆ! ನಿನಗೆ ನನ್ನ ಅನಂತ ಪ್ರಣಾಮಗಳು ಸುವಾಸಿನಿಯಾದ ಶಿವಾಂಗಿಯು ಸಹಚಾರಿಣಿಯಾಗಿರುವಂತೆ ವರ ಪ್ರದಾನ ಮಾಡು.

(ಶಿವಾಂಗಿಯ ಕೈಹಿಡಿದುಕೊಂಡು ಹೋಗುವನು)

ಮರಾಳಾ ಮಹೇಶಾ ಮರಾಳನನ್ನು ಮಡಿಯಲ್ಲಿ ಹುಟ್ಟಿಸಿದೆಯೇಕೆ? ಶಿವಾಂಗಿ! ಕ್ರೂರನಾದ ಕರಾಳನನ್ನುವರಿಸುವಿಯಾ? (ಉಸುರ್ಗರೆದು) ಇರಲಿ ಕರಾಳ್ಯಾಕಈ ಅಪಮಾನವಾದ ಸೇಡನ್ನು ತೆಗೆಯದೆ ಎಂದೂ ಬಿಡುವದಿಲ್ಲ. (ಹೋಗುವನು).

೫ನೇ ಪ್ರವೇಶ

(ರೌದ್ರದಾಮನ ವಿಲಾಸ ಭವನ)

(ರಾಗ ಕೇದಾರಿ ತಾಲ - ತ್ರಿಕಾಲ)

ಗೌರಾಂಬಿಕೆ ಬಾ ನರೇಶಾ ಥಾಪಿಸಿ

ಕಾಂತನ ಮಾರ್ತಿ ಕಾಂಬುದೋ

ಭ್ರಾಂತನಾದೆ ಬಾರನೇ । ತಾ ಪ್ರೀಯಾ ಓಡಿ ಬಾರನೇ

ಈ ನಶ್ವರವಾದ ಪಟದ ಮೇಲೆ ಚಿತ್ರಿಸಲ್ಪಟ್ಟಿರುವ ಚಿತ್ರವನ್ನು ಅಳುಕಿಸಬಹುದು. ಆದರೆ ಹೃತ್ಪಟಲದ ಮೇಲೆ ಚಿತ್ರಿಸಲ್ಪಟ್ಟಿರುವ ಈ ಮನೋಹರವಾದ ಚಿತ್ರವನ್ನು ಕೆಡಿಸುವವರಾರು? ಅಣ್ಣಾ! ವ್ಯರ್ಥವಾಗಿ ನನ್ನ ಮನೋರಮಣನನ್ನು ದೂಷಿಸುತ್ತಿರುವಿಯಲ್ಲ (ತಡೆದು) ಪಂಪಾಪತೇ! ನನ್ನ ಅಣ್ಣನಿಗೆ ಸುಬುದ್ಧಿಯನ್ನು ಕೊಡು. ಪ್ರಿಯಕರಾ! ನಿನ್ನ ಸೇವೆಯನ್ನು ಮಾಡುವ ಸುಯೋಗವು ಉದಯವಾಗುವವರೆಗೆ ಈ ನಿನ್ನ ಭಾವಚಿತ್ರವನ್ನೇ ಪೂಜಿಸುವೆನು. (ಭಾವ ಚಿತ್ರಕ್ಕೆ ಹಾರ ಹಾಕಿ ಪೂಜಿಸುವಳು)

ರೌದ್ರದಾಮ : ಗೌರೀ! ಬುಕ್ಕನ ಭಾವನ ಚಿತ್ರವನ್ನು ಪೂಜಿಸಬೇಡವೆಂದು ನಿನಗೆಷ್ಟು ಸಲ ಹೇಳಬೇಕು. ನನ್ನ ಕಡುಹಗೆಯಾದ ಹುಕ್ಕನ ತಮ್ಮನನ್ನು ನನ್ನ ತಂಗಿಯಾದ ನೀನು ಪೂಜಿಸಬೇಕೆ? ನಿನ್ನ ಈ ದುರಾಶೆಯ ಅಘಾತದಿಂದ ನನ್ನ ಮಸ್ತಕವು ಇಬ್ಭಾಗವಾಗುತ್ತಿರುವದು. ಮನಸ್ಸು ಶಾಂತಿಯನ್ನು ನೀಗುತ್ತಿರುವದು. ಗೌರೀ ನಿನ್ನ ಸಹೋದರನಾದ ರೌದ್ರದಾಮನಿಗೆ ರುಚಿಸದ ಈ ದುರಾಚರಣೆಯನ್ನು ದೂಡಿಬಿಡು.

ಗೌರಾಂಬಿಕಾ : ಅಣ್ಣಾ! ಇದು ದುರಾಚರಣೆಯೆ? ಪತಿರಾಯನನ್ನು ಪೂಜಿಸುವದು ಪತಿವ್ರತೆಯ ಧರ್ಮವಲ್ಲವೆ?

ರೌದ್ರದಾಮ ಏನು ಬುಕ್ಕರಾಯನು ನಿನ್ನ ಪತಿಯೆ?....

ಗೌರಾಂಬಿಕಾ ಅಣ್ಣಾ! ಆರ್ಯ ಕನ್ನೆಯಾದ ನಾನು ಮನಸ್ಸಿನಿಂದ ಆತನನ್ನೇ ಪತಿಯನ್ನಾಗಿ ವರಿಸಿರುವೆ ಅಣ್ಣಾ! ಯಾವ ಮಹಾನುಭಾವನ ಚರಣಕಮಲಗಳಲ್ಲಿ ಮನಸ್ಸು ನೆಟ್ಟು ಹೋಗಿರುವದೋ, ಯಾವ ಪುಣ್ಯಾತ್ಮನ ಹೆಸರು ಸುವರ್ಣಾಕ್ಷರಗಳಿಂದ ರಾಷ್ಟ್ರೇತಿಹಾಸದಲ್ಲಿ ಬರೆಯಲ್ಪಡುವದೋ ಆ ಭಾಗ್ಯಶಾಲಿಯ ಧರ್ಮಪತ್ನಿಯ ಪದವನ್ನು ತ್ರಿಕರ್ಣಪೂರ್ವಕವಾಗಿಯೇ ವಹಿಸಿರುವೆ. ಆ ನನ್ನ ಹೃದಯೇಶ್ವರನನ್ನು ಪೂಜಿಸಬಾರದೆ? ಬಂಧುರಾಜ! ಆಬಂಧುದ್ವಯರು ನಿಶ್ಚಯವಾಗಿ ನಿನ್ನ ವೈರಿಗಳಲ್ಲಾ. ನೀನು ಮಾತ್ರ ಅವರ ವೈರತ್ವವನ್ನು ಕಟ್ಟಿಕೊಳ್ಳುತ್ತಿರುವಿ. ಅಣ್ಣಾ! ಆ ಪುಣ್ಯಶಾಲಿಗಳು ಈಶ್ವರಾಂಶದಿಂದ ರಾಷ್ಟ್ರೋದ್ಧಾರಕ್ಕಾಗಿ ಭೂಮಿಗಿಳಿದು ಬಂದಿರುವರೆಂದು ತಿಳಿ.

ರೌದ್ರದಾಮ : ನಿನ್ನ ಬುಕ್ಕರಾಯನು ಶಿವನ ಅವತಾರ. ನೀನು ಪಾರ್ವತಿಯ ಅವತಾರವಲ್ಲವೆ? ಎಂಥ ಸುಂದರವಾದ ಕಲ್ಪನಾ ಚಿತ್ರವನ್ನು

ಚಿತ್ರಿಸಿರುವಿ. ಗೌರಿ! ಇಂಥ ಹುಚ್ಚುತನವನ್ನು ಬಿಟ್ಟುಬಿಡು. ಬುಕ್ಕನ ಹಂಬಲವನ್ನು ಬಿಟ್ಟು ಬಿಡು. ಸೇನಾ ಸಾಗರ ಭುಜಂಗರಾಯನೊಡನೆ ನಿನ್ನ ವಿವಾಹವನ್ನು ಮಾಡುವುದನ್ನು ನಿಶ್ಚಯಿಸಿರುವೆ. ಇನ್ನು ಒಂದೇ ವಾರ ಅವಕಾಶ.

ಗೌರಾಂಬಿಕಾ : ಆ ಮೇಲೆ....

ರೌದ್ರದಾಮ : ಶುಭಮಂಗಳ ಸಾವಧಾನ.

ಗೌರಾಂಬಿಕಾ : ತಮ್ಮ ಹೃದಯವು ಪರಿಚಿತವಾಯಿತು ಅಣ್ಣಾ! ನಿನ್ನ ರಾಕ್ಷಸೀಮಹಾತ್ವಾಕಾಂಕ್ಷೆಗೆ ಭಗಿನಿಯ ಬಲಿಕೊಟ್ಟು ಅದನ್ನು ಪೂರ್ಣಮಾಡಬೇಕೆಂದು ಇಚ್ಛಿಸುವೆಯಾ? ಅಣ್ಣ ತಮ್ಮಂದಿರ ಉದರಂಭರಣಕ್ಕಾಗಿ ಇಲ್ಲವೇ ಅವರ ಸ್ವಾರ್ಥಮಯ ಪ್ರಪಂಚಕ್ಕಾಗಲೀ ಉಪಯೋಗಬೀಳತಕ್ಕ ವಸ್ತುವಾಗಿರಲೆಂದು ಭಗಿನಿ ವರ್ಗವನ್ನು ಭಗವಂತನು ಭೂಮಿಯ ಮೇಲೆ ಹುಟ್ಟಿಸಿರುವದಿಲ್ಲಾ, ಅಣ್ಣಾ ಸ್ವಕುಲೋದ್ಧಾರಕ್ಕಾಗಿ ಸ್ತ್ರೀ ವರ್ಗದ ಜನ್ಮವಿರುತ್ತದೆ.

ರೌದ್ರದಾಮ : ಅದು ಏನೇ ಇರಲಿ ನೀನು ಮಾತ್ರ ನಾನು ಹೇಳಿದಂತೆ ವರ್ತಿಸಬೇಕು. ಭುಜಂಗರಾಯನ ಕರಪಿಡಿದು ನನ್ನ ಆತ್ಮ ಸಂತೋಷಗೊಳಿಸಬೇಕು. ಇಲ್ಲದ ಹಟ ತೊಟ್ಟು ನನ್ನನ್ನು ರೊಚ್ಚಿಗೆಬ್ಬಿಸಬೇಡ. ನನ್ನ ನಿಶ್ಚಯವು ಧ್ರುವತಾರೆಯಂತೆ ಅಚಲವಾಗಿರುವದೆಂದು ತಿಳಿ.

ಗೌರಾಂಬಿಕಾ : ನಿನ್ನ ತಂಗಿಯಾದ ನನ್ನ ನಿಶ್ಚಯವಾದರೂ ಧೃಡವಾಗಿದೆಯೆಂದು ತಿಳಿ. ನನ್ನ ಹೃದಯ ಸಿಂಹಾಸನದ ಮೇಲೆ ವಿರಾಜಿಸುತ್ತಿರುವ ಬುಕ್ಕರಾಯರ ಪುಣ್ಯ ಮೂರ್ತಿಯ ಹೊರತಾಗಿ ಯಾವತ್ತೂ ಪುರುಷ ವರ್ಗವು ನನಗೆ ನಿನ್ನ ಸಮಾನವಾಗಿರುವದು. ಬುಕ್ಕರಾಯನ ಹೊರತು ಮಿಕ್ಕದೇವನನಗಿಲ್ಲ.

ರೌದ್ರದಾಮ ಹಾಗಾದರೆ ನೀನೇನು ಭುಜಂಗರಾಯನನ್ನು ವರಿಸುವದಕ್ಕೆ ಸಮ್ಮತಿಸುವದಿಲ್ಲವೆ? ದೇವೀ ರುಕ್ಮಿಣಿಯ ನಿಷ್ಠುರತೆಯನ್ನು ನಾನಿಂದು ತಿಳಿಯಬೇಕಾಯಿತು.

ಗೌರಾಂಬಿಕಾ : ಆ ರುಕ್ಮಿಣಿ ದೇವಿಯು ಆಚರಿಸಿದ ಸತ್ಯಾಗ್ರಹದ ವೃತ್ತವನ್ನು ಇಂದಿನಿಂದ ನನಗೂ ಆಚರಿಸಬೇಕಾದೀತು.

ರೌದ್ರದಾಮ ಹೃದಯದಲ್ಲಿ ಹೊತ್ತಿರುವ ದ್ವೇಷಾನಲದಲ್ಲಿ ಬೆಂದು ಹೋಗುತ್ತಿರುವ ಜೀವಕ್ಕೆ ಹುಕ್ಕ-ಬುಕ್ಕರ ನಾಶದಿಂದ ಶಾಂತಿ ದೊರೆಯುವದು. ಗೌರೀ ನೀನೀಗ ಪೂಜಿಸಿದ ಬುಕ್ಕರಾಯನ ಭಾವ ಚಿತ್ರವನ್ನು... (ಒಡೆಯ ಹೋಗಿ ಮುಗ್ಗರಿಸಿ ಬೀಳುವನು)

ಗೌರಾಂಬಿಕಾ : (ಮುಗುಳು ನಗೆಯಿಂದ ಅಡ್ಡೈಸಿ) ಅಣ್ಣಾ! ನಿರ್ಜೀವವಾದ ಭಾವಚಿತ್ರ ಅಪಮಾನಗೊಳಿಸುವಷ್ಟು ಶಕ್ತಿಯು ಸಹ ನಿನ್ನಲಿಲ್ಲ, ಆಮೇಲೆ....

ರೌದ್ರದಾಮ : ಹಾ! ಗೌರೀ ಜೋಕೆ, ಅಭದ್ರ ಶಬ್ದಗಳನ್ನಾಡಬೇಡ.

ಗೌರಾಂಬಿಕಾ : ಸಹೋದರಾ ! ಬುಕ್ಕರಾಯನನ್ನು ದೂಷಿಸುವುದು ಸೂರ್ಯನ ಮೇಲೆ ಮಣ್ಣು ತೂರುವುದು ಒಂದೇ.

ರೌದ್ರದಾಮ : ಗೌರೀ, ಚಿತ್ರಪಟವನ್ನು ಕೆಳಗಿಡು.

ಗೌರಾಂಬಿಕಾ : ಹೂ ಇಲ್ಲ! ಕೆಳಗಿಡುವದಿಲ್ಲ

ರೌದ್ರದಾಮ : ಒಳ್ಳೇ ಮಾತಿನಿಂದ ಕೆಳಗಿಡುವಿಯೋ ಅಥವಾ ಇಲ್ಲವೋ?

ಗೌರಾಂಬಿಕಾ ಇದೆಂದಿಗೂ ಆಗದ ಮಾತು. ಪರಬ್ರಹ್ಮ ಸ್ವರೂಪನಾದ ಪತಿಯನ್ನು ಏಕೋ ಭಾವದಿಂದ ಪೂಜಿಸುತ್ತಿರುವ ಆರ್ಯ ಕುಮಾರಿಯ ಪ್ರೇಮಯೋಗದಲ್ಲಿ ಪ್ರಭುವಿನ ಶಕ್ತಿಯು ಒಟ್ಟುಗೂಡಿರುವುದು.

ರೌದ್ರದಾಮ ಸಾಕು ಮಾಡು ಹೆಚ್ಚಾಗಿ ಮಾತಾಡಬೇಡ ಅದೋ ಭುಜಂಗರಾಯರೇ ಬರುತ್ತಿರುವರು ಅವರನ್ನು ಪ್ರೇಮದಿಂದ ಕಾಣು.

ಗೌರಾಂಬಿಕಾ : ಸಾಕು ಅಣ್ಣಾ ಈ ಪ್ರೇಮದ ಶಬ್ದಗಳಿಂದ ನಿನ್ನನ್ನು ಕರೆಯುವುದೇ ಬೇಡ. ನಿನ್ನ ಅಂತಃಕರಣವೆಷ್ಟು ವಿಷಭರಿತವಾಗಿದೆಯೆಂದು ನನಗೆ ತಿಳಿದಿದ್ದಿಲ್ಲಾ. ನಿನ್ನ ಹೃದಯವು ದಾನವೀ ಲಾಲಸೆಯ ಪ್ರವಾಹದಲ್ಲಿ ತೇಲಿ ಹೋಗಿರುವದು. ನಿನ್ನ ಮುಖಾವಲೋಕನ ಬೇಡ

ರೌದ್ರದಾಮ ಗೌರಿ! ಗೌರಾಂಬಿಕಾ ನಿಷ್ಠುರದ ನುಡಿಗಳನ್ನಾಡಬೇಡ. ನಿನ್ನ ಹೃದಯದೊಳಗಣ ಬಂಧು ಪ್ರೇಮವು ಬತ್ತಿ ಹೋಗಿರುವುದಿಲ್ಲವಷ್ಟೇ.

ಗೌರಾಂಬಿಕಾ : ಬಂಧು ಪ್ರೇಮವು ಬತ್ತಿ ಹೋಗಿರುವುದಿಲ್ಲ, ಆದರೆ ನಿನ್ನ ಪೈಶಾಚಿಕ ವರ್ತನೆಯಿಂದ ನಾನೀಗ ನಿಷ್ಠುರಳಾಗಿರುವೆ. ನಾನೊಬ್ಬಳೇಕೆ? ಪ್ರತಿಯೊಬ್ಬ ಸತ್ಯಶೀಲ ಹಾಗೂ ಧರ್ಮನಿಷ್ಠ ಆರ್ಯ ಕುಮಾರಿಯು ತನ್ನ ದುಷ್ಟವೃತ್ತಿಯ ಬಂಧುವನ್ನು ಒಂದು ಸಲ ಏಕೆ ಸಾಸಿರ ಸಲ ಧಿಕ್ಕರಿಸುವಳು.

ರೌದ್ರದಾಮ : ಹೀಗೋ....

ಗೌರಾಂಬಿಕಾ : ಅಹುದು ಸ್ವಾರ್ಥವನ್ನು ಸಾಧಿಸುವದಕ್ಕಾಗಿ ಬೇಕಾದ ನೈಚ್ಯವನ್ನು ಮಾಡುವ ಹೀನಮಾನವನಾಗಿರುವಿ. ಯಾವ ದಿವಸ ನಿನ್ನ ಪೈಶಾಚಿಕ ವರ್ತನೆಯು ದೂರಾಗಿ ಮಾನವೀ ಶುಭವೃತ್ತಿಯು ನಿನ್ನಲ್ಲಿ ಕಂಗೊಳಿಸುವದು ಆದಿವಸವೇ ನನ್ನ ಹೃದಯವು ಬಂಧು ಪ್ರೇಮಾಮೃತ ತುಷಾರಗಳನ್ನು ನಿನ್ನ ಮೇಲೆ ಸಿಂಪಡಿಸುವದು.

ರೌದ್ರದಾಮ : ಬೇಡ. ನಿನ್ನ ಬಂಧು ಪ್ರಮಾಮೃತವೂ ಬೇಡ ನನ್ನ ಪೈಶಾಚಿಕ ವರ್ತನೆಯು ದೂರಾಗುವದು ಬೇಡ. ಆ ಹುಕ್ಕ ಬುಕ್ಕರ ರಕ್ತವನ್ನು ಹೊರಗೆಡವಿ, ಆ ರಕ್ತದಲ್ಲಿ ನನ್ನ ಕರಗಳನ್ನು ತೊಳೆಯುವದರಿಂದ ಆಗುವ ಆನಂದವು ನನಗೆ ಮತ್ತೇತರಿಂದಲೂ ದೊರೆಯಲಾರದು. ಗೌರೀ ಆ ಚಿತ್ರವನ್ನು ನನ್ನ ಪಾದಗಳ ಮೇಲೆ ಹಾಕು ಇಲ್ಲದಿದ್ದರೆ ಆ ಚಿತ್ರ ಹಿಡಿದಿರುವ

ಕರವನ್ನು .... (ಎಂದು ಖಡ್ಗ ಹಿರಿಯುವನು ಭುಜಂಗರಾಯನು ಬರುವನು)

ಭುಜಂಗ : ಹಾ! ಇದೇನು ಪ್ರಧಾನಿಜೀ! ಖಡ್ಗವನ್ನು ಒರೆಗಾಣಿಸಿರಿ. ಇದು ರಣಮೈದಾನವಾಗಿರದೇ ತಮ್ಮ ವಿಲಾಸ ಭವನವಾಗಿದೆ ಎದುರಿನಲ್ಲಿ ಶತ್ರುವಿರದೇ ಪ್ರೇಮಮೂರ್ತಿಯಿದೆ. ಸಿಂಹವನ್ನು ರೊಚ್ಚಿಗೆಬ್ಬಿಸುವವರಾರು?

ಗೌರಾಂಬಿಕಾ : ಸೇನಾಪತಿಗಳೇ! ಸಿಂಹದ ರೋಷಕ್ಕೆಸಿಂಹ ಸಹೋದರಿಯಾದ ಈ ಸಿಂಹಿಣಿಯೇ ಕಾರಣಿಭೂತಳು. ಪ್ರಧಾನರೇ ಒರೆಯಿಂದ ಹೊರಬಿದ್ದ ಖಡ್ಗವನ್ನು ಒರೆಗಾಣಿಸುವದೇತಕ್ಕೆ? ನನ್ನ ಕರವನ್ನು ಛೇದಿಸುವದಕ್ಕೆ ಸಿದ್ಧರಾಗಿದ್ದರಲ್ಲವೇ? ಕರವನ್ನೇಕೆ ಶಿರವನ್ನು ತಗಿದು ತಮ್ಮ ಕಂಟಕವನ್ನು ದೂರಮಾಡಿಕೊಳ್ಳಿ.

ರೌದ್ರದಾಮ : ಗೌರಿ! ನನ್ನ ಕಾಲ ಮೃತ್ಯುವೇ ನಿನ್ನ ರೂಪದಿಂದ ಜನ್ಮಹೊಂದಿ ಬಂದಿರುವದು.

ಗೌರಾಂಬಿಕಾ : ಅದಕ್ಕಾಗಿ ನನ್ನನ್ನು ಕಡಿದು ಹಾಕಿರಿ. ಸಹೋದರಿಯ ಹತ್ಯೆಯಂಥ ಪುಣ್ಯವನ್ನು ಪದರಿನಲ್ಲಿ ಕಟ್ಟಿಕೊಳ್ಳಿ.

ರೌದ್ರದಾಮ : ಗೌರೀ! ಈ ತರಹದ ಔದ್ಧತ್ಯವು ಆರ್ಯಕುಮಾರಿಗೆ ಭೂಷಣವಲ್ಲ (ಹೋಗುವನು)

ಭುಜಂಗ : ಹೀಗೆ ಉದ್ಗಾರವನ್ನು ತೆಗೆಯುತ್ತ ಪ್ರಧಾನರು ಹೋದುದೇಕೆ?

ಗೌರಾಂಬಿಕಾ : ಅವರನ್ನೇ ಕೇಳಿಕೊಳ್ಳಿ (ಹೋಗಹತ್ತುವಳು) ಸ್ವಲ್ಪ ತಡೆಯುವಿರಾ? ನನ್ನದೊಂದು ವಿಜ್ಞಾಪನೆಯಿದೆ.

ಭುಜಂಗ : ಅದೇನಿಲ್ಲ, ಗೌರಿ...

ಗೌರಾಂಬಿಕಾ : ಹೂಂ ಹೇಳಿ ಸಂಕೋಚವೇಕೆ?

ಭುಜಂಗ : ಮತ್ತೇನಿಲ್ಲ... (ತಲೆ ತುರಿಸುತ್ತ) ತಮ್ಮದಾವ ವಿಜ್ಞಾಪನೆ ಆದಿಷ್ಟಾಗಲಿ

ಗೌರಾಂಬಿಕಾ : ಜೋಕೆ! ಎಚ್ಚರದಿಂದ ಮಾತಾಡಿರಿ.

ಭುಜಂಗ (ಸ್ವಗತ) ಒಮ್ಮೆಲೆ ಏಕವಚನದಿಂದ ಸಂಭೋದಿಸಿ ಹೀಗೆ ಕಾಲ ಮೇಲೆ ಕಲ್ಲು ಹಾಕಿ ಕೊಳ್ಳುತ್ತಿರುವೆ (ಪ್ರ) ಮತ್ತೇನಿಲ್ಲ. ತಮ್ಮ ಮುಖದಿಂದ ಅಭಯ ವಚನ.

ಗೌರಾಂಬಿಕಾ : ಏತಕ್ಕೋಸ್ಕರ

ಭುಜಂಗ ಪ್ರೇಮಕ್ಕೋಸ್ಕರ

ಗೌರಾಂಬಿಕಾ : ಸೇನಾಪತಿಗಳೇ! ಸಹೋದರನ ಸ್ವಾರ್ಥದ ಲಾಭತಕ್ಕೊಂಡು ಅಮರ್ಯಾದೆಯ ಶಬ್ದಗಳನ್ನುಚ್ಚರಿಸುತ್ತಿರುವಿರಲ್ಲವೆ? ಹೋಗಿರಿ ಇನ್ನು ಮುಂದೆ ಯಾಚನೆ, ವಿನಂತಿ, ವಿಜ್ಞಾಪನೆ ಇವುಗಳ ಗೋಜಿಗೆ ಹೋಗಬೇಡಿ. ಇಂಥ ಶಬ್ದಗಳನ್ನು ನನ್ನ ಮುಂದೆ ಎತ್ತಬೇಡಿ.

ಭುಜಂಗ ತಾವು ಅವಿವಾಹಿತರಾಗಿರುವವರೆಗೆ ತಮ್ಮ ಪ್ರೇಮವನ್ನು ಕೇಳಿಕೊಳ್ಳಲಿಕ್ಕೆ ನಮಗೆ ಅಧಿಕಾರವುಂಟು.

ಗೌರಾಂಬಿಕಾ : ಆರ್ಯಕುಲಕ್ಕೆ ಕಲಂಕವನ್ನು ಮೆತ್ತುವಂಥ ಅಧಿಕಾರವನ್ನು ನಿಮಗಾರು ಕೊಟ್ಟರು ಭುಜಂಗರಾವ! ನಿಮಗೆ, ಮಾನ, ಮರ್ಯಾದೆಗಳಿಲ್ಲವೆ? ಮನಲಜ್ಜೆ ಇರದಿದ್ದರೂ ಜನಲಜ್ಜೆಯಾದರೂ ಇಲ್ಲವೇ. ಆರ್ಯ ಕುಮಾರಿಯ ಪ್ರೇಮವೆಂದರೆ ಸಂತೆಯಲ್ಲಿಟ್ಟಿರುವ ವಸ್ತುವಲ್ಲ. ಇಲ್ಲಿಂದ ಹೊರಡಿರಿ ಇಲ್ಲವೇ ನಾನೇ ಹೋಗುವೆ.

ಭುಜಂಗ ಹ! ಸ್ವಲ್ಪ ತಡೆಯಿರಿ ನನ್ನನ್ನು ಸಾಮಾನ್ಯ ಮನುಷ್ಯನೆಂದು ತಿಳಿದಿರುವಿರಾ?

ಗೌರಾಂಬಿಕಾ : ತಾವೇಕೆ ಸಾಮಾನ್ಯ ಮನುಷ್ಯರಾದೀರಿ. ಆನೆಗುಂದಿಯ ಸೇನಾಪತಿ. ಮೇಲಾಗಿ "ಸೇನಾಸಾಗರ" ಎಂಬ ಪದವಿಯನ್ನು ಧರಿಸಿದ ತಾವು ಸಣ್ಣ ಮನುಷ್ಯರೇ! ಭುಜಂಗರಾವ! ನಾನು

ಹೇಳುವ ಖಂಡತುಂಡ ಮಾತನ್ನು ನಿಮ್ಮ ಹೃತ್‌ಪಟಲದ ಮೇಲೆ ಕೊರೆದುಕೊಳ್ಳಿ. ಈ ವಿಸ್ತೀರ್ಣವಾದ ವಿಶ್ವವು ನಿರ್ಜನವಾಗಿ ಈ ಧರಾದ ಮೇಲೆ ನಾವೀರ್ವರೇ ಉಳಿದ ಸಮಯದಲ್ಲಾದರೂ ತಮ್ಮ ಯಾಚನೆಯನ್ನು ಕೇಳಲಾರೆ. ತಿಳಿಯಿತೇ! (ಹೋಗುವಳು)

ಭುಜಂಗ ಹೋದಳು, ನಿಷ್ಠುರತೆಯ ನುಡಿಗಳನ್ನುಚ್ಚರಿಸಿ ಹೋಗಿಬಿಟ್ಟಳು. ಹೋಗು! ಗೌರೀ ಹೋಗು ರೌದ್ರರಾಮನನ್ನು ಒತ್ತಾಯಪಡಿಸಿ ನಿನ್ನ ಕರಗಳಿಂದಲೇ ಪೂಮಾಲೆಯನ್ನು ಹಾಕಿಸಿಕೊಳ್ಳದಿದ್ದರೆ ಈ ಭುಜಂಗನು ಜನ್ಮವೆತ್ತಿದ ಫಲವೇನು? ಯೋಗವಾದರೂ ಕೂಡಿ ಬಂದಿದೆ. ನಾಳಿನ ಕಾರ್ಯಕ್ಕೋಸ್ಕರವಾಗಿ ಹೊರಡುವದಕ್ಕಿಂತ ಮುಂಚಿತವಾಗಿ ರೌದ್ರದಾಮನಿಂದ ವಚನ ತಕ್ಕೊಂಡು ಆಮೇಲೆ ಹೊರಡುವೆ. ಗೌರಿ ! ನನ್ನ ಹೊರ್ತಾಗಿ ನಿನ್ನ ಕರಗ್ರಹಣ ಮಾಡಲಿಕ್ಕೆ ಮತ್ತಾವನಿಗೂ ಆಸ್ಪದವನ್ನು ರೌದ್ರದಾಮರು ಕೊಡುವಂತಿಲ್ಲ. ಗೌರೀ, ಈ ಪುರುಷ ಸಿಂಹನ ಪ್ರೇಮವನ್ನು ಧಿಕ್ಕರಿಸುವಿಯಾ? ಈ ಭುಜಂಗನೆಂದರೆ ಸಾಮಾನ್ಯ ವ್ಯಕ್ತಿಯಲ್ಲ (ಹೋಗುವನು).

(೧ನೇ ಅಂಕ ಸಮಾಪ್ತಿ)

೨ನೇ ಅಂಕ
೧ನೇ ಪ್ರವೇಶ

ಸ್ಥಳ : ಪಂಪಾರಣ್ಯ ಸಮಯ : ಮೊದಲನೆಯ ಪ್ರಹರ

(ಫಕೀರ ವೇಷಧಾರಿಯಾದ ಬಾವುದ್ದೀನನು ಬರುವನು)

ಬಾವುದ್ದೀನ ಖುದಾ! ದೈನ್ಯಾವಸ್ಥೆಯ ಭೀಕರವಾದ ಚಿತ್ರವನ್ನು ಜಗತ್ತಿನ ಮುಂದಿಡಬೇಕೆಂದು ಇಚ್ಛಿಸಿ ಜಗತ್ತಿನ ಯಾವತ್ತು ದೈನ್ಯವನ್ನು ಒಟ್ಟುಗೂಡಿಸಿ ನನ್ನನ್ನು ನಿರ್ಮಿಸಿದೆಯಾ? ನಾನೆಂಥ ಅಪರಾಧವನ್ನು ಮಾಡಿರುವೆ. ದಿಲ್ಲಿಯ ಸಿಂಹಾಸನಕ್ಕೆ ಬಾಧ್ಯಸ್ಥನಾದ ಈ ಬಾವುದ್ದೀನನಿಗೆ ಫಕೀರವೇಷದಿಂದ ತಿರುಗಾಡಬೇಕಾಯಿತೆ? ಈ ವಿಶಾಲವಾದ ವಿಶ್ವದಲ್ಲಿ ನನಗೆ ಆಶ್ರಯವನ್ನು ಕೊಡುವವರು ಯಾರು ಇರಲಿಕ್ಕಿಲ್ಲವೆ? ಇಲ್ಲಿ ನಿಶ್ಚಯವಾಗಿ ಯಾರೂ ಇಲ್ಲ. ಉದಾರ ಹೃದಯದವನಾದ ಕಂಪಲಿಯ ರಾಯನು ನನಗೆ ಆಶ್ರಯವನ್ನು ಕೊಟ್ಟಿದ್ದನು. ನನ್ನ ಹೀನವಾದ ಅದೃಷ್ಟವು ಆತನನ್ನು ನುಂಗಲಾರಂಭಿಸಿದೆ. ಧಿಕ್ಕಾರ ಬಾವುದ್ದೀನ, ನಿನ್ನ ಜೀವಕ್ಕೆ ತ್ರಿವಾರ ಧಿಕ್ಕಾರ (ಕರಾಳ ಬರುವನು)

ಕರಾಳ ಇವನೇ ಆ ಬಾವುದ್ದೀನನು. ಬೇಟೆಯು ತನ್ನಿಂದ ತಾನೇ ಜಾಲದಲ್ಲಿ ಬಿದ್ದಿತು. ಫಕೀರಸಾಹೇಬ, ತಾವು ನಿಜವಾದ ಫಕೀರರೋ ಅಥವಾ ವೇಷಧಾರಿ ಫಕೀರರೋ?

ಬಾವುದ್ದೀನ ಇವನು ನನ್ನನ್ನು ಗುರುತಿಸಿದಂತೆ ಕಾಣುತ್ತದೆ.

ಕರಾಳ ವಿಚಾರವೇನು ನಡೆದಿದೆ? ಫಕೀರರೇ ಯಾವ ಕಡೆಯಿಂದ ಬಂದಿರುವಿರಿ?

ಬಾವುದ್ದೀನ ತಾವು ಯಾವ ಕಡೆಯಿಂದ ಬಂದಿರುವಿರೊ ಆ ಕಡೆಯಿಂದ ನಾನು ಬಂದಿರುವೆ.

ಕರಾಳ ಯಾವ ಕಡೆಗೆ ಹೋಗುವಿರಿ?

ಬಾವುದ್ದೀನ ತಾವು ಹೋಗುವ ಕಡೆಗೆ ನಾನು ಹೋಗುವೆ.

ಕರಾಳ ಹೀಗಂದರೇನು?

ಬಾವುದ್ದೀನ ಹಾಗೇ......

ಕರಾಳ (ಸ್ವಗತ) ಫಕೀರ ಸಾಧು ಬೈರಾಗಿಗಳಿಗೆ ಸರ್ಕಾರಿ ಜನರ ಕೈ ಗೊತ್ತಿರುವದಿಲ್ಲ. ಅಂತೇ ನಮ್ಮಂಥ ಅಧಿಕಾರಿ ಜನರನ್ನು ಬಿನ್ ಅಧಿಕಾರಿ ಜನರನ್ನು ಒಂದೇ ಮಾಲಿಕೆಯಲ್ಲಿ ಸೇರಿಸುವರು. (ಪ್ರ) ಫಕೀರಸಾಹೇಬ! ನಾನಾರೆಂಬುದನ್ನು ಈ ಪೋಷಾಕದಿಂದ ತಮಗೆ ಕಂಡು ಬರುವುದಿಲ್ಲವೆ? ನನ್ನನ್ನು ಯಾರೆಂದು ತಿಳಿದಿರುವಿರಿ?

ಬಾವುದ್ದೀನ ನಿನ್ನನ್ನು ಒಂದು ಪ್ರಾಣಿಯೆಂದು ಮಾನವ ತಿಳಿದಿರುವೆ.

ಕರಾಳ ಮಾನವ ಪ್ರಾಣಿಯಾಗಿರುವ ಮಾತು ಸರಿಯೇ. ನಾನುಇದಕ್ಕೂ ಹೆಚ್ಚಾಗಿ ಕಾಣುವದಿಲ್ಲವೆ?

ಬಾವುದ್ದೀನ ನಿನ್ನ ಮಾತಿನ ಮೇಲಿಂದ ಮನುಷ್ಯತ್ವಕ್ಕಿಂತ ಏನೋವಿಶೇಷ ನಿನ್ನಲ್ಲಿರುವದೆಂದು ಕಂಡು ಬರುತ್ತದೆ.

ಕರಾಳ ಹೂಂ ಹಾದಿಗೆ ಬಂದಿ! ಹೇಳು ನಾನಾರಿರುವೆ?

ಬಾವುದ್ದೀನ	ನೀನೊರ್ವ ದ್ವಿಪಾದ ಪಶುವಾಗಿರುವಿ.

ಕರಾಳ	ಎಲ್ಲಾ ಜೀವಗಳ್ಳಾ. ಬಾಯಿಗೆ ಬಂದಂತೆ ಬಡಬಡಿಸಬೇಡ. ಆನೆಗುಂದಿಯ ದಂಡನಾಯಕತ್ವರ ಭಯವು ನಿನಗೆ ಬರುವದಿಲ್ಲವೋ?

ಬಾವುದ್ದೀನ	ಈ ಜಗತ್ತಿನಲ್ಲಿ ನನಗಾರ ಭಯವೂ ಇಲ್ಲ.

ಕರಾಳ	ಭಯವು ನಿನಗಿರದಿದ್ದರೆ ನೀನೇಕೆ ವೇಷ ಪಲ್ಲಟಿಸಿಕೊಂಡು ತಿರುಗಾಡುವಿ?

ಬಾವುದ್ದೀನ	ಇವನ್ನೆಲ್ಲ ತಕ್ಕೊಂಡು ನಿನಗೇನು ಮಾಡಬೇಕಾಗಿದೆ?

ಕರಾಳ	ಬೇಕಾಗಿರುವದೆಂದೆ ನಿನ್ನ ಬೆನ್ನ ಹತ್ತಿ ಕಾಯುತ್ತ ಬಂದೆ. ತಾವು ಸುಲ್ತಾನನ ಅಣ್ಣನ ಮಕ್ಕಳಲ್ಲವೇ? ತಮ್ಮ ಹೆಸರು ಬಾವುದ್ದೀನರಲ್ಲವೆ? ಔಷಧಿಯ ಲತೆಯನ್ನು ಹುಡುಕುತ್ತಿರುವ ಆ ರೋಗಿಗೆ ಆ ಲತೆಯೇ ಕಾಲ್ತೊಡರ ಬಿಡಿದಂತೆ.

ಬಾವುದ್ದೀನ	ನಿನಗಾವ ಮಹಾರೋಗವಾಗಿದೆ?

ಕರಾಳ	ಜೋಕೆಯಿಂದ ಮಾತಾಡು ಜೀವಗಳ್ಳ. ತಡೆ (ಭುಜಂಗ, ಶಿಪಾಯಿ ಬರುವರು)

ಭುಜಂಗ	ಕಂಪಲಿಗೆ ಅಳಿಗಾಲವನ್ನು ತಂದಿರುವದು ಸಾಕಾಗಲಿಲ್ಲವೆ? ಆನೆಗುಂದಿಯನ್ನಷ್ಟು ಮುಂದೆ ಮಾಡಬೇಕೆಂದು ಮಾಡಿರುವೆಯಾ?

ಕರಾಳ	ನಿನ್ನ ಸುಟ್ಟ ಮೋರೆಯನ್ನು ಕಟ್ಟಿಕೊಂಡು ನಮ್ಮ ಸೀಮೆಯಲ್ಲಿ ಏತಕ್ಕೆ ಬಂದಿರುವಿ? ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕಾಗಿತ್ತು.

ಬಾವುದ್ದೀನ	ತಾವು ಯಾರು?

ಕರಾಳ	ಇವರು ಆನೆಗುಂದಿಯ ಸೇನಾಪತಿ 'ಸೇನಾಸಾಗರ' ಭುಜಂಗರಾಯರು ನಾವು ಆನೆಗುಂದಿಯ ಢಣಾಯಕರು ನಮ್ಮ ಹೆಸರು ಕರಾಳರಾವ.

ಭುಜಂಗ — ದಿಲ್ಲಿಯ ಸಿಂಹಾಸನಕ್ಕೆ ಸುಲ್ತಾನ ಮಹಮ್ಮದ ತುಘಲಕರ ಸಿಂಹಾಸನಕ್ಕೆ ದ್ರೋಹಬಗೆದಿರುವಿರಿ ರಾಜದ್ರೋಹಿಯಾವ ನಿನ್ನನ್ನು ಬಂಧಿಸಿ ತಕ್ಕೊಂಡು ಹೋಗುವೆವು.

ಬಾವುದ್ದೀನ — ತಾವು ನನ್ನನ್ನು ದಸ್ತಗೀರಿಮಾಡಲಿಕ್ಕೆ ಬಂದಿರುವಿರೋ?

ಕರಾಳ — ದಸ್ತಗೀರಿ ಮಾಡಲಿಕ್ಕೆ. ಇಷ್ಟೆ ಅಲ್ಲಾ ಕಂಪಲಿಯನ್ನು ಮುತ್ತಲು ಬರುವ ನಿನ್ನ ಚಿಕ್ಕಪ್ಪನಿಗೆ ಸುಲ್ತಾನ ಮಹಮ್ಮದ ತುಘಲಕರಿಗೆ ನಿನ್ನನ್ನು ಒಪ್ಪಿಸಬೇಕಾಗಿದೆ.

ಬಾವುದ್ದೀನ — ಓಗೋ ಸೇನಾಪತಿಗಳೇ, ನನ್ನನ್ನು ನನ್ನ ಚಿಕ್ಕಪ್ಪನ ಕ್ರೋಧ ನೆಲದಲ್ಲಿ ನೂಕ ಬೇಕೆನ್ನುವಿರೋ? ಸೇನಾಸಾಗರ! ನಿರಪರಾಧಿಗಳಾದ ಬಡಪ್ರಜಾಜನರ ಬೇಟೆಯಾಡುವಂಥ ಆ ಸೈತಾನನ ಆಳಿಕೆಯು ನಿಮಗೆ ರುಚಿಸುವದೋ. ಆ ಬಡ ಜನರು ವೇದನೆಯನ್ನು ಸಹಿಸಲಾರದೆ ತೆಗೆಯುತ್ತಿರುವ ಚೀತ್ಕಾರಗಳೇ ವಾತಾವರಣದಲ್ಲಿ ತರಂಗಗಳನ್ನು ಎಬ್ಬಿಸುತ್ತ ದಕ್ಷಿಣ ಭಾರತದ ಶಾಂತಿಯನ್ನು ಭಂಗಿಸುತ್ತಿರುವವು. ಅವು ನಿಮಗೆ ಕೇಳಬರುವದಿಲ್ಲವೆ ಸೇನಾಪತಿಗಳೇ.

ಭುಜಂಗ — ಬಾವುದ್ದೀನ ಪೊಳ್ಳುವಾದದಲ್ಲಿ ಕಾಲಕಳೆಯದೆ ಸುಮ್ಮನೆ ಹಾದಿಯನ್ನು ಹಿಡಿ.

ಬಾವುದ್ದೀನ — ಭುಜಂಗರಾವ! ಈ ನಿಮ್ಮ ಕೃತಿಯು ನಿಮ್ಮ ಧರ್ಮಕ್ಕೆ ರುಚಿಸುವದೇ ಕಂಪಲಿರಾಯರ ಕರ್ನಾಟಕ ವೀರನ ಶೀಲದ ಒಂದು ಅಣುವಾದರೂ ನಿಮ್ಮಲ್ಲಿರಬಾರದೆ? ನಿಮ್ಮಂಥ ಶೀಲಹೀನರ ಧರ್ಮಘಾತುಕರ ಹೆಗ್ಗಳಿಕೆಯಿಂದ ಸ್ವಲ್ಪ ದಿನಗಳಲ್ಲಿಯೇ ಹಿಂದೀ ರಾಷ್ಟ್ರ ಪಾರತಂತ್ರ್ಯ ಶೃಂಖಲೆಗಳಿಂದ ಬಂಧಿಸಲ್ಪಡುವದು.

ಕರಾಳ — ಬಾವುದ್ದೀನ ಸಾಹೇಬರೇ ಸಾಕು ಮಾಡಿ ನಿಮ್ಮ ಹಾಳು ರಗಳೆಯನ್ನು. ಶೀಲ, ಧರ್ಮ, ರಾಷ್ಟ್ರ ಎಂಬೀ ಶಬ್ದಗಳ

ಬುಡಬುಡಕಿಯನ್ನು ಬಾರಿಸುತ್ತಿರುವ ಮಾಧವನೆಂಬ ಹಾರುವನ ಹಾಳು ರಗಳೆಯಿಂದ ನಮ್ಮ ಕಿವಿಗಳು ಈ ಮೊದಲೇ ಬೇಜಾರಗೊಂಡಿವೆ. ನೀವೆಷ್ಟು ಪರಿಯಾಗಿ ತೋಡಿಕೊಂಡರೂ ಬೋರ್ಗಲ್ಲದ ಮೇಲೆ ನೀರೆರದಂತೆ. ನಮ್ಮ ಕೈಯೊಳಗಿಂದ ಪಾರಾಗಿ ಹೋಗುವದು ಅಸಾಧ್ಯವೆಂದು ತಿಳಿ.

ಬಾವುದ್ದೀನ — ವೀರ ಶಿರೋಮಣಿಗಳೇ ನಿಮ್ಮ ಕೈಯೊಳಗಿಂದ ಪಾರಾಗಿ ಹೋಗಬೇಕೆಂಬ ಇಚ್ಛೆಯಿಂದ ಮಾತಾಡಲಿಲ್ಲಾ.

ಭುಜಂಗ — ಎಲೋ ನೋಡುವಿರೇನು? ಇವನನ್ನು ಹಗ್ಗಗಳಿಂದ ಕಟ್ಟಿರಿ. (ಹಿಡಿಯುವರು)

ಬಾವುದ್ದೀನ — ಸೇನಾಪತಿಗಳೇ ನನ್ನನ್ನು ಬಂಧಿಸಿ ತಕ್ಕೊಂಡು ಹೋಗುವದಕ್ಕಿಂತ ನನ್ನನ್ನು ಬಿಟ್ಟು ಬಿಡಿರಿ. ನಾನು ನಿಮ್ಮ ರಾಜ್ಯದ ಸೀಮೆಯನ್ನು ಬಿಟ್ಟು ಹೋಗುವೆ.

ಕರಾಳ — ಈ ವಿಶಾಲವಾದ ಪೃಥ್ವಿಯನ್ನು ನೀನುಬಿಟ್ಟು ಹೋಗಬೇಕಾಗಿದೆ. ಎಲೋ ಬಂಧಿಸಿರಿ!

ಬಾವುದ್ದೀನ — ದೇವಾ! ಈ ಪಶುತುಲ್ಯವಾದ ವರ್ತನವನ್ನು ಸಹಿಸಲಾರೆ. ಪರವರದಿಗಾರಾ! ಪ್ರಾಣವನ್ನಾದರೂ ಉಳಿಸಿರುವಿಯೇಕೆ? (ಸಿಪಾಯಿಗಳು ಕಟ್ಟಲು ಲಲಿತಾ, ಶಿವಾಂಗಿ ಬರುವರು)

ಲಲಿತಾ — ಇದೇನು ಗಲಾಟೆ! ಸೇನಾಪತಿಗಳೇ ! ಇವನಾವನು. ಇವನನ್ನೇತಕ್ಕೆ ಬಂಧಿಸಿರುವಿರಿ. ಇವನು ಮಾಡಿದ ಅಪರಾಧವೇನು?

ಭುಜಂಗ — ದೇವಿಯವರೇ! ಇವನೇ ಬಾವುದ್ದೀನನು. ಕಂಪಲಿಯ ರಾಯರ ಆಶ್ರಯವನ್ನು ಸಂಪಾದಿಸಿಕೊಂಡ ಬಾವುದ್ದೀನನು ಇವನೇ.

ಕರಾಳ — ಕಂಪಲಿಗೆ ಕೊಳ್ಳಿ ಕೊಟ್ಟಿರುವವನು ಇವನೇ ತುಘಲಕ ಸಿಂಹಾಸನದ ದ್ರೋಹಿಯಾದ ಬಾವುದ್ದೀನನು.

ಲಲಿತಾ ಆನೆಗುಂದಿಯ ಸಿಂಹಾಸನಕ್ಕೆ ದ್ರೋಹಿಯಾಗಿಲ್ಲವಷ್ಟೇ! ಭುಜಂಗರಾವ! ಬಾವುದ್ದೀನ ಸಾಹೇಬರನ್ನು ಬಿಟ್ಟು ಬಿಡಿ.

ಶಿವಾಂಗಿ ಆನೆಗುಂದಿಯ ರಾಜಪುತ್ರಿಯ ಆಜ್ಞೆಯನ್ನು ಸೇನಾಸಾಗರರು ಕೇಳಿದಿರಷ್ಟೇ.

ಭುಜಂಗ ಕೇಳಿದೆ.

ಶಿವಾಂಗಿ ಹಾಗಾದರೆ ಬಾವುದ್ದೀನನನ್ನು ಬಿಟ್ಟು ಬಿಡಿ.

ಭುಜಂಗ ಸಿಂಹಾಸನದ ಆಜ್ಞೆಯ ಹೊರ್ತಾಗಿ ಮತ್ತಾವ ರಾಜ ಸಂಬಂಧಿಕರ ಆಜ್ಞೆಯನ್ನು ನಾನು ಪಾಲಿಸತಕ್ಕವನಲ್ಲ.

ಲಲಿತಾ ಬಾವುದ್ದೀನರನ್ನು ಬಂಧಿಸಲಿಕ್ಕೆ ತಮಗೆ ರಾಜಾಜ್ಞೆಯಾಗಿರುವದೆ?

ಕರಾಳ ರಾಜ ಪ್ರತಿನಿಧಿಯಾದ ಸರ್ವಾಧಿಕಾರಿಗಳಾದ ಸಚಿವ ಶಿರೋಮಣಿಯಾದ ರೌದ್ರದಾಮಾಜಿಯವರ ಆಜ್ಞೆಯಾಗಿದೆ.

ಶಿವಾಂಗಿ ಸರ್ವಾಧಿಕಾರಿಗಳಾಜ್ಞೆಯೆ? (ಸ್ವ) ಹೂಂ. ಹೂಂ

ಕರಾಳ ತಮಗೇಕೆ ಇಲ್ಲದ ಉಸಾಬರಿಯು.

ಭುಜಂಗ ಈ ಸಂದರ್ಭದಲ್ಲಿ ರಾಜಾ ಜಂಬುಕೇಶ್ವರ ಆಜ್ಞೆಯನ್ನು ಸಹ ಮನ್ನಿಸುವದಿಲ್ಲ.

ಲಲಿತಾ ಔದತ್ಯವನ್ನು ಸಾಕುಮಾಡು. ನ್ಯಾಯ ಸ್ವರೂಪಿಯವರಾದ ಪಿತಾಜಿಯವರ ರಾಜ್ಯವಲ್ಲಿ ಈ ತರದ ಒತ್ತಾಯಕ್ಕೆ ತಿಲಮಾತ್ರ ಆಸ್ಪದ ದೊರೆಯಲಾರದು. ಸೇನಾಪತಿಗಳೇ! ಪಿತಾಜಿಯವರಾದ ರಾಜ ಜಂಬುಕೇಶ್ವರರ ನಿಷ್ಕಲಂಕವಾದ ಚಾರಿತ್ರ್ಯದ ಮೇಲೆ ಗೆರೆಯನ್ನು ಎಳೆಯಬೇಕೆಂಬುದು ಮಾಡಿರುವಿರೊ? ಬಾವುದ್ದೀನನಿಗೆ ಆಶ್ರಯವನ್ನು ಕೊಟ್ಟು ಕ್ಷಾತ್ರಧರ್ಮದ ಪ್ರಕಾಶವನ್ನು ನಾಡಿನ ಮೇಲೆ ಕೆಡಹತ್ತಿರುವ ಕಂಪಲಿಯನ್ನು ಕಣ್ತೆರೆದು ನೋಡಬಾರದೇ? ಇವರಿಗೋಸ್ಕರವಾಗಿ ತನ್ನ ರಕ್ತವನ್ನು ಸುರಿಸಲು ಸಿದ್ಧವಾದ

ಕಂಪಲಿಯ ತೇಜವೇ ನಿಜವಾದ ಕ್ಷಾತ್ರ ತೇಜ. ಈ ನಿಜವಾದ ಕ್ಷಾತ್ರತೇಜವು ಆನೆಗುಂದಿಯಾದ ರಾಜಾ ಜಂಬುಕೇಶ್ವರರ ಆನೆಗುಂದಿಯಿಂದು ಪ್ರಕಟಿಸಲ್ಪಡುವದು.

ಭುಜಂಗ — ರಾಜಕುಮಾರಿ ಇದು ರಾಜಕಾರಣವಾಗಿದೆ.

ಲಲಿತಾ — ಇದೆಂಥಾ ರಾಜಕಾರಣ. ರಾಜ ಜಂಬುಕೇಶ್ವರರ ಧವಳ ಕೀರ್ತಿಗೆ, ಆನೆಗುಂದಿಯ ಕ್ಷಾತ್ರ ಧರ್ಮಕ್ಕೆ ವಜ್ರಾಘಾತ-ವನ್ನುಂಟುಮಾಡುವಂಥ ರಾಜಕಾರಣವೆಂಥಾದ್ದು.

ಕರಾಳ — ದೇವಿಯ್ವರೆ! ಇಂಥ ಶೋಕಾವರ್ತಿಯ ಬೆನ್ನು ಕಟ್ಟಿಮಾಡುವುದೇನು?

ಶಿವಾಂಗಿ — ನಿನ್ನಂಥ ಶೋಕಾವರ್ತಿಯನ್ನು ಬೆನ್ನಿಗೆ ಹಾಕಿಕೊಂಡು ರೌದ್ರದಾಮಜೆಯವರು ಮಾಡಿದ ಮಹಾತ್ಕಾರ್ಯವಾವುದು?

ಭುಜಂಗ — ಹೆಚ್ಚಿನ ಮಾತುಗಳನ್ನು ಬೆಳಸಲಿಕ್ಕೆ ನೀನಾರು?

ಶಿವಾಂಗಿ — ನಾನು ರಾಜಾ ಜಂಬುಕೇಶ್ವರರ ಪ್ರಜಾ ಜನರೊಳ-ಗೊಬ್ಬಳಾಗಿರುವ ಧರ್ಮರಾಜ್ಯವಲ್ಲಿ ನಿಮ್ಮಂಥ ದುರ್ಬುದ್ಧಿಯ ಅಧಿಕಾರಿಗಳಿಂದ ಹುಟ್ಟುವ ಒತ್ತಾಯಕ್ಕೆ ಅರದಾಳ ಹಾಕುವದು ರಾಜನಿಷ್ಠ ಹೃದಯದ ಕರ್ತವ್ಯವಾಗಿದೆ.

ಕರಾಳ — ಶಿವಾಂಗಿ! ನಾಲಿಗೆಯನ್ನು ಉದ್ದ ಚಾಚಬೇಡ.

ಶಿವಾಂಗಿ — ನಿನ್ನ ಕಿವಿಗಳು ಉದ್ದಾದ ಮೇಲೆ ನಾಲಿಗೆಯನ್ನು ಉದ್ದ ಮಾಡಲಿಕ್ಕೇಬೇಕು. ಅಂದರೇನೆ ಶಬ್ದಗಳು ಕಿವಿಯಲ್ಲಿ ಬೀಳುವವು.

ಭುಜಂಗ — ವಾದ ಮಾಡದೆ ರಾಜಪುತ್ರಿಯರು ಹಾದಿಯನ್ನು ಹಿಡಿಯಬೇಕು. ನಾವು ನಮ್ಮ ಕರ್ತವ್ಯವನ್ನು ಮಾಡದಿರಲಾರೆವು.

ಲಲಿತಾ — ಸೇನಾಪತಿಗಳೇ ಅಸಹಾಯ ಸ್ಥಿತಿಯಲ್ಲಿರುವ ಜನರನ್ನು ರಕ್ಷಿಸುವುದು ಕ್ಷಾತ್ರಧರ್ಮದ ಕರ್ತವ್ಯವಾಗಿದೆ. ಆನೆಗುಂದಿಯ

ರಾಜವೃಕ್ಷವು ಬಾವುದ್ದೀನರಿಗೆ ನೆರಳನ್ನೀಯದೆ ಅವರ ಮೇಲೆ ನಿರಾಶೆಯ ಪ್ರಖರತೆಯನ್ನು ಚೆಲ್ಲುವದೆ? ಜಾತಿ ಪಂಥ ಹಾಗೂ ಮತಗಳನ್ನು ಗಣಿಸದೇ ಸಕಲರನ್ನು ರಕ್ಷಿಸುವದು ಸಿಂಹಾಸನದ ಧರ್ಮವಾಗಿದೆ.

ಬಾವುದ್ದೀನ (ಸ್ವ) ಹಿಂದೆ ಭೂದೇವಿಯ ಗರ್ಭದಿಂದ ಇಂಥ ಸ್ತ್ರೀರತ್ನಗಳು ಉದಯಿಸುತ್ತಿರುವದರಿಂದ ಹಿಂದುಸ್ತಾನದ ಧರ್ಮಪ್ರಕಾಶವು ದಿಗಂತವಾಗಿ ಹಬ್ಬಿದೆ. (ಪ್ರ)ದೇವಾಂಗನೇ! ತಾವು ಈ ಹತ ದೈವಿಯ ......

ಕರಾಳ ಚುಪ್ ! ನಿನ್ನ ಅಳದಕ್ಕಿತನವನ್ನು ಸುರಿಸಲಿಕ್ಕೆ ಆರಂಭಿಸಬೇಡ.

ಶಿವಾಂಗಿ ಅಳದಕ್ಕಿತನದ ಸುರಿಮಳೆ ಮಾಡುವ ಅಧಿಕಾರ ನಿಮಗೊಬ್ಬರಿಗೇ ಇರಲಿ.

ಭುಜಂಗ ರಾಜಕುಮಾರಿ! ನಿಮ್ಮಮುಖಾಂತವಾಗಿ ರಾಜಕಾರಣ ಜ್ಞಾನವಾಗುವವು ನನಗೆ ಬೇಕಾಗಿಲ್ಲ. ಸರ್ವಾಧಿಕಾರಿಯ ಆಜ್ಞಾನುಸಾರವಾಗಿ ನನಗೀಗ ವರ್ತಿಸುವದೆ ನನ್ನ ಕರ್ತವ್ಯವಾಗಿದೆ. ಏಲೋ ನೋಡುವಿರೇನು?

ಕರಾಳ ಹೂಂ! ಕೈಗೆ ಹಗ್ಗಗಳನ್ನು ಹಚ್ಚಿರಿ.

ಲಲಿತಾ ಹಾ! ತಡೆಯಿರಿ. ಸೇನಾಪತಿಗಳೇ ನನ್ನ ತಂದೆಯ ರಾಜ್ಯದಲ್ಲಿ ನಡೆಯುತ್ತಿರುವ ಒತ್ತಾಯವನ್ನು ನಾನು ಪ್ರತ್ಯಕ್ಷವಾಗಿ ನೋಡುತ್ತ ಸುಮ್ಮನಿರಲಾರೆನು. ಭುಜಂಗರಾವ! ನನ್ನ ಕೈಯಲ್ಲಿ ಖಡ್ಗವಿರುವವರೆಗೆ ಅನ್ಯಾಯದ ಆಟಕ್ಕೆ ಚಲನೆಯು ದೊರೆಯಲಾರದು. ಅಸತ್ಯವು ಪ್ರವಹಿಸಲಾರದು. ಒತ್ತಾಯವು ಉದ್ಭವಿಸಲಾರದು.

ಬಾವುದ್ದೀನ ಹಿಂದು ಲಲನಾಮಣಿಯೇ! ತಾವೀ ಗಲಾಟೆಯಲ್ಲಿ ಧುಮುಕಬಾರದು.

ಲಲಿತಾ — ತಮ್ಮದೆಸೆಯಿಂದಲ್ಲ, ನಾನು ಧುಮುಕುವದು, ಸತ್ಯಕ್ಕೋಸ್ಕರ, ನ್ಯಾಯಕ್ಕೋಸ್ಕರ, ಧರ್ಮಕ್ಕೋಸ್ಕರ. ನಿರಾಶ್ರಿತರ ಮೇಲಾಗುವ ಒತ್ತಾಯವನ್ನು ತಡೆಯವದಕ್ಕೋಸ್ಕರವಾಗಿ ಈ ಗಲಾಟೆಯಲ್ಲಿ ಸೇರುವದೇ ನನ್ನ ಧರ್ಮ.

ಭುಜಂಗ — ಕರ್ತವ್ಯಕ್ಕಾಗಿ ಖಡ್ಗವನ್ನೆತ್ತಬೇಕಾಗುವುದು.

ಲಲಿತಾ — ಅದನ್ನು ಎದುರಿಸುವದಕ್ಕಾಗಿ ಖಡ್ಗವಾದರೂ ಒರೆಯಿಂದ ಹೊರಬೀಳುವದು. (ಖಡ್ಗ ಹಿರಿಯುವಳು)

ಕರಾಳ — ಇದೇನು ಪೀಕಲಾಟ ಬಂದಿತಲ್ಲ, ಗಣೇಶನ ಮಾಡಬೇಕೆಂದರೆ ಕೋತಿಯಾಯಿತಲ್ಲ.

ಭುಜಂಗ — ಧಣಾಯಕರೆ ವಿಚಾರ ಮಾಡದೆ ಖಡ್ಗವನ್ನು ಹಿರಿಯಿರಿ.

ಕರಾಳ — ಎಲೋ- ಖಡ್ಗಗಳನ್ನು ಹಿರಿಯಿರಿ. ಹಿಂದು- ಮುಂದು ನೋಡಬೇಡಿ. (ಎಲ್ಲರೂ ಕಾದುವರು)

ಹುಕ್ಕ — (ಪ್ರವೇಶಿಸಿ) ದುರಾತ್ಮರೇ! ದೂರಾಗಿರಿ. ಅಬಲೆಯರೊಡನೆ ಯುದ್ಧ ಮಾಡುವ ಖಡ್ಗಬಹಾದ್ದೂರರೇ ಖಡ್ಗಗಳನ್ನು ಒರೆಗಾಣಿಸಿರಿ.

ಭುಜಂಗ — ಸ್ತ್ರೀ ಗುಣಮರ್ಯಾದೆಯನ್ನು ದಾಟಿ ಅಬಲೆಯ ಕೈಯಲ್ಲಿ ಖಡ್ಗವನ್ನು ಹಿಡಿದರೆ..............

ಕರಾಳ — ನಾವೂ ನಮ್ಮ ಖಡ್ಗಗಳನ್ನು ಹಿರಿಯುವವರೆ?

ಹುಕ್ಕ — ಗಂಡಸರಾದ ನಾವು ಅನ್ಯಾಯಕ್ಕಾಗಿ ಖಡ್ಗಗಳನ್ನು ಒರೆಯಿಂದ ಹೊರಗೆಳೆದರೆ, ಸತ್ಯಕ್ಕಾಗಿ ಸುಶೀಲೆಯರು ಶಸ್ತ್ರಗಳನ್ನೆತ್ತುವದು ಸಹಜ.

ಕರಾಳ — ಏ ಹೆಣ್ಣುಗರುಳಿನವನೆ! ಪಕ್ಕೆಲವುಗಳನ್ನು ಮುರಿಸಿಕೊಳ್ಳಲಿಕ್ಕೆ ಬಂದಂತೆ ಕಾಣುತ್ತದೆ.

ಘುಕ್ಕ	ತಡೆ ನರಾಧಮಾ! ನಿನ್ನ ಜಿಹ್ವೆಯನ್ನು ಜಗ್ಗಿ ಹರಣವನ್ನು ಹೀರುವೆ.
ಭುಜಂಗ	ಬಡಿವಾರ ಬಡಿಯಬೇಡ. ಈ ಕ್ಷಣದಲ್ಲಿಯೇ ನಿನ್ನನ್ನು ತುಂಡರಿಸಿ ಚಲ್ಲುತ್ತಿದ್ದೆನು.
ಕರಾಳ	ಆದರೆ ನಿಶ್ಯಸ್ತ್ರನಾದ ನಿನ್ನನ್ನು ಸಂಹರಿಸುವದು ನಮ್ಮ ಧರ್ಮವಲ್ಲ.
ಘುಕ್ಕ	ದುರುಳರಿಗೆ ಧರ್ಮಾಧರ್ಮಗಳ ವಿಚಾರವೇಕೆ?
ಕರಾಳ	ಹಾಗಾದರೆ ಮೃತ್ಯುವೇ ನಿನ್ನ ಬಾಯಿಯಿಂದ ಹೀಗೆ ನುಡಿಸುತ್ತಿರುವದು.
ಘುಕ್ಕ	ಪ್ರಾಣ ಪುಷ್ಪವನ್ನು ಕನ್ನಡ ನಾಡ ದೇವಿಗೆ ಅರ್ಪಿಸಲು ಸಿದ್ಧನಾಗಿರುವ ನನಗೆ ಮರಣದ ಭೀತಿಯನ್ನು ತೋರಿಸುವೆಯಾ?
ಕರಾಳ	ಸುಮ್ಮನೆ ಸಾಯಬೇಡ.
ಭುಜಂಗ	ಹಲಸನ್ನು ಕೊಚ್ಚಿದಂತೆ ನಿನ್ನ ದೇಹವನ್ನು ಕೊಚ್ಚಿ ಜಕುಣದೇವಿಗೆ ನೈವೇದ್ಯ ಮಾಡುವೆ. ಶಾಕಿನಿ, ಡಾಕಿನಿ, ಪಿಶಾಚಿಗಳಿಗೆ ನಿನ್ನ ರಕ್ತವನ್ನು ಕುಡಿಸುವೆ ಘುಕ್ಕಾ.
ಘುಕ್ಕ	ನಿನ್ನ ಆವೇಶಯುಕ್ತ ಭಾಷಣಕ್ಕೆ ಕೆಚ್ಚೆದೆಯ ವೀರನು ಬೆಚ್ಚಿ ಬೀಳಲಾರನು.
ಭುಜಂಗ	ಈ ಕ್ಷಣದಲ್ಲಿಯೇ ನನ್ನ ಖಡ್ಗಕ್ಕೇ ತುತ್ತಾಗುವಿ.
ಮಾಧವ	(ಪ್ರವೇಶಿಸಿ) ಯಾರ ಖಡ್ಗಕ್ಕೆ ಯಾರು ತುತ್ತಾಗುವರು?
ಭುಜಂಗ	ನನ್ನ ಖಡ್ಗಕ್ಕೆ ನಿನ್ನ ಶಿಷ್ಯನು ತುತ್ತಾಗುವನು.
ಮಾಧವ	ಅಶಕ್ಯ! ಅಶಕ್ಯ! ತ್ರಿಕಾಲದಲ್ಲಿಯೂ ಅಶಕ್ಯವಾದ ಮಾತು.

ಕರಾಳ	(ಸ್ವ) ಹಾರುವನಿಗೆ ಹುಚ್ಚು ಹಿಡಿದಿದೆ. (ಪ್ರ) ಬುದ್ಧಿ ! ಸುಮ್ಮನೆ ಶಿಷ್ಯನನ್ನು ಕರೆದು ಕೊಂಡು ಗುಡಿಸಲಿಗೆ ಹೋಗಿ.
ಮಾಧವ	ಚಾಂಡಾಲರೇ! ನಿಮ್ಮೆಲ್ಲರ ರುಂಡಗಳನ್ನು ಚಂಡಾಡುವ ಶಕ್ತಿಯು ನನ್ನ ಶಿಷ್ಯನಲ್ಲಿರುವಾಗ.
ಕರಾಳ	ತಮ್ಮ ಶಿಷ್ಯನು ನಿಶ್ಶಸ್ತ್ರ ನಾಗಿರುವನು.
ಮಾಧವ	ಇಲ್ಲ! ನನ್ನ ಶಿಷ್ಯನು ನಿಶ್ಯಸ್ತ್ರನಾಗಿಲ್ಲ.
ಭುಜಂಗ	(ಸ್ವ) ಬ್ರಾಹ್ಮಣನ ಬುದ್ಧಿಯು ಸ್ಥಲವನ್ನು ಬಿಟ್ಟಂತೆ ಕಾಣುತ್ತದೆ.
ಕರಾಳ	(ಸ್ವ) ಹಾರುವನ ತಲೆ ತಿರುಗಿ ಬಿಟ್ಟಿದೆ. (ಪ್ರ) ಬುದ್ಧೀ ಕಣ್ತೆರೆದು ನೋಡಿ ನಿಮ್ಮ ಶಿಷ್ಯನು ನಿಶ್ಯಸ್ತ್ರನಾಗಿರುವನು. ರೌದ್ರದಾಮ ಪ್ರಧಾನರು ಇಲ್ಲಿ ಇದ್ದರೆ ನಿಮಗಿಷ್ಟುಸಹ ಆಸ್ಪದ ಸಿಗುತ್ತಿದ್ದಿಲ್ಲ. ಇಷ್ಟರಲ್ಲಿಯೇ ಪ್ರಾಣಕ್ಕೆರವಾಗುತ್ತಿದ್ದೀರಿ. ಆದರೆ ಧರ್ಮ ಪ್ರಿಯರಾದ ಭುಜಂಗರಾಯರು ಗಂಟುಬಿದ್ದಿರುವದು ಒಳಿತಾಗಿದೆಯೆಂದು ತಿಳಿಯಿರಿ. ನಿಜವಾಗಿ ನಿಮ್ಮ ಶಿಷ್ಯನು ನಿಶ್ಯಸ್ತ್ರನಾಗಿರುವನು.
ಮಾಧವ	ತೌಡನ್ನು ತೂರುವ ತಿರುಕನೇ! ವೀರ ಶ್ರೀಸಂಪನ್ನನ್ನು ಆವ ಕ್ಷತ್ರಿಯನನ್ನು ಬಿಟ್ಟು ಕ್ಷಾತ್ರದೇವತೆಯು ಬೇರೆ ಇರಲಾರಳು. ಭಗವಾನ್! ಭಾಸ್ಕರನನ್ನು ಬಿಟ್ಟು ಪ್ರಭಾದೇವಿಯು ಬೇರೆ ಇರುವಳೇ! ಇದೋ ಈ ಮಾಧವನ ಯೋಗದಂಡದಲ್ಲಿ ಹುಕ್ಕ ಕುಮಾರನ ಕ್ಷಾತ್ರದೇವತೆಯು ವಾಸಿಸುತ್ತಿರುವಳು. (ಖಡ್ಗ ಹಿರಿಯುವನು)
ಕರಾಳ	(ಸ್ವ) ಅಬ್ಬಾ! (ಪ್ರ) ಶಸ್ತ್ರವನ್ನು ಧರಿಸುವದಿಲ್ಲೆಂದು ನಿನ್ನ ಶಿಷ್ಯನು ಶಪಥವಹಿಸಿರುವನು.
ಹುಕ್ಕ	ಅಹುದು. ಹಾಗೆ ಶಪಥವನ್ನು ವಹಿಸಿರುವೆ.
ಮಾಧವ	ಹುಕ್ಕ ಕುಮಾರ ಇದು ಖಡ್ಗವಲ್ಲ. ಮಾಧವನ ಯೋಗ ದಂಡವಿರುತ್ತದೆ. ಹಿಂದಕ್ಕೆ ಭಾರತಯುದ್ಧದಲ್ಲಿ

ಚಕ್ರವನ್ನುಧರಿಸುವುದಿಲ್ಲೆಂದು ಶಪಥಮಾಡಿದ ಶ್ರೀಕೃಷ್ಣನು ಕರ್ತವ್ಯಕ್ಕೋಸ್ಕರವಾಗಿ ಚಕ್ರಾಕಾರವಾದ ರಥದ ಗಾಲಿಯನ್ನು ಪಡೆದು ಕರ್ತವ್ಯವನ್ನು ಜರುಗಿಸಲಿಲ್ಲವೆ? ಭಗಾವಾನ್ ಶ್ರೀ ಕೃಷ್ಣನು ಜಗತ್ತಿಗೆ ತೋರಿಸಿದ ಆ ದಿವ್ಯ ದೃಷ್ಟಾಂತದ ರಹಸ್ಯವನ್ನರಿತು ಇದನ್ನು ಸ್ವೀಕರಿಸು. ಮಾಧವನ ಮುಖದಿಂದ ಇದನ್ನು ಕ್ಷಾತ್ರ ಧರ್ಮವು ನುಡಿಸುತ್ತಿರುವದೆಂದು ತಿಳಿ. (ಖಡ್ಗ ಕೊಡುವನು)

ಕರಾಳ — ಹೂಂ ಗಚ್ಛಾ ಸೇನಾ ಸಾಗರ.... (ಓಡಿ ಹೋಗುವರು)

(ಹುಕ್ಕನು ಅವರ ಬೆನ್ನು ಹತ್ತಲು ಹೋಗ ಹತ್ತುವನು)

ಮಾಧವ — ಹೋಗಲಿ ಬಿಡು. ಅವರ ಪಾಪದ ಕುಂಭಗಳು ಇನ್ನು ತುಂಬಿಲ್ಲಾ. ಕುಮಾರಾ! ಚತುರೆಯಾದ ಈ ಶಿವಾಂಗಿಯೇ ಬಾವುದ್ದೀನನನ್ನು ರಕ್ಷಿಸಿದಳೆಂದು ತಿಳಿಯಬೇಕು. ಬಾವುದ್ದೀನರ ಬಂಧನೆಯಲ್ಲಿ ರೌದ್ರದಾಮರ ಕಾರಸ್ಥಾನವು ಅಡಕವಾಗಿತ್ತು. ಎಂದಿಗೂ ತೊಳೆಯಲಿಕ್ಕೆ ಬಾರದಂಥ ಕಲಂಕವು ಆನೆಗುಂದಿಗೆ ಅಂಟಿಕೊಳ್ಳುತ್ತಲಿತ್ತು. ಇವೆಲ್ಲವುಗಳನ್ನು ದೂರಿಕರಿಸಲಿಕ್ಕೆ ಶಿವಾಂಗಿಯ ಸಾಹಸವೇ ನಮ್ಮನ್ನಿಲ್ಲಗೆ ಬರಮಾಡೀತು.

ಹುಕ್ಕ — ದೇಶ ಮಾತೆಯ ಸೇವಕರಿಗೆ ಸಹಾಯ ಮಾಡುವ ಶಿವಾಂಗಿಗೆ ಶಿವನು ದೈವ ಕಲ್ಯಾಣ ಮಾಡಲಿ.

ಬಾವುದ್ದೀನ — ಮಹಾತ್ಮರೆ! ನನಗೆ ಅಪ್ಪಣೆಯನ್ನು ಕೊಡಿರಿ. ನಾನು ಆಶ್ರಯವನ್ನು ಸಂಪಾದಿಸುವದಕ್ಕಾಗಿ ಕೊಣ್ಣೂರು ಕೋಟೆಗೆ ಹೋಗುವೆನು.

ಮಾಧವ — ರಾಜಪುತ್ರಾ! ನನ್ನ ಆಶ್ರಮಕ್ಕೆ ನಡೆ. ಅಲ್ಲಿ ನಿರ್ಭಯವಾಗಿ ವಾಸಿಸು.

ಹುಕ್ಕ — ನನ್ನ ಸದ್ಗುರುವಿನ ಆಶ್ರಮವು ಗುಡಿಸಲವೆಂದು ಭಾವಿಸಿ ಉಪೇಕ್ಷೆ ಮಾಡಬೇಡಿ. ಅದು ಪುಣ್ಯಾಶ್ರಮವಾಗಿರುವದು.

ಮಾಧವ	ರಾಜಪುತ್ರಾ ಭದ್ರವಾದ ಕೋಟೆಗಳಿಂದ ಅಭೇದ್ಯವಾದ ಕಿಲ್ಲೆಗಿಂತ ಪುಣ್ಯಾಶ್ರಮವು ಹೆಚ್ಚು ಭದ್ರವಾಗಿರುವದು. ಮತ್ತಾವ ಶಂಕೆಯನ್ನೆತ್ತದೆ ಅನುಕೂಲವಾಗುವ ವೇಳೆಯು ನಿಮಗೆ ಪ್ರಾಪ್ತವಾಗುವವರೆಗೆ ನಿರ್ಭಯರಾಗಿ ನಮ್ಮ ಪುಣ್ಯಾಶ್ರಮದಲ್ಲಿ ವಾಸಿಸಿರಿ. ಮಹಮ್ಮದಿಯ ವೀರಾ! ನನ್ನ ಆಶ್ರಯದಲ್ಲಿ ವಾಸಿಸು. ನಿಶ್ಚಯವಾಗಿ ನಿನ್ನ ಕಲ್ಯಾಣವಾಗುವದು.

ಬಾವುದ್ದೀನ	(ಸ್ವ) ಇಂಥ ನರ ಶ್ರೇಷ್ಠನನ್ನು ದರೋಡೆಖೋರರೆಂದು ಕರೆಯುವ ಜನರ ಜನ್ಮಕ್ಕೆ ಧಿಃಕಾರ. ದೇಶ ಬಾಂಧವರ ಹಿತಕ್ಕಾಗಿ ಧರ್ಮ, ಸತ್ಯ, ಸ್ವಾತಂತ್ರ್ಯಗಳಿಗಾಗಿ ಜನ್ಮಭೂಮಾತೆಯ ಉದ್ಧಾರಕ್ಕಾಗಿ ಹೆಣಗಾಡುತ್ತಿರುವ ಹುಕ್ಕ - ಬುಕ್ಕರನ್ನು ದ್ವೇಷಿಸುವಂಥ ಜನರಿಗೇನೆನ್ನಬೇಕು.

ಮಾಧವ	ವಿಚಾರವೇನು ನಡೆದಿದೆ?

ಬಾವುದ್ದೀನ	ವಿಚಾರವೇನು ಇಲ್ಲಾ ಮಹಾತ್ಮರೇ! ಇಂಥಾ ಕಾಲದಲ್ಲಿ ಮುಸಲ್ಮಾನನಾದ ನನ್ನನ್ನು ಇಷ್ಟು ಪ್ರೀತಿಸುವದು ತಮ್ಮ ಉದಾರವಾದ ಅಂತಃಕರಣಕ್ಕೆ ಸಾಕ್ಷಿಯಾಗಿದೆ.

ಮಾಧವ	ಸಜ್ಜನರು ಯಾವ ಜಾತಿಯವರಾದರು ಜಗತ್ತಿಗೆ ವಂದ್ಯರಾಗಿರುವರು. ದುರ್ಜನನಾದ ಹಿಂದುವಿಗಿಂತ ಸಹೃದಯನಾದ ಮುಸಲ್ಮಾನನು ಮಾನ್ಯನಾಗಿರುವನು. ದುರ್ಜನನಾದ ಹಿಂದುವನ್ನು ಜಾತ್ಯಾಭಿಮಾನವು ಕೂಡಾ ಮುಂದಕ್ಕೆ ಕರೆಯಲಾರದು. ಮನೆಯ ದೀಪವೆಂದು ಮುದ್ದಿಕ್ಕಬಹುದೆ? ಇರಲಿ ನಡೆಯಿರಿ, ಆಶ್ರಮಕ್ಕೆ ಹೋಗುವಾ.

ಬಾವುದ್ದೀನ	ಸತ್ಪುರುಷವರ್ಯ! ತಮ್ಮ ಆಶ್ರಮದಲ್ಲಿ ವಾಸಿಸಲಿಕ್ಕೆ ನನಗಾವ ಸಂಕೋಚವಿಲ್ಲ. ಆದರೆ ಈ ದಿನ ಬೆಳಿಗ್ಗೆ ನಾನೊಂದು ಅಪಶಕುನವನ್ನು ಕಂಡೆ. ಅದಕ್ಕೋಸ್ಕರವಾಗಿ.

ಹುಕ್ಕ	ತಾವು ದುಷ್ಟ ಶಕುನವನ್ನು ಕಂಡಿರೋ?

ಬಾವುದ್ದೀನ — ಅಹುದು ಹಿಂದು ವೀರಾ. ಒಂದು ಮೊಲವು ನಾಯಿಯನ್ನು ಬೆನ್ನಟ್ಟಿರುವುದನ್ನು ಕಂಡೆ.

ಮಾಧವ — ಅದೆಲ್ಲಿ?

ಬಾವುದ್ದೀನ — ಅದೋ ನೋಡಿ, ಆ ವಿಶಾಲವಾದ ಮೈದಾನದಲ್ಲಿ

ಮಾಧವ — ರಾಜಪುತ್ರಾ! ಅದು ಅಪಶಕುನವಲ್ಲ. ಅದು ಶುಭ ಶಕುನವೆಂದು ತಿಳಿ. ಧರ್ಮ ಸಾಮ್ರಾಜ್ಯದ ವೈಭವಶಾಲಿಯಾದ ರಾಜಧಾನಿಯು ಆ ಸ್ಥಳದಲ್ಲಿಯೇ ನಿರ್ಮಿಸಲ್ಪಡುವದು. ಅದು ಪುಣ್ಯಭೂಮಿಯಾಗಿರುವದು.

ಬಾವುದ್ದೀನ — ಮಹಾತ್ಮರೇ! ತಮ್ಮ ಮಾತಿನಲ್ಲಿ ನನಗೆ ತಿಲ ಮಾತ್ರ ಸಂಶಯವಿಲ್ಲ. ನನ್ನ ಮನಸ್ಸು ಶಾಂತಿಯನ್ನು ಪಡೆಯದ್ದರಿಂದ ತಮ್ಮ ಕ್ಷಮೆಯನ್ನು ಕೋರುವೆ. ದಯವಿಟ್ಟು ನನಗೆ ಆಜ್ಞೆಯನ್ನು ಕೊಡಿ.

ಮಾಧವ — (ಸ್ವ) ಭವಿತ್ಯತೆಯನ್ನು ತಪ್ಪಿಸುವವರಾರು! (ಪ್ರ) ತಮ್ಮ ಇಷ್ಟದಂತೆ ಆಗಲಿ. ಕುಮಾರಾ! ರಾಜಪುತ್ರಿಯನ್ನು ರಾಜಧಾನಿಗೆ ಮುಟ್ಟಿಸಿ ಬಾ. ಶಿವಾಂಗಿ ಆಶ್ರಮಕ್ಕೆ ಬರುವಿಯಾ! (ಹೋಗುವನು)

ಬಾವುದ್ದೀನ — ಮಹಾತ್ಮರೆ ಹೊರಡುವೆ, ನರವೀರಾ! ಹಿಂದು ಸಹೋದರಿಯರೇ! ತಾವು ನನ್ನ ಮೇಲೆ ಮಾಡಿದ ಉಪಕಾರವನ್ನು ತೀರಿಸುವದು ನನ್ನಿಂದಾಗದು. ದಯವಿಟ್ಟು ಕ್ಷಮಿಸುವುದಾಗಲಿ. ಅಲ್ಲಾ ಹೋ ಅಕ್ಬರ್. (ಹೋಗುವನು)

ಹುಕ್ಕ — ತಾವು ಈದಿನ ತೋರಿಸಿದ ವೀರಾಂಗನೆಯ ವೃತ್ತಿಯು ಅಭಿಮಾನಾಸ್ಪದವಾಗಿದೆ. ಈ ಸುಪ್ರಸಂಗದಲ್ಲಿ ಪಾರಿತೋಷಕವನ್ನು ತಮಗೆ ಕೊಡಬೇಕೆಂದು ಹೃದಯವು ಹಾರೈಸುತ್ತಿರುವದು. ನಿರ್ಧನನಾದ ನಾನು....

ಲಲಿತಾ — ಏನು ತಾವು ನಿರ್ಧನರೇ.........

-: ಪದ್ಯ :-

(ರಾಗ- ಭೀಮಪಲಾಸ ತಾಲ -ತ್ರಿತಾಲ)

ನೋಡೋ । ಪ್ರಕಾಶಮಯ ಭಾಸ್ಕರಾ
ಸತತಾಕೊಡುವನು ಶಶಿಗಂತೂ ತೇಜಾ
ಪಡೆದ ಶಶಿಧವಿ ಶೋಭಾಘನ ॥
ಮುತ್ತುಗಳ ಜಗಕಾಗಿ ಕೊಡುವಾ ಶರ
ನಿಧಿಯು ಪ್ರಸಿದ್ಧ ಸಿರಿಯ ಪಿತನು
ಜಡವನೇನು ಗುಣಧನದಾ
ಕಾಂತನು ಧನಯುತಾ।

ಹುಕ್ಕ ಧನ್ಯ ದೇವಿ!

ಲಲಿತಾ ದೇವಿ ಎಂದು ನನ್ನನ್ನು ಕರೆಯುವದೇಕೆ? ನಾನು ಈ ಪುಣ್ಯ ಪಾದಗಳ ದಾಸಿಯು.

ಹುಕ್ಕ ತಮ್ಮನ್ನು ದೇವಿಯೆಂದು ಕರೆಯುವುದಷ್ಟೇ ಅಲ್ಲ, ಪ್ರೇಮ ಪುಷ್ಪದಿಂದ ಈ ಪವಿತ್ರವಾದ ಮೂರ್ತಿಯನ್ನು ಶೃಂಗರಿಸಿ ಪೂಜಿಸುವ ಅಧಿಕಾರವು ನನಗುಂಟು.

ಲಲಿತಾ : ಏನು ದೇವಾಲಯದೊಳಗಿನ ದೇವನು ಅರ್ಚಕನನ್ನು ಪೂಜಿಸಬೇಕೆ?

ಹುಕ್ಕ : ದೇವಿ, ತ್ರಿಭುವನ ಪೂಜಿತನಾದ ತ್ರಿಲೋಚನನೇ ತನ್ನ ಮಡದಿಯಾದ ಗಂಗೆಯನ್ನು ತಲೆಯ ಮೇಲೆ ಕೂಡ್ರಿಸಿಕೊಂಡಿರುವನು. ಇಷ್ಟೆ ಅಲ್ಲ 'ಗಂಗಾಧರ' ನೆಂಬ ಅಂದವಾದ ಹೆಸರನ್ನು ಪಡೆದು ತ್ರಿಭುವನ ಪೂಜಿತನಾಗಿರುವನು.

ಲಲಿತಾ ಹೆಂಡತಿಯನ್ನು ತಲೆಯ ಮೇಲೆ ಕೂಡ್ರಿಸಿಕೊಂಡ ಆ ಶಂಕರನನ್ನು ಲೋಕವು ಭೋಳೆ ಶಂಕರನೆಂದು ಕರೆಯುವದಿಲ್ಲವೆ? ಅದು

ಏನೇ ಇರಲಿ ತಮ್ಮ ಈ ವರ್ತನೆಯು ಪ್ರೇಮ ಸಾಮ್ರಾಜ್ಯದಲ್ಲಿ ನಡೆಯಲಾರದು. ತಾವು ನನ್ನನ್ನು ಲಲಿತೆಯೆಂದೇ ಕರೆಯತಕ್ಕದ್ದು.

ಮುಕ್ಕ — ಹಾಗಾದರೆ ನಮ್ಮ ಪ್ರೇಮ ನಾಟಕ ಎರಡನೇ ಅಂಕ ಇದೀಗ ಪ್ರಾರಂಭವಾಯಿತೆಂದು ಭಾವಿಸಲಾ?

ಲಲಿತಾ — ಸಂಶಯವೇಕೆ! ಪ್ರೇಮ ನಾಟಕದಲ್ಲಿ ಪ್ರೇಮೋದಯ-ವನ್ನೊಳಗೊಂಡ ಮೊದಲನೇ ಅಂಕವು ಈ ಮೊದಲೇ ಮುಗಿದಿದೆ. ಮಹಾರಾಜ! ತಮ್ಮನ್ನು ಪೂಜಿಸುವ ಅಧಿಕಾರವು ನನ್ನದಾಯಿತು. ದೇವನು ದೀನದಾಸಿಯ ಪೂಜೆಯನ್ನು ಸದೈವ ಸ್ವೀಕರಿಸಬೇಕು.

ಮುಕ್ಕ — ಹಾಗೇ ಆಗಲಿ ದೇವನು ಭಕ್ತಾಂಕಿತನಾಗಿರುವದು ಸಹಜ.

೨ನೇ ಪ್ರವೇಶ

ಸಮಯ ಸಾಯಂಕಾಲ

(ಫಕೀರವೇಷದಿಂದ ಕರಾಳ)

ಕರಾಳ — ಆಯಿತು ಕರಾಳನ ಅವತಾರ ಸಮಾಪ್ತಿಯಾಯಿತು. ಮೃತ್ಯುವಿಗೆ ಆಮಂತ್ರಣವನ್ನು ಕೊಡಲಿಕ್ಕೆ ಹೊರಟಿರುವೆ. ಕಪಲಿಯನ್ನು ಮುತ್ತಿರುವ ಸುಲ್ತಾನ ಮಹಮ್ಮದ ತುಘಲಕರ ದರ್ಶನ ತಕ್ಕೊಳ್ಳುವದೆಂದರೆ ಮೃತ್ಯುವಿನ ದರ್ಶನ ತಕ್ಕೊಂಡಂತೆ ಸರಿ. ಕರಾಳ ಮುಗಿಯಿತು. ಮನೋರಾಜ್ಯವು ಮಣ್ಣು ಪಾಲಾಯಿತು. ರೌದ್ರದಾಮಜಿ! ಅವರ ಕಡೆಯಿಂದ ನನ್ನನ್ನು ಕೊಲ್ಲಿಸುವದಕ್ಕಿಂತ ನೀನೆ ನನ್ನ ಜೀವವನ್ನು ಹೊಡೆಯ ಬಾರದಾಗಿತ್ತೆ? (ಶಿವಾಂಗಿ ಬರುವಳು)

ಶಿವಾಂಗಿ — (ಸ್ವ) ಸವಾರಿಯು ಒಳ್ಳೆ ಗಲಾಟೆಯಲ್ಲಿ ಮಾತ್ತೆ ಸಿಕ್ಕಿಕೊಂಡಿದೆ. ರೌದ್ರದಾಮನು ಮತ್ತಾವ ಕಾರಸ್ಥಾನವನ್ನು ಹೂಡಿರುವನು. (ಪ್ರ) ಇಂಥ ವೇಷದಲ್ಲಿ ಎಲ್ಲಿಗೆ ಹೊರಟಿರುವಿರಿ.

ಕರಾಳ : ಪೋಗುವೆ ಘೋರಾರಣ್ಯಕ್ಕೆ (ಹಾಡುವನು)

ಶಿವಾಂಗಿ ಇದೇನು ಸಂಗೀತದಿಂದ ಉತ್ತರ ಕೊಡುತ್ತಿರುವಿರಿ.

ಕರಾಳ ಮತ್ತೇನು ಮಾಡಲಿ. ದರಿದ್ರನು ಸಂಸಾರಕ್ಕೆ ಬೇಸತ್ತು ವೇದಾಂತದ ಬೆನ್ನಹತ್ತಿದಂತೆ ನಾನು ಸಂಗೀತದ ಬೆನ್ನು ಹತ್ತಿರುವೆನು.

ಶಿವಾಂಗಿ ತಮ್ಮ ಮಾತಿನ ಅರ್ಥವೇ ತಿಳಿಯಲೊಲ್ಲದು. (ಸ್ವ) ಪ್ರೇಮ ಸೋಗನ್ನು ತೋರಿಸಿ ಇವನ ಗುಟ್ಟಿನ ರಟ್ಟನ್ನು ಹೊರಗೆಡವಲಿಕ್ಕೆ ಬೇಕು (ಪ್ರ) ಮನೋಹರಾ! ಈ ವೇಷವು ತಮಗೆ ಸ್ವಲ್ಪ ಕೂಡಾ ಶೋಭಿಸುವದಿಲ್ಲ. ಈ ವೇಷದಲ್ಲಿ ತಮ್ಮನ್ನೇ ಕಾಣುವದರಿಂದ ನನ್ನ ಹೊಟ್ಟೆಯಲ್ಲಿ ತಳಮಳವಾಗುತ್ತಿದೆ.

ಕರಾಳ ಗಾಬರಿಯಾಗಬೇಡಾ! ನೀನು ಗಾಬರಿಯಾದರೆ ಮೊದಲೇ ನಾಡಿಸತ್ತ ಈ ನನ್ನ ಕಾಲುಗಳು ಮುಂದಕ್ಕೆ ಹೋಗಲಾರವು. ಏನು ಮಾಡಲಿ ಶಿವಾಂಗಿ. (ಅಳುತ್ತ) ನಿನ್ನನ್ನು ಲಗ್ನ ಮಾಡಿಕೊಂಡು ಒಂದೆರಡು ಗಂಡು ಮಕ್ಕಳನ್ನಾಗಲಿ, ಒಂದೆರಡು ಹೆಣ್ಣು ಮಕ್ಕಳನ್ನಾಗಲಿ ಹಡೆದು ಚೆಂದಾಗಿ ಸಂಸಾರ ಮಾಡಬೇಕೆಂದು ಮಾಡಿದ್ದೆ. ಆದರೆ ದೇವನು ನನ್ನ ವಿಷಯಕ್ಕೆ ಕಲ್ಲಾದನು (ಅಳುವನು)

ಶಿವಾಂಗಿ (ಅತ್ತಂತೆ ನಟಿಸಿ) ಆಗಿರುವದಾದರೂ ಏನು ಹೇಳಿ ! ಅಳಬೇಡಿ ಹೇಳಿ. ನನ್ನ ಜೀವಕ್ಕೆ ಹೇಗೊ ಹೇಗೊ ಆಗುತ್ತದೆ. (ದುಃಖಿಸುವಳು)

ಕರಾಳ ಆಗುವದೇನು? ಇಕೋ ಈ ಸುಟ್ಟ ಪತ್ರವನ್ನು ಸುಲ್ತಾನನಿಗೆ ಮುಟ್ಟಿಸಬೇಕಾಗಿದೆ.

ಶಿವಾಂಗಿ : ಸುಲ್ತಾನ ಮಹಮ್ಮದ ತುಘಲಕರಿಗೆ?

ಕರಾಳ (ದುಃಖದಿಂದ) ಹೂಂ! ಹೂಂ!

ಶಿವಾಂಗಿ — ಈ ಕೆಲಸವನ್ನು ನಿಮಗೆ ಯಾರು ಹೇಳಿದರು? ರೌದ್ರದಾಮ ಪ್ರಧಾನರೇನು?

ಕರಾಳ — (ಅಳುತ್ತ) ಹೂಂ! ಹೂಂ! ಅವನೇ! ಶಿವಾಂಗಿ ನಿನ್ನ ಕೊರಳಲ್ಲಿ ಮಂಗಲ ಸೂತ್ರವನ್ನೇ ಕಟ್ಟುವ ಪುಣ್ಯವಿದ್ದರೆ ಬದುಕಿ ಬರುವೆ. (ಇಬ್ಬರೂ ಗಟ್ಟಿಯಾಗಿ ಅಳುವರು)

(ಸ್ವಗತ) ಇನ್ನೇನು ಮಾಡಬೇಕು. ಶಿವಾಂಗಿಗೆ ಯಾವತ್ತು ಸುದ್ದಿಯನ್ನು ಹೇಳಿದೆನು. (ಪ್ರಕಟ) ಶಿವಾಂಗಿ! ಇದೆಲ್ಲ ಸುಳ್ಳು. ನಿನ್ನ ಪ್ರೇಮವನ್ನು ನೋಡುವದಕ್ಕಾಗಿ ಹೀಗೆ ಮಾಡಿದೆ. ಇದೆಲ್ಲ ಸುಳ್ಳು.

ಶಿವಾಂಗಿ — (ಸ್ವ) ಶುಂಭೇಶ್ವರಾ! ಈ ಶಿವಾಂಗಿಯ ಮುಂದೆ ನಿನ್ನ ಆಟವು ಸಾಗಲಾರದು. ಈ ಸುದ್ದಿಯನ್ನುಗುರುಗಳಿಗೆ ಮುಟ್ಟಿಸಲಿಕ್ಕೆ ಬೇಕು.

ಕರಾಳ — ಸುಳ್ಳು ಎಂದು ಹೇಳಿದ ಮೇಲೆ ಮತ್ತೇಕೆ ದುಃಖಿಸುವಿ. ನಾನು ಹೇಳಿದ್ದೆಲ್ಲಾ ಸುಳ್ಳು.

ಶಿವಾಂಗಿ — ನಾನು ಮಾಡಿದ್ದೆಲ್ಲ ಸುಳ್ಳು.

ಮರಾಳ — ಕರಾಳ್ಯಾ! ಕತ್ತೆಯಂತೆ ದನಿ ತೆಗೆದು ಅಳುತ್ತೀದ್ದಿಯಲ್ಲ. ಹೇಳು. ಅಳುವದಕ್ಕೆ ನಿನಗೇನಾಗಿತ್ತು.

ಕರಾಳ — ಅಕ್ಕಿಕಾಳು ಕೊಟ್ಟು ನಿನ್ನನ್ನು ಕರೆಕಳುಹಿಸಿದ್ದೆಲ್ಲಾ ಕೆಟ್ಟ ಮೋರೆ ಮಾಡಿಕೊಂಡು ಬಂದು ಬಿಟ್ಟಾ.

ಮರಾಳಾ — ಕರಾಳ್ಯಾ! ಕತ್ತೆಯಂತೆ ದನಿತೆಗೆದು ನೀನು ರೋದಿಸಲಿಲ್ಲವೆ? ನಿನ್ನ ರೋದನದ ದನಿಯೇ ನನ್ನನ್ನು ಇಲ್ಲಿಗೆಬರಮಾಡಿತು.

ಶಿವಾಂಗಿ — ಕರಾಳನು ಕಂಪಲಿಗೆ ಹೋಗತಕ್ಕವನಿದ್ದಾನೆ.

ಮರಾಳಾ — ಕಂಪಲಿಗೆ ಹೋಗಲಿ ಬೇಕಾದರೆ ಕೈಲಾಸಕ್ಕೆ ಹೋಗಲಿ, ನಿನಗೆ ಈ ಕೋತಿಯ ಕಿಟಿಕಿಟಿಯಾದರೂ ತಪ್ಪಿತು.

ಕರಾಳ : ಮರಾಳ್ಯಾ! ನಾನು ಹೋದರೆ ನಿನಗೆ ಆನಂದವಲ್ಲವೆ?

ಮರಾಳ : ಆನಂದ ಎಷ್ಟೂಂತ ಹೇಳಲಿ. ಹಾಲು ಸಕ್ಕರೆ ಕುಡಿದಂತಾಗುವದು. ಮೇಲೆ ಜೇನುತುಪ್ಪ ತಿಂದಂತಾಗುವದು. ಏನು ಹೇಳಲಿ ಬಹು ಆನಂದ! ಆನಂದ!

ಕರಾಳ : ನಿನ್ನ ದಾರಿಯ ಮೇಲಿನ ಕಂಟಕ ದೂರಾಯಿತೆಂದು ತಿಳಿದಿಯಾ?

ಮರಾಳ : ಇವನ್ನೇನು ಕೇಳುವಿ ಹುಚ್ಚಾ.

ಕರಾಳ : ಬಾಯಿ ಬಹಳ ಹಗುರವಾಗಿದೆ ತೋರಿಸಲೇನು ಒಂದು ಕೈ.

ಮರಾಳ : ನಾನೇನು ಜ್ಯೋತಿಷಿಯಲ್ಲ ಕೈ ತೋರಿಸಲಿಕ್ಕೆ

ಶಿವಾಂಗಿ : ಕರಾಳನ ಕೈಯೊಳಗಿನ ಸಾಮುದ್ರಿಕೆಯನ್ನು ನಾನೀಗ ನೋಡಿದೆ.

ಕರಾಳ : ನೋಡಿದಳಂತೆ ಏನು ನೋಡಿದಿ?

ಶಿವಾಂಗಿ : ರೌದ್ರದಾಮರು ಕೊಟ್ಟಪತ್ರ (ಕರಾಳ ಬೆದರುವನು)

ಮರಾಳ : ಯಾರಿಗೆ ಕೊಡುವದಕ್ಕೆ ಕೊಟ್ಟಿರುವನು.

ಕರಾಳ : ನಿಮ್ಮಪ್ಪನಿಗೆ ಕೊಡಲಿಕ್ಕೆ

ಮರಾಳ : ಬಾಯಿ ಬಿಗಿ ಹಿಡಿ ಬಡ್ಡಿಮಗನೇ!

ಕರಾಳ : ನಾಯಿಯಂತೆ ಬೊಗಳುತ್ತ ನಿಲ್ಲು. ಆನೆ ಹೋಗುವಾಗ ಶ್ವಾನವು ಬೊಗಳುವದು ಸಹಜವು (ಹೋಗವನು) (ವೇಷಧಾರಿಯಾದ ಬುಕ್ಕನು ಬರುವನು) (ಮರಾಳ ಪೋಗುವನು)

ಶಿವಾಂಗಿ : ಅಮ್ಮಣ್ಣಿಯವರು ಇಷ್ಟರಲ್ಲಿಯೇ ಬರುವರು.

ಬುಕ್ಕ : ಜೈ ಭುವನೇಶ್ವರಿ

ಶಿವಾಂಗಿ ಹುಂ ಅದೇಅದೇ ಈಗ ಬರುವರು (ಗೌರಾಂಬಿಕಾ ಬರುವಳು)

ಗೌರಾಂಬಿಕಾ : ಕೂಗಿದೆಯೇನೆ!

ಶಿವಾಂಗಿ ಅಮ್ಮಾಯ್ಯಾ ನಾನೆಲ್ಲಿ ಕೂಗಿದೆ, ಮತ್ತಾರೋ ಕೂಗಿರಬಹುದು.

ಗೌರಾಂಬಿಕಾ : ಇದೇನೆ ಅಸಂಬದ್ಧ ಮಾತು.

ಶಿವಾಂಗಿ ಅಸಂಬದ್ಧವೇಕೆ? ಸುಸಂಬದ್ಧವಾಗಿ ಅದು ತಾನೇ ತಿಳಿದು ಬರುವದು. (ಹೋಗುವಳು)

ಗೌರಾಂಬಿಕಾ : ನೇತ್ರಗಳು ಸಾಫಲ್ಯವನ್ನು ಹೊಂದಿದವು.

ಬುಕ್ಕ ಮನಸ್ಸಿಗೆ ಅತ್ಯಂತವಾಗಿ ಶಾಂತಿ ದೊರೆಯಿತು. ತಮ್ಮ ದರ್ಶನಕ್ಕಾಗಿ ನಾನೇ ಬರಬೇಕಲ್ಲವೇ? ಆಶ್ರಮಕ್ಕೆ ಬರುವದಕ್ಕೆ ಶ್ರಮವಾಗಬಹುದು. ಸುಕುಮಾರ ದೇಹಕ್ಕೆ ಶ್ರಮವು ಸಹನವಾಗಲಿಕ್ಕಿಲ್ಲ.

ಗೌರಾಂಬಿಕಾ : ಅರಮನೆಯನ್ನು ಬಿಟ್ಟು ಕುಂಜವನಕ್ಕೆ ಸಹ ಬರುವದಕ್ಕೆ ಅವಕಾಶವಿಲ್ಲ. ಶಿವಾಂಗಿಯ ಸೂಚನೆಯ ಮೇರೆಗೆ ಅಣ್ಣಾಜಿಯವರ ಕಣ್ಣು ತಪ್ಪಿಸಿ ಬಂದಿರುವೆ ಹೆಚ್ಚು ನಿಲ್ಲಿಕ್ಕೆ ಅವಕಾಶವು ಇಲ್ಲ. ನಾನೆಲ್ಲಿಯೂ ಹೊರಬೀಳಬಾರದೆಂದು ಅಣ್ಣಾಜಿಯವರ ಕಟ್ಟಪ್ಪಣೆಯಾಗಿದೆ.

ಬುಕ್ಕ ಅಣ್ಣನ ಆಜ್ಞೆಯನ್ನು ಅಕ್ಷರ ಸಹ ಪಾಲಿಸುವ - ನಿನ್ನಂಥ ಆಜ್ಞಾಧಾರಕಳಾದ ಸಹೋದರಿಯು ರೌದ್ರದಾಮನಿಗೆ ದೊರೆತಿರುವುದು ಅವನ ಪೂರ್ವ ಸುಕೃತ.

ಗೌರಾಂಬಿಕಾ : ಅಣ್ಣಾಜಿಯವರ ಆಜ್ಞೆಯನ್ನು ಪಾಲಿಸದೇ ನಾನೀಗ ಯಾರ ಆಜ್ಞೆಯನ್ನು ಪಾಲಿಸಬೇಕು.

ಬುಕ್ಕ ನಿನ್ನ ಹೃದಯವೇ ನಿನಗೆ ಉತ್ತರ ಕೊಡುವುದು

ಗೌರಾಂಬಿಕಾ : ನನಗೆ ಹೃದಯವೇ ಇಲ್ಲ.

ಬುಕ್ಕ ಹಾಗಾದರೆ ನನಗೆಲ್ಲಿ ಸ್ಥಳವನ್ನು ಕೊಟ್ಟಿರುವಿ.

ಗೌರಾಂಬಿಕಾ : ಹೃದಯದ ಹೃದಯವಾದ ಪ್ರೇಮ ಕರಂಡಕದಲ್ಲಿ

ಬುಕ್ಕ ಕರಂಡಕದ ಬಾಯಿಯನ್ನು ಮಾತ್ರ ಮುಚ್ಚಬೇಡ

ಗೌರಾಂಬಿಕಾ : ಅದು ಹೀಗೆ ಎಲ್ಲಿಯವರೆಗೆ ನಡೆಯತಕ್ಕದ್ದು

ಬುಕ್ಕ ಮಾತಿಗೆ ಮಾತು ದೊರೆಯುವವರೆಗೆ

ಗೌರಾಂಬಿಕಾ : ಹಾಗಾದರೆ ಮೌನವನ್ನು ಧರಿಸಲ್ಯಾ

ಬುಕ್ಕ ಹಾಗಾದರೆ ನಾನು ಹೋಗಲ್ಯಾ

ಗೌರಾಂಬಿಕಾ : ಅದು ತಮ್ಮ ಇಷ್ಟ (ತೆರೆಯಲ್ಲಿ ಶಿವಾಂಗಿಯನ್ನೇಕೆ ಸೆರೆಮನೆಯ ಕಾಡಿಗೆ ಒಯ್ಯುವಿರಿ) (ಪ್ರಧಾನಜಿಯವರ ಆಜ್ಞೆ)

ಬುಕ್ಕ ಶಿವಾಂಗಿಯನ್ನು ಸೆರೆಮನೆಯಲ್ಲಿ ಹಾಕಲಿಕ್ಕೆ ಕಾರಣವೇನು?

ಗೌರಾಂಬಿಕಾ : ದಯಾಳುವಾದ ನಮ್ಮಣ್ಣನೇ ಕಾರಣ. ಅವರು ಕಾರಸ್ಥಾನವನ್ನು ಹೂಡಿರಲಿಕ್ಕೆ ಸಾಕು.

ಬುಕ್ಕ ಕ್ಷಾತ್ರ ಕುಮಾರಿಯಾದ ನಿನ್ನ ಸಾಹಸವನ್ನು ಪರೀಕ್ಷಿಸಬೇಕು.

ಗೌರಾಂಬಿಕಾ : ಹೃದಯೇಶನ ಮನೋಗತವು ವಿದಿತವಾಯಿತು. ಮಹಾರಾಜ! ಇನ್ನು ಎರಡು ಗಳಿಗೆಯೊಳಗಾಗಿ ಶಿವಾಂಗಿಯು ಸೆರೆಮನೆಯೊಳಗಿಂದ ಬಿಡುಗಡೆಯಾದಳೆಂದು ತಿಳಿಯಿರಿ. ಆ ಅವರೆಗೆ ತಾವು ತುಂಗೆಯ ತಟಾಕದಲಿ?

ಬುಕ್ಕ ಹಾಗೇ ಆಗಲಿ ಜೈ ಭುವನೇಶ್ವರಿ ಮಾತಾಕಿ ಜೈ (ಗೌರಾಂಬಿಕೆಯನ್ನು ನೋಡುತ್ತ ಹೋಗುವನು)

೩ನೆಯ ಪ್ರವೇಶ

ಸ್ಥಳ ಜಂಬುಕೇಶ್ವರನ ಶಯ್ಯಾ ಗೃಹ, ಸಮಯ : ಮಧ್ಯರಾತ್ರಿ
(ಜಂಬುಕೇಶ್ವರನು ಮಲಗಿರುವನು)

ಜಂಬುಕೇಶ್ವರ : ಲಲಿತೇ (ಒದರುವನು)

ಲಲಿತಾ ಪಿತಾಜಿ (ಎಂದು ಸಮೀಪಕ್ಕೆ ಹೋಗುವಳು)

ಜಂಬುಕೇಶ್ವರ : ಮಗು! ನೀನಿನ್ನು ನಿದ್ದೆ ಹೋಗಲಿಲ್ಲವೇ ! ಒಂದೇ ಸಮನೆ ಜಾಗರಣೆಯಿಂದ ಜಡ್ಡಾಗಲಿಕ್ಕಿಲ್ಲವೇ!

ಲಲಿತಾ ನಾನು ನಿದ್ದೆಯನ್ನು ಮಾಡೇ ಮಾಡುವೆನು. ತಮಗೀಗ ಸ್ವಲ್ಪ ಆರಾಮವೆನಿಸುತ್ತಿದೆಯೇ?

ಜಂಬುಕೇಶ್ವರ : ಮಗು ಸ್ವಲ್ಪ ಆರಾಮವೆನಿಸುತ್ತಿದೆ. ಕುಡಿಯಲಿಕ್ಕೆ ಸ್ವಲ್ಪ ನೀರು ಕೊಡು. (ಸ್ವ) ಹೊಟ್ಟೆಯಲ್ಲಿ ಉರಿ ಬಿದ್ದಿದೆ. ಸಂಕಟವು ಹೆಚ್ಚಾಗುತ್ತಿದೆ. ಕೋಮಲ ಹೃದಯದ ಕುಮಾರಿಗೆ ಇದನ್ನು ಹೇಗೆ ಹೇಳಲಿ. ದೇವಾ ವಿರುಪಾಕ್ಷಾ.

ಲಲಿತಾ ತಾತ ನೀರನ್ನು ತಗೆದುಕೊಳ್ಳಿ.

ಜಂಬುಕೇಶ್ವರ : (ನೀರು ಕುಡಿದು) ವತ್ಸೇ! ಆ ಪಂಪಾಪತಿಯ ಮೇಲಣ ಪದವನ್ನು ಹೇಳುವೆಯಾ? ಮಗು. ಮಧುರ ಕಂಠದಿಂದ ಹೊರಸೂಸುವ ಹರನ ಸ್ತವನಪರ ಗೀತವು ನನಗೆ ಶಾಂತಿಯನ್ನಾವರೂ ಕೊಟ್ಟೀತು.

ಲಲಿತಾ ಪಿತಾಜಿ! ಹಾಗೇ ಆಗಲಿ. ಹೇ ದುರಿತ ತಾಪ ವಿದೂರ ಸಂಕಟಶೈಲ ಕುಠಾರ.

-: ಪದ್ಯ :-

(ರಾಗ - ಕರ್ನಾಟಕ ತಾಲ - ತ್ರಿತಾಲ)

ನಗಜೆ ನಾಥನಾ ಧ್ಯಾನ ಶುಭ ಕಾಣಾ
ನೌಕ ಭವತೆ ತಾ - ಧ್ಯಾನಾ

ಶಿವಶಾಂತಸ್ಯೈ ಜಗ ಶಾಂತಿಗೆ
ವಿಷತಾನು ಕೊಡು ದೇವಾ
ಸುಖಕಾಲ ಇಮುದ್ಯೆ ಧ್ಯಾನಾ

ತಾತನಿಗೆ ಸ್ವಲ್ಪ ನಿದ್ದೆ ಹತ್ತಿದಂತೆ ಕಾಣಿಸುತ್ತದೆ. ದೇವಾ ದಯಾಘನ, ಕಾಯಿಲೆಯು ಬೇಗನೇ ವಾಸಿಯಾಗಲಿ. (ಮಲಗುವಳು) (ಕೃಷ್ಣವಸ್ತ್ರದಿಂದ ರೌದ್ರದಾಮನು ಮಂಚದ ಕೆಳಗಿನಿಂದ ಬರುವನು)

ರೌದ್ರದಾಮ : (ಸ್ವಗತ) ಲಲಿತೇ! ನಿನ್ನ ತಾತನ ಆತ್ಮಕ್ಕೆ ಚಿರಶಾಂತಿ ದೊರೆಯುವುದು. ಭಾಸ್ಕರನ ಕಿರಣಗಳು ಭೂಮಿಯ ಮೇಲೆ ಬೀಳುವದಕ್ಕಿಂತ ಮುಂಚೆ, ಕಾಲನ ಕ್ರೂರವಾದ ದೃಷ್ಟಿಯು ನಿನ್ನ ತಾತನ ಮೇಲೆ ಬೀಳುವದು. ಲಲಿತೇ! ನೀನು ಸಾಯಂಕಾಲವಲ್ಲಿ ನಿನ್ನ ತಂದೆಗೆ ನಿನ್ನ ಕೈಯಿಂದಲೇ ಕುಡಿಸಿದ ಔಷಧದಲ್ಲಿ ವಿಷವು ಬೆರೆಸಲ್ಪಟ್ಟಿತು. ಮುಗ್ಧೆ! ಈ ರೌದ್ರದಾಮನ ಕಾರಸ್ಥಾನವು ನಿನಗೆ ಹೇಗೆ ತಿಳಿಯಬೇಕು. ಲಾವಣ್ಯದ ರಾಶಿಯೇ! ನೀನು ಆನಂದದಿಂದ ಪ್ರೇಮಾಲಿಂಗನವನ್ನು ನನಗೆ ಕೊಡದಿದ್ದರೆ ಮೃತ್ಯುಬಾಲೆಯು ತನ್ನ ದೃಡಾಲಿಂಗನವನ್ನು ನಿನ್ನ ತಂದೆಗೆ ಕೊಡುವಳು. ಲಲಿತೇ! ನಿನ್ನ ಕೋಮಲವಾದ ಕರವನ್ನು ನನ್ನ ಕರವಲ್ಲಿರಿಸದಿದ್ದರೆ ಮೃತ್ಯುವು ತನ್ನ ಕಠೋರವಾದ ಕರದಿಂದ ನಿನ್ನ ತಂದೆಯ ಕರವನ್ನು ಪಿಡಿಯುವಳು.

ಜಂಬುಕೇಶ್ವರ : ಲಲಿತೇ! ಲಲಿತೇ! ಮಗು, ಅಸಹ್ಯವಾದ ಸಂಕಟವಾಗುತ್ತಿದೆ ತಾಯಿ! ನೀರು ನೀರು (ಲಲಿತೆ ನೀರು ಕೊಡುವಳು) ನೀರಿನಿಂದ ಆರಿ ಹೋಗದ ಸಂಕಟವಿದ್ದಲ್ಲ ಮರಣ ಸಂಕಟವೇ ಹುಟ್ಟಿರುವುದು.

ಲಲಿತಾ ದೇವಾ! ಎಂಥ ಪ್ರಸಂಗವನ್ನು ತಂದೊಡ್ಡಿದಿ. ತಾತಾ! ರಾಜವೈದ್ಯರನ್ನು ಕರೆ ಕಳುಹಿಸಲೇ?

ರೌದ್ರದಾಮ : ರಾಜವೈದ್ಯರೇಕೆ ಪ್ರತ್ಯಕ್ಷ ದೇವತಾಲೋಕದಿಂದ ಧನ್ವಂತರಿಯು ಧರೆಗಿಳಿದು ಬಂದರೂ ನಿನ್ನ ತಂದೆಯೂ ಬದುಕಲಾರನು.

ಲಲಿತಾ (ಸ್ವ) (ಬಾಗಿಲಗಳನ್ನು ತಟ್ಟುತ್ತ) ಏ ಶಿವಾಂಗಿ! ಚತುರಿಕೆ, ಚಂಚಲೆ, ಏ ಶಿವಾಂಗೀ, ಶಿವಾಂಗೀ.

ರೌದ್ರದಾಮ : ಶಿವಾಂಗಿಯು ಸೆರೆಮನೆಯಲ್ಲಿ

ಲಲಿತಾ (ಪುನಃ ಬಾಗಿಲ ತಟ್ಟಿ) ಏ ಶಿವಾಂಗೀ, ಶಿವಾಂಗೀ.

ರೌದ್ರದಾಮ : (ಸ್ವ) ಕೋಗಿಲೆ ಕೂಗು ಕಂಠಹರಿಯುವಂತೆ, ಬ್ರಹ್ಮಾಂಡವು ಬಿರಿಯುವಂತೆ. ನಿನ್ನ ಕೂಗಿಗೆ ಪ್ರತ್ಯುತ್ತರ ದೊರೆಯಲಾರದು.

ಲಲಿತಾ (ಪುನಃ ಕೂಗುತ್ತ) ಎಲ್ಲರೂ ಎಲ್ಲಿ ಬಿದ್ದಿರುವಿರಿ.

ರೌದ್ರದಾಮ : ಬಿದ್ದುಕೊಂಡಿರುವರು ನನ್ನ ಕಾರಸ್ಥಾನದ ಜಾಲದಲ್ಲಿ.

ಲಲಿತಾ ಇದೇನು? ಎಲ್ಲ ಬಾಗಿಲುಗಳು ಭದ್ರವಾಗಿ ಇಕ್ಕಲ್ಪಟ್ಟಿರುವವು. ನಾನಾವದಕ್ಕೆ ಅಂಜುತ್ತಿದ್ದನೋ ಅದೇ ಎದುರಿಗೆ ಬಂದು ಬಿಟ್ಟಿತಲ್ಲಾ.

ಜಂಬುಕೇಶ್ವರ : ಲಲಿತೇ, ಬಾಳೇ ಮಗುವೇ ಇಲ್ಲೇ ಕುಳಿತುಕೋ. ರಾಜವೈದ್ಯರನ್ನು ಕರೆ ಕಳುಹಿಸಿದಿಯಾ, ಯಾರು ಹೋಗಿರುವರು ಅವರನ್ನ ಕರೆಯಲಿಕ್ಕೆ?

ಲಲಿತಾ (ದುಃಖಿಸುತ್ತ) ತಾತಾ! ಎಲ್ಲ ಬಾಗಿಲುಗಳು ಭದ್ರವಾಗಿ ಇಕ್ಕಲ್ಪಟ್ಟಿರುವವು. ದಾಸದಾಸಿಯರನ್ನು ಎಷ್ಟು ಕೂಗಿದರೂ ಅದಕ್ಕೆ ಓ ಉತ್ತರವಿಲ್ಲಾ. ತಾತಾ! ತಮ್ಮ ದೇಹವು ಎಷ್ಟು ಕಂಪಿಸುತ್ತಿರುವದು.

ಜಂಬುಕೇಶ್ವರ : ಮಗುವೇ! ಯಾವನೋ ದುಷ್ಟನು ಹೊತ್ತು ಸಾಧಿಸಿಕೊಂಡ. ದಾರುಣವಾದ ವಿಷವು ಹೊಟ್ಟೆಯಲ್ಲಿ ಹೋಗಿದೆ. ಅಯ್ಯೋ! ಅಮ್ಮಾ! ಲಲಿತೇ ನಾನಿನ್ನು ಬದುಕುವುದಿಲ್ಲ. ವಿರುಪಾಕ್ಷನೇ ನಿನ್ನನ್ನು ಕಾಯಲಿ (ಎಚ್ಚರದಪ್ಪಿ ಬೀಳುವನು)

ಲಲಿತಾ ಪಿತಾಜಿ. ಪಿತಾಜಿ. ಲಲಿತೆಯ ಸುಖ ಸಾಗರವು ಬತ್ತಿಹೋಗುವುದೇ. ಈ ಲಲಿತೆಯ ಪ್ರಾಕ್ತನದ ಕರ್ಮವು ಪಾಪಮಯವಾಗಿರುವದೇ. ದೇವಾ ವಿರುಪಾಕ್ಷಾ (ರೌದ್ರದಾಮನನ್ನು ಕಾಣುತ್ತಲೇ) ಯಾರು ಯಮರಾಯನೇ ನನ್ನ ತಂದೆಯವರ ಜೀವವನ್ನು ಎತ್ತಿಕೊಂಡು ಹೋಗಲು ಬಂದಿರುವೆಯಾ! (ಉನ್ಮಾದದಿಂದ) ನಾನು ನನ್ನ ತಂದೆಯನ್ನು ನಿನ್ನ ವಶಕ್ಕೆ ಕೊಡುವವಳಲ್ಲ ಯಮರಾಯನೇ.

ರೌದ್ರದಾಮ (ಬುರುಕ ತೆಗೆದೊಗೆದು) ನಾನು ಯಮರಾಯನಲ್ಲ ಯಮಸ್ವರೂಪಿಯಾದ ರೌದ್ರದಾಮನು. ಲಲಿತೇ ಇದೆಲ್ಲ ಕಾರಸ್ಥಾನವನ್ನು ನಾನು ರಚಿಸಿದೆನು.

ಲಲಿತಾ ಇಂಥ ಕಾರಸ್ತಾನವನ್ನು ರಚಿಸಿ ನೀನಾವ ಸ್ವರ್ಗಸುಖವನ್ನು ಅನುಭವಿಸುವಿ.

ರೌದ್ರದಾಮ : ಸ್ವರ್ಗಸುಖವನ್ನು ಧಿಕ್ಕಾರಿಸುವಂಥ ನಿನ್ನ ಸಹವಾಸದ ಸುಖವನ್ನು ಆಜನ್ಮವಾಗಿ ಸೇವಿಸಬೇಕೆಂಬ ಸದಿಚ್ಛೆಯಿಂದ ಈ ಕಾರಸ್ಥಾನವನ್ನು ರಚಿಸಿದೆ.

ಲಲಿತ ಅಸಹ್ಯವಾದ ಹವ್ಯಾಸದಿಂದ ಅಧೋಗತಿಯ ಮಾರ್ಗವನ್ನು ಮಾತ್ರ ಹಿಡಿದಿ.

ರೌದ್ರದಾಮ : ಲಲಿತೇ! ನಿನ್ನ ಬಿರುನುಡಿಯ ಸೆಲೆಯು ಇನ್ನು ಬತ್ತಲಿಲ್ಲವೇ?

ಲಲಿತಾ ನಿನ್ನನ್ನು ಕಾಣುತ್ತಲೇ ಅದಕ್ಕೆ ಮತ್ತಷ್ಟು ಉತ್ತೇಜನ ದೊರೆಯುವುದು. ರೌದ್ರದಾಮ! ಕಾಲಪುರುಷನು ನಭಾದೇವಿಯ ವಶೀಕರಣಕ್ಕಾಗಿ ಕೃಷ್ಣ ಮೇಘಜಾಲವೆಂಬ ಕಾರಸ್ಥಾನ ಜಾಲದಲ್ಲಿ ಆಕಾಶ ಗಂಗೆಯನ್ನು ನೂಕುವನು.. ಆದರೇ ಅದಕ್ಕೆ ಅವಳು ಹೆದರುವಳೇ ನಭಾರಮಣಿಯ ಕಾಲಪುರುಷನಿಗೆ ಸಿಡಿಲೆಂಬ ಬಿರುನುಡಿಗಳನ್ನಾಡದೇ ಬಿಡುವಳೇ?

ರೌದ್ರದಾಮ : ಪರ್ಜನ್ಯರೂಪದಿಂದ ಕಂಬನಿಗಳನ್ನುದುರಿಸುವುದು ಕಡೆಗೆ ಸಭಾರಮಣಿಗೆ ತಪ್ಪಿದ್ದಲ್ಲ.

ಲಲಿತಾ ಸಂಕಟದಿಂದ ಸಂತಪ್ತಳಾದ ಅವಳ ಹೃದಯವು ತೆಗೆಯುವವ. ಪುಷ್ಕರನ್ನು ಕೇಳಿ ಅವಳ ಸೌಭಾಗ್ಯ ಸೂರ್ಯನು ಸಾಗಿಬಂದು ಸತಿಯ ಸಂಕಟವನ್ನು ಪರಿಹರಿಸಿ ಅವಳ ಹೃದಯವನ್ನು ಸಂತೈಸುವನು ರೌದ್ರದಾಮ!

ರೌದ್ರದಾಮ ಲಲಿತಾ! ಇದು ವಾದಕ್ಕೆ ಸಮಯವಲ್ಲ. ಮರಣೋನ್ಮುಖನಾಗಿ ಬಿದ್ದಿರುವ ನಿನ್ನ ತಂದೆಯನ್ನು ನೋಡು. ನನ್ನ ತಂತ್ರದಿಂದ ನಿನ್ನ ತಂದೆಯ ಹೊಟ್ಟೆಯಲ್ಲಿ ಹೊಕ್ಕಿರುವ ವಿಷವು ಈ ವನಸ್ಪತಿಯಿಂದ ನಿವಾರಿಸಲ್ಪಡುವುದು. ನಿನ್ನ ತಂದೆಯ ಪ್ರಾಣವು ನಿನಗೆ ಬೇಕಾಗಿಲ್ಲ ಆದರೆ ನಿನ್ನ ಹೃದಯವು ನನಗೆ ಬೇಕಾಗಿದೆ. ನೀನು ನಿನ್ನ ದೇಹವನ್ನು ನನಗೆ ಒಪ್ಪಿಸದಿದ್ದರೆ ನಿನ್ನ ಜನ್ಮದಾತನನ್ನು ನಿಶ್ಚಯವಾಗಿ ಕಳೆದು ಕೊಳ್ಳುವಿ. ಆದ್ದರಿಂದ ನಾನು ಹೇಳುವದನ್ನು ಕೇಳಿ ಪಿತನ ಪ್ರಾಣವನ್ನು ಕಾಪಾಡಿಕೊಳ್ಳು.

ಲಲಿತಾ ಪಾಪಾತ್ಮಾ! ನಿನ್ನ ಹೃದಯದಲ್ಲಿ ಇಂಥ ವಿಚಾರವು ಹೇಗೆ ಉದಯವಾಯಿತು.

ರೌದ್ರದಾಮ : ಅದಕ್ಕೇನು ಕಾಲಾವಧಿಯು ಬೇಕೆ? ಲಲಿತೆ! ಬ್ರಹ್ಮಾಂಡದಲ್ಲಿ ಭೂಕಂಪನದಿಂದ ಕ್ಷಣ ಕ್ಷಣಕ್ಕೆ ಬದಲಾವಣೆಯಾಗುವವು. ಪರ್ವತವಿದ್ದಲ್ಲಿ ಸರೋವರ ನಿರ್ಮಾಣವಾಗುವುದು. ಸರೋವರವು ಹೋಗಿ ಪರ್ವತವಾಗಬಹುದು. ಬ್ರಹ್ಮಾಂಡ ಸದೃಶ್ಯವಾದ ಪಿಂಡಾಂಡದಲ್ಲಿ ಇಚ್ಛಾಶಕ್ತಿಯಿಂದ ಮಾನವೀ ಹೃದಯವು ದಾನವೀ ಹೃದಯವಾಗಬಹುದು. ಅಥವಾ ದೈವೀ ಹೃದಯವಾಗಬಹುದು.

ಜಂಬುಕೇಶ್ವರ : ಲಲಿತೆ ! ಲ....ಲಿ.....ತೆ (ಚೀರುವನು)

ರೌದ್ರದಾಮ : ನಿನ್ನ ತಂದೆಯು ಇನ್ನೊಂದು ಗಂಟೆಯೊಳಗಾಗಿ ಇಹಲೋಕವನ್ನು ತ್ಯಜಿಸುವನು. ವಾದದಲ್ಲಿ ಕಾಲದ ವ್ಯಯ ಮಾಡಿ ಪಿತೃವನ್ನು ಪರಲೋಕಕ್ಕಟ್ಟಬೇಡ.

ಲಲಿತಾ (ಸ್ವ) ಜನ್ಮದಾತನ ಪ್ರಾಣವನ್ನು ಪಡಿಯಲಿಕ್ಕೆ ಲಲಿತೆ ರೌದ್ರದಾಮನ ಕಾಲುಗಳನ್ನು ಹಿಡಿದು ಈ ಲಲಿತೆಯ ಸ್ವಾಭಿಮಾನವನ್ನು ತ್ಯಜಿಸಬೇಕೆ? ಪಿತನ ಪ್ರಾಣಕ್ಕೆ ಕುಠಾರವಾಗುವ ಸ್ವಾಭಿಮಾನವನ್ನು ನಾನು ತ್ಯಜಿಸಲೇ ಬೇಕು. ಇದು ವಿಚಾರಕ್ಕೆ ಸಮಯವಲ್ಲ.

ರೌದ್ರದಾಮ : ಲಲಿತೆ! ವಿಚಾರವೇಕೆ? ಈ ವನಸ್ಪತಿಯ ವಿಷಯವಾಗಿ ಸಂದೇಹವುಂಟಾಗಿದೆಯೇ? (ಜಂಬುಕೇಶ್ವರನು ಮೂಗಿಗೆ ಹಿಡಿಯುವನು)

ಜಂಬುಕೇಶ್ವರ : ಅಹಹ.... ಲಲಿತೇ! (ಎದ್ದು) ಅಯ್ಯೋ... ಅಮ್ಮಾ ಮತ್ತೆ ಸಂಕಟ (ಬೀಳುವನು)

ಲಲಿತಾ ರೌದ್ರದಾಮಜೀ! ನಿಮ್ಮ ಕ್ಷಮೆಯನ್ನು ಬೇಡುವೆ. ತಾತನ ಪ್ರಾಣವನ್ನು ಉಳಿಸಿರಿ (ಕಾಲು ಹಿಡಿಯುವಳು)

ರೌದ್ರದಾಮ : ಸರಿ, ಲಲಿತೆಯೇ ನಿನ್ನ ಮಸ್ತಕವು ನನ್ನ ಪಾದ ವಶವಾದ ಮಾತ್ರಕ್ಕೆ ನಿನ್ನ ಹೃದಯವು ನನ್ನ ಹೃದಯ ವಶವಾಯಿತೆಂದು ಹೇಗೆ ತಿಳಿಯಬೇಕು (ಸರಿಯುವನು)

ಲಲಿತಾ ಈ ದೀನ ಧೇನುವಿನನ್ನು ಬಳಲಿಸಬೇಡ ಪ್ರಧಾನಜೀ. ನನಗೆ ಪಿತನ ಪ್ರಾಣ ದಾನಮಾಡಿ. ತಮಗೆ ಸೆರಗೊಡ್ಡಿ ಬೇಡಿಕೊಳ್ಳುವೆ.

ರೌದ್ರದಾಮ : ಲಲಿತೇ! ಪ್ರೇಮಾಲಿಂಗನವನ್ನು ಕೊಡು. ನಿನ್ನ ಪಿತನಸಾಕ್ಷಿಯಾಗಿ ನಿನ್ನ ಕರವನ್ನು ನನ್ನ ಕರದಲ್ಲಿರಿಸು ಯಥೇಚ್ಚವಾಗಿ ಅಧರಾಮೃತ ಪಾನ ಮಾಡಿಸು.

ಲಲಿತಾ (ಸ್ವ) ಪತಿತೋದ್ಧಾರಕಾ! ಅಬಲೆಯ ಹೃದಯವನ್ನು ಎಷ್ಟು ಪರೀಕ್ಷಿಸುತ್ತಿರುವಿ. ದೇವಾ ! ದುರುಳನ ದವಡೆಯೊಳಗಿಂದ ನನ್ನನ್ನು ದೂರಮಾಡು.

ರೌದ್ರದಾಮ : ಲಲಿತೇ! ಯೌವನದ ವಸಂತ ಮಾಸದಲ್ಲಿ ಶೃಂಗಾರರಸವನ್ನು ಸೇವಿಸುವ ಕೋಗಿಲೆಯ ಕಂಠವು ಮೌನವನ್ನು ಧರಿಸುವದೇ. ಮನೋಹರಿ ಮಾತನಾಡು. ನಿನ್ನ ಪಿತನ ಪ್ರಾಣವನ್ನು ಕಾಪಾಡು. ತಮ್ಮ ಹೃದಯವು ಕರಲಾರದೆ.

ರೌದ್ರದಾಮ : ನನ್ನ ಹೃದಯವು ವಜ್ರಕ್ಕಿಂತ ಕಠಿಣವಾಗಿದೆ.

ಲಲಿತಾ ರೌದ್ರದಾಮಜಿ! ನನ್ನನ್ನು ಗೌರಾಂಬಿಕಾ ಸಮಾನಳೆಂದು ತಿಳಿದುಕೊಳ್ಳಿ. ಸಹೋದರಾ ವನಸ್ಪತಿಯು ದೊರೆಯುವವರೆಗೆ ನನ್ನ ಬಂಧುವಿನ ಪಾದಗಳನ್ನು ಬಿಡುವದಿಲ್ಲ. (ಪಾದ ಹಿಡಿಯುವಳು)

ರೌದ್ರದಾಮ : ಸರಿ ಸೋಗಲಾಡಿ (ಒದೆಯುವನು) ಪಿತನ ಪ್ರಾಣವನ್ನು ಕಳೆದುಕೊಳ್ಳುವಿಯಲ್ಲದೆ ಬಲಾತ್ಕಾರಕ್ಕೆ ಬಲಿಬಿದ್ದು ಕೌಮಾರ್ಯವನ್ನು ಕೆಡಿಸಿಕೊಳ್ಳುವಿ.

ಲಲಿತಾ ಪಾಪಿಯೇ! ನೀನು ಮಾನವರೂಪಿ ಪಿಶಾಚಿಯು. ನಿನ್ನ ಹೃದಯದಲ್ಲಿ ಅಮಾವಾಸ್ಯೆಯ ಕತ್ತಲು ತುಂಬಿರುವುದು.

ರೌದ್ರದಾಮ : ಧಗಧಗಿಸುವ ಅಗ್ನಿಯ ಮೇಲೆ ನೀರನ್ನು ಹಾಕಿದರೆ ಅದು ಕಪ್ಪಾದ ಇದ್ದಲಿಯಾಗುವಂತೆ ಹೃದಯದ ಆಸೆಯ ಮೇಲೆ ನಿರಾಶೆಯ ನೀರನ್ನು ಹಾಕಿದರೆ ಅದು ಕಪ್ಪಾಗಿ ಕಾಣುವುದು ಸಹಜ.

ಲಲಿತಾ ಆರ್ಯ ಕುಮಾರಿಯನ್ನು ಸಂಕಟ ಪಡಿಸುವ ದುರಾತ್ಮನ ಪೈಶಾಚಿಕ ವೃತ್ತಿಗೆ ತಕ್ಕ ಶಾಸನವಾಗದೆ ಎಂದೂ ಇರಲಾರದು.

ರೌದ್ರದಾಮ : ಪೈಶಾಚಿಕ ಪ್ರೇಮವೇ ಹೃದಯದಲ್ಲಿ ಉದಯವಾಗಿದೆ. ಈ ಕಾಳರಾತ್ರಿಯ ಸಮಯದಲ್ಲಿ ನಿನ್ನ ಅಧರಾಮೃತವನ್ನು ಕಂಠಪಾನ

ಮಾಡುತ್ತ ರತಿ ಸುಖವನು... (ಸುರಂಗ ಸಪ್ಪಳವಾಗುವದು)

(ಮಾಧವಾರ್ಯ ಶಿವಾಂಗಿ ಬರುವರು)

ಮಾಧವ ತಡೆ! ಪಾಪಾತ್ಮಾ! (ಅಡ್ಡೈಸುವನು)

ರೌದ್ರದಾಮ : ಹಾರುಹನೆ ! ಹರಣವನ್ನು ಕಳೆದುಕೊಳ್ಳಲಿಕ್ಕೆ ಬಂದಂತೆ ಕಾಣುತ್ತದೆ.

ಮಾಧವ ತಡೆ! ಪಾಪಾಂಧನೇ ! ನಿನ್ನ ಪಾಪದ ಕೊಡವು ತುಂಬುತ್ತಿರುವುದು. ಆಯುಷ್ಯ ಸೂತ್ರವು ಜೀರ್ಣ-ವಾಗುತ್ತಿರುವುದು. ಆನೆಗುಂದಿಯ ರಾಜಮಂದಿರದಲ್ಲಿ ಸೇರಿದ ಪಿಶಾಚಿಯೇ......

ರೌದ್ರದಾಮ : ಶಬ್ದಗಳ ಬುಡ ಬುಡಕಿಯನ್ನು ಬಾರಿಸಬೇಡ. ನಾನು ನಿನ್ನನ್ನು ಸಂಪೂರ್ಣವಾಗಿ ಬಲ್ಲೆ ಹಾರುವನೇ, ಸಂಸಾರಕ್ಕಂಜಿ ಸನ್ಯಾಸಿಯ ಸೋಗನ್ನು ಹಾಕಿದ ನಿನ್ನ ನೀರಸ್ನು ಬಲ್ಲೆ. ನಿನ್ನ ಪೌರುಷದ ಪುರಾಣವನ್ನು ಕೊಚ್ಚಬೇಡ.

ಶಿವಾಂಗಿ ಸಚಿವ ಶಿರೋಮಣಿ! ಶ್ರೀಕೃಷ್ಣನ ಶಕ್ತಿಯನ್ನು ಕಾಣದೆ ದೂಷಿಸುತ್ತಿದ್ದ ದುರ್ಯೋಧನನ ವರ್ಣನೆಯನ್ನು ಪುರಾಣದಲ್ಲಿ ಕೇಳುತ್ತಿದ್ದೆವು. ಈಗ ಪ್ರತ್ಯಕ್ಷ ಉದಾಹರಣೆಯೇ ಕಣ್ಣುಮುಂದೆ ನಿಂತಿರುವುದು.

ರೌದ್ರದಾಮ : (ಸ್ವ) ನನ್ನ ಪಾದರಕ್ಷೆಯ ಕಿಮ್ಮತ್ತಿಗೆ ಸಹ ಸರಿಯಾಗದ ಈ ದಾಸಿಯ ಆಢ್ಯತೆ ಎಷ್ಟು! (ಪ್ರಕಟ) ಶಿವಾಂಗಿ ಸೆರೆಮನೆಯಿಂದ........

ಶಿವಾಂಗಿ ಅಹುದು ಬುದ್ಧಿ! ಬುದ್ಧಿಯವರ ಬುದ್ಧಿಯನ್ನು ತಿದ್ದಲಿಕ್ಕೆ ಸೆರೆಮನಿಯಿಂದೆದ್ದು ಬಂದೆನು.

ರೌದ್ರದಾಮ : ಜೋಕೆ! ಮೈಮೇಲೆಚ್ಚರಿಲ್ಲವೇ! ಈ ಹೊಯ್ಮಾಲಿಯ ಬೆನ್ನಹತ್ತಿ ಬಂದ ಹಾರುವನ ಹಣೆಯ ಹಣೆ ಬರಹವನ್ನೇ ಲಲಿತೆಯು ನೋಡಲಿ. (ಖಡ್ಗ ಹಿರಿಯುವನು)

ಶಿವಾಂಗಿ ಖಡ್ಗಬಹದ್ದೂರಾ! ನಿನ್ನ ಖಡ್ಗದ ಅಂಜಿಕೆಯನ್ನು ಯಾರಿಗೆ ತೋರಿಸುವಿ. ಮಹಾತ್ಮಾ ಮಾಧವಾಚಾರ್ಯರ ವಾಣಿಯಲ್ಲಿರುವ ಶಕ್ತಿಯು ವಿಶ್ವದ ಯಾವತ್ತೂ ಪಾಶವೀ ಶಕ್ತಿಯನ್ನು ತಡೆದು ನಿಲ್ಲಿಸುವುದು. ಬುದ್ಧಿ! ತಪೋಧನರಾದ ಬ್ರಾಹ್ಮಣೋತ್ತಮರ ವಾಣಿಯ ಮುಂದೆ ನಿಸರ್ಗದ ಆಟವು ಸಹ ನಿಲ್ಲುವುದು.

ರೌದ್ರದಾಮ : ತಿರುಕನಾದ ಹಾರುವನ ಹರಕು ವೇದಾಂತದ ಮುರುಕು ಶಬ್ದಗಳನ್ನು ನೀನು ಕಲಿತಂತೆ ಕಾಣುತ್ತದೆ. ದಾಸೀಪುತ್ರಿಯಾದ ನಿನ್ನ ಔಧತ್ಯವನ್ನು ಈ ರೌದ್ರದಾಮನು ಸಹಿಸಲಾರನು. ನಿನ್ನ ದೇಹವನ್ನು ನುಚ್ಚುನುಚ್ಚಾಗಿ ಕೊಚ್ಚಿದ ಮೇಲೆ ಹಾರುವನ ಸಮಾಚಾರ (ಮತ್ತೆ ಖಡ್ಗ ಹಿರಿಯುವನು)

ಮಾಧವ ತಿರ್ಯಜ್ಜಾತಿಯೇ! ಮಾಧವನ ವಾಣಿಯಲ್ಲಿರುವ ಶಕ್ತಿಯನ್ನು ಕ್ಷೋಣಿಯು ಕಾಣಲಿ. (ರೌದ್ರದಾಮ ನಿರ್ಜೀವ ಪುತ್ಥಳಿಯಂತೆ ನಿಲ್ಲುವನು) ಜೈ ಭುವನೇಶ್ವರಿ. (ಭಯಂಕರ ಸಪ್ಪಳ ವಾಗುವುದು)

ಲಲಿತಾ ಈ ದಿವ್ಯ ಪಾದ ಪುಣ್ಯದಿಂದ ದುಃಖದ ಪರದೆಯ ದೂರಾಗಿ ಶುಭದ ಚಿತ್ರವು ಕಾಣುತ್ತಿರುವುದು.

ಮಾಧವ ವತ್ಸೇ! ಶುಭಕರವಾದ ಸದಾಚಾರವು ಮಾನವ ಪ್ರಾಣಿಯನ್ನು ಮಹತ್ಸಂಕಟದಿಂದ ಪಾರು ಮಾಡುವುದು.

ಲಲಿತಾ ಪಿತಾಜಿಯವರ ದೇಹದಲ್ಲಿರುವ ವಿಷವು............

ಮಾಧವ ಅದೆಲ್ಲವನ್ನು ಶಿವಾಂಗಿ ತಿಳಿಸಿರುವಳು.

ಲಲಿತಾ ಗುರುಮಹಾರಾಜ! ಆ ವಿಷವನ್ನು ನಿವಾರಿಸುವ ವನಸ್ಪತಿಯು ಆ ರೌದ್ರದಾಮನಲ್ಲಿರುವುದು.

ಮಾಧವ ಕುಮಾರೀ! ತ್ರಿಭುವನವನ್ನು ದಹಿಸುವ ಕಾಳಕೂಟ ವಿಷವನ್ನು ಕುಡಿದ ಆತ್ರಿಲೋಚನ ಪಂಪಾಪತಿಯ ಪಾದೋದಕವನ್ನು ತೆಗೆದುಕೋ. ದೇವಲೋಕದ ಸುಧೆಯನ್ನು ಮೀರುವ ತೀರ್ಥವನ್ನು ನಿನ್ನ ತಂದೆಯ ಬಾಯಲ್ಲಿ ಹಾಕು. ಕ್ಷಣಾರ್ಧದಲ್ಲಿ

ವಿಷದ ನಿವಾರಣೆಯಾಗುವುದು. (ಜಂಬುಕೇಶ್ವರನ ಬಾಯಲ್ಲಿ ತೀರ್ಥಹಾಕುವಳು)

ಜಂಬುಕೇಶ್ವರ : (ಎದ್ದು) ಏನು ನನ್ನ ಮೇಲೆ ಅಮೃತವೃಷ್ಠಿಯಾಯಿತೇ. ಅಥವಾ ಅಮೃತ ಕಿರಣಗಳನ್ನು ಒಟ್ಟುಗೂಡಿಸಿ ನನ್ನ ಮೇಲೆ ಚಂದ್ರಮನು ಸುಧೆಯನ್ನು ಸುರಿಸಿದನೆ?

ಮಾಧವ ರಾಜನ್! ಅಮೃತ ವೃಷ್ಠಿಯಾಗಿಲ್ಲ. ಚಂದ್ರಶೇಖರನ ಪಾದೋದಕದ ಮಹಿಮೆ.

ಜಂಬುಕೇಶ್ವರ : ಮಹಾತ್ಮಾ! ನಿನ್ನ ಮಹಿಮೆಯನ್ನು ಕಾಣದ ಈ ಪಾಮರನನ್ನು ಕ್ಷಮಿಸು, ಕಾಪಾಡು.

ಮಾಧವ ಪಶುಪತಿಯು ನಿನ್ನನ್ನು ಕಾಪಾಡಲಿ.

ಜಂಬುಕೇಶ್ವರ : ರೌದ್ರದಾಮಾ! ಹೀಗೇಕೆ ಕಲ್ಲು ಗೊಂಬೆಯಂತೆ ನಿಂತಿರುವಿ.

ಲಲಿತಾ ಪಿತಾಜಿ! ಮಹಾತ್ಮಾ ಮಾಧಾವಾರ್ಯರ ದೈವವಾಣಿಯ ಮುಂದೆ ರೌದ್ರದಾಮನ ಪೈಶಾಚಿಕ ವಾಣಿಗೆ ಆಸ್ಪದವಿಲ್ಲ.

ಮಾಧವ ರಾಜನ್! ಈ ದುಷ್ಟನ ಹೃದಯವನ್ನು ಈಗಲಾದರೂ ಕಂಡು ಕೊಂಡೆಯಾ! ರಾಜಾ! ಭವಿತವ್ಯತೆಯನ್ನು ತಪ್ಪಿಸುವುದು ಯಾರಿಗೂ ಶಕ್ಯವಿಲ್ಲ. ಆದರೆ ಶಾಂತಿಯನ್ನು ನೀಗದೆ ವಿವೇಕದಿಂದ ವರ್ತಿಸು. ಓಂ ಶಾಂತಿಃ ಶಾಂತಿ ಃ (ಹೋಗುವನು) (ತೆರೆ ಬೀಳುವುದು)

೪ನೇ ಪ್ರವೇಶ

ಹುಕ್ಕ ನಾವು ಇದುವರೆಗೆ ಆನೆಗುಂದಿಯ ಅನ್ನವನ್ನು ಉಂಡಿರುವೆವು. ಹಾಗಾದರೆ ಪ್ರಭುವಿನ ಸಂಕಟ ಕಾಲದಲ್ಲಿ ನಾನು ಅವರ ಸೇವೆಯನ್ನು ಮಾಡುವುದು ಯೋಗ್ಯವಲ್ಲವೇ! ರಾಜಾ ಜಂಬುಕೇಶ್ವರನು ನನಗೊಂದು ಶಬ್ದವನ್ನಾದರೂ ಹೇಳಿ

ಕಳುಹಿಸಬಾರದೇ? ರಾಕ್ಷಸೀ ಹೃದಯದ ರೌದ್ರದಾಮನು ಮಹಾರಾಜರ ಪ್ರಾಣವನ್ನು ಹೀರಬೇಕೆಂದು ಮಾಡಿದ್ದನಲ್ಲವೇ? ಅಂಥವನನ್ನು ಬಳಿಯಲ್ಲಿರಿಸಿ ಕೊಳ್ಳಬೇಕು. ನಿರಪರಾಧಿಯಾದ-ನನ್ನನ್ನು ಹೊರಗೆ ಹಾಕಬೇಕು. ರಾಜನ್ ! ರಾಜ ಧರ್ಮಕ್ಕೆ ಶೋಭಿಸುವುದೇ. (ಸ್ವಲ್ಪ ತಡೆದು) ಪ್ರಭುವಿನ ತಪ್ಪನ್ನು ಎಣಿಸಲಿಕ್ಕೆ ನಾನ್ಯಾರು? ಅವರ ಸೇವೆಯನ್ನು ಮಾಡುವುದು ನನ್ನ ಧರ್ಮವಾಗಿದೆ. ಖಡ್ಗವನ್ನು ಧರಿಸುವದಿಲ್ಲೆಂದು ಶಪಥ ಮಾಡಿರುವೆ. ಆದರೆ ಧನುರ್ಧಾರಿಯಾಗಲಿಕ್ಕೆ ನನಗಾವ ಆತಂಕವಿಲ್ಲ.

ಸೇವಕ — ರಾಜಧಾನಿಯಿಂದ ಸೇನಾಪತಿ ಭುಜಂಗರಾಯರು ತಮ್ಮನ್ನು ಕಾಣಲಿಕ್ಕೆ ಬಂದಿರುವರು.

ಹುಕ್ಕ — ಒಳ್ಳೆಯದು (ಸಿಪಾಯಿ ಹೋಗುವನು) ಭುಜಂಗನೇಕೆ ಬಂದಿರಬೇಕು. (ಭುಜಂಗ ಬರುವನು) ಬನ್ನಿ ಕುಳಿತು ಕೊಳ್ಳಿ.

ಭುಜಂಗ — ಹಿಂದೆ ಜರುಗಿದ ವಿಷಯಗಳನ್ನು ತಾವು ಮರೆತು ಬಿಡಬೇಕು. ಎಂದು ಪ್ರಭುಗಳು ಇಚ್ಛಿಸುತ್ತಿರುವರು. ಆನೆಗುಂದಿಯ ಮೇಲೆ ಬರುವ ದುರ್ಧರ ಪ್ರಸಂಗವನ್ನು ಪರುಕಿಸಿ ನೋಡಿ ಸಿಂಹಾಸನದ ಸೇವೆಯನ್ನು ತಾವು ಮಾಡುವಿರೆಂದು ಆನೆಗುಂದಿಯು ಇಚ್ಛಿಸುತ್ತಿರುವುದು. ಮಹಾರಾಜರು ಕೊಟ್ಟ ರಾಯಸವನ್ನು ಸ್ವೀಕರಿಸಬೇಕು.

ಹುಕ್ಕ — (ಪತ್ರಕ್ಕೆ ನಮಿಸಿ) ಕರ್ನಾಟಕದ ಕಡುಗಲಿಯಾದ ಕಲಿ ಕಂಠೀರವನೇ. ಸಿಂಹಾಸನದ ಆಜ್ಞೆಯನ್ನು ಶಿರಸಾವಹಿಸಿ ಸೇವೆಗೆ ಸಿದ್ಧರಾಗಬೇಕು. ವೈಯಕ್ತಿಕ ದ್ವೇಷದ ಹೋಮಮಾಡಿ ಆನೆ-ಗುಂದಿಯನ್ನು ಕಾಪಾಡಲಿಕ್ಕೆ ಒಮ್ಮನಸ್ಸಿನಿಂದ ಕಲೆಯಬೇಕು. ಕಲಿ ಕಂಠೀರವನನ್ನು ಸನ್ಮಾನಿಸುವದಕ್ಕಾಗಿ ವಸ್ತ್ರಗಳನ್ನು ಕೊಟ್ಟು ಸೇನಾಪತಿಯನ್ನು ಕಳುಹಿಸಿರುವೆವು. ನಮ್ಮ ಅಪ್ಪಣೆಗೆ ಒಪ್ಪಿಗೆಯನ್ನು ಕೊಟ್ಟು ತಪ್ಪದೇ ಬರುವಿಯೆಂದು ನಾವು

ನಂಬಿರುವೆವು. (ಸ್ವ) ಅಹಹ SSS! ಕೊನೆಗೆ ಮಹಾರಾಜರಿಗೆ ಈ ಬಡದಾಸನ ನೆನಪಾಯಿತು. (ಪ್ರ) ಭುಜಂಗರಾವ! ರೌದ್ರದಾಮ ಪ್ರಧಾನರು.

ಭುಜಂಗ ಆ ವಿಷಯವೇ ಬೇಡ. ರೌದ್ರದಾಮ ಪ್ರಧಾನರಿಗೆ ಪೂರ್ಣ ಪ್ರಾಯಶ್ಚಿತ್ತವಾಗಿದೆ.

ಹುಕ್ಕ ಸೇನಾ ಸಾಗರಾ! ಆನೆಗುಂದಿಯ ಮಾನವನ್ನು ರಕ್ಷಿಸುವದಕ್ಕಾಗಿ ಪ್ರಾಣದ ಪರಿವು ಹಿಡಿಯದೆ ಹೆಣಗಾಡುವಾ! ರಿಪುರಕ್ತದಿಂದ ರಣದೇವತೆಯನ್ನು ತೃಪ್ತಿಗೊಳಿಸುವಾ! ಸದ್ಗುರುಗಳ ಆಶೀರ್ವಾದವನ್ನು ಪಡೆದು ರಾಜಧಾನಿಗೆ ಹೊರಡುವಾ!

ಭುಜಂಗ ಪ್ರಭುಗಳು ಪ್ರೇಮದಿಂದ ಕಳುಹಿಸಿದ ವಸ್ತ್ರಗಳನ್ನು ಧರಿಸಿಕೊಂಡು ಗುರುಗಳ ದರ್ಶನಕ್ಕೆ ಹೊರಡಬಹುದು.

ಹುಕ್ಕ : ಹಾಗೆಯೇ ಆಗಲಿ (ಮಾಧವನು ಬರುವನು)

ಮಾಧವ ಹಾಂ! ಕುಮಾರಾ ತಡೆ ವಸ್ತ್ರಗಳನ್ನು ಮುಟ್ಟಬೇಡ.

ಹುಕ್ಕ ಗುರು ಮಹಾರಾಜ! ಆನೆಗುಂದಿಯ ಮೇಲೆ ಸಾಗಿಬರುತ್ತಿರುವ ಪ್ರಚಂಡವಾದ ಸೈನ್ಯದೊಡನೆ ಹೋರಾಡಲಿಕ್ಕೆ ಮಹಾರಾಜರು ಆಜ್ಞೆಯನ್ನು ಮಾಡಿರುವರು. ರಿಪುಗಳ ರುಂಡವನ್ನು ಚಂಡಾಡಿ ದೇಶ ಮಾತೆಯ ಸೇವೆಯನ್ನು ಮಾಡ್ತಲಿಕ್ಕೆ ಮಹಾರಾಜರು ನನಗೆ ಆಸ್ಪದವನ್ನು ಕೊಟ್ಟಿದ್ದಾರೆ. ಪ್ರಭುಗಳು ಪ್ರೇಮ ಪುರಸ್ಸರವಾಗಿ ವಸ್ತ್ರಗಳನ್ನು ಕಳುಹಿಸಿರುವರು. ನೋಡಿ ಇದು ಅವರು ಕೊಟ್ಟ ರಾಯಸವು.

ಮಾಧವ : (ಪತ್ರ ಓದಿ) ಸರಳ ಹೃದಯದವನಾದ ನಿನಗೆ ಹೀಗೆ ತೋರುವುದು ಸಹಜ. ಭುಜಂಗಾ! ರಾಜಾ ಜಂಬುಕೇಶ್ವರರು ಈ ವಸ್ತ್ರಗಳನ್ನು ಕಳುಹಿಸಿರುವರೋ? ನೀನಾದರೂ ಅವರ ಆಜ್ಞಾನುಸಾರವಾಗಿ ಇವುಗಳನ್ನು ತಂದಿರುವೆಯಾ? ಈ ಪತ್ರವು ಜಂಬುಕೇಶ್ವರರಿಂದ ಬರೆಯಲ್ಪಟ್ಟಿರುವುದೋ? ಹೀಗೇಕೆ ನಡುಗುತ್ತಿರುವಿ.

ಭುಜಂಗ — (ಸ್ವ) ಮನಸ್ಸೇಭದ್ರ! (ಪ್ರ) ಅಹುದು ಗುರು ಮಹಾರಾಜ. ಮಹಾರಾಜರೇ ಕಳುಹಿಸಿಕೊಟ್ಟಿರುವರು. ಸ.....ತ್ಯ....ವಾ...ಗಿ ಅವರೇ ಕಳುಹಿಸಿರುವರು.

ಮಾಧವ — ಎಲೋ! ಈ ವಸ್ತ್ರಗಳನ್ನು ಆ ಅಶೋಕ ವೃಕ್ಷದ ಬುಡದಲ್ಲಿಹಾಕು.

ಭುಜಂಗ — ಗೌರಾಂಬಿಕೆಯ ಪಾಣಿಗ್ರಹಣದ ದೆಶೆಯಿಂದ ಈ ಹೀನ ಕೆಲಸವನ್ನು ವಹಿಸಿದೆನು. ಪ್ರಾಣಕ್ಕೆರವಾಗುವ ಪ್ರಸಂಗ ಬಂದಿತು.

ಮಾಧವ — ಎಲೋ ! ಹೀಗೇಕೆ ನಡುಗುತ್ತಿರುವಿ. ಕುಮಾರಾ! ನೋಡು ನೋಡು. ಆ ಅಶೋಕ ವೃಕ್ಷವು ಸಿಡಿಹಾಯ್ದು ನಿಂತಿತು. ಎಲೆಗಳೆಲ್ಲವೂ ಉದುರಿ ಬಿದ್ದವು. ನೋಡು ದುರಾತ್ಮಾ! ವಿಷಲೇಪಿತವಾದ ವಸ್ತ್ರಗಳನ್ನು ರೌದ್ರದಾಮನು ಕಳುಹಿಸುರುವನಲ್ಲವೇ? ಪಾಪೀ.

ಹುಕ್ಕ — (ಬಾಣವನ್ನು ಹೂಡಿ) ತಡೆ ಪಾಪಾತ್ಮಾ! ನಿನ್ನ ರಕ್ತದಿಂದ ಈ ನೆಲವನ್ನು ತೋಯಿಸಿ ಬಿಡುವೆನು.

ಮಾಧವಾ — ಕುಮಾರಾ! ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇಕೆ? (ಭುಜಂಗನ ಕತ್ತು ಹಿಡಿದು) ಪಾಪಾತ್ಮ.

ಭುಜಂಗಾ — ನಿನ್ನ ತಂದೆ ತಾಯಿಗಳು ನಿನಗೆ ಭುಜಂಗನೆಂದು ಹೆಸರಿಟ್ಟಿರುವುದು ಸರಿಯಾಗಿರುವದು. ಅವರು ನಿನ್ನನ್ನು ಹಡೆದು ಪುನ್ನಾಮ ನರಕದ ಯಾತನೆಯನ್ನು ತಪ್ಪಿಸಿಕೊಳ್ಳಲಿಲ್ಲ. ಅವರು ಹಾಗೇ ಬಂಜೆಯಾಗಿ ಸತ್ತುಹೋಗಿದ್ದರೆ ಕೆಡಕೇನಾಗುತ್ತಿದ್ದಿಲ್ಲ. ಹೋಗು ನಿನ್ನ ಪಾಪವು ಪರ್ವತಪ್ರಾಯವಾಗಿ ಬೆಳೆಯ ಹತ್ತಿದೆ. ರೌದ್ರದಾಮನಿಂದ ರಚಿಸಲ್ಪಡುವ ಕಾರಸ್ಥಾನಕ್ಕೆ ನಿನ್ನ ಸಹಾಯ ಬೇಕಲ್ಲವೇ! ಧರ್ಮ ಘಾತುಕರೇ! ದೇಶಘಾತುಕರೇ! ಧಿಃಕಾರ ನಿಮ್ಮ ಜನ್ಮಕ್ಕೆ ತ್ರಿವಾರ ಧಿಃಕಾರವಿರಲಿ.

೫ನೇ ಪ್ರವೇಶ

ಸ್ಥಳ: ದಿವಾನ ಖಾನೆಯು.

(ಲಲಿತೆಯು ಭುವನೇಶ್ವರಿಯನ್ನು ಪೂಜಿಸಿ ಆರತಿ ಮಾಡುವಳು)

ಲಲಿತಾ ಜಗನ್ಮಂಗಲೆ! ಮಂಗಲ ಪ್ರದವಾದ ಮಾರ್ಗವನ್ನು ತೋರಿಸು, ದೇವಿ. ನಾನು ಕ್ಷಾತ್ರ ಕುಮಾರಿಯಲ್ಲವೇ? ಕೈಯಲ್ಲಿ ಖಡ್ಗವನ್ನು ಧರಿಸಿ ರಣದೇವತೆಯ ಸೇವೆ ಮಾಡುವುದು ನನ್ನ ಜನ್ಮಸಿದ್ಧ ಅಧಿಕಾರವಲ್ಲವೇ. ಆನೆಗುಂದಿಯ ವೀರರಿಗೋಸ್ಕರವಾಗಿ ವೈಕುಂಠ ದ್ವಾರವು ಈ ದಿವಸ ತೆರೆಯಲ್ಪಡುವದು. ಕನ್ನಡ ಕಲಿಗಳಿಗಾಗಿ ವೀರಸ್ವರ್ಗವು ತೆರೆಯಲ್ಪಡುವುದು. ಮನೋಹರನ ಪುಣ್ಯಪದಯುಗಲವನ್ನು ಸ್ಮರಿಸುತ್ತ ಸೇವೆಯನ್ನು ಮಾಡಿ.

- : ಪದ್ಯ :-

(ರಾಗ - ಭೂಪ ತ್ರಿತಾಲ)

ತಾಯೆ ನೀಡು ಬಲವ ನನಗೆ ಜಗತಾರಿಣೆ
ಚಾಮುಂಡಿ ನೀ ಚಂಡಿ ಪ್ರಚಂಡಿ
ರಣ ಸಿಂಹಿಣೆ ನೀ ಭದ್ರ ಕಾಳಿ
ರಣದಲ್ಲಿಅರಿಯ ಸಂಹಾರಾ
ವಿಧಿಸಲು ಧೃತಿ ರಣ ಶೌರ್ಯಾ

ಜಂಬುಕೇಶ್ವರ : (ರಕ್ತದಿಂದ ತೊಯ್ದು ವಸ್ತ್ರಧರಿಸಿ) ಲಲಿತೇ....... ಎತ್ತಕಡೆಗೆ ಹೋಗುವ ವಿಚಾರವನ್ನು ಹೂಡಿರುವಿ?

ಲಲಿತಾ ಪಿತಾಜಿಯ ಪಾರ್ಶ್ವದಲ್ಲಿ ನಿಂತು ರಿಪುಗಳ ರುಧಿರವನ್ನು ರಣಭೂಮಿಯ ಮೇಲೆ ಚೆಲ್ಲುವದಕ್ಕಾಗಿ ಹೊರಟಿರುವೆ.

ಜಂಬುಕೇಶ್ವರ : ಆ ಹುಕ್ಕನನ್ನು ಕಾಣುವದಕ್ಕಾಗಿ ಹೊರಟಿರುವಿ. ಲಲಿತೇ! ಆನೆಗುಂದಿಯು ತನ್ನ ಮಕ್ಕಳ ರಕ್ತದಲ್ಲಿ ಮುಣುಗುತ್ತಿರುವಾಗ ಮೌಲ್ಯವಂತದ ಮೂಲೆಯಲ್ಲಿ ಅಡಗಿರುವ ಅನಾರ್ಯನ ಬೆನ್ನು ಹತ್ತಿರುವೆಯಾ?

ಲಲಿತ ಪಿತಾಜೀ! ಹುಕ್ಕಕುಮಾರನನ್ನು ಅನಾರ್ಯನೆಂದು ಭಾವಿಸಿರುವಿರಾ! ನಿನ್ನೆ ರಣರಂಗದಲ್ಲಿ ಮಲೀಕ ನಾಯಕನ ಮಾರ್ಬಲವನ್ನು ಹಿಂದಕ್ಕೊತ್ತಿದವರು ಯಾರು? ಭಗವಾನ್ ಭಾರ್ಗವರಾಮನ ಶಿವಚಾಪ ಸದೃಶವಾದ ಧನುಷ್ಯದಿಂದ ಕೂರಂಬುಗಳ ಮಳೆಗರೆಯುತ್ತ ವೈರಿಗಳ ಹೃದಯವನ್ನು ಚದುರಿಸಿದ ಕೆಚ್ಚೆದೆಯ ಕಡುಗಲಿಯಾರು? ಅವರೇ ಹುಕ್ಕ ಕುಮಾರರಲ್ಲವೇ? ಮಹಾತ್ಮಾ ಮಾಧವಾರ್ಯರ ಪಟ್ಟ ಶಿಷ್ಯರಲ್ಲವೇ? ಅಂಥವರನ್ನು ಅನಾರ್ಯರೆಂದು ಕರೆದ ನಿಮ್ಮ ಶಬ್ದಗಳನ್ನು ಕಿವಿಯಿಂದ ಕೇಳಲಾರೆ.

ಜಂಬುಕೇಶ್ವರ : ಎದುರಿಗೆ ನಿಂತು ಯುದ್ಧಮಾಡದೇ ಮರೆಯಾಗಿ ನಿಂತು ಬಾಣಗಳನ್ನು ಬಿಡುವ ಬಡಿವಾರದ ಬುಡಬುಡಕಿಯನ್ನು ಬಾರಿಸಬೇಡ. ಅವನು ಕ್ಷಾತ್ರ ಕುಲೋದ್ಧವನಾಗಿದ್ದರೆ ......

ಲಲಿತಾ ನನ್ನ ಜೀವಿತೇಶ್ವರನ ವಿಷಯವಾಗಿ ದುಶಬ್ದಗಳನ್ನುಚ್ಚರಿಸಬೇಡಿ ಬೇಕಾದರೆ ನನ್ನನ್ನು ನಿಂದಿಸಿರಿ .... ಆದರೆ ......

ಜಂಬುಕೇಶ್ವರ : ನಿನ್ನ ಪಿತನ ವಿಷಯವಾಗಿ ನಿನ್ನಲ್ಲಿ ಅಭಿಮಾನವಿಲ್ಲವೇ? ಧರ್ಮದ ವಿಚಾರವಿಲ್ಲವೇ? ಸಿಂಹಾಸನದ ವಿಷಯವಾಗಿ ಸ್ವಾಮಿನಿಷ್ಠೆ ಇಲ್ಲವೇ?

ಲಲಿತಾ ತಮ್ಮ ಮಗಳಾದ ಈ ಲಲಿತೆಯು ದುಹಿತ್ರಾಧರ್ಮವನ್ನು ತಿಳಿದಿರುವಳು. ಹಾಗೇ ಈ ಲಲಿತೆಗೆ ಪ್ರಜಾಧರ್ಮವೂ ಗೊತ್ತುಂಟು. ಸತೀ ಧರ್ಮವೂ ಗೊತ್ತುಂಟು ಪಿತಾಜೀ! ಈ ತ್ರಿವಿಧ ಧರ್ಮಗಳನ್ನು ನನಗೆ ಪಾಲಿಸಬೇಕಾಗಿದೆ. ಈ ಧಾರಾತೀರ್ಥವು ತ್ರಿವೇಣಿ ಸಂಗಮಕ್ಕೆ ಸಮಾನವಾಗಿರುವುದು. ಈ ತ್ರಿವೇಣಿಯಲ್ಲಿ ನನ್ನ ತ್ರಿವಿಧ ಧರ್ಮಗಳನ್ನು ಪಾಲಿಸುತ್ತ ದೇಹ ತ್ಯಾಗ ಮಾಡುವೆ.

ಜಂಬುಕೇಶ್ವರ : ಕೋಮಲ ವಿಚಾರಕ್ಕೆ ಕಾಳಗದ ಕಲ್ಪನೆಯು ಸುಕುಮಾರಿಯಾದ ನಿನ್ನನ್ನು ಸಮರದಲ್ಲಿ ಕಾಣುತ್ತಲೆ ಆಪತ್ಯ ಪ್ರೇಮವು

ಹೃದಯವನ್ನು ಚೂರ್ಣೀಕರಿಸಬಹುದು....... ಆದ್ದರಿಂದ......
(ಸ್ವ) ಛೇ...ಇದು ತಾನೆ ಅಸಹ್ಯವಾಗ ಹತ್ತಿತು. ಮನಸ್ಸೇ ಭದ್ರಾಃ

ಲಲಿತಾ ಪಿತಾಜೀ! ತಮ್ಮ ಅಭಿಪ್ರಾಯವು ತಿಳಿಯಿತು. ಆದರೆ (ದುಃಖಿಸುತ್ತ) ತಾತಾ! ವೀರಕುಮಾರಿಗೆ ಒಪ್ಪುವಂಥ ಮರಣವನ್ನು ನನಗೆ ಕೊಡಿ. ಆನೆಗುಂದಿಯ ರಾಜಪುತ್ರಿಗೆ ಒಪ್ಪುವಂಥಹ ಮರಣವನ್ನು ಕೊಡಿ. ಸಮರದಲ್ಲಿ ಕಾದಿ ಕಾದಿ ಕೊನೆಗೆ ಕಾಳಗದಲ್ಲಿ ಮಡಿಯಲಿಕ್ಕೆ ನನಗೆ ಆಸ್ಪದವನ್ನು ಕೊಡಿ.

ಜಂಬುಕೇಶ್ವರ : (ಸ್ವ) ಪಾಪಿಷ್ಠನಾದ ಜಂಬುಕೇಶ್ವರಾ! ನಿನ್ನ ಜೀವದ ಜೀವಾಳವನ್ನು ನೀನೇ ನಾಶಗೊಳಿಸುವೆಯಾ? ನಿನ್ನ ದಿವ್ಯ ಚಿಂತಾಮಣಿಯನ್ನು ಕಾಳ ಸಮುದ್ರದಲ್ಲಿ ಚೆಲ್ಲುವಿಯಾ? ನಿನ್ನ ವಾತ್ಸಲ್ಯದ ಸೂತ್ರದಿಂದ ಪೋಣಿಸಲ್ಪಟ್ಟಿರುವ ಕಂಠಮಣಿಯನ್ನು ಕಾಲನ ಉಡಿಯಲ್ಲಿ ನೀನೇ ಹಾಕುವೆಯಾ? ಥೂ ನಿನ್ನ ಜನ್ಮಕ್ಕೆ ಧಿಃಕ್ಕಾರ (ತಡೆದು) ಕೃತಾಂತ ಶಕ್ತಿಯೇ ನನ್ನ ಹೃದಯದಲ್ಲಿ ಸೇರಿಕೊಳ್ಳು. ವಿಶ್ವದ ಕ್ರೌರ್ಯ ಕಾಠಿಣ್ಯಗಳೇ ನನ್ನ ಹೃದಯವನ್ನು ಕಾಲನ ಹೃದಯಕ್ಕಿಂತ ಕಠಿಣವಾಗುವಂತೆ ಮಾಡಿ.

ಲಲಿತಾ ತಾತಾ! ವಿಚಾರಕ್ಕೊಳಗಾಗಿರುವಿರಿ. ತಮ್ಮ ಮಗಳ ವಿಚಾರವು ತಮಗೆ ರುಚಿಸಲಿಲ್ಲವೇ? ಈವರೆಗೆ ನನ್ನ ಯಾವತ್ತೂ ಬಯಕೆಗಳನ್ನು ಪೂರ್ಣ ಮಾಡುತ್ತಿದ್ದ ತಮ್ಮಹೃದಯವು ವಾತ್ಸಲ್ಯವನ್ನು ಹರಿದು ಹಾಕಿತೇ? ತಾತಾ! ರಣಗಂಗೆಯಲ್ಲಿ ಸಮಾಧಿಯನ್ನು ಹೊಂದಬೇಕೆಂಬ ನನ್ನ ಆಶೆಯನ್ನು ಸಫಲ ಮಾಡುವದಿಲ್ಲವೇ?

ಜಂಬುಕೇಶ್ವರ : ಇಲ್ಲ ಲಲಿತೆ ಇಲ್ಲ. ನ್ನನ ಕರಗಳಿಂದ.... (ಸ್ವ) ಮುಂದಿನ ಶಬ್ದಗಳನ್ನು ನನ್ನ ನಾಲಿಗೆಯಿಂದ ಉಚ್ಚರಿಸಲಾರೆ. ಕಂಠವು ಬಿಗಿದು ಬಂದಿರುವುದು. ದುರ್ದೈವಿಯಾದ ಜಂಬುಕೇಶ್ವರಾ! ಯಾವ ಕರಗಳಿಂದ ಈ ಕಂದಮ್ಮನನ್ನು ಎತ್ತಿ ಆಡಿಸಿರುವಿ, ಆ ಕರಗಳಿಂದ ಮುದ್ದು ಕಂದಮ್ಮನನ್ನು, ಹೊಟ್ಟೆಯ ಕರುಳನ್ನು

ಕಡಿದು ಹಾಕಬೇಕೆನ್ನುವಿಯಾ? (ತಡೆದು) ಹಾ! ಮನಸ್ಸೇ ಭದ್ರಾ! ಪ್ರಳಯ ಕಾಲದ ರುದ್ರಾ ನಿನ್ನ ಅದ್ಭುತವಾದ ಸಂಹಾರಕ ಶಕ್ತಿ ಒಂದು ಅರೆಕ್ಷಣ ಮಾತ್ರ ನನ್ನ ಹೃದಯಕ್ಕೆ ಕೊಡು (ಪ್ರಕಟ) ಲಲಿತೇ! ಜಂಬುಕೇಶ್ವರನ ರಕ್ತವು ನಿನ್ನ ರಕ್ತನಾಳಗಳಲ್ಲಿ ಹರಿಯುತ್ತಿದ್ದರೆ ಬಾಯಿಯಿಂದ ಒಂದು ಅಕ್ಷರ ಸಹ ಉಚ್ಚರಿಸದೇ ಈ ಖಡ್ಗಕ್ಕೆ ಆಹುತಿಯಾಗು. (ಲಲಿತೆಯು ಪಾದಗಳ ಮೇಲೆ ಬೀಳುವಳು) ದುಹಿತಾ ರಕ್ತದಿಂದ ರಂಜಿತವಾಗುವ ಈ ಖಡ್ಗದಿಂದ ರಿಪುಗಳ ರುಂಡವನ್ನು ಚಂಡಾಡಿ, ರಣ ಯಜ್ಞದಲ್ಲಿ ಈ ದೇಹ ಹೋಮ ಮಾಡುವೆ. ಆನೆಗುಂದಿಯ ಪುಣ್ಯಜ್ಯೋತಿಯು ನಂಮುತ್ತ ಬಂದಿರುವದು. ಆ ಮಂದ ಪ್ರಕಾಶದಲ್ಲಿಯೇ ನನ್ನ ಭಾಳಪಟಲದ ಬರಹವನ್ನು ಆನೆಗುಂದಿಯು ಓದಿಕೊಳ್ಳಲಿ. ಆ ಮಂದ ಪ್ರಕಾಶದಲ್ಲಿ ನನ್ನ ನೇತ್ರ ಪ್ರಕಾಶವು ಅಡಕವಾಗಲಿ. ನಂದ ರಾಜರ ವಂಶವೃಕ್ಷವು ಈ ದಿನ ಬೇರು ಸಹಿತವಾಗಿ ಭೂಮಿಗುರುಳುವುದು. ಲಲಿತೇ! ಮಿಥ್ಯವಾದ ಜಗತ್ತಿನ ಮೋಹವನ್ನು ಬಿಟ್ಟು ಪಂಪಾಪತಿಯ ಪಾದಾರವಿಂದದಲ್ಲಿ ಮನವನ್ನಿರಿಸು. ಅದೋ ನಿನ್ನ ಮಾತೃಶ್ರೀಯು ಸೂರ್ಯ ಮಂಡಲದಲ್ಲಿ ಹೇಗೆ ದೇದೀಪ್ಯಮಾನಳಾಗಿ ಪ್ರಕಾಶಿಸುತ್ತಿರುವಳು. ಅವಳು ನಿನ್ನನ್ನು ಕರೆದೊಯ್ಯಲು ಧಾವಿಸಿ ಬರುತ್ತಿರುವಂತೆ ಕಾಣುತ್ತದೆ. ಬೇಗನೇ ಅವಳನ್ನು ಆಲಿಂಗಿಸಲಿಕ್ಕೆ ಹೋಗು. (ಹೊಡೆಯುವಷ್ಟರಲ್ಲಿ ರೌದ್ರದಾಮ ಪ್ರವೇಶಿಸಿ)

ರೌದ್ರರಾಮ ತಡೆ ಜರಠಾ! ಲಲಿತೆಯನ್ನು ಕೊಲ್ಲುವ ಅಧಿಕಾರವು ನಿನಗಿಲ್ಲಾ. ನೀವೀರ್ವರೂ ಸುಲ್ತಾನ ಮಹಮ್ಮದ ತುಘಲ್ಖನ ಸೆರೆಯಾಳಾಗಿರುವಿರಿ.

ಜಂಬುಕೇಶ್ವರ : ನಾನು ಸೆರೆಯಾಳುವೇ? ನನ್ನ ಮಗಳಾದ ಲಲಿತೆಯು ಸೆರೆಯಾಳುವೇ? ಈ ಅಭದ್ರ ನುಡಿಗಳನ್ನು ನುಡಿಯುವವನು ನೀನಾರು?

ರೌದ್ರದಾಮ : ನಾನು ರೌದ್ರದಾಮನು. ಈವರಗೆ ಆನೆಗುಂದಿಯ ಸರ್ವಾಧಿಕಾರಿಯಾಗಿದ್ದ ರೌದ್ರದಾಮನು ಈಗ ಸುಲ್ತಾನ ಮಹಮ್ಮದ ತುಘಲಖರ ಕೃಪಾದೃಷ್ಟಿಗೆ ಪಾತ್ರನಾಗಿರವ ರೌದ್ರದಾಮನು.

ಜಂಬುಕೇಶ್ವರ : ಆನೆಗುಂದಿಯ ಅನ್ನವನ್ನುಂಡು ಕೋಣದಂತೆ ಬೆಳೆದಿರುವ ನಿನ್ನ ದೇಹವನ್ನು (ಖಡ್ಗವನ್ನೆತ್ತಿ ಹೊಡೆಯುವಷ್ಟರಲ್ಲಿ) (ಭುಜಂಗ ಸಿಪಾಯಿ ಬರುವನು)

ರೌದ್ರದಾಮ : ಒಂದೇ ಒಂದು ಶಬ್ದವನ್ನಾಡಿವರೆ ನಿನ್ನ ರುಂಡವು ಭೂಮಿಯ ಮೇಲೆ ಬೀಳುವುದು. ಎಲೋ ಬಂಧಿಸಿರಿ ಈ ಜರಠನನ್ನು.

ಲಲಿತಾ ಹಾ! ತಡೆಯಿರಿ ದ್ರೋಹಿಗಳೇ! ಪರಬ್ರಹ್ಮನ ಪ್ರತಿನಿಧಿಯಂತಿರುವ ಸ್ವಾಮಿಯ ಮೇಲೆ ಕೈಯತ್ತುವ ಮೂರ್ಖರೇ! ಕರ್ಮ ಚಂಡಾಲರೇ! ನಿಮ್ಮೆಲ್ಲರ ಶಿರಗಳನ್ನು ತರಿದು ಸ್ವಾಮಿ ದ್ರೋಹಿಗಳಿಗೆ ದೊರೆಯುವ ಶಿಕ್ಷೆಯ ಚಿತ್ರವನ್ನು ಆನೆಗುಂದಿಯ ಮುಂದೆ ಇಡುವೆನು.

ರೌದ್ರದಾಮ : ಅಧಿಕಾರ ವಿಹೀನವಾದ ವಾಣಿಯಲ್ಲಿ ವರ್ಚಸ್ಸು ಉಳಿದಿರುವದಿಲ್ಲ. ಕಲ್ಲೊಳಗಿನ ಕಪ್ಪೆಯ ಧ್ವನಿಗೆ ಶಿಶು ಸಹ ಹೆದರಲಾರವು. ಎಲೋ ಬಂಧಿಸಿರಿ ಅರವತ್ತು ವರುಷಗಳ ಭಾರವನ್ನು ಹೊತ್ತು ಅರಿವುಗೆಟ್ಟಿರುವ ಈ ಅರೆ ಹುಚ್ಚನನ್ನು ಬಂಧಿಸಿರಿ.

ಲಲಿತ ರಾಜ ದ್ರೋಹ ಮಾಡಿರುವ ನಿನ್ನ ಕರಗಳು ಕಳಚಿ ಬೀಳಲಿ.

ರೌದ್ರದಾಮ : ಬೇಡಾ! ನನ್ನ ಕರವನ್ನು ನಿಂದಿಸಬೇಡಾ. ನಿನ್ನ ಪಾಣಿಗ್ರಹಣದ ಮಂಗಲಮಯ ಯೋಗವನ್ನು ನಿನ್ನ ಮುದಿ ತಂದೆಯು ಈ ಕರಕ್ಕೆ ಒದಗಿಸಿಕೊಟ್ಟಿದ್ದರೆ. ಈ ಕರದಿಂದ ಅನ್ಯಾಯ-ವಾಗುತಿದ್ದಿಲ್ಲ.

ಜಂಬುಕೇಶ್ವರ : ಥೂ ಚಾಂಡಾಲಾ! ನಿನ್ನ ಹೃದಯವು ವಿಷದ ಕುಂಡವಾಗಿರುವರು. ನಿನ್ನಂತಹ ಚಾಂಡಾಲಾ.

ರೌದ್ರದಾಮ : ಜರಠಾ! ತುತ್ತೂರಿಯ ಸಪ್ಪಳದಿಂದ ಭಯಬರಬಹುದೇ? ಶಬ್ದಗಳ ಕಡಕಡಾಟಕ್ಕೆ ಭೀರುವು ಕೂಡ ಬೆದರಲಾರಳು. ಮುದಿ ಹದ್ದೆ! ಶೌರ್ಯ ಸಂಪನ್ನನಾದ ನನಗೆ ಲಲಿತೆಯನ್ನು ಕೊಟ್ಟು ವಿವಾಹ ಮಾಡಿದ್ದರೆ ಸುಖವಾಗಿ ಇರುತ್ತಿದ್ದಿಯಲ್ಲಾ ಶಿವಶಿವಾ ಎನ್ನುತ್ತ ಶೇಷಾಯುಷ್ಯವನ್ನು ಈಶ ಚಿಂತನೆಯಲ್ಲಿ ಕಳೆಯಲಿಕ್ಕೆ ನಿನಗೆ ಆಸ್ಪದವಾಗುತ್ತಿದ್ದಿಲ್ಲವೇ? ಮಂದಭಾಗ್ಯನೆ! ನಿನ್ನ ಹಾಗೂ ನಿನ್ನ ಮಗಳ ಜೀವಿತ ನಾಟಕದ ಭರತವಾಕ್ಯವನ್ನು ಹೇಳುವುದು ನನ್ನದಾಗಿರುವುದು. (ಹುಕ್ಕ ಬರುವನು)

ಹುಕ್ಕ ಭರತವಾಕ್ಯವೇತರದು?

ರೌದ್ರದಾಮ : ನಿಮ್ಮೆಲ್ಲರ ಜೀವಿತ ನಾಟಕದ ಭರತವಾಕ್ಯವನ್ನು ಹೇಳುವದು ನನ್ನದಾಗಿರುವದು.

ಹುಕ್ಕ ಚಾಂಡಾಲಾ! ನಿನ್ನ, ನನ್ನ ಹಾಗೂ ಯಾವತ್ತೂ ಮಾನವ ಪ್ರಪಂಚದ ಜೀವಿತ ನಾಟಕದ ಭರತ ವಾಕ್ಯವನ್ನು ಹೇಳುವದು ಕಾಲರೂಪಿ ಪರಮಾತ್ಮನ ಕಡೆಗಿರುವುದು.

ರೌದ್ರದಾಮ : ಪರಮಾತ್ಮಾ! ಪರಮಾತ್ಮನಂತೆ! ನಾನೇ ಆ ಪರಮಾತ್ಮಾ! ಎಲೋ! ನೋಡುವಿರೇನು ಈ ತುಂಟನ ಕಂಠನಾಳವನ್ನು ಕಡಿದು ಚಲ್ಲಿರಿ. (ಖಡ್ಗ ಎತ್ತುವನು)

ಹುಕ್ಕ ನನ್ನ ಕಂಠವನ್ನು ಕಡಿಯುವಂಥವನನ್ನು ಅದಾವ ಜನನಿಯು ಹೆತ್ತಿರುವಳು?

ರೌದ್ರದಾಮ ಕೃತಾಂತ ಸ್ವರೂಪನಾದ ರೌದ್ರದಾಮನು ಜನಿಹೊಂದಿ ಬಂದಿರುವನು ಈ ಕ್ಷಾತ್ರ ಕುಲೋದ್ಭವನು.

ಹುಕ್ಕ ಕ್ಷತ್ರಿಯನೆಂದು ಬೊಗಳಿಕೊಳ್ಳುವಿಯಾ. ನೀನು ಕ್ಷತ್ರಿಯನೇ..... ಮಿತ್ರ ದ್ರೋಹವನ್ನು ಮಾಡಿರುವವನು ಕ್ಷತ್ರಿಯನೇ? ರಾಜದ್ರೋಹ ಮಾಡಿರುವವನು ಕ್ಷತ್ರಿಯನೇ? ಕನ್ನಡ ರಾಜ್ಯದ

ಕಿಲ್ಲೆಯನ್ನು ವೈರಿಗಳ ವಶಕ್ಕೆ ಕೊಟ್ಟಿರುವವನು ಕ್ಷತ್ರಿಯನೇ? ಕನ್ನಡ ನಾಡನ್ನು ಪಾರತಂತ್ರವೆಂಬ ಲೋಹ ಸರಪಳಿಯಿಂದ ಬಿಗಿದು ಕಟ್ಟಲು ಸಿದ್ಧನಾಗಿರುವ ಮಾನವ ರೂಪೀ ಪಿಶಾಚಿಯು ಕ್ಷತ್ರಿಯನೇ? ಅಲ್ಲ ನೀನು ಕ್ಷತ್ರಿಯನಲ್ಲ. ಕ್ಷಾತ್ರ ಕುಲಕ್ಕೆ ಕಪ್ಪನ್ನು ಹಚ್ಚಿದ ಚಾಂಡಾಲನು.

ರೌದ್ರದಾಮ : ಉರಿಯುತ್ತಲಿದೆ. ಅಂಗುಷ್ಟದಿಂದ ನೆತ್ತಿಯವರೆಗ ಒಂದೇ ಸಮನೇ ಉರಿಯುತ್ತಲಿದೆ. ಎಲೋ ನೋಡುವಿರೇನು! ಇವನ ರಕ್ತದಲ್ಲಿ ಸ್ನಾನ ಮಾಡಿ ಹೊಟ್ಟೆಯಲ್ಲಿದ್ದ ಉರಿಯನ್ನು ಸಂದಿಸಿಕೊಳ್ಳುವೆ. (ಕಾದುವರು)

ಹುಕ್ಕ (ರೌದ್ರದಾಮನನ್ನು ಕೆಡವಿ) ನೀಚಾ! ನಿನ್ನ ಹೊಟ್ಟೆಯನ್ನು ಹರಿದು ಕರುಳುಗಳನ್ನು ಕೊರಳಲ್ಲಿ ಹಾಕಿಕೊಂಡು ನೃಸಿಂಹ ಗರ್ಜನೆ ಮಾಡುತ್ತ (ಗೌರಾಂಬಿಕಾ ಬರುವಳು)

ಗೌರಾಂಬಿಕ ದಯಾಸಾಗರಾ! ದೀನಳ ದೀನವಾದ ನುಡಿಗಳನ್ನು ಕೇಳಿ! ಮಹಾರಾಜ! ನನ್ನ ಅಣ್ಣನಿಗೆ ಪ್ರಾಣದಾನ ಮಾಡಿರಿ. ಸೆರಗೊಡ್ಡಿ ಬೇಡಿಕೊಳ್ಳುವೆ. ಶರಣಾಗತಳಿಗೆ ಕರುಣೆಯ ನೀರನ್ನು ಹಾಕಿರಿ.

ಹುಕ್ಕ (ಸ್ವ) ಕಾಲಕೂಟನ ತಂಗಿಯಾಗಿ ಸುಧೆಯು ಕ್ಷೀರಸಾಗರ ದಿಂದುಸಿದಂತೆ ಈ ಸದ್ಗುಣೆಯು ಇವನ ಸಹೋದರಿಯಾಗಿರುವಳು.

ಗೌರಾಂಬಿಕಾ : ಮಹಾರಾಜಾ! ವಿಚಾರವೇಕೆ?

ಹುಕ್ಕ ಈ ಸುಶೀಲೆಯು ನಿನ್ನ ಸಹೋದರಿಯಾಗಿರುವದರಿಂದಲೇ ನಿನ್ನ ಆಯುಷ್ಯ ಕುಂಭವು ಇನ್ನೂ ಗಟ್ಟಿಯಾಗಿರುವುದೆಂದು ತಿಳಿ. ನಡೆಯಿರಿ. ರಣದಲ್ಲಿ ರಿಪುಗಳ ರುಂಡದಿಂದ ಮಾಲೆಯನ್ನು ರಚಿಸಿ ಕಾಲಭೈರವನ ಕೊರಳಲ್ಲಿ ಹಾಕುವಾ ನಡೆಯಿರಿ. ಜೈ ಭುವನೇಶ್ವರಿ ಮಾತಾಕೀ ಜೈ.

೭ನೇ ಪ್ರವೇಶ

ಸ್ಥಳ: ರಣಭೂಮಿಯ ಮುಂಭಾಗ.

ಕರಾಳ — (ಹಾಡುತ್ತ) ಸಾಕಪ್ಪಾ ಸಾಕಪ್ಪಾ ಈ ದಂಡನಾಯಕತ್ವ। ಬೇಕಪ್ಪ ಬೇಕಪ್ಪ ಸುಖ ಜೀವಪ್ಪಾ। ಜೀವದಿಂದುಳಿದು ಬಂದೆ ನಾನಪ್ಪಾ। ಜೀವವಿದ್ದರೆ ಮುಂದೆ ಕಾಂಬೆ ಸೌಖ್ಯವಪ್ಪಾ। ಸುಮ್ಮ ಸುಮ್ಮನೆ ಯುದ್ಧ ಮಾಡಿ ಸಾವುದೇಕಪ್ಪಾ। ಬೊಮ್ಮ ಕೊಟ್ಟದೇಹ ಬಿಡುವುದೇಕಪ್ಪಾ॥

ಅಬ್ಬಬ್ಬಾ ಉಬ್ಬುಬ್ಬಿನಿಂದ ದಂಡನಾಯಕನಾದೆ. ಈಗ ಅದೇ ನನ್ನ ಪ್ರಾಣ ತಕ್ಕೊಳ್ಳಲಿಕ್ಕೆ ಹೊಂಚು ಹಾಕಿದೆ. ಸುಟ್ಟು ಹೋಗಲಿ ಯುದ್ಧವು. ಮನುಷ್ಯಕುಲ ಸಂಹಾರ ಮಾಡುವ ಈ ರಾಕ್ಷಸೀ ಕಲೆಯನ್ನು ಕ್ಷತ್ರಿಯರು ಯಾರಿಂದ ಕಲಿತು ಕೊಂಡರು. ಛೆ.....ಛೆ...... ಜನ್ಮ ಇರುವವರೆಗೆ ನನಗೆ ಯುದ್ಧ ಮಾಡುವದೇ ಬೇಡಾ. ಎಂಥ ಅಮಾನುಶ ಕೊಲೆ ಪಂಪಾಪತೇ ...... ನನ್ನ ಜೀವಕ್ಕೆ ಧಕ್ಕೆಯನ್ನು ಮಾಡಬೇಡಾ (ಸಾಷ್ಟಾಂಗ ನಮಾಸ್ಕಾರ ಹಾಕುವನು)

ಶಿವಾಂಗಿ — ದಂಡನಾಯಕರು ದಿಂಡುರುಳಿ ಹಾಕುವದೇತಕ್ಕೆ? ದಿಂಡುರುಳಿ ಹಾಕಲಿಕ್ಕೆ ಗಂಡುಗಲಿಗೇನಾಗಿದೆ. ರಣವನ್ನು ಬಿಟ್ಟು ಬಂದು ಹೆಣದಂತೆ ಬಿದ್ದಿರುವಿರೇಕೆ?

ಕರಾಳ — ಹೆಣವಾಗುವ ಪ್ರಸಂಗವೇ ಬರುತ್ತಿತ್ತು? ಶಿವಾಂಗಿ ಎಂಥ ಯುದ್ಧಾ ಅದು. ಪ್ರತಿಯೊಬ್ಬರೂ ಜೀವದ ಹಂಗು ತೊರೆದು ಕಾದಾಡುತ್ತಿದ್ದರು. ಥೂ ಅವರ ಮನಿ ಹಾಳಾಗ ಶಿವಾಂಗೀ! ಏನ ಅವರ ಅಬ್ಬರಾ! ಅಬ್ಬಾ! ಟಗರುಗಳು ಕೂಡ ಇಷ್ಟು ಸಿಟ್ಟಿಗೆದ್ದು ಕಾದಾಡುವುದಿಲ್ಲ.

ಶಿವಾಂಗಿ — ಕರಾಳಾ! ಅವ್ವಾಳಿಯಾದ ನೀನು ದಂಡನಾಯಕವೇತಕೆ ಆಗಿರುವಿ.

ಕರಾಳ : ಆಗಿರುವೆ ಮಣ್ಣು ಮುಕ್ಕಲಿಕ್ಕೆ. ಇಷ್ಟು ಬೇಗನೇ ಯುದ್ಧದ ಪ್ರಸಂಗವು ಬರುವುದೆಂಬುದರ ಕಲ್ಪನೆಯು ಈ ಮೊದಲೇ ತಿಳಿದಿದ್ದರೆ ನಾನೆಂದೂ ಈ ದಂಡನಾಯಕತ್ವದ ಕೆಂಡವನ್ನು ಪದರಿನಲ್ಲಿ ಕಟ್ಟಿ ಕೊಳ್ಳುತ್ತಿದ್ದಿಲ್ಲ. ಶಿವಾಂಗೀ! ಲೆಕ್ಕಣಿಕೆ - ಬಹಾದ್ದೂರನಾದ ನನ್ನ ಕೈಯಲ್ಲಿ ಖಡ್ಗವನ್ನು ಕೊಡಲಿಕ್ಕೆ ರೌದ್ರದಾಮರಿಗಾದರೂ ತಿಳಿಯ ಬಾರದಾಗಿತ್ತೇ? ಇನ್ನು ಮುಂದೆ ಖಡ್ಗಕ್ಕೆ ಶರಣು ಹೊಡೆದು ಲೆಕ್ಕಣಿಕೆ ಹಿಡಿಯುವೆ.

ಮರಾಳ : ರಣಹೇಡಿಯೇ........! ರಣರಂಗವನ್ನು ಬಿಟ್ಟು ಇಲ್ಲಿಗೇಕೆ ಬಂದಿರುವಿ?

ಕರಾಳ : ಶಿವಾಂಗಿಯ ಸುಂದರ ಮುಖವನ್ನು ಇನ್ನೊಮ್ಮೆ ನೋಡಬೇಕೆಂದು ಬಂದೆ.

ಮರಾಳ : ಭಯಂಕರವಾದ ಯುದ್ಧನಡೆದಾಗ ಪುರದಲ್ಲಿ ಸೇರಿಕೊಳ್ಳುವುದು ಭೀರುಗಳ ಕೆಲಸ. ಥೂ ನಿನ್ನ ಮನೆಹಾಳಾಗಾ. ಹೆಣ್ಣಾಗಿ ಹುಟ್ಟಬಾರದಾಗಿತ್ತೇ! ಹೆಣ್ಣಾಗಿ ಹುಟ್ಟಿದ್ದಿ ಅಂದರೆ ಹನ್ನೆರಡು ಮಕ್ಕಳ ತಾಯಿಯಾಗುತ್ತಿದ್ದಿ.

ಕರಾಳ : ನನಗೆ ಹೇಳಲಿಕ್ಕೆ ನೀನಾರು ಹುಚ್ಚ ನನ್ನ ಮಗನೇ! ನೀನೇಕೆ ತಲೆ ತಪ್ಪಿಸಿಕೊಂಡು ಬಂದಿರುವಿ?

ಮರಾಳ : ನಿನ್ನೊಡನೆ ವಾದಿಸಲಿಕ್ಕೆ ನನಗೀಗ ವೇಳೆಯಿಲ್ಲಾ. ಹುಕ್ಕನಾಯಕರ ಆಜ್ಞಾನುಸಾರ ಅರಮನೆಯ ಕಾಯಲಿಕ್ಕೆ ಹೋಗುವೆ.

ಶಿವಾಂಗಿ : ಕರಾಳಾ! ಕಾಳಗಕ್ಕೆ ಹೋಗಿ ಕಲಿತನದಿಂದ ಕಾದಾಡು.

ಕರಾಳ : ಅದೊಂದು ಬಿಟ್ಟು ಮಾತಾಡು (ತೆರೆಯಲ್ಲಿ ಅಲ್ಲಾ ಹೋ ಅಕ್ಬರ ಕಹಳೆ ಧ್ವನಿ)

ಶಿವಾಂಗಿ : ಭುವನೇಶ್ವರಿ ಮಾತೆಯೇ ಆನೆಗುಂದಿಯ ಮೇಲೆ ಅವಕೃಪೆ ಮಾಡಿರುವಳು ಛೆ! ಛೆ! ಭಗವಾನರು ಪದೇ ಪದೇ ಅನ್ನುತ್ತಿರುವ

ಮಾತೇ ನಿಜವಾದದ್ದು. ಅರಮನೆಗೆ ಹೋಗಿ ಲಲಿತಾದೇವಿಯರನ್ನು ಕಾಣುವ.

ಕರಾಳ ಏ ಶಿವಾಂಗೀ! ನನ್ನನ್ನು ಬಿಟ್ಟು ಹೋಗಬೇಡಾ..... (ಹೋಗುವನು)

(ತೆರೆ ಬೀಳುವುದು)

೭ನೇ ಪ್ರವೇಶ

ಸ್ಥಳ: ರಣಭೂಮಿ. ಸಮಯ: ಮಧ್ಯರಾತ್ರಿ

ಲಲಿತಾ ಎಂಥ ಭಯಂಕರವಾದ ಕಾಳರಾತ್ರಿಯಿದು. ಆನೆಗುಂದಿಯ ವೈಭವ ಸೂರ್ಯನು ಅಸ್ತಂಗತನಾದನು. ಆನೆಗುಂದಿಯ ರಾಜಕುಲಾಂಬುಧಿಯು ಬತ್ತಿಹೋಯಿತು. ನಂದರಾಜರ ಕೀರ್ತಿ ವೃಕ್ಷವು ಕಿತ್ತುಬಿದ್ದಿತು. ಆನೆಗುಂದಿಯ ರಾಜಲಕ್ಷ್ಮಿಯು ಪರರಾಜರ ಛತ್ರ ಛಾಯೆಯಲ್ಲಿ ಕುಳಿತಳು, ದೇವ ಪಂಪಾಪತೆ.....

ಎಷ್ಟು ಪರಿಯಾಗಿ ಶೋಧಿಸಿದರೂ ಪಿತಾಜಿಯ ಮೃತದೇಹವು ಕಣ್ಣಿಗೆ ಬೀಳಲೊಲ್ಲದು. (ಅತ್ತಿತ್ತ ನೋಡಿ) ಪಿತಾಜೀ! ತಾತಾ..... ತಾತಾ ನನ್ನೊಡನೆ ಮಾತನಾಡುವದಿಲ್ಲವೇ? ನಾನು ನಿನ್ನ ಮೋಹದ ಮಗಳಲ್ಲವೇ? ಪಿತಾಜಿ! ಈ ಜಗತ್ತಿನಲ್ಲಿ ನನ್ನನ್ನೆ ನಿರಾಧಾರಳನ್ನಾಗಿ ಮಾಡಿದೆಯಾ? ತಾತಾ ಎಂದು ನಾನು ಯಾರನ್ನು ಕರೆಯಲಿ? ಯಾರ ಮುಖವನ್ನು ನೋಡಿಕಾಲ ಕಳೆಯಲಿ?

ಜಂಬುಕೇಶ್ವರ : ಮಗು! ಲಲಿತೆ! ದುಃಖಿಸಬೇಡಮ್ಮಾ! ನಾನು ಆಡಿದ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಬಾಲೇ! ಯಾವನಾದರೊಬ್ಬ ದುಷ್ಟನ ಬಲಾತ್ಕಾರಕ್ಕೆ ನೀನು

ಬಲಿಯಾಗಬಾರದೆಂದು ಭಾವಿಸಿ ನಿನ್ನನ್ನು ಕೊಂದು ನಾನು ಪರಲೋಕದ ಹಾದಿಯನ್ನು ಹಿಡಿಯಬೇಕೆಂದು ಮಾಡಿದ್ದೆ. ಆದರೆ ಈಶನ ಇಚ್ಛೆಯು ಹಾಗಿಲ್ಲ. ಕಂದಮ್ಮಾ! ಎಂಥ ಪ್ರಸಂಗ ಬಂದಾಗ್ಯೂ ಧೈರ್ಯಗುಂದದೆ ನನ್ನ ಕುಲದ ಕೀರ್ತಿಯನ್ನು ಕಾಯ್ದು ಕೊಳ್ಳು. ಹುಕ್ಕನ ಅರ್ಧಾಂಗಿಯಾಗಿ ಸುಖದಿಂದ..... ಅಮ್ಮಾ ..... ಬಹು ಆಯಾಸವಾಯಿತು. ಆಯಿತು..... ಹುಕ್ಕನ ಮುಖವನ್ನಷ್ಟು..... ಪಂಪಪತೇ..... (ಸ್ಥಬ್ಧನಾಗುವನು)

ಲಲಿತಾ ಪಿತಾಜೀ.... ಪಿತಾಜೀ..... (ಬೀಳುವಳು)

ಕರಾಳ (ಪ್ರವೇಶಿಸಿ) ಇದೋ ನೋಡಿ ರಾಜಕುಮಾರಿಯು ಇಲ್ಲೇ ಇರುವಳು.

ರೌದ್ರದಾಮ : ಲಲಿತೇ! ಶವವನ್ನು ಬಿಟ್ಟು ಇತ್ತ ಕಡೆಗೆ ಬಾ. ಪ್ರೇತದ ಮೇಲೆ ಬಿದ್ದು ರೋಧಿಸುತ್ತ ಕುಳಿತರೆ ಆಗುವುದೇನು....? ನಿನ್ನ ಸ್ಮಶಾನ ರೋದನವನ್ನು ಕೇಳಿ ನಿನ್ನ ತಂದೆಯ ಜೀವವು ತಿರುಗಿ ಬರಬಹುದೇ.....?

ಲಲಿತಾ ಪಾಪಾತ್ಮಾ! ನೀನೇಕೆ ಕೈ ತೊಳೆದುಕೊಂಡು ಬೆನ್ನು ಹತ್ತಿರುವಿ. ಎಷ್ಟು ಜನ್ಮಗಳ ವೈರವನ್ನು ಸಾಧಿಸುತ್ತಿರುವಿ.

ರೌದ್ರದಾಮ : ಲಲಿತೇ! ಇಷ್ಟೆಲ್ಲ ಅನಾಹುತಕ್ಕೆ ನೀನೇ ಕಾರಣೆಭೂತಳು. ಆನೆಗುಂದಿಯ ರಾಜ್ಯ ವಿನಾಶಕ್ಕೆ ನೀನೇ ಕಾರಣಳು. ಏಳು, ನನ್ನೊಡನೆ ಸುಮ್ಮನೆ ಬರೆದಿದ್ದರೆ ಕಾಲುಗಳನ್ನು ಕಟ್ಟಿ......

ಕರಾಳ ಸುಮ್ಮನೆ ಹಿಂಸೆಗೊಳಗಾಗಬೇಡ.

ರೌದ್ರದಾಮ : ಲಲಿತೇ! ಸುಂದರವಾದ ನಿನ್ನ ಮೂರ್ತಿಯ ಪ್ರಾಪ್ತಿಗಾಗಿ ಬೇಕಾದ ಅನರ್ಥಗಳನ್ನು ನಿರ್ಮಿಸಲು ಹಿಂದು ಮುಂದು ನೋಡುವದಿಲ್ಲ. ಹಟತೊಟ್ಟು ನನ್ನ ಸಿಟ್ಟನ್ನು ಹೊತ್ತಿಸಬೇಡ. ಲಲಿತೇ ನಿನ್ನ ದೆಶೆಯಿಂದ ನಾನು ನಿರ್ಮಿಸಿದ ಕಾರಸ್ಥಾನದ

ವಿಷಯವಾಯುವು ಕರ್ನಾಟಕದ ವಾತಾವರಣವ ತುಂಬೆಲ್ಲ ಹರಡಲ್ಪಟ್ಟಿರುವುದು.

ಲಲಿತಾ ಎಷ್ಟು ಕಾರಸ್ಥಾನವನ್ನು ನಿರ್ಮಿಸಿದಾಗ್ಯು ನಿನ್ನ ಮನದಾಸೆಯು ಕೊನೆಗಾಣಲಾರದು.

ರೌದ್ರದಾಮ : ನಿನ್ನ ಹಟವು ಎಲ್ಲಿಯವರಗೆ ಸಾಗುವುದು?

ಲಲಿತಾ ಈ ದೇಹದಲ್ಲಿ ಪ್ರಾಣವಾಯುವು ಸಂಚರಿಸುವವರೆಗೂ.....

ರೌದ್ರದಾಮ : ಪ್ರಾಣವಾಯುವು ಎಲ್ಲಿಯವರೆಗೆ ಸಂಚರಿಸುವುದು?

ಲಲಿತಾ ಈ ದೇಹದ ಪಾವಿತ್ರತೆಯು ದೂರಾಗುವವರೆಗೆ.

ರೌದ್ರದಾಮ : ಹೀಗೋ..... (ಹೋಗುವನು)

ಲಲಿತಾ ತಡೆ ನರಾಧಮ. ನೀನು ಒಂದೇ ಒಂದು ಹೆಜ್ಜೆಯನ್ನು ಮುಂದಿಟ್ಟಿದ್ದಾದರೆ ಕ್ಷಣದಲ್ಲಿಯೇ ನಿನ್ನ ಪ್ರಾಣವು ದೇಹವನ್ನು ದೂಡಿ ಬಿಡುವುದು. (ಝುಂಬೆ ಓರಿಯುವಳು. ಕರಾಳ ಕಸಿದುಕೊಳ್ಳುವನು) ಪಿಶಾಚೀ..........

ರೌದ್ರದಾಮ : ನಾನು ಪಿಶಾಚಿ ನಿಜ. ಪಿಜಶಾಚಿಗಳ ಭೂಮಿಯಲ್ಲಿ ನಿಂತಿರುವೆನಾದ್ದರಿಂದ ಪೈಶಾಚಿಕ ಶೃಂಗಾರವು ಹೃದಯದಲ್ಲಿ ಉದಯವಾಗಿದೆ. ನಾನು ನಿನ್ನ ಸುಂದರವಾದ ಕಪೋಲಗಳನ್ನು ಚುಂಬಿಸುವಾಗಲೇ ನಿನ್ನ ಪ್ರಾಣ ಹೋದರೆ ತತಕ್ಷಣದಲ್ಲಿ ನಿನ್ನ ಅಧರಗಳನ್ನು ಕಡಿದು ಹೊರಸೂಸುವ ರಕ್ತವನ್ನು ಅಧರಾಮೃತವೆಂದು ತಿಳಿದು ಯಥೇಚ್ಛವಾಗಿ ರಕ್ತಪಾನ ಮಾಡುವೆ. ರಕ್ತರಂಜಿತವಾದ ನಿನ್ನ ಅಧರಗಳು ಪೈಶಾಚಿಕ ಶೃಂಗಾರದ ಪರಿಚಯವನ್ನು ಜಗತ್ತಿಗೆ ಮಾಡಿಕೊಡುವವು. (ಮೈಮೇಲೆ ಹೋಗುವನು)

ಲಲಿತಾ ಸರಿ ಚಾಂಡಾಲಾ! ಪರಸ್ತ್ರೀ ಮೇಲೆ ಬಲಾತ್ಕಾರ ಮಾಡುವ ನರರಾಕ್ಷಸಾ! ನಿನ್ನ ಕುಲವೃಕ್ಷವು ಕಮರಿ ಹೋಗುವುದು.

ಧರಣಿಯದು ಭಂಗವಾಗಿ ರಸಾತಲಕ್ಕೆ ಇಳಿಯುವಿ. ಪಂಚಮಹಾಭೂತಗಳ ಮೇಲೆ ದರ್ಪವನ್ನು ನಡೆಸುತ್ತಿದ್ದ ದಶಕಂಠನ ಸ್ಥಿತಿಯನ್ನು ನೆನಪಿಸಿಕೊಳ್ಳು ಕಾಮಿಯಾದ ಕೀಚಕನ ಗತಿ ಏನಾಯಿತೆಂಬುದನ್ನು.

ರೌದ್ರದಾಮ : ಸಾಕು ಮಾಡು ಪುರಾಣದ ಮಾತನ್ನು. ಪುರಾಣದ ಮಾತು ಪುರಾಣದಲ್ಲಿ. ವ್ಯವಹಾರದಲ್ಲಿ ಅವುಗಳಿಗೆ ಆಸ್ಪದವಿಲ್ಲ. ಸ್ಮಶಾನ ಕೂಗಾಟವನ್ನು ಕೇಳಿ ಅದಾವನು ಧಾವಿಸಿ ಬರುವನು ಲಲಿತೇ... (ತುರುಬು ಹಿಡಿಯುವನು)

ಜಂಬುಕೇಶ್ವರ : ಬಿಡು ನನ್ನ ಲಲಿತೆಯನ್ನು (ಎಂದು ಒದೆಯ ಹೋಗಿ ಬೀಳುವನು)

ಕರಾಳ ಪ್ರಧಾನಜೀ! ಹೆಣ್ಣೂ ರಿಣೂವೆದ್ದಿತು. ಹೂಂ ಗಚ್ಛಾ (ರೌದ್ರರಾಮನು ಲಲಿತೆಯನ್ನು ಎಳೆದುಕೊಂದು ಹೋಗುವನು) (ಹುಕ್ಕಾ, ಮಾಧವಾಚಾರ್ಯರು ಬರುವರು)

ಹುಕ್ಕ ಗುರು ಮಹಾರಾಜ! ಆನೆಗುಂದಿಯ ದೈವ ಪ್ರವಾಹವು ಕಲಂಕಿತವಾಗಿ ಹರಿಯಲಾರಂಭಿಸಿತು.

ಮಾಧವ ನರವೀರಾ! ವರ್ಷಾಕಾಲದಲ್ಲಿಯ ಮಲಿನವಾದ ಪ್ರವಾಹವು ಶರತ್ಕಾಲದಲ್ಲಿ ನಿರ್ಮಲವಾಗಿ ಪ್ರವಹಿಸುವಂತೆ ಆನೆಗುಂದಿಯ ದೈವ ಪ್ರವಾಹವು ಸ್ವಾತಂತ್ರ, ಸೌಭಾಗ್ಯವೆಂಬ ಸ್ವಚ್ಛೋದಕದಿಂದ ತುಂಬಿ, ಕರ್ನಾಟಕದ ಮೇರೆಯನ್ನು ಸುತ್ತುತ್ತ ಪ್ರವಹಿಸುವುದು. ಆನೆಗುಂದಿಯಲ್ಲಿ ಸ್ವಾತಂತ್ರತೆಯ ಸೆಲೆಯು ಹೊರಟು ಗಂಭೀರವಾದ ಪ್ರವಾಹವಾಗಿ ಹರಿಯುತ್ತ ಕನ್ನಡ ನಾಡನ್ನು ಪವಿತ್ರಗೊಳಿಸುವುದು. ಆ ಪುಣ್ಯಯೋಗವು ಸ್ವಲ್ಪ ದಿನಗಳಲ್ಲಿ ಕೂಡಿಬರುವುದು ಇರಲಿ. ಜಂಬುಕೇಶ್ವರರ ದೇಹವನ್ನು ಚೆನ್ನಾಗಿ ಶೋಧಿಸಿ.

ಹುಕ್ಕ   ಅಹಹಾ! ಗುರುಮಹಾರಾಜಾ! ಇತ್ತ ನೋಡಿ. ಆನೆಗುಂದಿಯ ವೈಭವದ ಮೂರ್ತಿಯು ರಣಮಂಚದ ಮೇಲೆ ಶಯನ ಮಾಡಿರುವುದು.

ಜಂಬುಕೇಶ್ವರ : ಲಲಿತೆ!

ಹುಕ್ಕ   ಅಹಹಾ! ಮಹಾರಾಜರ ದೇಹ ಮಂದಿರದಲ್ಲಿ ಜೀವಜ್ಯೋತಿಯು ಮಂದವಾಗಿ ಪ್ರಕಾಶಿಸುತ್ತಿರುವುದು. ಮಹಾರಾಜ! (ತೊಡೆಯ ಮೇಲೆ ಹಾಕಿಕೊಂಡು)

ಜಂಬುಕೇಶ್ವರ : ಯಾರು.... ಹುಕ್ಕಸರದಾರ?

ಹುಕ್ಕ   ಅಹುದು ಮಹಾರಾಜ.

ಜಂಬುಕೇಶ್ವರ : ಮಹಾತ್ಮಾ ಮಾಧವಾರ್ಯರು.

ಮಾಧವ   ರಾಜನ್! ಮಾಧವನು ಇಲ್ಲೇ ಇರುವನು.

ಜಂಬುಕೇಶ್ವರ : ಮಹಾತ್ಮಾ ಕೊನೆಯ ದರ್ಶನ (ಮಾಧವನು ಮೈಮೇಲೆ ಕೈಯಾಡಿಸುವನು) ಲಲಿತೆಯನ್ನು ರೌದ್ರದಾಮನು ಬಂಧಿಸಿ ಕೊಂಡು ಹೋದನು. ಅವಳ ರಕ್ಷಣೆಯನ್ನು...........

ಮಾಧವ   ರಾಜಾ! ನೀನೇನೂ ಚಿಂತಿಸಬೇಡ. ಈಶನನ್ನು ನೆನೆಯುತ್ತ......

ಜಂಬುಕೇಶ್ವರ : ಹುಕ್ಕರಾಯಾ! ಲಲಿತಾ ನಿನ್ನ ಅರ್ಧಾಂಗಿ. ಇದೋ....ಈ ಖಡ್ಗವನ್ನು ತೆಗೆದುಕೋ,ಆನೆಗುಂದಿಯ ಅಭಿಮಾನಾ.... ಮಹಾತ್ಮಾ... ಆಜ್ಞಾ..... ಪಂ... ಪಾ... ಪ... ತೆ. (ಸಾಯುವನು)

ಮಾಧವ   ಜಯ ಪಂಪಾಪತೆ ಆನೆಗುಂದಿಯ ಕ್ಷಾತ್ರಜ್ಯೋತಿಯು ಪರಂಜ್ಯೋತಿಯಲ್ಲಿ ಲೀನವಾಯಿತು. ರಾಜಾ ಜಂಬುಕೇಶ್ವರನ ಆತ್ಮಕ್ಕೆ ಪಂಪಾಪತೇ ಸ್ಥಿರ ಶಾಂತಿಯನ್ನು ಕೊಡು.

(೨ನೇ ಅಂಕ ಸಮಾಪ್ತ)

೩ನೇ ಅಂಕ
೧ನೇ ಪ್ರವೇಶ

ಸ್ಥಳ: ಉಪವನ: ಸಮಯ: ಪ್ರಾತಃಕಾಲ

ಹುಕ್ಕ (ಖಡ್ಗಧಾರಿಯಾಗಿ) ಖಡ್ಗವೇ! ರಾಜಾ ಜಂಬುಕೇಶ್ವರನ ಕ್ಷಾತ್ರ ತೇಜದಿಂದ ಪ್ರಕಾಶಿಸುವ ಖಡ್ಗವೇ, ಜಂಬುಕೇಶ್ವರನ ಪುತ್ರಿಕಾರತ್ನವು ಸೆಳೆಯಲ್ಪಟ್ಟು ಕಾರಸ್ಥಾನದ ಕುಂಡದಲ್ಲಿ ಇರಿಸಲ್ಪಟ್ಟಿದೆ. ಕಾರಸ್ಥಾನದ ಕರಂಡಕವನ್ನು ಒಡೆದು ಆದಿವ್ಯ ರತ್ನವನ್ನು ಸಂಪಾದಿಸುವುದಿದೇ ಖಡ್ಗ.

ಇದೇ. ಇದೇ ಖಡ್ಗ ರಾಜಾಜಂಬುಕೇಶ್ವರನಿಗೆ ವಚನಕೊಟ್ಟ ಖಡ್ಗವೇ ಇದು. ದೇಶ ದ್ರೋಹಿಗಳ ದೇಹವನ್ನು ಚರಚರನೆ ಸೀಳಿ ಆ ರಕ್ತದಲ್ಲಿ ಸ್ನಾನ ಮಾಡುವದಿದೇ ಖಡ್ಗ, ರೌದ್ರದಾಮನ ರಕ್ತವನ್ನು ಕುಡಿಯುವದಿದೇ ಖಡ್ಗ, ಕರ್ನಾಟಕ ಸಾಮ್ರಾಜ್ಯದ ಅಸ್ತಿಭಾರವನ್ನು ಹಾಕುವದಿದೇ ಖಡ್ಗ.

ಮಾಧವ ಕುಮಾರಾ! ಆನೆಗುಂದಿಗೆ ಹೊರಡುವದನ್ನೇ ನಿಶ್ಚಯಿಸಿದೆಯಾ?

ಹುಕ್ಕ ಅಹುದು ಮಹಾರಾಜಾ! ಈ ದಿನ ಆನೆಗುಂದಿಯಲ್ಲಿ ನಡೆಯುವ ದರ್ಬಾರದಲ್ಲಿ ಆನೆಗುಂದಿಯ ಅಭಿಮಾನದ ಕೊಲೆಯಾಗುವದಿದೆ. ರಾಜಪುತ್ರಿಯ ಮಾನ ಧನ ಹಾನಿಯಾಗುವದಿದೆ. ಕ್ಷಾತ್ರ ಕುಮಾರಿಯ ಕ್ಷಾತ್ರ ವೃತ್ತಿಯ ಮೇಲೆ ಆ ಶನೀಪಾತವಾಗುವುದು. ಗುರುಮಹಾರಾಜ! ಆ ಭಯಂಕರವಾದ ಪ್ರಸಂಗವು ಮೈದೋರದಂತೆ

ತಡೆಯುವದಕ್ಕಾಗಿ ಖಡ್ಗವು ಒರೆಯಿಂದ ಹೊರಬಿದ್ದು ನನ್ನನ್ನು ಆನೆಗುಂದಿಗೆ ಕರೆದೊಯ್ಯುತ್ತಲಿದೆ. ಮಹಾರಾಜಾ. ಆಜ್ಞೆಯನ್ನು ದಯಪಾಲಿಸಿರಿ.

ಮಾಧವ ಕುಮಾರಾ! ನೀನೊರ್ವನೇ ಹೋಗಿ ಮಾಡುವದೇನು? ನಿನ್ನ ನಾಶಕ್ಕಾಗಿ ಹೊಂಚು ಹಾಕಿಕೊಂಡು ಕುಳಿತಿರುವ ದುರ್ಜನರ ಜಾಲದಲ್ಲಿ ಬೀಳಬೇಕೆನ್ನುವಿಯಾ? ಕುಮಾರಾ! ವಿಚಾರ ಮಾಡು. ವಿಧಿ ಘಟನೆಯನ್ನು ನೀನು ಹೇಗೆ ತಪ್ಪಿಸುವಿ?

ಹುಕ್ಕ ಮಹಾರಾಜ! ನಾನು ಆನೆಗುಂದಿಗೆ ಹೋಗದೇ ಕೈ ಮುಚ್ಚಿಕೊಂಡು ಕುಳಿತು ಕೊಳ್ಳಬೇಕೇ? ಆನೆಗುಂದಿಯ ಅಭಿಮಾನ ದೇವತೆಯಾದ ಲಲಿತಾಕುಮಾರಿಯ ಅವಮಾನವು ನೆರೆದ ದರ್ಬಾರದಲ್ಲಿ .... ಛೇ.... ಛೇ.... ಮುಂದಿನ ಶಬ್ದಗಳು ಮುಖದಿಂದ ಹೊರಬೀಳಲಾರವು.

ಮಾಧವ ಕುಮಾರಾ! ದುರ್ಯೋಧನನ ದರ್ಬಾರದಲ್ಲಿ ಅಭಿಜಾತೆಯಾದ ದ್ರೌಪದಿಯ ಮಾನವನ್ನು ಯಾರು ಕಾಯ್ದರು? ಧರ್ಮಜ್ಞನಾದ ಧರ್ಮನು ಅವಳನ್ನು ರಕ್ಷಿಸಿದನೇ.... ಚಂಡವಿಕ್ರಮನಾದ ಭೀಮನು ಅವಳನ್ನು ರಕ್ಷಿಸಿದನೇ.... ಭೀಷ್ಮವಿದುರಾದಿ ಸತ್ವಶಾಲಿಗಳು ಅವಳನ್ನು ರಕ್ಷಿಸಿದರೇ? ಖಳನು ದ್ರೌಪದಿಯನ್ನು ಎಳೆದು ತರುವಾಗ ಆ ಚಂಡವಿಕ್ರಮರು ತಲೆಬಾಗಿಸಿಕೊಂಡು ಕುಳಿತಿದ್ದುದರ ಕಾರಣವೇನು?

ಹುಕ್ಕ ಧರ್ಮಜ್ಞರಾದ ಪಾಂಡವರು ಧರ್ಮದಿಂದ ಬಂಧಿತರಾಗಿದ್ದರು.

ಮಾಧವ ಭೀಷ್ಮ ವಿದುರಾದಿಗಳಿಗೆ ಆತಂಕವೇನಿತ್ತು? ಕುಮಾರಾ ಅದಕ್ಕೆ ಪರಿಸ್ಥಿತಿಯ ಪ್ರಭಾವವೇ ಕಾರಣವಾಗಿತ್ತು. ಯಾವ ಪರಮೇಶ್ವರ ಶಕ್ತಿಯು ದ್ರೌಪದಿಯನ್ನು ರಕ್ಷಿಸಿತು? ಆ ಶಕ್ತಿಯೇ ಲಲಿತಾ ಕುಮಾರಿಯನ್ನು ರಕ್ಷಿಸುವುದು.ಕುಮಾರಾ! ಪರಿಸ್ಥಿತಿಯ ಪ್ರವಾಹದಲ್ಲಿ ಒಮ್ಮೆಲೆ ಧುಮುಕುವುದು ಯೋಗ್ಯವಲ್ಲ.

ಅನುಕೂಲವಾದ ವೇಳೆಯನ್ನು ನಿರೀಕ್ಷಿಸುವುದು ವ್ಯವಹಾರಕ್ಕೆ ಸಮ್ಮತವಾಗಿರುವುದು. ಆದ್ದರಿಂದ ಸುವಿಚಾರವನ್ನು ಹಿಂಬಾಲಿಸು.

ಹುಕ್ಕ — ಗುರು ಮಹಾರಾಜ! ಈ ದಿವ್ಯ ಮುಖದಿಂದ ಹೊರಟ ಆಜ್ಞೆಯನ್ನು ನಾನು ಈವರೆಗೆ ಅಕ್ಷರಶಃ ಪಾಲಿಸಿರುವೆ ಆದರೆ ಈಗ ಹೃದಯದಲ್ಲಿ ವಿಕಾರ ತಾಂಡವ ನರ್ತನೆಯು ನಡೆದಿದೆ. ಹುಕ್ಕನ ಹೃದಯದಲ್ಲಿ ಸೇಡಿನ ವಡವಾನಲವು ಪ್ರಜ್ವಲಿಸುತ್ತಿರುವುದು. ಲಲಿತಾ ಕುಮಾರಿಯನ್ನು ಬಿಡುಗಡೆ ಮಾಡದ ಹೊರ್ತು ಹೃದಯಕ್ಕೆ ಶಾಂತಿ ಲಭಿಸಲಾರದು. ಮೃತ್ಯುವಿನ ಗರ್ಭದಲ್ಲಿ ಸೇರಿಕೊಳ್ಳುತ್ತಿದ್ದ ರಾಜಾ ಜಂಬುಕೇಶ್ವರರ ಕಡೆಯ ನುಡಿಗಳು ನನ್ನ ಹೃತ್‌ಪಟಲವ ಮೇಲೆ ಮೂಡಿ ಹೋಗಿವೆ. ಮಹಾರಾಜ ನನ್ನನ್ನು ತಡೆಯಬೇಡಿ. ಆಜ್ಞೆಯನ್ನು ಕೊಡಿ.

ಮಾಧವ — ಕುಮಾರಾ! ವಿಕಾರಕ್ಕೆ ಎಡೆಕೊಟ್ಟು ಸಂಕಟ ಕೂಪದಲ್ಲಿ ಹಾರಿಕೊಳ್ಳಬೇಡಾ. ಸುವಿಚಾರಿಯಾದ ನೀನು ಅಡ್ಡ ದಾರಿಯನ್ನು ತುಳಿಯಬೇಡ. ಧೈರ್ಯಶಾಲಿಯಾದ ನೀನು ದೌರ್ಬಲ್ಯವನ್ನು ತಾಳಬೇಡ.

ಹುಕ್ಕ — ಗುರುಮಹಾರಾಜ! ಲಲಿತಾ ಕುಮಾರಿಯು ಹೇಳಿಕಳುಹಿಸಿದ ಶಬ್ದಗಳು ಕರುಣಾರಸದಲ್ಲಿ ಎದ್ದಿ ತೊಳೆಯಲ್ಪಟ್ಟಿವೆ. ಗುರು ಮಹಾರಾಜ! ಲಲಿತಾ ಕುಮಾರಿಯು ಬಿಡುಗಡೆಯಾಗಲಿಕ್ಕೇ ಇಲ್ಲವೆ ಈ ಹುಕ್ಕನ ವ್ಯಯವಾಗಲಿಕ್ಕೆಬೇಕು. ಒಂದು ವೇಳೆ ಸಮುದ್ರವು ಮರ್ಯಾದೆಯನ್ನು ಅತಿಕ್ರಮಿಸಬಹುದು ಅಥವಾ ಜಲವು ಅಗ್ನಿಯು ಸಖತ್ವವನ್ನು ವಹಿಸಬಹುದು. ಆದರೆ ತಮ್ಮ ಶಿಷ್ಯನ ನಿಶ್ಚಯವು ಮುಗ್ಗರಿಸಲಾರದು. ಪ್ರಭು! ಆಜ್ಞೆಯನ್ನು ದಯಪಾಲಿಸಿರಿ.

ಮಾಧವ ಆಗಲಿ ನಿನ್ನ ಇಷ್ಟವಿದ್ದಂತೆ ಆಗಲಿ (ಹುಕ್ಕ ಹೋಗುವನು) ಭವಿತವ್ಯತೆಯ ಲೀಲೆಯು ಮಾನವೀ ಬುದ್ಧಿಗೆ ಹೊಳೆಯಲಾರದು. (ತಡೆದು) ಇರಲಿ. ಕುಮಾರಾ! ಕೊನೆಗೆ ಯಶಶ್ಚಂದ್ರಿಕೆಯು ನಿನ್ನನ್ನೇ ಆಶ್ರಯಿಸುವಳು (ಹೋಗುವನು)

ಬಾವುದ್ದೀನ ಕಂಪಲಿ ಹಾಗೂ ಆನೆಗುಂದಿಗಳ ದುಃಸ್ಥಿತಿಗೆ ಈ ದುರ್ದೈವಿಯೇ ಕಾರಣವಲ್ಲವೇ? ಇದೊಂದು ಜೀವವನ್ನು ಉಳಿಸಿ-ಕೊಳ್ಳುವದಕ್ಕಾಗಿ ಎಷ್ಟೋ ಜೀವಿಗಳನ್ನು ಕಾಲಚಕ್ರದ ಪಾಲು ಮಾಡಿದೆನು. ಈ ಹತಭಾಗ್ಯನ ಪ್ರಾಣವನ್ನುಳಿಸಿದ ಆನೆಗುಂದಿಯ ರಾಜ ಪುತ್ರಿಯ ಮೇಲೆ ಬಂದ ಸಂಕಟದ ವಾರ್ತೆಯು ಕಿವಿಯಲ್ಲಿ ಕಾದ ಎಣ್ಣೆಯನ್ನು ಸುರುವಿದಂತೆ ಮಾಡಿತು. ಸಾಕು. ಈ ಜನ್ಮವು ಈ ಭೂಮಿಯ ಮೇಲೆ ಇರಕೂಡದು. ರಾಜಕುಮಾರಿಯ ಮುಕ್ತತೆಗಾಗಿ ಬಾವುದ್ದೀನನು ದರ್ಬಾರದಲ್ಲಿ ಪ್ರಕಟವಾಗಲಿಕ್ಕೇ ಬೇಕು. ತೊಣ್ಣುರ ಕೋಟೆಗೆ ಹೋಗದೆ ಇಲ್ಲಿಯೇ ಕೆಲ ದಿನಗಳನ್ನು ಕಳೆದುದು ಕೊನೆಗೆ ಶುಭಕಾರಿಯಾಯಿತು. ಹುಕ್ಕರಾಯನಿಗಿಂತ ಮುಂಚಿತವಾಗಿ ಆನೆಗುಂದಿಯನ್ನು ಹೊಕ್ಕು ಹಿಂದು ಲಲನಾ ಮಣಿಯನ್ನು ಬಂಧ ಮುಕ್ತ ಮಾಡಿ ಸತ್ ಪ್ರಯತ್ನದ ಆನಂದವನ್ನು ಪಡೆಯುವೆ ಅಲ್ಲಾ ಹೋ ಅಕಬರ (ಹೋಗುವನು)

೨ನೇ ಪ್ರವೇಶ

ಸ್ಥಳ: ದರ್ಬಾರ.

ರೌದ್ರದಾಮ : ಆನೆಗುಂದಿಯ ಸನ್ಮಾನ್ಯ ನಾಯಕರೆ, ಶೂರರೇ, ವೀರರೇ ಈಶಾನುಗ್ರಹದಿಂದ ಸಹೃದಯರಾದ ಮಲೀಕನಾಯಬರು ಸುಲ್ತಾನರ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವರು. ಅವರ ಕೃಪಾದೃಷ್ಟಿಯಿಂದ ಅಶಾಂತತೆಯು ದೂರಾಗಿ ಶಾಂತಿಯು

ಹಬ್ಬಿದೆ. ಮಹನೀಯರಾದ ಮಲೀಕ ನಾಯಬರು ರಾಜಕಾರಣ ಪಟುಗಳು, ರಣಧೀರರೂ ಆಗಿರುವರು. ಸಭಾ ಭೂಷಣರೇ.... ಕಂಪಲಿ, ಆನೆಗುಂದಿ ಇತ್ಯಾದಿ ಸೀಮೆಗಳು ಸುಲ್ತಾನರ ಅಧಿಪತ್ಯಕ್ಕೆ ಸೇರಿರುವವು. ಈವರೆಗೆ ಹೇಗೆ ಸ್ವಾಮಿ ನಿಷ್ಠೆಯಿಂದ ನಡೆದು ಕೊಂಡಿರುವಿರೋ ಹಾಗೇ ಇನ್ನು ಮುಂದಾದರೂ ವರ್ತಿಸಬೇಕೆಂದು ನಾನು ಬೇರೆ ತಮಗೆ ಹೇಳಬೇಕಾಗಿಲ್ಲ. ಆನೆಗುಂದಿಯ ಸಿಂಹಾಸನದ ಮೇಲೆ ವಿರಾಜಿಸುತ್ತಿರುವ ಸುಲ್ತಾನರ ಖಡ್ಗಕ್ಕೆ ತ್ರಿವಾರ ನಮಸ್ಕರಿಸಿ. ರಾಜನಿಷ್ಠೆಯ ಶುಭಪಥವನ್ನು ವಹಿಸಿರಿ. (ಎಲ್ಲರೂ ನಮಸ್ಕರಿಸುವರು) ಮಹಾನೀಯರೇ ಮಲೀಕನಾಯಬ ಸುಬೇದಾರರಿಗೆ ದರ್ಬಾರಕ್ಕೆ ಆಗಮಿಸಲು ಸ್ವಲ್ಪ ವಿಳಂಬವಾಗುವದೆಂದು ಶೃತಪಡಿಸಿರುವರು. ದರ್ಬಾರದ ಕಾರ್ಯವನ್ನು ನೆರವೇರಿಸಲಿಕ್ಕೆ ಪ್ರತಿನಿಧಿಗಳು ನನಗೆ ಆಜ್ಞಾಪಿಸಿರುವರು. ನಾನು ತಮ್ಮೆಲ್ಲರ ಅನುಮತಿ ಪಡೆದು ಸಭೆಯ ಕಾರ್ಯವನ್ನು ನೆರವೇರಿಸುವೆನು. (ಎಲ್ಲರೂ ಖಡ್ಗದಿಂದ ನಮಿಸಿ ಒಪ್ಪಿಗೆ ಕೊಡುವರು.).

ಭುಜಂಗ ಆನೆಗುಂದಿಯ ವೀರನಾಯಕರೇ ಪ್ರಧಾನ ರೌದ್ರದಾಮರಿಗೆ ಆನೆಗುಂದಿಯ ಸರ್ವಾಧಿಕಾರಿಯ ರಾಜಪದವನ್ನುರಾಜ ಮಂತ್ರಪ್ರವೀಣರೆಂಬ" ಪದವಿಯು ಪ್ರತಿನಿಧಿಗಳಿಂದ ಕೊಡಲ್ಪಟ್ಟಿದೆಯೆಂದು ಈ ಸಭೆಯಲ್ಲಿ ನಿವೇದಿಸಲಿಕ್ಕೆ ನನಗೆ ಅತ್ಯಂತ ಆನಂದವೆನಿಸುತ್ತದೆ. ತಮ್ಮ ಆನಂದವನ್ನು ಪ್ರದರ್ಶಿಸಿ ಸಭೆಯ ಕಾರ್ಯವನ್ನು ಗಮನಿಸಬೇಕು.

ಎಲ್ಲರು ಆನಂದ! ಆನಂದ!..... ಪರಮಾನಂದ.....

ರೌದ್ರದಾಮ : ಸುಲ್ತಾನರ ದಿಲ್ಲಿ ಸಿಂಹಾಸನಕ್ಕೆ ದ್ರೋಹ ಬಗೆದ ಬಾವುದ್ದೀನನನ್ನು ಸೆರೆ ಹಿಡಿಯುವ ಪ್ರಸಂಗದಲ್ಲಿ ಲಲಿತಾ ಕುಮಾರಿಯರು ಅಡ್ಡೈಸಿ ಅವನನ್ನು ಹೋಗಗೊಟ್ಟಿರುವುದು ತಮಗೆಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಆ ಆರೋಪದಿಂದ ಲಲಿತಾ ಕುಮಾರಿಯರಿಗೆ

ಸೆರೆಯಲ್ಲಿಡಲ್ಪಟ್ಟಿರುವರು. ಈ ದರ್ಬಾರದಲ್ಲಿ ಆ ಬಗ್ಗೆ ವಿಚಾರಣೆ ಆಗಬೇಕಾಗಿದೆ. ಢಣಾಯಕರೇ.... ಲಲಿತಾ ಕುಮಾರಿಯನ್ನು ಬರಮಾಡಿರಿ.

ಭುಜಂಗ ಅವರು ದರ್ಬಾರದ ಕ್ಷಮೆಯನ್ನು ಬೇಡಿಕೊಂಡರೆ ಸಿಂಹಾಸನದ ಪರವಾಗಿ ಸುಭೇದಾರರು ಕ್ಷಮಿಸುವೆವೆಂದು ವಾಗ್ದಾನ-ಮಾಡುತ್ತಿರುವರು. ಇಷ್ಟೇ ಅಲ್ಲಾ, ಅವರ ಮರ್ಯಾದೆ-ಗನುಸಾರವಾಗಿ ಎಲ್ಲ ವ್ಯವಸ್ಥೆಗಳ ಏರ್ಪಾಟಾಗುವದೆಂದು ಪ್ರತಿನಿಧಿಗಳು ಅಭಿಪ್ರಾಯ ಪಟ್ಟಿರುವರು. (ಲಲಿತಾ ಬರುವಳು)

ಚೋಪದಾರ : ಸಿಂಹಾಸನಕ್ಕೆ ಲಲಿತಾ ಕುಮಾರಿಯು ತ್ರಿವಾರ ನಮಸ್ಕರಿಸಬೇಕು.

ರೌದ್ರದಾಮ : ಚೋಪದಾರನು ಕೊಟ್ಟ ಎಚ್ಚರಿಕೆಯನ್ನು ಲಲಿತಾ ಕುಮಾರಿಯು ಕೇಳಿದಳಷ್ಟೇ?

ಲಲಿತಾ ಕೇಳಿದೆ ರೌದ್ರದಾಮ ಚೆನ್ನಾಗಿ ಕೇಳಿದೆ.

ರೌದ್ರದಾಮ : ಹಾಗಾದರೆ ವಂದನೆಗಳನ್ನು ಅರ್ಪಿಸುವದಾಗಲಿ......

ಲಲಿತಾ ಅದು ನನ್ನ ಇಷ್ಟ. ಪವಿತ್ರವಾದ ವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಪರಮಾತ್ಮನ ಅಧಿಕಾರದ ಹೊರತು ಮಿಕ್ಕವರ ಅಧಿಕಾರವು ಎಂದೂ ನಡೆಯಲಾರದು.

ರೌದ್ರದಾಮ : ಪರಮಾತ್ಮಾ! ಪರಮಾತ್ಮನು ಸ್ವರ್ಗದಲ್ಲಿ....

ಭುಜಂಗ ಬಾವುದ್ದೀನನನ್ನು ಬಂಧಿಸುವ ಸಮಯದಲ್ಲಿ ಆತಂಕವನ್ನೊಡ್ಡಿ ಆತನನ್ನು ಬಂಧ ಮುಕ್ತ ಮಾಡಿಸಿದ್ದಕ್ಕಾಗಿ ತಮ್ಮ ಮೇಲೆ ರಾಜದ್ರೋಹದ ಆರೋಪ ಇರುವುದು, ಲಲಿತಾಕುಮಾರಿಯರೇ. ಸುಲ್ತಾನರ ದ್ರೋಹಿಯಾದ ಬಾವುದ್ದೀನರನ್ನು ತಾವೇಕೆ ಬಿಡಿಸಬೇಕಿತ್ತು.

ಲಲಿತಾ ಏತಕ್ಕೆಂದರೆ ರಾಜಧರ್ಮವನ್ನು ಪಾಲಿಸುವುದಕ್ಕಾಗಿ, ಕ್ಷಾತ್ರವೃತ್ತಿಯನ್ನು ಕಾಯುವುದಕ್ಕಾಗಿ.

ರೌದ್ರದಾಮ : ಅದು ಏನೇ ಇರಲಿ. ಈಗ ನೀವು ತಪ್ಪನ್ನು ಒಪ್ಪಿಕೊಂಡು ಈ ದರ್ಬಾರದ ಕ್ಷಮೆಯನ್ನು ಬೇಡಿಕೊಳ್ಳಿ.......

ಲಲಿತಾ : ನಾನು ದರ್ಬಾರದ ಕ್ಷಮೆಯನ್ನು ಬೇಡಿಕೊಳ್ಳಬೇಕೆ? ರೌದ್ರದಾಮಾ. ನಿನ್ನ ಹೃದಯದ ದುರ್ವಾಸನೆಯಿಂದ ಅಪವಿತ್ರವಾದ ದರ್ಬಾರದಲ್ಲಿ ಕ್ಷಮೆಯನ್ನು ಬೇಡಿಕೊಳ್ಳುವುದು ಶಕ್ಯವೇ? ಇದೆಂದಿಗೂ ಆಗದ ಮಾತು.

ಭುಜಂಗ : ದರ್ಬಾರದಲ್ಲಿ ಔಧತ್ಯವು ನಡೆಯಲಾರದು, ನ್ಯಾಯ-ಸ್ವರೂಪಿಗಳಾದ ನಾಯಕರಿಂದ ಈ ದರ್ಬಾರವು ತುಂಬಿರುವುದೆಂಬುದನ್ನು ಮರೆಯಬೇಡಿ.

ಲಲಿತಾ : ನ್ಯಾಯಕ್ಕು ಈ ದರ್ಬಾರಕ್ಕೂ ಭೂಮ್ಯಾಕಾಶದಷ್ಟು ಅಂತರವಿರುವುದು. ಅನ್ಯಾಯದ ಅನುಯಾಯಿಗಳಾದ ಈ ಸ್ವಾರ್ಥಿಗಳು ನ್ಯಾಯ ಸ್ವರೂಪಿಗಳು........

ರೌದ್ರದಾಮ : ಸುಲ್ತಾನರ ಪ್ರತಿನಿಧಿಗಳಾದ ಮಲಿಕನಾಯಬರ ಆಜ್ಞೆಯಂತೆ ನಾನು ಶಿಕ್ಷೆಯನ್ನು ವಿಧಿಸುತ್ತೇನೆ ಲಲಿತೇ....

ಲಲಿತಾ : ಜೋಕೇ! ನರಾಧಮಾ! ಆನೆಗುಂದಿಯ ರಾಜಕುಮಾರಿಯನ್ನು ಏಕವಚನದಿಂದ ಬೋಧಿಸುವೆಯಾ!

ರೌದ್ರದಾಮ : ಫಣೆಯಲ್ಲಿರುವ ಮಣಿಯನ್ನು ಕಳೆದುಕೊಂಡು ಕುರುಡಾದ ಕೃಷ್ಣಸರ್ಪಕ್ಕೆ ಬೆದರುವವರಾರು? ದಂತ ನಖಗಳನ್ನು ಕಳೆದುಕೊಂಡ ವ್ಯಾಘ್ರಿಣಿಯ ಭಯ ಯಾರಿಗೆ? ಅಧಿಕಾರ ಸಂಪನ್ನರಾದ ಈ ರೌದ್ರದಾಮನು ವಿಧಿಸುವ ಶಿಕ್ಷೆಯನ್ನು ನೀನು ಅನುಭವಿಸಲಿಕ್ಕೇಬೇಕು.

ಲಲಿತಾ : ಕ್ಷುದ್ರನೇ ನೀನು ಅಧಿಕಾರ ಮದದಿಂದ ಉನ್ಮತ್ತನಾಗಿ ಸಿಕ್ಕಸಿಕ್ಕಂತೆ ಬೊಗಳಬೇಡ. ನಿನ್ನ ನ್ಯಾಯಕ್ಕೆ ಒಂದು ಕವಡೆಯ ಬೆಲೆಯನ್ನು ಕೊಡುವದಿಲ್ಲ. ದುರಾತ್ಮಾ! ಸಕಲ ಪ್ರಪಂಚದ

ನ್ಯಾಯಾನ್ಯಾಯಗಳನ್ನು ತೀರಿಸುವ ಪರಮಾತ್ಮನ ನ್ಯಾಯವೇ ನಿಜವಾದ ನ್ಯಾಯ. ಎಲೋ! ನಡೆಯಿರಿ. ನನ್ನನ್ನು ಕಾರಾಗೃಹದಲ್ಲಿ ಇರಿಸಿರಿ ಈ ಮಾನವರೂಪಿ ಪಿಶಾಚಿಯ ದನಿಯನ್ನು ಕೇಳಲಾರೆ.

ರೌದ್ರದಾಮ : ಲಲಿತೇ! ಬೇಗನೆ ಕಾರಗೃಹವನ್ನು ಸೇರಬೇಕೆನ್ನುವೆಯಾ? ನಿನ್ನನ್ನು ಹೀಗೆ ಸೆರೆಮನಿಯಲ್ಲಿರಿಸುವೆನೆಂದು ತಿಳಿದು ಕೊಂಡಿರುವೆಯಾ? ಲಲಿತೆ! ಯಾವ ನಿನ್ನ ಕರಗಳು ಕನಕ ಕಂಕಣದಿಂದ ಶೋಭಿಸುತ್ತಿರುವವು ಆ ಕರದಲ್ಲಿ ಲೋಹ ಕಂಕಣಗಳನ್ನು ಹಾಕಿಸುವೆ. ರತ್ನ ಖಚಿತ ವಡ್ಯಾಣದಿಂದ ಶೋಭಿಸುವ ನಿನ್ನ ನಡುವಿಗೆ ಇನ್ನು ಲೋಹ ಸರಪಳಿ ಶೋಭೆ ಬರುವದು. ಕಾಶ್ಮೀರ ರೇಶ್ಮೆಯ ಅಂಬರದಿಂದ ಭೂಷಿತವಾಗುತ್ತಿದ್ದ ನಿನ್ನ ದೇಹವು ನಾರುಬಟ್ಟೆಯಿಂದ.....

ಬಾವುದ್ದೀನ (ಪ್ರವೇಶಿಸಿ) ರಾಜಕುಮಾರಿಯನ್ನು ಅವಮಾನ ಗೊಳಿಸುವಂಥ ಹೀನ ಶಬ್ದಗಳನ್ನು ಉಚ್ಚರಿಸಬೇಡಿ. ರಾಜದ್ರೋಹದ ಆರೋಪವನ್ನು ಕುಮಾರಿಯ ಮೇರೆ ಹೇರಿರುವಿರಲ್ಲವೇ? ಆ ಆರೋಪದ ಪರಾಮಾರ್ಜನೆ ಮಾಡುವದಕ್ಕಾಗಿ ಬಾವುದ್ದೀನನು ಬಂದಿರುವನು. ನನ್ನನ್ನು ಬಂಧಿಸಿರಿ. ಬೇಕಾದರೆ ತುಂಡರಿಸಿ. ಚೆಲ್ಲಿರಿ ಆದರೆ ರಾಜಕುಮಾರಿಯ ಬಂಧ ವಿಮೋಚನೆಯಾಗಲಿ.

ರೌದ್ರದಾಮ : ಎಲೋ! ಬಿಗಿಯಿರಿ ಬಾವುದ್ದೀನನನ್ನು.

ಚೋಪದಾರ : ಸಿಂಹಾಸನದ ಮೇಲಿರುವ ಸುಲ್ತಾನರ ಖಡ್ಗಕ್ಕೆ ಬಾವುದ್ದೀನರು ತ್ರಿವಾರ ಕುರ್ನಿಸಾತ ಮಾಡಬೇಕು.

ಬಾವುದ್ದೀನ ನಾನು ಆ ಸೈತಾನನ ಖಡ್ಗಕ್ಕೆ ತಲೆಬಾಗಿಸಲಾರೆನು. ಕನಿಕರವಿಲ್ಲದೆ ಸೈತಾನನಂತೆ ದೀನ ಜನರನ್ನು ಕೊಂದು ಹಾಕುತ್ತಿರುವ ಆ ದಿಲ್ಲಿ ಸೈತಾನನ ಖಡ್ಗಕ್ಕೆ ನಾನು ಕುರ್ನಿಸಾತ ಮಾಡುವದಿಲ್ಲ. ನಾನು ಖುದಾನ ಸಿಂಹಾಸನದ ಮುಂದೆ ಕುರ್ನಿಸಾತ

ಮಾಡುವೆನಲ್ಲದೇ ಸೈತಾನನ ಸಿಂಹಾಸನಕ್ಕೆ ಎಂದಿಗೂ ತಲೆ ಬಾಗಿಸಲಾರೆನು.

ರೌದ್ರದಾಮ : ಡಣಾಯಕರೆ ಬಿಗಿಯಿರಿ ಬಾವುದ್ದೀನನನ್ನು. ಬಾವುದ್ದೀನ, ಸುಲ್ತಾನರ ವಿಷಯಕ್ಕೆ ನೀನು ಕಾರುತ್ತಿರುವ ಬೆಂಕಿಯು ನಿನ್ನ ರಕ್ತದಿಂದಲೇ ನಂದಿಸಲ್ಪಡುವದು. ಢಣಾಯಕರೇ ಬಲಾತ್ಕಾರದಿಂದಲಾರೂ ಕುರ್ನಿಸಾತ ಮಾಡಿಸಿರಿ. ಇಂಥ ರಾಜದ್ರೋಹಾತ್ಮಕ ವರ್ತನವನ್ನು ಸುಲ್ತಾನನ ಸ್ವಾಮಿನಿಷ್ಠ ಸೇವಕನು ಎಂದೂ ಸಹಿಸಲಾರನು.

ಬಾವುದ್ದೀನ ಎಲೋ ಸ್ವಾರ್ಥದ ಸೈತಾನಾ! ಬಾಯಿಗೆ ಬಂದಂತೆ ಬಡಿಬಡಿಸಬೇಡ. ಆನೆಗುಂದಿಯ ಹಿಂದೂ ಸಿಂಹಾಸನವನ್ನು ಹಿಂದೂವಾದ ನೀನು ರಸಾತಲಕ್ಕೆ ಮೆಟ್ಟಿ ನಿನ್ನ ಸ್ವಾರ್ಥದ ಚಿತ್ರವನ್ನು ಜಗತ್ತಿನ ಮುಂದಿಟ್ಟಿರುವಿ. ದುರಾತ್ಮಾ! ನೀನು ಹಿಂದೂ ಸಿಂಹಾಸನದ ಅಭಿಮಾನ ಹಿಡಿಯದ ನೀಚ ಸ್ವಾರ್ಥಕ್ಕಾಗಿ ಆನೆಗುಂದಿಯ ಸತ್ವವನ್ನು ಹಾಳು ಮಾಡಿದಿ, ರಾಜದ್ರೋಹಿಯೇ, ದೇಶದ್ರೋಹಿಯೇ ಸುಲ್ತಾನರ ಸಿಂಹಾಸನಕ್ಕೆ ಸ್ವಾಮಿ ನಿಷ್ಠೆಯನ್ನು ತೋರಿಸುವ ನೀನು ನಿನ್ನ ರಾಕ್ಷಸೀ ಮಹತ್ವಾಕಾಂಕ್ಷೆಗೆ ನಾಳೆ ಸುಲ್ತಾನರ ಮೇಲೆ ಕೈ ಮಾಡಲು ಹೇಸಲಾರೆ. ನಿನ್ನಂಥ ರಾಜದ್ರೋಹಿಯು ನನಗೆ ರಾಜ ನಿಷ್ಠೆಯ ಪಾಠವನ್ನು ಕಲಿಸುವುದು ಬೇಕಾಗಿಲ್ಲ.

ರೌದ್ರದಾಮ : ಎಲೋ ಬಂಧಿಸಿರಿ.....

ಬಾವುದ್ದೀನ ಇಷ್ಟೇಕೆ ಚೀರುವಿ ಗದ್ದಾರ. ರಾಜಕುಮಾರಿಯ ಋಣವನ್ನು ತೀರಿಸುವದಕ್ಕಾಗಿ ನಾನು ಆನಂದದಿಂದ ನಿಮ್ಮ ಸೆರೆಯಾಳುವಾಗಲು ಬಂದಿರುವೆ. (ಸಿಪಾಯಿಗಳು ಕಟ್ಟುವರು) ಆನೆಗುಂದಿಯ ಕೊಲೆಯನ್ನು ಮೋಸದಿಂದ ಮಾಡಿ ಅದರ ರಕ್ತ ಮಾಂಸವನ್ನು ಹದ್ದು ಕಾಗೆಗಳಿಗೆ ಹಾಕಿ ಕೂಗಾಡುತ್ತಿರುವ

ನರಿಯೇ ಈ ದುನಿಯಾದಲ್ಲಿ ನೀನೆಷ್ಟು ದಿನಗಳವರೆಗೆ ಬದುಕುವಿಯೋ? ಒಮ್ಮೆ ಮೃತ್ಯುವು ನಿನ್ನನ್ನು ನುಂಗದೆ ಬಿಡದು. ನೀಚ- ಸೈತಾನ! ನಿನ್ನ ದೇಹವನ್ನು ನಾಯಿಗಳು ತಿನ್ನಲಿ.

ಸಿಪಾಯಿ (ಪ್ರವೇಶಿಸಿ) ಬಂಡುಖೋರನಾದ ಹುಕ್ಕನು ಒಬ್ಬರನ್ನು ಲೆಕ್ಕಿಸದೇ ಸಭಾಮಂದಿರವನ್ನು ಪ್ರವೇಶಿಸುವದಕ್ಕಾಗಿ ಧಾವಿಸಿ ಬರುತ್ತಿರುವನು ಸರಕಾರ.

ರೌದ್ರದಾಮ :- ಬರಲಿ ಮತ್ತಷ್ಟು ಒಳಿತಾಯಿತು. ಯಾರೂ ಅವನನ್ನು ಅಡ್ಡೈಸಕೂಡದು (ಹುಕ್ಕ ಬರುವನು)

ಹುಕ್ಕ ಅನ್ಯಾಯವನ್ನು ಹೊಡೆದೋಡಿಸಲಿಕ್ಕೆ ಈ ಖಡ್ಗವು ಸಿದ್ಧವಾಗಿರುವುದು.

ರೌದ್ರದಾಮ : ಚೋರ ಶಿಖಾಮಣಿಯೇ! ನಿನ್ನ ಖಡ್ಗವನ್ನು ಎದುರಿಸಲಿಕ್ಕೆ ನನ್ನ ಖಡ್ಗವಾದರೂ ಸಿದ್ಧವಾಗಿರುವುಧು. ಢಣಾಯಕರೇ! ಈ ಬಂಡುಖೋರನನ್ನು ಬಂಧಿಸಿರಿ.

ಹುಕ್ಕ ಎಲವೋ.... ನೀವು ನನ್ನನ್ನು ಬಂಧಿಸುವಿರೋ.. ಪ್ರಾಣ ಬೇಡಾಗಿದ್ದರೆ ಮಾತ್ರ ಈ ಸಾಹಸಕ್ಕೆ ಪ್ರವೃತ್ತರಾಗಿರಿ. ಪಾಪಾತ್ಮಾ! ದೇಶಮಾತೆಯನ್ನು ಪಾರತಂತ್ರದ ಕುಂಡದಲ್ಲಿ ಕೊಳೆಯಿಡುವದಕ್ಕೆ ಸಿದ್ಧನಾದ ನೀನು ನನಗೆ ಬಂಡುಖೋರನೆಂದು ಬೊಗಳುವಿಯಾ! ದೇಶ ಕಂಟಕನೆ! ಮೋಸ ಮಾಡಿ ಜಂಬುಕೇಶ್ವರರ ಕೊಲೆಯನ್ನು, ದೇಶಘಾತುಕವನ್ನು ಗೈದಿರುವ ಪಾಪಾತ್ಮಾ! ಮತ್ತೊಂದು ರೌರವ ಕುಂಡವು ನಿನಗಾಗಿ ಸಿದ್ಧವಾಗುವುದು. ಪಾಪಿ! ನನಗೆ ಧರ್ಮದ ಭಯವಿಲ್ಲ, ದೇವನ ಭಯವಿಲ್ಲ

ರೌದ್ರದಾಮ : ಹೆಚ್ಚಾಗಿ ಮಾತು ಬೆಳೆಸಬೇಡಾ! ಹೊಸ ರಾಜ್ಯವನ್ನು ಸ್ಥಾಪಿಸಬೇಕೆನ್ನುವೆಯಲ್ಲವೇ? ರಾತ್ರಿಯಲ್ಲಿ ಮನೆಯನ್ನು ಕನ್ನಾ ಕೊರೆಯುವ ಕಳ್ಳರೊಡೆಯನು ಹೊಸರಾಜ್ಯವನ್ನು ಸ್ಥಾಪಿಸಬಹುದು. ಹೊಸದಾಗಿ ಕಟ್ಟಲ್ಪಟ್ಟಿರುವ ಆ ಕಾರಾಗೃಹವೇ

ನಿನ್ನ ರಾಜ್ಯ ಮಂದಿರವು. ಎಲೋ! ಕಟ್ಟಿಹಾಕಿರಿ ಈ ಕೋತಿಯನ್ನು ನೋಡುವಿರೇನು.

ಘುಕ್ಕ ರೌದ್ರದಾಮ! ನಿನ್ನ ಪೈಶಾಚಿಕ ಆಜ್ಞೆಯಂತೆ ಇವರು ವರ್ತಿಸಿದ್ದಾದರೆ ಇವರ ರುಂಡಗಳು ಚಂಡಾಡಲ್ಪಡುವವು. ಈ ದರ್ಬಾರ ಮಂದಿರದಲ್ಲಿ ಈ ಖಡ್ಗದಿಂದ ನಿರ್ಮಿಸಲ್ಪಟ್ಟ ರಕ್ತದ ಕಾಲುವೆಯು ಹರಿಯುತ್ತ ತುಂಗಭದ್ರೆಯನ್ನು ಸೇರಿ ಶುಭ್ರ ಜಲವನ್ನು ಕೆಂಪು ಮಾಡಿ ಬಿಡುವುದು. ನೀಚಾತ್ಮರೇ.....

ರೌದ್ರದಾಮ : ಅಬ್ಬರವನ್ನು ಸಾಕು ಮಾಡು. ನಾಯಕರೇ ಏಳಿ. ಈ ಬಂಡು ಖೋರನನ್ನು ಬಿಗಿದು ಕಟ್ಟಿರಿ. ಈ ದರ್ಬಾರದಲ್ಲಿ ರಾಜದ್ರೋಹಾತ್ಮಕ ಶಬ್ದಗಳ ತರಂಗಗಳನ್ನು ಎಬ್ಬಿಸದಂತೆ ಮಾಡಿ.

ಘುಕ್ಕ ಪಾಪೀ! ಇದು ನಿನ್ನ ದರ್ಬಾರವೇ. ಸತ್ವಹೀನರಾಗಿ ಅಮಂಗಲ ಸುರಿಯುವ ಈ ಜೀವಂತ ಪ್ರೇತಗಳು ಕಲಿತಿರುವ ಸ್ಮಶಾನಭೂಮಿಯು ದರ್ಬಾರ ಭೂಮಿಯಾಗಬಹುದೇ? ದೇಶದ್ರೋಹಿಗಳಿಂದ ತುಂಬಿದ ನಿನ್ನ ದರ್ಬಾರವು ಪಿಶಾಚಿಗಳ ವಸತಿ ಸ್ಥಾನ. ಮೋಸ, ದುರಾಚಾರ, ಕೊಲೆ, ಸುಲಿಗೆ ಮುಂತಾದ ಅಸಹ್ಯ ಕೃತ್ಯಗಳಿಗೆ ತವರು ಮನೆಯಾದ ನಿನ್ನ ದೇಹವನ್ನು ನುಚ್ಚುನುಚ್ಚಾಗಿ ಕೊಚ್ಚಿಹಾಕಿ ಶಾಕಿನಿ, ಡಾಕಿನಿ, ಪಿಶಾಚಿಗಳಿಗೆ ಬಲಿಯನ್ನು ಕೊಡುವೆನು. (ಎಂದು ಖಡ್ಗವೆತ್ತುವಷ್ಟರಲ್ಲಿ ಭುಜಂಗನು ಹಿಂದಿನಿಂದ ಬಂದು ಖಡ್ಗ ಕಸಿದು ಕೊಳ್ಳುವನು) (ಎಲ್ಲರೂ ಖಡ್ಗವೆತ್ತುವರು)

ರೌದ್ರದಾಮ : ಎಲೋ! ಬಿಗಿಯಿರಿ ಈ ನರಾಧಮನನ್ನು.

ಘುಕ್ಕ ಹೇಡಿಯೇ! ಕೈಗಳಲ್ಲಿ ಬಳೆಯನ್ನಿಟ್ಟು ಕೊಳ್ಳಬಾರದೇ ಮರೆಯಲ್ಲಿ ನಿಂತು ಮೋಸ ಮಾಡುವದು ನಿನ್ನ ಹುಟ್ಟುಗುಣವಾಗಿದೆ. ಭುಜಂಗಾ ಭೂಮಿಗೆ ಈ ರೀತಿ ಭಾರವಾಗುವದಕ್ಕಿಂತ ತುಂಗೆಯಲ್ಲಿ ಹಾರಿ ದೇಹ ವಿಸರ್ಜನೆ ಮಾಡಿಕೊಳ್ಳಬಾರದೇ.

ಚೋಪದಾರ : ಕಂಪಲಿ ಸರಕಾರದ ಆಗಮನವಾಗುತ್ತಿರುವುದು (ಮಲೀಕನು ಬರುವನು ಎಲ್ಲರೂ ಎದ್ದುನಿಂತು ಸನ್ಮಾನ ಮಾಡುವರು.)

ರೌದ್ರದಾಮ : ವೇಳೆಯಾದ್ದರಿಂದ ದರ್ಬಾರವನ್ನು ನಡೆಯಿಸಬೇಕಾಯಿತು.

ಮಲೀಕ ಏನು ಅಡ್ಡಿ ಇಲ್ಲ ಸಾಗಲೀ. ಯಾರು ಬಾವುದ್ದೀನ?

ಬಾವುದ್ದೀನ ಅಹುದು ಮಲಿಕಾ! ನಾನೇ ಬಾವುದ್ದೀನ, ದೃಷ್ಟಿಯು ಮಂದವಾಗಿರುವುದೇ.. ಮಲೀಕ! ದಿಲ್ಲಿಯ ಸಿಂಹಾಸನಕ್ಕೆ ಬಾಧ್ಯಸ್ಥನಾದ ನಾನೇ ಬಾವುದ್ದೀನನು. ನಿನ್ನ ಸುಲ್ತಾನನ ಸಹೋದರನ ಮಗನಾದ ನಾನೇ ಬಾವುದ್ದೀನನು

ಮಲೀಕ ರಾಜದ್ರೋಹಿಯೇ ಮುಚ್ಚುಬಾಯಿ. ದಕ್ಷಿಣದ ಸುಭೇದಾರನಾದ ನನ್ನನ್ನು ಪ್ರತ್ಯಕ್ಷ ಸುಲ್ತಾನನೆಂದು ತಿಳಿ. ನರಿಯಂತೆ ಕೂಗಾಟ ಮಾಡಬೇಡ.

ಬಾವುದ್ದೀನ ಮಲೀಕಾ! ಇದು ನರಿಯ ಕೂಗಾಟವಲ್ಲ. ಸಿಂಹದ ಗರ್ಜನೆ ಇರುತ್ತದೆಂದು ತಿಳಿ. ಪಂಜರದಲ್ಲಿ ಸಿಕ್ಕ ಸಿಂಹವು ಕೃಶವಾಗಿದ್ದರೂ ಅದರ ಜನನಸಹಜ ಗುಣಗಳಿಂದ ಗಂಭೀರ ಗರ್ಜನೆಯು ಅಡಗಲಾರದು.

ಮಲೀಕ ಢಣಾಯಕರೆ! ಒಂದು ಪೆಟ್ಟಿಗೆಯನ್ನು ತರಿಸಿ ಇವನನ್ನು ಅದರಲ್ಲಿ ಹಾಕಿ ಕಂಪಲಿಗೆ ಕಳುಹಿಸಿ ಕೊಡತಕ್ಕದ್ದು. (ಹುಕ್ಕನನ್ನು ನೋಡಿ) ಸಿಂಹವು ಇಷ್ಟು ಬೇಗನೆ ಬಲೆಯಲ್ಲಿ ಬಿದ್ದೀತೆಂದು....

ರೌದ್ರದಾಮ : ಸಿಂಹಿಣಿಯ ದೆಶೆಯಿಂದ ಸಿಂಹವು ಜಾಲದಲ್ಲಿ ಬಿದ್ದಿತು (ಪೆಟ್ಟಿಗೆಯಲ್ಲಿ ಬಾವುದ್ದೀನನನ್ನು ಹಾಕುವರು.)

ಮಲೀಕ ಕಳ್ಳರೊಡೆಯನೇ.... ನಿನ್ನ ವ್ಯವಸಾಯಕ್ಕೆ ವಿಘ್ನ ಬಡಕೊಂಡಿಲ್ಲವಷ್ಟೇ?

ಹುಕ್ಕ ವಿಘ್ನ, ಆತಂಕ, ಇಂಥ ಅವಶಬ್ದಗಳು ಹುಕ್ಕನಿಗೆ ಎಂದೂ ಗೊತ್ತಿಲ್ಲ.

ಮಲೀಕ ಇವನನ್ನು ರುದ್ರಮಂದಿರದಲ್ಲಿ ಬಂಧಿಸಿಡಿರಿ.... ಲಲಿತಾ ದೇವಿಯನ್ನು.

ರೌದ್ರದಾಮ : ಸರಕಾರ ಅವಳನ್ನು ಸಹಾ.......

ಮಲೀಕ ಅದೇಕೇ! ಬಾವುದ್ದೀನನು ಸಿಕ್ಕ ಮೇಲೆ ಕುಮಾರಿಯು ದೋಷಮುಕ್ತಳಾದಳು.

ರೌದ್ರದಾಮ : ಸರಕಾರ! ತುಘಲಕರ ಖಡ್ಗಕ್ಕೆ ವಂದನೆಗಳನ್ನರ್ಪಿಸದ ದ್ರೋಹಿಗೆ ಶಿಕ್ಷೆಯಾಗಲಿಕ್ಕೇ ಬೇಕು.

ಮಲೀಕ ಹೀಗೋ.... (ಸ್ವ) ರೌದ್ರದಾಮ ಬಡಾ ಬದ್ಮಾಷ ಆದಮಿ.

ರೌದ್ರದಾಮ : ಅಹುದು ಸರಕಾರ.

ಹುಕ್ಕ ಥೂ! ಚಾಂಡಾಲನೆ! ಕ್ಷತ್ರಿಯರಲ್ಲಿ ನಿನ್ನಂತ ಕುಲಕಲಂಕನು ಉದ್ಭವಿಸಬೇಕಾದರೆ ನಿನ್ನ ತಾಯಿಯು ವ್ಯಭಿಚಾರ....

ರೌದ್ರದಾಮ : ತಡೆ ನರಾಧಮ! ನಿನ್ನ ನಾಲಿಗೆಯನ್ನು ಸೀಳಿ ಹಾಕುವೆನು. (ಖಡ್ಗ ಎತ್ತುವನು)

(ಪರದೆ ಬೀಳುವುದು)

೩ನೇ ಪ್ರವೇಶ

ಸ್ಥಳ: ಕುಂಜವನದ ಮುಂಚೆಯ ಬೀದಿ.
ಸಮಯ: ಉಷಃ ಕಾಲಕ್ಕಿಂತ ಮುಂಚೆ

(ಮರಾಳನು ಕೃಷ್ಣ ವಸ್ತ್ರದ ಬುರಕಿಯಲ್ಲಿ ಬರುವನು)

ಮರಾಳ (ಬುರಕಿಯನ್ನು ತೆಗೆದು) ರಾತ್ರಿ ಎಲ್ಲಾ ಜಾಗರಣೆಯಲ್ಲಿ ಕಳೆದು ಹೋಯಿತಪ್ಪಾ! ಅಬ್ಬಾ! ಶಿವಾಂಗಿ ಎಷ್ಟು ಜಾಣಳಪ್ಪಾ. ಅವಳು ಕರಾಳನಿಗೆ ಮಂಕು ಬೂದಿ ಹಚ್ಚಿ, ಕಾರಾಗೃಹವನ್ನು ಪ್ರವೇಶಿಸಿ

ಬಾವುದ್ದೀನರನ್ನಿರಿಸಿದ ಪೆಟ್ಟಿಗೆಯನ್ನು ತೆರೆದು ಗುಪ್ತ ಮಾರ್ಗದಿಂದ ಬಾವುದ್ದೀನನನ್ನು ಕರೆದುಕೊಂಡು ಬಂದು ಹೊರಗೆ ನನ್ನೊಡನೆ ಕಳುಹಿಸಿ ಕೊಟ್ಟು ಹಿಂತಿರುಗಿದಳು. ನಾನು ಇಡೀ ರಾತ್ರಿ ಪ್ರವಾಸಮಾಡಿ ಬಾವುದ್ದೀನರನ್ನು ಗುಪ್ತವಾದ ಸ್ಥಳಕ್ಕೆ ಬಿಟ್ಟು ಬಂದೆ. ಅವನು ಸುರಕ್ಷಿತವಾಗಿ ತೋರಣ ಕೋಟೆಯನ್ನು ಸೇರುವನು. ಯಾರಪ್ಪನ ಕೈಗೆ ಸಿಕ್ಕುವಂತಿಲ್ಲ. ಅದಿರಲಿ ಶಿವಾಂಗಿಯ ಧೈರ್ಯ... ಅಬ್ಬಬ್ಬಾ! ಇಂಥ ಜಾಣಳಾದ ಹುಡುಗಿಯು ಹೆಂಡತಿಯಾಗುವಂತೆ ಇದ್ದರೆ ಹುಲಿಯ ಹಾಲನ್ನಾದರೂ ತಂದು ಅವಳ ಸೇವೆಯನ್ನು ಮಾಡಬೇಕು (ಒಂದು ಕಡೆ ನೋಡಿ) ಅವನಾವನೋ ಕರಾಳನಂತೆ ಕಾಣುತ್ತಾನೆ ನನ್ನಂತೆ ಬುರಕಿ ಹಾಕಿಕೊಂಡು ಬರಲಿಕ್ಕೆ ಇವನಿಗೇನು ಕಾರಣವಿದ್ದಿರಬಹುದು. ಇರಲಿ ಸ್ವಲ್ಪ ತಮಾಷೆ ಮಾಡುವಾ (ಶಿವಾಂಗಿಯಂತೆ ಕೂಡ್ರುವನು)

ಕರಾಳ (ಪ್ರವೇಶಿಸಿ) ಅಹಾಹಾ! ಮನಮೋಹಿನಿ. ವಚನಕ್ಕೆ ಸರಿಯಾಗಿ ಬಂದಿರುವೆಯಲ್ಲಾ.

ಮರಾಳ (ಸ್ವ) ಏನು ಶಿವಾಂಗಿಯ ವಚನ. ಹುಂ.... ಹುಂ..... (ಪ್ರಕಟ) ಮನೋಹರಾ ವಚನವನ್ನು ಮರೆಯುವವಳಲ್ಲಾ. ತಾವು ನನ್ನ ಮೇಲೆ ಮಾಡಿದ ಉಪಕಾರಕ್ಕಾಗಿ ತಮ್ಮ ಸೇವೆಯನ್ನು ಮಾಡುವೆ.

ಕರಾಳ ಕಾರಾಗೃಹವನ್ನು ನೋಡಲಿಕ್ಕೆ ಪರವಾನಿಗೆಯನ್ನು ಕೊಟ್ಟ ಮಾತ್ರಕ್ಕೆ ದೊಡ್ಡ ಉಪಕಾರವಾಯಿತೇ. ಕಾರಾಗೃಹದಲ್ಲಿ ನಿನಗೆ ಭೀತಿ ಬರಲಿಲ್ಲವಷ್ಟೇ?

ಮರಾಳ ಭೀತಿ ಏತರದು. ಹೊರಗೆ ನೀವು ದೆವ್ವಿನ್ಹಂಗ ನಿಂತಿರಲು ನಾನೇಕೆ ಅಂಜಲಿ.

ಕರಾಳ ಶಿವಾಂಗೀ ಕಾರಾಗೃಹದಲ್ಲಿ ಬಹಳ ವೇಳೆ ತಡೆದಿದ್ದಿ.ಹಾದಿ ನೋಡಿ ನೋಡಿ ಬೇಜಾರಾಯ್ತು. ನಾನೇ ಕರೆಯಲಿಕ್ಕೆಂದು

ಬರಬೇಕೆಂದು ಮಾಡಿದ್ದೆ. ಹುಡುಗಿಯು ಅಂಜಿದಳೋ ಏನೋ ಎಂಬ ಸಂಶಯ ಬಂದು.

ಮರಾಳಾ ಮನೋಹರಾ! ಆ ಸೆರೆಮನೆಯಲ್ಲಿ ಒಂದು ಉದ್ದಾದ ಪೆಟ್ಟಿಗೆಯಿತ್ತು. ಅದಕ್ಕೆ ಬೀಗ ಸಹ ಹಾಕಲ್ಪಟ್ಟಿತ್ತು. ಅದರಲ್ಲಿ ವಿಪುಲವಾದ ದ್ರವ್ಯ ತುಂಬಿರುವುದೇ ಅಥವಾ...........

ಕರಾಳ ಅಥವಾ ಇಲ್ಲಾ ಗಿಥವಾ ಇಲ್ಲಾ. ಹುಚ್ಚೀ ಎಲ್ಲಿ ದ್ರವ್ಯ, ನೀನು ಸ್ವಲ್ಪ ಮರೆಯಾಗಿ ನಿಂತು ನೋಡುತ್ತಿರು. ಹೊತ್ತು ಹೊರಟನಂತರ ಎಲ್ಲವೂ ತಿಳಿಯಬರುವದು. ಏಳು ನನ್ನ ಅರಗಿಣಿಯೇ! ಮುದ್ದಿನ ಕಣಿಯೇ ಏಳು ಸೌಭಾಗ್ಯದ ಮಣಿಯೇ (ಕೈ ಹಿಡಿದು ಎಬ್ಬಿಸುವನು)

ಮರಾಳ ನಡೆಯಿರಿ. ನಿಮ್ಮ ಕೊರಳಿಗೆ ಹೂವಿನ ಹಾರವನ್ನು ಮಾಡಿ ಹಾಕುತ್ತೇನೆ. ನಡೆಯಿರಿ. (ಕೈ ಗಟ್ಟಿಯಾಗಿ ಹಿಚುಕುವನು)

ಕರಾಳ : ಅಯ್ಯೋ ಅಮ್ಮಾ ಸತ್ತೆ - ಯಾರು - ಕೈಬಿಡಿ ನರಗಳು ಜಗ್ಗುತ್ತಿರುವವು. (ಮರಾಳ ಮುಸುಕು ತೆರೆಯುವನು) ಮಹಾರಾಯಾ ಒದರ ಬ್ಯಾಡಾ। ನಿನಗೆ ಸಾಷ್ಟಾಂಗ ನಮಸ್ಕಾರ ಹಾಕುವೆನು. (ನಮಸ್ಕಾರ ಹಾಕುವನು)

ಮರಾಳ : ಕಲ್ಯಾಣವಾಗಲಿ, ಕಲ್ಯಾಣವಾಗಲಿ (ಶಿವಾಂಗಿ ಬರುವಳು)

ಶಿವಾಂಗಿ ದಂಡನಾಯಕರು ಮತ್ತೇಕೆ ದಿಂಡುರುಳಿಕೆ ಹಾಕುತ್ತಿರುವರು.

ಕರಾಳ ಗಂಡ್ರಾಮಿಯಾದ ನಿನ್ನ ಕಾಲಾಗಾ.

ಮರಾಳ : ಕರಾಳಾ! ನಾಲಿಗೆಯನ್ನು ಸಡಿಲು ಬಿಟ್ಟು ಶಿವಾಂಗಿಯನ್ನು ಬಯ್ಯಬೇಡಾ... ಶಿವಾಂಗಿ, ಕರಾಳನು ಬುರುಕೆಯನ್ನು ಹಾಕಿಕೊಂಡು ಇಲ್ಲಿಗೇಕೆ ಬಂದನು.

ಶಿವಾಂಗಿ ನೀನು ಬಂದಂತೆ ಅವನೂ ಬಂದಿರಬಹುದು. ಅದರ ಕಾರಣವನ್ನು ನಾನೇನು ಹೇಳಲಿ

ಕರಾಳ : ಶಿವಾಂಗಿ ನೀನೆ ಹೇಳಿದ್ದಿಯಲ್ಲವೇ?

ಶಿವಾಂಗಿ ಅಹುದು ಹೇಳಿದ್ದೆ.

ಮರಾಳ ಅಹುದು ಹೇಳಿದ್ದೆ (ಅಣಕಿಸುವನು)

ಶಿವಾಂಗಿ ಕರಾಳಾ ಮರಾಳಾ ನಿಮ್ಮಗುಣ ಪರೀಕ್ಷೆ ಮಾಡಬೇಡವೇ? ನೀವೇ ಹಿಂದಕ್ಕೆ ಒಪ್ಪಿಗೆಯನ್ನು ಕೊಟ್ಟದ್ದಿಲ್ಲವೇ? ಅಂದ ಮೇಲೆ.

ಕರಾಳ : ಅಹುದಹುದು. ನಿನ್ನ ಮಾತು ನಿಜ ಶಿವಾಂಗಿ. ಈಗಾದ ಪರೀಕ್ಷೆಯಲ್ಲಿ ನನಗೆಷ್ಟು ಗುಣಗಳು ಲಭಿಸಿರುವವು.

ಶಿವಾಂಗಿ ನಿಮಗೆ ೩-೧೩-೯-೧೮ ಅಂತೂ ೪೩ ಗುಣಗಳು.

ಮರಾಳ ನನಗೆಷ್ಟು ಶಿವಾಂಗಿ

ಶಿವಾಂಗಿ ೩-೩೩-೭ ಅಂತೂ ಕರಾಳನಷ್ಟೇ ಗುಣಗಳು

ಮರಾಳ ಶಿವಾಂಗೀ! ಆದಷ್ಟು ಬೇಗನೆ ಪರೀಕ್ಷೆಯನ್ನು ಮುಗಿಸಿ ಬಿಡು. ಒಮ್ಮೆ ಈ ಗಲಾಟೆಯಿಂದ ಪಾರಾಗಬೇಕೆನ್ನುವೆ. ನನಗಿನ್ನು ಆಜ್ಞೆಯನ್ನು ಕೊಡು ಹೊರಡುವೆ.

ಶಿವಾಂಗಿ (ಕಿವಿಯಲ್ಲಿ) ನಾಳೆ ಬೆಳಿಗ್ಗೆ ಇಂದಿನಂತೆ.

ಮರಾಳ ನೋಡು ಶಿವಾಂಗೀ! ಪರೀಕ್ಷೆಯಲ್ಲಿ ಕರಾಳನಿಗಿಂತ ಹೆಚ್ಚು ಗುಣಗಳನ್ನು ದೊರಕಿಸುವೆ. ಶಿವಾಂಗಿಯನ್ನು ಗೆಲ್ಲುವೆ. (ಹೋಗುವನು)

ಶಿವಾಂಗಿ ಕರಾಳರಾವ! ಉಷಃಕಾಲದ ತಂಪೆಲರನ್ನು ಸೇವಿಸಲಿಕ್ಕೆ ಸರಕಾರದ ಸವಾರಿಯು ಬರುವ ಹೊತ್ತಾಯಿತು. ಕರಾಳಜೀ! ಮಡ್ಡ ತಲೆಯವನಾದ ಮರಾಳನ ಹೆಂಡತಿಯಾದರೆ ಸುಖವೇನೂ ದೊರೆಯುವುದಿಲ್ಲಾ. ಸ್ತ್ರೀಯರಿಗೆ ಮುಖ್ಯವಾಗಿ ಎರಡು ವಸ್ತುಗಳು ಬೇಕು.

ಕರಾಳ ಅವ್ಯಾವವು.

ಶಿವಾಂಗಿ   ಕರಾಳಜಿ! ಒಂದು ಪ್ರೇಮ ಮತ್ತೊಂದು ಅಲಂಕಾರ. ಮರಾಳನನ್ನು ವರಿಸಿದರೆ ನನಗೆ ಇವುದೊರೆಯಲಾರವು ಆದ್ದರಿಂದ ನಾನು ನಿಮ್ಮನ್ನೇ..... (ಒಯ್ಯಾರದಿಂದ)

ಕರಾಳ   ಶಿವಾಂಗೀ! ನಾನಾದರೂ ನಿನ್ನನ್ನೇ.........

ಶಿವಾಂಗಿ   ಕರಾಳಜಿ! ಈ ದಿನ ಮಧ್ಯರಾತ್ರಿಯಲ್ಲಿ ಕಾರಸ್ಥಾನಾ.....

ಕರಾಳ   ಹ!ಹ! ಬಾಯಿ ಮುಚ್ಚು ಶಿವಾಂಗಿ! ಈ ದಿನ ಮಧ್ಯರಾತ್ರಿಯಲ್ಲಿ ಲಲಿತಾ ಕುಮಾರಿಯ ಮೇಲೆ ಬಲಾತ್ಕಾರಾ! ಘುಕ್ಕನ ಸಂಹಾರಾ ಆ ಮೇಲೆ ನಾಳೆ ಬೆಳಿಗ್ಗೆ ನಮ್ಮ ಪ್ರಯಾಣ ತಾರಾ....

ಶಿವಾಂಗಿ   ಮನೋಹರಾ! ಹೋಗಲ್ವಾ (ಕಟಾಕ್ಷವನ್ನೆಸೆಯುಳು)

ಕರಾಳ   ಶಿವಾಂಗೀ! ಪ್ರೇಮದ ಮೊದಲನೇಯ ಪಾಠದ ಚುಂಬನ ಕೊಟ್ಟು.

ಶಿವಾಂಗಿ   :   ಸಾಕು ಬಿಡಿ! (ಚೇಷ್ಠೆ ತೋರಿಸಿ ಹೋಗುವಳು)

ಕರಾಳ   ಇದಕ್ಕೆನ್ನಬೇಕು ಅಭಿನಯ. ಈ ಬೆಡಗಿನ ಬಂಗಾರದ ಪುತ್ಥಳಿಯು ನನ್ನದಾಯಿತೆಂದರೆ ನನ್ನ ಭಾಗ್ಯಕ್ಕೆ ಎಣೆಯಿಲ್ಲದಂತಾಗುವುದು. ಇನ್ನು ಶಿವಾಂಗಿಯ ಮನಸ್ಸನ್ನು ಸದಾ ಪ್ರಸನ್ನೀಕರಿಸುವುದೇ ಈ ಕರಾಳನ ಮುಖ್ಯಕೆಲಸ. (ಭುಜಂಗ ಬರುವನು)

ಭುಜಂಗ   :   ಧಣಾಯಕರೇ! ಉಷಃಕಾಲದ ತಂಪೆಲರನ್ನು ಸೇವಿಸುವದಕ್ಕಾಗಿ ಎಲ್ಲರಿಗಿಂತ ಮುಂಚಿತವಾಗಿ ಬಂದು ಬಿಟ್ಟಿರುವಿರಿ. ಧಣಾಯಕರೇ! ಪ್ರತಿನಿಧಿಗಳ ಸರ್ವಾಧಿಕಾರಿಗಳು ಇಷ್ಟರಲ್ಲಿಯೇ ಬರಬಹುದು. ನೀವು ಕಾರಾಗೃಹಕ್ಕೆ ಹೋಗಿ ಪೆಟ್ಟಿಗೆ ಹೊರಸಿಕೊಂಡು ಇತ್ತ ಕಡೆಗೆ ಬನ್ನಿ, ಪೆಟ್ಟಿಗೆಯನ್ನು ಬೇಗನೇ ಕಂಪಲಿಗೆ ಕಳುಹಿಸಬೇಕಾಗಿದೆ ನಡೆಯಿರಿ. (ಕರಾಳ

ಹೋಗುವನು) ಸುಂದರವಾದ ಆಶಾ ಚಿತ್ರ. ಈ ದಿನ ರಾತ್ರಿಯಲ್ಲಿ ನನ್ನಲ್ಲಿ ಚೈತನ್ಯ ತುಂಬುವುದು. ಧನ್ಯ ಭುಜಂಗಾ! ನಿನ್ನ ಬರಿದಾದ ಹೃದಯವು ಆನಂದಾಮೃತದಿಂದ ತುಂಬಿ ಉಕ್ಕೇರಬಹುದು. ಗೌರಾಂಬಿಕೆ! ನಿನ್ನ ಸಹೋದರನ ರಾಕ್ಷಸೀ ಮಹತ್ವಾಕಾಂಕ್ಷೆಯ ಲಾಭವನ್ನು ನಾನು ಈಗ ಚೆನ್ನಾಗಿ ತೆಗೆದು ಕೊಂಡಿರುವೆ. ಗೌರೀ! ಈ ದಿನ ಮಧ್ಯ ರಾತ್ರಿಯಲ್ಲಿ ಹುಕ್ಕನ ರಕ್ತದಿಂದ ರಂಜಿತವಾಗುವ ಕರಗಳಿಂದ ನಿನ್ನನ್ನು ಆಲಂಗಿಸಿ ಯಥೇಚ್ಛವಾಗಿ ರತಿ ಸುಖವನ್ನು ಹೊಂದುವೆ. (ಮಲೀಕ, ರೌದ್ರದಾಮ ಬರುವರು)

ಮಲೀಕ — ಸೇನಾಪತಿಗಳೇ! ಇತ್ತಕಡೆಗೆ ಆ ಪೆಟ್ಟಿಗೆಯನ್ನು ತರಲಿಕ್ಕೆ ಹೇಳಿ ಕಳುಹಿಸಿರುವಿರೋ..? ಢಣಾಯಕರಿಗೆ ಬೇಗ ಬರಲಿಕ್ಕೆ ಆಜ್ಞಾಪಿಸಿರುವಿರೋ?

ಭುಜಂಗ — ಸರಕಾರದ ಆಜ್ಞೆಯಂತೆ ಯಾವತ್ತೂ ಸಿದ್ಧತೆಗಳು ಮಾಡಲ್ಪಟ್ಟಿವೆ. ಢಣಾಯಕರು ಪೆಟ್ಟಿಗೆಯನ್ನು ಹೊರಸಿಕೊಂಡು ಬರುತ್ತಿರುವರು. (ಪೆಟ್ಟಿಗೆ ಕೆಳಗಿಡುವರು)

ಮಲೀಕ — ಆ ದುಷ್ಟನು ನನ್ನನ್ನು ಮಲೀಕಾ ಎಂದು ಏಕವಚನದಲ್ಲಿ ಸಂಬೋಧಿಸಿದನಲ್ಲವೇ ಅದರ ನಿವಾರಣೆಗಾಗಿ ನನ್ನ ಎಡಗಾಲಿನಿಂದ ಅವನ ಹೃದಯದ ಮೇಲೆ ತಾಡನ ಮಾಡುವೆ. ಎಲೋ ಪೆಟ್ಟಿಗೆಯ ಮುಚ್ಚಳವನ್ನು ತೆಗೆಯಿರಿ. (ಅದರಂತೆ ಮಾಡುವರು)

ಕರಾಳ — ಅಯ್ಯೋ ಅಮ್ಮಾ ಆ ಸೈತಾನನು ಮಾಯವಾಗಿರುವನು ಸರಕಾರ....

ಮಲೀಕ — ಏನು ಅವನು ಮಾಯವಾಗಿರುವನೇ (ಕೈ ಹಿಡಿದು) ಕೊಂಕ ಚೇಷ್ಟೆಯು ನನ್ನ ಮುಂದೆ ನಡೆಯಲಾರದು. ದುಷ್ಟಾ ಮೋಸವನ್ನು ಮಾಡಿದಿ. ಹೇಳು, ಆ ಸೈತಾನನ್ನು ಎಲ್ಲಿಗಟ್ಟಿದಿ.

ಬದ್ಮಾಷ್, ನನ್ನ ಸರ್ವಸ್ವವನ್ನು ಹಾಳು ಮಾಡಿದಿ. ರೌದ್ರದಾಮಜೀ! ಕಾರಾಗೃಹದ ಮೇಲ್ವಿಚಾರಣೆಯ ಕೆಲಸವನ್ನು ಇವನಿಗೆ ಒಪ್ಪಿಸಲಿಕ್ಕೆ ನಿಮಗೆ ಹೇಗೆ ತಿಳಿಯಲಿಲ್ಲ. ಸೇನಾಸಾಗರಾ! ಢಣಾಯಕರ ಮೇಲೆ ನಮ್ಮ ದರ್ಪವೇ ಇಲ್ಲ. ನೀವೆಲ್ಲರೂ ಕೂಡಿ ಈ ಮಲೀಕ ನಾಯಬನನ್ನು ಮಣ್ಣು ಪಾಲು ಮಾಡಿದಿರಿ. ಈ ಸುದ್ದಿಯು ಸುಲ್ತಾನರಿಗೆ ತಿಳಿದರೆ ಬಾವುದ್ದೀನನ ಬದಲಾಗಿ ನನ್ನ ಮೈದೊಗಲನ್ನು ಸುಲಿಸುವರು. ಘಾತ। ಘಾತ!! ದುರಾತ್ಮಾ! ನಿನ್ನ ಶಿರವನ್ನು (ಖಡ್ಗ ಎತ್ತುವನು)

ರೌದ್ರದಾಮ : ಸರಕಾರ ಶಾಂತರಾಗಿರಿ! ಇನ್ನು ಒಂದೇ ವಾರದಲ್ಲಿ ಬಾವುದ್ದೀನನನ್ನು ತಂದು ತಮ್ಮ ಎದುರಿನಲ್ಲಿ ನಿಲ್ಲಿಸುತ್ತೇನೆ. ಆತನು ಭೂಮಿಯನ್ನು ಒಡೆದು ಹೋಗಿಲ್ಲವಷ್ಟೇ? ಸರಕಾರ! ಬಾವುದ್ದೀನನನ್ನು ಶೋಧಿಸುವ ಭಾರವು ನನ್ನ ಮೇಲಿದೆ ತಾವೇನೂ ಚಿಂತಿಸಬೇಡಿ.

ಮಲೀಕ. ರೌದ್ರದಾಮಜೀ! ಒಂದು ವಾರದೊಳಗೆ ಬಾವುದ್ದೀನನ ಶೋಧವಾಗಲಿಕ್ಕೇ ಬೇಕು. ಇಲ್ಲವಾದರೆ ನಿಮ್ಮೆಲ್ಲರ ಪರಿಣಾಮ ಒಳಿತಾಗಲಿಕ್ಕಿಲ್ಲ. (ಹೋಗುವನು.)

ರೌದ್ರದಾಮ : ಕರಾಳಜೀ! ಅಂಜಬೇಡಿ. ನಿಜವಾದ ಸಂಗತಿಯನ್ನು ಹೇಳಿ.

ಕರಾಳ ಸರಕಾರ! ಈ ಪಾದಸಾಕ್ಷಿಯಾಗಿ ನಾನೇನು ಮೋಸ ಮಾಡಿಲ್ಲಾ.....

ರೌದ್ರದಾಮ : ಕರಾಳಜೀ! ನಿಮಗಾವ ಅಪಾಯ ಮಾಡಗೊಡುವದಿಲ್ಲ ನಿಜವಾದ ಸಂಗತಿಯನ್ನು ಹೇಳಿ.

ಕರಾಳ ಸರಕಾರ! ನಿನ್ನೆ ರಾತ್ರಿ ಸೆರೆಮನೆಯನ್ನು ನೋಡ-ಬೇಕಾಗಿದೆಯೆಂದು ಶಿವಾಂಗಿ ಮಾತ್ರ ಒಳಗೆ ಹೋಗಿದ್ದಳು.

ರೌದ್ರದಾಮ : ಅವಳೇ... ಅವಳೇ! ಮೋಸಗಾರ್ತಿಯು. ಕರಾಳಜೀ... ಗುಜಗಂಟೆಯನ್ನು ಒಳಗೆ ಬಿಡಲಿಕ್ಕೆ ನಿಮಗೆ ಹೇಗೆ ತಿಳಿಯಲಿಲ್ಲ.

ಸೆರೆಮನೆಯು ವಸ್ತು ಸಂಗ್ರಹಾಲಯವೋ ಅಥವಾ ಚಿತ್ರ ಶಾಲೆಯೋ, ಇಷ್ಟು ಸಹ ನಿಮಗೆ ತಿಳಿಯಲಿಲ್ಲವೇ? ಬುದ್ಧಿ ಶೂನ್ಯನೇ. ಆ ಸೆರೆಮನೆಯಲ್ಲಿ ಒಂದು ಗುಪ್ತಮಾರ್ಗವಿದೆಯೆಂದು ಹೇಳಿದ್ದೆನು. ಮರೆತು ಬಿಟ್ಟೆಯಾ? ಹೇಡಿಯಾದ ನಿನ್ನನ್ನು ಥಣಾಯಕನನ್ನಾಗಿ ನೇಮಿಸಿರುವುದೇ ನನ್ನ ತಪ್ಪಾಯಿತು. ಕರಾಳಾ.... ಆ ಗುಜಗಂಟೆಯ ವಯ್ಯಾರಕ್ಕೆ ಮರುಳಾಗಿ ಕಾರ್ಯವನ್ನು ಕೆಡಿಸಿ ಬಿಟ್ಟೆ.

ಕರಾಳ   ಸರಕಾರ! ನಾನು ತಮಗೆ ಮೊದಲೇ ಹೇಳಿದ್ದೆನು. ಲೆಕ್ಕಣಿಕೆಯನ್ನು ಹಿಡಿಯುವ ಕೈಯು ಖಡ್ಗವನ್ನು ಹಿಡಿಯಬಹುದೇ ಹೇಳಿ. ಸರಕಾರ ನನ್ನದೇನು ತಪ್ಪು? ಸರಕಾರ ಇದೊಂದು ಸಲ ನನ್ನನ್ನು ಕ್ಷಮಿಸಬೇಕು.

ರೌದ್ರದಾಮ :   ಸಾಕು ಸುಮ್ನೇ ಹೋಗು. (ಹೋಗುವನು) ಭುಜಂಗರಾವ! ನಿಮ್ಮ ಕಾರ್ಯದಲ್ಲಿ ಹೀಗೆ ಅವ್ಯವಸ್ಥೆಯಾಗತಕ್ಕದ್ದಲ್ಲ. ಬಹುಜೋಕೆಯಿಂದ ಕಾರ್ಯವನ್ನು ಪೂರೈಸಬೇಕು. ಭುಜಂಗರಾವ! ಶಿವಾಂಗಿಯು ಕಣ್ಣಿಗೆ ಬಿದ್ದ ಕೂಡಲೇ ಅವಳನ್ನು ತುಂಡರಿಸಿ ಚಲ್ಲತಕ್ಕದ್ದು. (ಹೋಗುವನು).

ಶಿವಾಂಗಿ   ಹುಕ್ಕ ಕುಮಾರನ ಆಜ್ಞೆಯಂತೆ ಬಾವುದ್ದೀನರನ್ನು ಬಂಧಮುಕ್ತ ಮಾಡಿದೆ ಪಂಪಾಪತೇ! ನನ್ನೀ ಕಾರ್ಯದಲ್ಲಿ ಯಶಸ್ಸನ್ನು ನೀಡಿದ್ದಕ್ಕಾಗಿ ನಿನ್ನನ್ನು ಎಷ್ಟುಕೊಂಡಾಡಿದರೂ ಅತ್ಯಲ್ಪವೇ ಸರಿ. ಈ ದಿನ ಮಧ್ಯರಾತ್ರಿಯಲ್ಲಿ ರೌದ್ರದಾಮನ ಕಾರಸ್ಥಾನ ಕಟ್ಟಡವನ್ನು ನೆಲೆಸಮ ಮಾಡುವದಕ್ಕೆ ಪಂಪಾವತೇ ಅನುಗ್ರಹವನ್ನು ದಯಪಾಲಿಸು. ಪಂಪಾಪತೆ! ನಿನ್ನ ಭಕ್ತರ ಮಾನಾಭಿಮಾನಗಳು ನಿನ್ನನ್ನೇ ಕೂಡಿರುವವು. (ಹೋಗುವಳು)

೪ನೇ ಪ್ರವೇಶ

ಸ್ಥಳ : ಕಾರಾಗೃಹ ಸಮಯ : ಮಧ್ಯರಾತ್ರಿ

ಸೇವಕ — ರೌದ್ರದಾಮ ಪ್ರಧಾನರು ಈ ಪತ್ರವನ್ನು ಕೊಟ್ಟಿರುವರು ಸ್ವೀಕರಿಸಬೇಕು.

ಲಲಿತಾ — (ಪತ್ರಓದಿ) ನಿಷ್ಠುರವಾದ ದೈವವೇ! ಲಲಿತೆಯನ್ನು ಅಧೋಗತಿಯ ದಾರಿಯಲ್ಲಿ ನೂಕಿಬಿಟ್ಟೆಯಾ! ಮಾತೆ ಭುವನೇಶ್ವರಿ! ಹೆಜ್ಜೆ ಹೆಜ್ಜೆಗೆ ಉದ್ಭವಿಸುವ ಸಂಕಟಾನಲದಲ್ಲಿ ಬೆಂದು ಹೋಗುತ್ತಿರುವ ಈ ದೇಹದೊಳಗಿನ ಪ್ರಾಣವನ್ನು ಒಮ್ಮೆ ಕಡೆಗೆ ಮಾಡಬಾರದೇ ಅಮ್ಮಾ! ನೀನಾದರೂ ನನ್ನನ್ನು ಕಡೆಗೊಯ್ಯಬಾರದೇ ಈ ಹತಭಾಗ್ಯಳಾದ ಲಲಿತೆಯನ್ನು ತಾತಾ ಆಗ್ಗೆ ನೀವಾದರೂ ತುಂಡರಿಸಿ ಚೆಲ್ಲಿದ್ದರೇ....

-: ಪದ್ಯ :-

(ರಾಗ - ಕಾಲಿಂಗಡಾ - ತಾಲ - ತ್ರಿತಾಲ)

ಶಾಂತಾಕಾರನಾ ಶೌರ್ಯದ ತೇಜಾ
ತಾ ತುಂಬುತಿರಲಿ ಘೂಮ್ಯಾಕಾಶರು
ರಮಣಿಗೆ ರಾಹು ಗ್ರಹ ಹಿಡಿದಾಗ
ಸಂಭ್ರಮವೇತಕೆ ಸತಿಗೆ ಸುಜಾತಾ

ಹೀಗೆ ಮಾಡಲಿಕ್ಕೇ ಬೇಕು. ಹುಕ್ಕಕುಮಾರನ ರಕ್ಷಣೆಯಾಗಲೇಬೇಕು. ಲಲಿತೇ! ನಶ್ವರವಾದ ದೇಹದಭಿಮಾನವನ್ನು ದೂಡಿಬಿಡು. ಪ್ರೇಮ ಭಾಂಡಾರವನ್ನೊಡೆದು ಬಿಡು. ಹೃದಯ ಮಂದಿರದಲ್ಲಿ ತೂಗಿಹಾಕಿರುವ ಮನೋಹರ ಸುಂದರವಾದ ಚಿತ್ರವನ್ನು ತೆಗೆದುಬಿಡು. ಹೃದಯಸ್ಥ ಮಂಗಲ ಚಿತ್ರಾ! ಪ್ರೇಮದ ಪವಿತ್ರ ಪರಮೇಶ್ವರಾ! ನಿನ್ನನಿರೂಪವನ್ನು ಪಡೆದು ಅಧೋಗತಿಯ ಗುಹೆಯಲ್ಲಿ ನಿನಗೆ ಕಾಣದಂತೆ ಕಾಲಹರಣ ಮಾಡುವೆ.

ಮನೋಹರ ಚಿತ್ರಾ ಈ ಲಲಿತೆಯನ್ನು ತ್ಯಜಿಸಿ ಬಿಡು. ಸುಂದರ ಚಿತ್ರಾ ಲಲಿತೆಯ ಸಲುವಾಗಿ ಚ್ಯುತಿಯನ್ನು ಹೊಂದಬೇಡ. ಭಾಗ್ಯಶಾಲಿಯ ಚಿತ್ರಾ ಭುವನೇಶ್ವರಿಯ ಕೃಪೆಯಿಂದ ಲಲಿತೆಯನ್ನು ಮರೆತು ಜಗತ್ತಿನ ಉದ್ಧಾರ ಮಾಡು.

ಭುಜಂಗ — ಹುಕ್ಕ ನಿನ್ನ ಪ್ರೇಮ ಪಾತ್ರಳ ದರ್ಶನ ತೆಗೆದುಕೋ, ಕೊಂಚ ಕಾಲದಲ್ಲಿಯೇ ನಾನು ಬರುವೆ. (ಹೋಗುವನು)

ಲಲಿತೆ — ಮಹಾರಾಜ! ಪರಿಸ್ಥಿತಿಯ ಪ್ರಖರತೆಯಿಂದ ಹೃದಯವು ಕರಗಿ ಕರಗಿ ರೂಪಾಂತರವನ್ನು ಹೊಂದಬಹುದೇ? ಈ ರೂಪಾಂತರ ಹೊಂದಿದ ಹೃದಯಕ್ಕೆ ಪಾಪವು ಸೋಂಕಬಹುದೇ? ಕುಮಾರಿಯ ಚಾಂಚಲ್ಯವನ್ನು ಚೆಲ್ಲಿಕೊಡದೇ ಪ್ರೇಮದತ್ತಾಪಹರಣ ಮಾಡಿದರೆ ಕುಮಾರಿಗೆ ಪಾಪವು ತಟ್ಟುವುದೇ....

ಹುಕ್ಕ — ಲಲಿತೆ ಇದೆಲ್ಲವನ್ನು ಏತಕ್ಕೋಸ್ಕರವಾಗಿ ಕೇಳುತ್ತಿರುವಿ.

ಲಲಿತೆ — ನಿಮ್ಮಿಂದ ನಿರೋಪವನ್ನು ಪಡೆಯುವದಕ್ಕಾಗಿ.

ಹುಕ್ಕ — ಲಲಿತೇ.... ಹೀಗೇಕೆ ಮಾತನಾಡುತ್ತಿರುವಿ:.....

ಲಲಿತಾ — ಮಹಾರಾಜ! ಓದಿಕೊಳ್ಳಿ.

ಹುಕ್ಕ — (ಓದಿ) ರಾಕ್ಷಸೀ ಹೃದಯದ ರೌದ್ರದಾಮನು ಕಡೆಗೆ ಕಾರಸ್ಥಾನ ರಚಿಸಿದನೇ... ನೀಚಾತ್ಮರು ಬೇಕಾದಂಥ ನೈಚ್ಯವನ್ನು ಪ್ರದರ್ಶಿಸಿ ತಮ್ಮ ದುಷ್ಟ ಇಚ್ಛೆಯನ್ನು ಪೂರ್ಣಮಾಡಿಕೊಳ್ಳುವರು. (ಉಸುರ್ಗರೆದು) ಲಲಿತೆ ನೀನೇನು ಮಾಡಬೇಕೆನ್ನುವಿ?

ಲಲಿತಾ — ಅಬಾಲ ಹೃದಯವು ಸೂಚಿಸಿದಂತೆ ಮಾಡಲುದ್ಯುಕ್ತಳಾಗಿರುವೆ. ಮಹಾರಾಜ! ಪರಮೇಷ್ಠಿಯು ಸೃಷ್ಟಿಯಲ್ಲಿ ಮಾನವ ರೂಪಿ ಸರ್ಪಗಳನ್ನು ಏಕೆ ಸೃಜಿಸಿರಬಹುದು. ಧರುಣಿಯಿದು ಭಂಗವಾಗಿ ಈ ಸರ್ಪಕುಲವನ್ನು ರಸಾತಲಕ್ಕಿಳಿಸಬಾರದೇ ದೇವಾ। ತ್ರಿಲೋಚನಾ! ನಿನ್ನ ಮೂರನೆಯ ನೇತ್ರದಿಂದ

ಪ್ರಲಯಾಗ್ನಿಯನ್ನುಸುರಿಸಿ ಈ ನೀಚರಪಿಂಡ ಮೂಲವನ್ನೇ ಸುಟ್ಟುಹಾಕಬಾರದೇ?

ಹುಕ್ಕ — ಲಲಿತಾ! ಪ್ರಾಕ್ತನದ ಕರ್ಮವು ಪಾಪಮಯವಾಗಿದ್ದರೆ ಅದು ಈ ರೀತಿಯಾಗಿ ಮಾನವ ಪ್ರಾಣಿಯ ಬೆನ್ನು ಹತ್ತುವದು. ಈಗ ನೀನೇನು ಮಾಡಬೇಕೆನ್ನುವಿ ಸ್ಪಷ್ಟ ಹೇಳು.

ಲಲಿತಾ — ಮಹಾರಾಜ! ರೌದ್ರದಾಮನಿಂದ ಆಗುವ ತಮ್ಮ ನಾಶವನ್ನು ತಪ್ಪಿಸುವದಕ್ಕಾಗಿ ಛೇ ಹಾಯ್ ಮಹಾರಾಜ. ಮುಂದಿನ ಶಬ್ದವನ್ನು ಉಚ್ಚರಿಸಲಾರೆ, ಮಹಾರಾಜ! ಈ ಪಾದ ಪದ್ಮಗಳ ದೋಷವು ಪದರಿನಲ್ಲಿ ಬಿದ್ದರು ಚಿಂತೆಯಿಲ್ಲ. ಕನ್ಯೆಯರು ನನ್ನ ಮೇಲೆ ದೂಷಣೆಯ ಮಳೆಗೆರೆದರೂ ಚಿಂತೆ ಇಲ್ಲ. ತಮ್ಮ ನಾಶ. ಛೇ! ಕಲ್ಪನೆಗೂ ಕೂಡಾ ಅಸಹ್ಯವೆನಿಸುವುದು.

ಹುಕ್ಕ — ಲಲಿತಾ! ನಿನ್ನ ಮನೋದಯವು ತಿಳಿಯಿತು. ನಿನ್ನ ದಿವ್ಯಪ್ರೇಮದ ಹೋಳಿಯನ್ನು ಮಾಡಬೇಕೆನ್ನುವಿಯಾ?

ಲಲಿತಾ — ಲಲಿತೆಯ ಪ್ರೇಮವು ದಿವ್ಯ ಪ್ರೇಮವೇ ಅಲ್ಲಾ. ನಿಶ್ಚಯವಾಗಿ ಅಲ್ಲಾ. ಯಾವ ಪ್ರೇಮವು ತಮ್ಮ ನಾಶಕ್ಕೆ ಕಾರಣವಾಗಿರುವದು ಆ ಪ್ರೇಮವು ದಿವ್ಯ ಪ್ರೇಮವೇ... ಮಹಾರಾಜ! ತಮ್ಮ ಯಜ್ಞದಲ್ಲಿ ಪ್ರೇಮದ ಆಹುತಿ ಕೊಟ್ಟು ತಮ್ಮ ಜೀವವನ್ನು ಪಡೆಯುವುದು ಈ ಕುಮಾರಿಯ ಕರ್ತವ್ಯವಲ್ಲವೇ?

ಹುಕ್ಕ — ಓರ್ವ ಕುಮಾರಿಯ ಪ್ರೇಮವನ್ನು ಬಲಿಕೊಟ್ಟು ಮುಖವೆತ್ತಿ ಮೆರೆಯುವುದು ನನಗೆ ಬೇಕಾಗಿಲ್ಲ.

ಲಲಿತಾ — ಮಹಾರಾಜ! ರಾಷ್ಟ್ರೋದ್ಧಾರಕನ ಜೀವಾಪಹರಣವನ್ನು ಮಾಡಿಸುವಂಥ ಪ್ರೇಮದ ನಾಶವಾಗಲಿಕ್ಕೇಬೇಕು.

ಹುಕ್ಕ — ಇದಕ್ಕೆ ನನ್ನ ಒಪ್ಪಿಗೆಯಿಲ್ಲಾ.

ಲಲಿತಾ — ಮಹಾರಾಜ! ಕನ್ನಡ ಮಾತೆಯು ತಮ್ಮನ್ನೇ ನೋಡುತ್ತ ಕಾಲಕಳೆಯುತ್ತಿರುವಳು. ಅವಳ ಉದ್ಧಾರವನ್ನು ಯಾರ ಮಾಡುವರು?

ಹುಕ್ಕ — ದೇಶಮಾತೆಯ ಸೇವೆಯನ್ನು ಮಾಡುವದಕ್ಕಾಗಿ ನನ್ನಂಥ ಸಹಸ್ರಾವಧಿ ಜನರು ಸಿದ್ಧರಾಗಿರುವರು.

ಲಲಿತಾ — ಮಹಾರಾಜ! ಹಾಗೆನ್ನಬೇಡಿ ಹುಕ್ಕ ರಹಿತವಾದ ಭೂಮಿಯಲ್ಲಿ ಜೀವಿಸುವದು ನನ್ನಿಂದಾಗಲಾರದು. ಮಹಾರಾಜ! ನಾಡಿನ ಘಾತವನ್ನು ಮಾಡಿದ ಪಾಪವನ್ನು ಪದರಿನಲ್ಲಿ ಕಟ್ಟಿಕೊಳ್ಳಲಾರೆ.

ಹುಕ್ಕ — ಲಲಿತಾ! ಹುಕ್ಕನಿಂದ ಕನ್ನಡ ನಾಡಿನ ಸೇವೆಯಾಗಬಾರದೆಂದು ವಿಧಿ ಸಂಕಲ್ಪವಿದ್ದರೆ ನೀನೇನು ಮಾಡುವಿ. ವಿಧಿ ಸಂಕಲ್ಪವನ್ನು ಎದುರಿಸುವದು ಮಾನವರಿಗೆ ಶಕ್ಯವಿಲ್ಲ! ಲಲಿತಾ! ಹುಕ್ಕಾಭಿಮುಖವಾಗಿ ಹರಿಯುವ ನಿನ್ನ ಪ್ರೇಮ ಪ್ರವಾಹವನ್ನು ತಡೆಯುವುದು ನನ್ನಿಂದಾಗದು. ಹುಕ್ಕನು ದೇಹವನ್ನು ತ್ಯಜಿಸಲೇಬೇಕು.

ಲಲಿತಾ — ಅಭದ್ರ ನುಡಿಗಳನ್ನು ನುಡಿಯಬೇಡಿ. ತಮ್ಮ ಭಾವೀ ಉತ್ಕರ್ಷದ ಚಿತ್ರವು ನನ್ನೀ ಯೋಜನೆಯಲ್ಲಿ ಪ್ರತಿಬಿಂಬಿಸಿರುವದು. ಮಹಾರಾಜ! ಮನಸ್ಸಿನಿಂದಲೂ, ಆಶೆಯು ಕಲ್ಪನೆಯಿಂದಲೂ, ಕಲ್ಪನೆಯು ಸ್ವಪ್ನದಿಂದಲೂ, ಸ್ವಪ್ನದ ಕಲ್ಪನೆಯಿಂದಲೂ ದೃಷ್ಟಿಗೋಚರವಾಗುತ್ತಿರುವ ಸೌಭಾಗ್ಯದ ಚಿತ್ರವನ್ನು ನಶಿಸುವದು ನನ್ನಿಂದಾಗದಿದ್ದರೂ ಭವಿತವ್ಯತೆಗೆ ಮಿಕ್ಕಿರುವದಿಲ್ಲ ಆರ್ಯಕುಮಾರಿಯಾದ ದೇವಯಾನಿಯು ಒಮ್ಮೆ ತನ್ನ ಪ್ರೇಮವನ್ನು ಕಚದೇವನಿಗೆ ಒಪ್ಪಿಸಿದ್ದಿಲ್ಲವೇ? ಆದರೆ ಅವಳ ಭವಿತವ್ಯತೆಯು ಕ್ಷತ್ರಿಯನಾದ ಯಯಾತಿಯ ಪತ್ನಿ ಪದ ಶೃಂಖಲೆಗಳಿಂದ ಅವಳನ್ನು ಬಾಧಿಸಿತು. ಅವಳ ಛಿನ್ನ. ವಿಛಿನ್ನವಾದ ಹೃದಯವು ಹೇಗೋ ಕಾಲಹರಣ ಮಾಡಿತು.

ಹುಕ್ಕ — ಲಲಿತಾ! ಅಸಹ್ಯವಾದ ವಿಕಾರಕ್ಕೆ ಅಸ್ಪದವನ್ನು ಕೊಡಬೇಡ. ಹುಕ್ಕನ ಆಯುಷ್ಯ ಸೂತ್ರವು ಜೀರ್ಣವಾಗಿದ್ದರೆ.....

ಲಲಿತಾ — ಮಹಾರಾಜ! ಮಹಾರಾಜ! ಅಭದ್ರ ಶಬ್ದಗಳನ್ನು ಪುನಃ ಪುನಃ ಉಚ್ಚರಿಸಬೇಡಿ. ನಾನು ತಮ್ಮ ಕ್ಷಮೆಯನ್ನು ಬೇಡುವೆ. ಈ ಪಾಪಿಣಿಯನ್ನು ಕ್ಷಮಿಸಿ ಅಪ್ಪಣೆಯನ್ನು ಕೊಡಿ.

ಮುಕ್ಕ — ಆ ನೀಚಾತ್ಮರು ನಿನ್ನ ಪ್ರೇಮಭಾಂಡಾರವನ್ನು ಅಪಹರಿಸಿದ ನಂತರ ನನ್ನ ಪ್ರಾಣಹರಣ ಮಾಡಲಿಕ್ಕಿಲ್ಲೆಂದು ಹೇಗೆ ತರ್ಕಿಸುವಿ! ಲಲಿತಾ! ಸದ್ಗುರುವಿನ ಪುಣ್ಯಪಾದವನ್ನು ಅವಲಂಬಿಸಿರುವ ನಾವು ಆತನ ಚರಣವನ್ನು ನಂಬಿ ಸುಮ್ಮನಿರುವಾ! ಮಹಾತ್ಮಾ ಮಾಧವಾರ್ಯರ ಆಶೀರ್ವಾದದ ಶಕ್ತಿಯೇ ನಮ್ಮನ್ನು ಕಾಯುವದು.

ಲಲಿತಾ — ಮಹಾರಾಜ! ಸದ್ಗುರುವಿನ ಸಾಮರ್ಥ್ಯದ ಬಗ್ಗೆ ಶಂಕೆಯನ್ನು ಎತ್ತಿರುವೆನೆಂದು ತಿಳಿಯಬೇಡಿ. ನಾನು ನನ್ನ ಕರ್ತವ್ಯ ಕರ್ಮವನ್ನು ಮಾಡಲಿಕ್ಕೇಬೇಕು. ಮಹಾರಾಜ! ನನ್ನ ಪ್ರೇಮ ನಿರ್ಮಲ ಪ್ರೇಮವಾಗಿದ್ದರೆ ಅದು ನನ್ನನ್ನು ನಿಮ್ಮೆಲ್ಲರನ್ನು ರಕ್ಷಿಸುವುದು ಮಹಾರಾಜ, ಅಪ್ಪಣೆಯನ್ನು ಕೊಡಿ.

ಮುಕ್ಕ — ಧನ್ಯ ಲಲಿತಾ ಧನ್ಯ. ನಿನ್ನ ಪ್ರೇಮಾರಾಧನವು ಅಪ್ರತಿಮವಿರುತ್ತದೆ. ದುರ್ದೈವದ ಜಾಲದಲ್ಲಿ ಸಿಕ್ಕಿ ಜಗತ್ತಿನಲ್ಲಿ ಪ್ರೇಮಭಂಗ, ಆಶಾಭಂಗ, ಮನೋಭಂಗಗಳ ಸುಳಿದಾಟವು ಅವ್ಯಾಹತವಾಗಿ ಸಾಗಿರುವುದು. ಪ್ರೀಯ್ಸಜನರ ಮೇಲೆ ಪ್ರಾಪ್ತವಾಗುವ ಸಂಕಟವನ್ನು ದೂರಿಕರಿಸುವುದಕ್ಕಾಗಿ ತಾನು ಕಲ್ಪಿಸಿರುವ ಸುಂದರವಾದ ಪ್ರಪಂಚವನ್ನು ಧಿಕ್ಕರಿಸಿ ಸಂಸಾರ ರಹಿತವಾದ ವಿವಾಹ ಪಾಶದಿಂದ ಬಂಧಿತಳಾಗದ ಆರ್ಯಕುಮಾರಿಯ ಸ್ವಾರ್ಥತ್ಯಾಗವೇ ನಿಜವಾದ ಸ್ವಾರ್ಥತ್ಯಾಗ. ಲಲಿತಾ! ವಿಕಸಿತವಾಗುವ ಗುಣ ಕುಸುಮದ ಪರಿಮಳವು ನಾಡಿನ ತುಂಬೆಲ್ಲ ಇಡಿಸಿ ಜನತೆಯ ಹೃದಯದಲ್ಲಿಯ ಸ್ವಾರ್ಥ ಮಾಲಿನ್ಯತೆಯನ್ನು ನಾಶಗೊಳಿಸಲಿ.

ಭುಜಂಗ ನಡೆ ಹುಕ್ಕಾ! ಇನ್ನುಳಿದ ವೇಳೆಯನ್ನು ಪರಮಾತ್ಮನ ಧ್ಯಾನದಲ್ಲಿ ಕಾಲ ಕಳೆ.

ಲಲಿತಾ ದೈವದ ದುಶ್ಚಿತ್ರವೇ! ನಿನ್ನ ವಿಕ್ರಾರಾಳ ಸ್ವರೂಪದ ಪರಿಚಯವನ್ನು ಚೆನ್ನಾಗಿ ಮಾಡಿಕೊಟ್ಟೆ.

ಲಲಿತಾ ರೌದ್ರದಾಮಜಿ! ನನ್ನ ಅವಿಚಾರದ ವರ್ತನೆದಿಂದ ರೊಚ್ಚಿಗೆದ್ದ ತಮ್ಮ ಮನವನ್ನು ಶಾಂತ ಪಡಿಸಿ ಈ ಲಲಿತೆಯನ್ನು ಅಪರಾಧ ಸಹಿತವಾಗಿ ಕ್ಷಮಿಸಿರಿ.

ರೌದ್ರದಾಮ : ಸ್ವಾಭಿಮಾನದ ಖಣಿಯೇ. ನಿನ್ನ ದರ್ಪ ದಮನವಾಯಿತೇ....

ಲಲಿತಾ ದರ್ಪದಮನವಾಗಿ ಲಲಿತೆಯು ನಮ್ರತ್ವದ ಖಣಿಯಾಗಿರುವಳು. ಇದನ್ನು ಸ್ಪಷ್ಟೀಕರಿಸುವದಕ್ಕಾಗಿ ಲಲಿತೆಯು ತನ್ನ ಪ್ರೇಮ ದಾನಮಾಡಲು ಸಿದ್ಧಳಾಗಿರುವಳು. ರೌದ್ರದಾಮಜಿ! ಲಲಿತೆಯ ಶತಾಪರಾಧಗಳನ್ನು ಕ್ಷಮಿಸಬೇಕು.

ರೌದ್ರದಾಮ : ನೀನು ನಿನ್ನ ಪ್ರೇಮವನ್ನು ದಾನ ಮಾಡುವೆಯಾ! ಅದನ್ನು ಹುಕ್ಕನಿಗೆ ಒಪ್ಪಿಸಿದ್ದಿಯಷ್ಟೇ ಅದನ್ನು ನನಗೆ ಒಪ್ಪಿಸುವೆಯಾ? ನೀನು ಅದನ್ನು ದಾನ ಮಾಡುವೆಯಾ? ಯಾವದನ್ನು ಬಲಾತ್ಕಾರದಿಂದ ಕಸಿದು ಕೊಳ್ಳುವಷ್ಟು ಶಕ್ತಿಯು ಈ ಕರದಲ್ಲಿರುವಾಗ ನಿನ್ನ ದಾನವನ್ನು ಸ್ವೀಕರಿಸಲಿಕ್ಕೆ ಈ ಕರವನ್ನು ಮುಂದೆ ಚಾಚಬೇಕೇ....

ಲಲಿತಾ ಬಲಾತ್ಕಾರದಿಂದ ವಶಪಡಿಸಿಕೊಂಡೆನೆಂದು ತಿಳಿಯಿರಿ.

ರೌದ್ರದಾಮ : ಕೇವಲ ಕಲ್ಪನೆಯು ಮನಸ್ಸಿಗೆ ಆನಂದವನ್ನು ಕೊಡಲಾರದು. ನಾನು ಕೃತಿಯನ್ನು ಮಾಡಿ ಆನಂದ ಪಡೆಯುವಂಥ ಸ್ವಭಾವದವನು. ನಿನ್ನ ಉದ್ದಾಮ ವೃತ್ತಿಯ ಚಿತ್ರವನ್ನು ಕಣ್ಣಾರೆ ಕಂಡಿರುವೆ. ಬುದ್ಧಿಶೂನ್ಯಳೇ.... ವಿಷದ ಬಾಧೆಯಿಂದ ಒದ್ದಾಡುತ್ತಿದ್ದ ಮುದಿ ತಂದೆಯನ್ನು ಬದುಕಿಸಿಕೊಳ್ಳೆಂದು ಸಾಸಿರ ಸಲ ಹೇಳಿದಾಗ್ಯೂ ನೀನು ನಿನ್ನ ಉದ್ದಾಮ ವೃತ್ತಿಯನ್ನು

ಬಿಡಲಿಲ್ಲ. ಕುಮಾರಿಯಾದ ನೀನು ವಿವಾಹ ಸ್ತ್ರೀಯಂತೆ ಸ್ವಾಭಿಮಾನದ ಶಬ್ದಗಳ ಸುರಿಮಳೆ ಮಾಡಿದಿ. ಆ ವೇಳೆಯಲ್ಲಿ ಅಂಕುರಿಸದ ಕೋಮಲ ವೃತ್ತಿಯು ಈಗ ನಿನ್ನ ಹೃದಯದಲ್ಲಿ ಹೇಗೆ ಉದ್ಭವಿಸಿತು. ಲಲಿತ! ನಿನ್ನ ಸವಿಯಾದ ಶಬ್ದಗಳಿಗೆ ಸಹಜವಾಗಿ ಬಲಿ ಬೀಳ ತಕ್ಕಂಥ ಮನುಷ್ಯ ನಾನಲ್ಲ. ಲಲಿತೆ! ಪಾದರಕ್ಷೆಗಳನ್ನು ಪಾದದಲ್ಲಿರಿಸುವಂಥ ವ್ಯವಹಾರ ಮನುಷ್ಯನಾಗಿರುವೆ.

ಲಲಿತಾ ಪಾದರಕ್ಷೆಯ ಕಿಮ್ಮತ್ತನ್ನೇ ನನಗೆ ಕೊಡಿ. (ರೌದ್ರದಾಮಜಿ!) ನಮ್ರತ್ವವನ್ನು ತಾಳಿರುವ ಈ ಲಲಿತೆಯು ವಿಷಾದ ಪಡಲಾರಳು. ನಾನು ಇಷ್ಟು ನಮ್ರತ್ವವನ್ನು ಎಂದೂ ತಾಳಿರಲಿಲ್ಲಾ.

ರೌದ್ರದಾಮ : ಹೆಚ್ಚಾಗಿ ತೋರಿಸುವ ನಮ್ರತ್ವದಲ್ಲಿ ಮೋಸವಿರುವುದೆಂಬುದನ್ನು ನಾನು ಬಲ್ಲೆನು.

ಲಲಿತಾ ಹೀಗೆ ನುಡಿಯಬೇಡಿ. ಲಲಿತೆಯ ನಮ್ರತ್ವದಲ್ಲಿ ಕಪಟದ ಕಣವೂ ಕೂಡಾ ದೊರೆಯಲಾರದು. ರೌದ್ರದಾಮಜಿ! ನಿರಪರಾಧಿಯಾದ ಹುಕ್ಕರಾಯರನ್ನು ಬಿಟ್ಟುಬಿಡಿ. ಲಲಿತೆಯ ಪ್ರೇಮದ ಸ್ವಾಮಿಯಾಗಿರಿ.

ರೌದ್ರದಾಮ : ಲಲಿತೇ! ಸ್ವಾಭಿಮಾನ ಸಂಪನ್ನರಾದ ಸ್ತ್ರೀ ಪುರುಷರು ಪರೋಪಕಾರಕ್ಕಾಗಿ ಸ್ವ-ಸುಖಕ್ಕೆ ತಿಲಾಂಜಲಿಯನ್ನು ಕೊಡುವರೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ನೀನು ಬಾಯ್ತೆರೆದು ಬೇಡುವ ಭಿಕ್ಷೆಯು ದೊರೆಯಲಾರದು. ತ್ಯಾಗದ ಭೋಗದ ಆನಂದವನ್ನು ಪಡಿಯಬೇಕೆಂಬ ನಿನ್ನ ಇಚ್ಛೆಯು ನೇರವೇರಿಸಲ್ಪಡಬಾರದು. ಹುಕ್ಕನು ಸಾಯಲೇಬೇಕು. ನಿನ್ನ ಕೌಮಾರ್ಯ ವ್ರತಭಂಗ ಮಾಡಿ ನಿನ್ನನ್ನು ವ್ಯಭಿಚಾರದ ದೋಷಕ್ಕೆ ಗುರಿಮಾಡುವೆ ಆಗ ಮಾತ್ರ ಆನಂದದಿಂದ ರೌದ್ರದಾಮನು ಕುಣಿದಾಡುವನು.

ಲಲಿತಾ   ರೌದ್ರದಾಮಜೀ! ಈ ಕುಮಾರಿಯನ್ನು ಕಳವಳ ಪಡಿಸಬೇಡಿ. ನಾನು ಸೆರಗೊಡ್ಡಿ ಬೇಡಿಕೊಳ್ಳುವೆ.ಶರಣಾಗತಳಾದ ಈ ಕುಮಾರಿಯನ್ನು ಕ್ಷಮಿಸಿ. ಅಭಯ ವಚನವು ದೊರೆಯುವವರೆಗೆ ಈ ಅಡಿಗಳನ್ನು ಅಶ್ರುಗಳಿಂದ ತೊಳೆಯುವೆನು.

ರೌದ್ರದಾಮ :   ತೊಳೆದು ಪಾದೋದಕವನ್ನು ತೆಗೆದು ಕೊಂಡಾಗ್ಯೂ ನಿನ್ನ ಇಚ್ಛೆಯನ್ನು ಪೂರ್ಣಗೊಳಿಸಲಾರೆನು. ಲಲಿತೇ! ಲಜ್ಜೆಯನ್ನು ನೀಗಿ ಮಾತಾಡಲಿಕ್ಕೆ ನಿನ್ನ ನಾಲಿಗೆಯು ಹೇಗೆ ಸಿದ್ಧವಾಯಿತು. ಬಾಣವು ಬಿಡಲ್ಪಟ್ಟ ಸ್ಥಳದಲ್ಲಿ ಅದರ ಗುರುತು ಕಾಣದಿದ್ದರೂ ಅದು ನೆಟ್ಟ ಸ್ಥಳದಲ್ಲಿ ಗಾಯಬೀಳುವುದು. ಗಾಯವೂ ಗುಣವಾದರೂ ಅದರ ಕಲೆಯು ಕೊನೆಯವರೆಗೆ ಉಳಿಯುವದು. ನೀನು ನನಗೆ ಕೃಷ್ಣ ಸರ್ಪವೆಂದು ಕರೆದಿದ್ದಿಯಲ್ಲವೇ? ಕೃಷ್ಣಸರ್ಪದಂತೆ ನಾನು ದುಷ್ಟನಿರಬಹುದು. ಆದರೆ ವಿಚಾರ ವಿಕಾರಗಳು ನನಗಿರುವವಲ್ಲವೇ? ಲಲಿತೆ! ಕಲ್ಲುಗಳನ್ನು ಒಗೆದೊಗೆದು ಕೃಷ್ಣಸರ್ಪವನ್ನು ಜಜ್ಜುವಾಗ ಕಲ್ಲಿಗೆ ವಿಷವು ಹತ್ತಿದರೆ ಅದಕ್ಕೆ ಹೊಣೆ ಯಾರು? ಲಲಿತೇ! ನನ್ನ ಮನವು ಕಲ್ಪಾಂತದವರೆಗೆ ರೂಪಾಂತರವನ್ನು ಹೊಂದಲಾರದು.

ಲಲಿತಾ   ಮಹಾರಾಜ! ತಮ್ಮ ಹೃದಯವು ಕರಗಲಾರದೆ? ರೌದ್ರದಾಮಜೀ! ನೀವೇ ಈ ಪತ್ರವನ್ನು ಬರೆದಿರುವಿರಲ್ಲ.

ರೌದ್ರದಾಮ :   ಬರೆದಿರಬಹುದು. ಆದರೆ ಈಗ ನಿನ್ನ ಬಾಳಪುಟದ ಮೇಲೆ ಅಧೋಗತಿಯ ಬರಹವನ್ನು ಬರೆಯುವಷ್ಟು ಶಕ್ತಿಯು ಈಗ ನನ್ನ ಕರದಲ್ಲಿರುವದು. (ಪತ್ರ ಹರಿಯುತ್ತ) ಹುಕ್ಕನು ಸಾಯಲೇಬೇಕು. ಅವಿವಾಹಿತಳಾದ ಲಲಿತೆಯನ್ನು ವ್ಯಭಿಚಾರದ ದೋಷಕ್ಕೀಡು ಮಾಡಲಿಕ್ಕೇಬೇಕು.

ಲಲಿತಾ   ರೌದ್ರದಾಮಜೀ! ಹೃದಯವನ್ನು ಬಿಚ್ಚಿ ಎಷ್ಟು ಪರಿಯಾಗಿ ಹೇಳಿಕೊಂಡರೂ ತಮ್ಮ ಹೃದಯವು ದ್ರವಿಸಲಾರದೇ?

ರೌದ್ರದಾಮ : ನನಗೀಗ ಹೃದಯವೇ ಇಲ್ಲ ಲಲಿತೇ! ಹುಕ್ಕನು ಸಾಯಲೇಬೇಕು ಮತ್ತು ನಿನ್ನ ಕೌಮಾರ್ಯವು ವ್ರತ ಭಂಗವಾಗಲಿಕ್ಕೇ ಬೇಕು.

ಲಲಿತಾ ಬೇಡಿ ರೌದ್ರದಾಮಜಿ! ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ ರಾಕ್ಷಸೀ ಕೃತ್ಯವನ್ನು ಮಾಡಬೇಡಿ. ಮಾನವೀಯತ್ವವನ್ನು ದೂಡಬೇಡಿ.

ರೌದ್ರದಾಮ : ಮಾನವೀಯತ್ವಾ! ದಾನವೀಯತ್ವಾ! ಇವುಗಳಲ್ಲಿಯ ಭೇದವು ನನಗೆ ಹೊಳೆಯಲಾರದು. ಮಾನವನ ಮಾಲಂಗಿಯು ಮಗುವಿಗೆ ಸ್ತನಪಾನ ಮಾಡಿಸುವಂತೆ ದಾನವನ ಹಿಡಂಬಿಯಾದರೂ ತನ್ನ ಮಗುವಿಗೆ ಸ್ತನಪಾನ ಮಾಡಿಸುವದಿಲ್ಲವೇ? ಆಮೇಲೆ ಒಬ್ಬಳಿಗೆ ಮಾನವ ಪ್ರಾಣಿಯೆಂದು ಇನ್ನೊಬ್ಬಳಿಗೆ ರಕ್ಕಸಿ ಎಂದು ಕರೆಯುವದೇಕೆ ನನ್ನ ದೃಷ್ಟಿಯಿಂದ ಅವರೀರ್ವರೂ ಸಮಾನ ಗುಣ ಉಳ್ಳವರು. ಲಲಿತೆ! ಹುಕ್ಕನು ಸಾಯಲೇಬೇಕು.

ಲಲಿತೆ ಥೂ ಪಾಪಾತ್ಮಾ! ಅಘೋರವಾದ ಕರ್ಮಗಳನ್ನು ಮಾಡಿ ನಿನ್ನ ನಲವತ್ತೆರಡು ವರುಷಗಳನ್ನು ರವರವ ನರಕದಲ್ಲಿ ಕೊಳೆಯಿಟ್ಟಿರುವಿ. ನೀಚಾ! ನಿನ್ನ ಕ್ಷಮೆಯನ್ನು ಬೇಡಿ ವ್ಯರ್ಥವಾಗಿ ವಾಣಿಯನ್ನು ಕೆಡಿಸಿಕೊಂಡೆನು. ಸ್ವಾರ್ಥದ ವಿಷವನ್ನು ಕಾರುವ ಮಾನವ ರೂಪಿ ಸರ್ಪಾ!

ರೌದ್ರದಾಮ : ಲಲಿತೇ! ಬಲಾತ್ಕಾರದ ಶಸ್ತ್ರದ ಪ್ರಯೋಗಮಾಡಿ ಇಗೋ ನಿನ್ನ ಕೌಮಾರ್ಯ ವ್ರತವನ್ನು........

ಗೌರಾಂಬಿಕಾ : (ಬುರುಕಿಯಿಂದ) ತಡೆ ಮುಂದಕ್ಕೆ ಹೆಜ್ಜೆಯನ್ನಿಡಬೇಡ. ಇಲ್ಲವಾದರೆ ನಿನ್ನ ಶಿರವು ಭೂಮಿಯ ಮೇಲೆ ಬೀಳುವದು.

ರೌದ್ರದಾಮ : ಯಾರು ನನ್ನನ್ನು ಬೆದರಿಸುವ ವ್ಯಕ್ತಿ ಇದಾವುದು?

ಗೌರಾಂಬಿಕಾ : ನಾನು ಆರ್ಯಕುಮಾರಿಯ ಮಾನರಕ್ಷಣೆಗಾಗಿ ಪ್ರಾಣದ ಪರಿವೆ ಹಿಡಿಯದೇ ಧಾವಿಸಿ ಬಂದ ಆರ್ಯಕುಮಾರಿ. ನಿನ್ನ ತಂಗಿಯಾದ ಗೌರಾಂಬಿಕಾ. (ಬುರಕಿ ತಗೆಯುವಳು)

ರೌದ್ರದಾಮ : ಗೌರೀ! ನೀನ್ಹೇಗೆ ಕಾರಾಗೃಹವನ್ನು ಪ್ರವೇಶಿಸಿದಿ? ನೀನಾವ ಬಲದಿಂದ ನನ್ನನ್ನು ಅಡ್ಡೈಸಿದಿ?

ಗೌರಾಂಬಿಕಾ : ಆರ್ಯಕುಮಾರಿಯ ಧರ್ಮಬಲದಿಂದ. ಸತ್ಯದ, ಧರ್ಮದ, ನಿಷ್ಠೆಯ ಬಲದಿಂದ. ಬುಕ್ಕರಾಯರ ಪಾದ ಪುಣ್ಯ ಬಲದಿಂದ.

ರೌದ್ರದಾಮ : ಹೀಗೋ! ಗೌರಿ! ಹುಕ್ಕನ ಪಾದ ಪುಣ್ಯವು ಲಲಿತೆಗೆ ದಿಕ್ಕು ತಪ್ಪಿಸಿತು. ಬುಕ್ಕನ ಪಾದ ಪುಣ್ಯವು ನಿನಗೆ ಬಿಕ್ಕೆ ಬೇಡಲು ಹಚ್ಚುವದು! ಗೌರೀ ಈ ರೌದ್ರದಾಮನ ಹೃದಯದ ಆಳವು ನಿನಗೆ ತಿಳಿಯಲಾರದು.

ಗೌರಾಂಬಿಕಾ : ಅದು ನನಗೆ ತಿಳಿಯದಿದ್ದರೆ ಮತ್ತಾರಿಗೆ ತಿಳಿಯಬೇಕು. ರೌದ್ರದಾಮಾ! ಕಾಲಕೂಟನ ಮಾರಕ ಶಕ್ತಿಯನ್ನು ನಿವಾರಿಸುವುದಕ್ಕೆ ಅಮೃತವು ಕಾಲಕೂಟನ ತಂಗಿಯಾಗಿ ಹುಟ್ಟಿ ಬರಲಿಲ್ಲವೇ? ಹೋಗೋ ರೌದ್ರದಾಮಾ. ನಿನ್ನ ಕೃಷ್ಣ ವದನವನ್ನು ಕಟ್ಟಿಕೊಂಡು ಎಲ್ಲಿಗಾದರೂ ಹೋಗು. ರೌದ್ರದಾಮಾ ನನ್ನ ಕೈಯಲ್ಲಿ ಖಡ್ಗವಿರುವವರೆಗೆ ರಾಜಕುಮಾರಿಯ ಕೂದಲೆಳೆಯು ಸಹ ಕೊಂಕಲಾರದು.

ರೌದ್ರದಾಮ : ಮೊದಲು ಗೌರಾಂಬಿಕಾ ಪ್ರಾಣಹರಣ. ಆಮೇಲೆ ರಾಜಕುಮಾರಿಯ ಮಾನಹರಣ. ಪರದೇಶಿಯಾದ ನಿನಗೆ ಹೆಚ್ಚಿನ ಸ್ವಾತಂತ್ರ ಕೊಟ್ಟಿದ್ದುದರ ಫಲವಿದು, ಗೌರೀ! "ನಸ್ತ್ರೀ ಸ್ವಾತಂತ್ರ ಮರ್ಹತಿ" ಎಂಬ ಉಕ್ತಿಯ ಸತ್ಯತೆಯು ಒಡೆದು ಕಾಣುತ್ತಿರುವದು.

ಗೌರಾಂಬಿಕಾ : ಅಹಹ! ಮುಖದಿಂದ ಎಂಥಾ ಮುಕ್ತಾ ಫಲಗಳು ಉದುರುತ್ತಿರುವವು ರೌದ್ರದಾಮಾ! ಜೀವಾತ್ಮನು ಸ್ವತಂತ್ರನಿರುವನು. ಸ್ವಾತಂತ್ರವೆ ಅವನ ಪ್ರಕಾಶ. ಸ್ವಾತಂತ್ರತೆಯೇ ಮಾನವ ಪ್ರಾಣಿಯ ಜನ್ಮಸಿದ್ಧ ಅಧಿಕಾರ. ಇದೇ ಆತ್ಮಪ್ರಕಾಶ. ನಾನು ಈ ದಿವ್ಯ ಪ್ರಕಾಶದಲ್ಲಿ ನಿಜ ಕರ್ತವ್ಯವನ್ನು ಕಂಡಿರುವೆ.

ರೌದ್ರದಾಮ : ಏನು ಮಾಡಲಿ (ಯೋಚಿಸಿ) ಹೀಗೆ ಮಾಡಬೇಕು. ಇದೇ ಯೋಗ್ಯ. ಇದೇ ಗೌರಿಗೆ ತಕ್ಕ ಪ್ರಾಯಶ್ಚಿತ.

ಗೌರಾಂಬಿಕ ಯಾಕೆ ಸರ್ವಾಧಿಕಾರಿಗಳೇ ಸುಮ್ಮಗ್ಗೆ ನಿಂತಿರುವಿರಿ. ಬೆಳಕು ಬೀಳಲಿ ಮೌನ ವೃತ್ತಿಯೇಕೇ?

ರೌದ್ರದಾಮ : ಕ್ಷಿಪ್ರದಲ್ಲಿಯೇ ಮೌನ ವೃತ್ತಿಯ ಕಾರಣವು ಗೊತ್ತಾಗುವದು. (ಸೀಟಿ ಹೊಡೆಯುವನು) (ಭುಜಂಗ ಬರುವನು) ಭುಜಂಗರಾವ! ಮೊದಲು ಗೌರಿಯ ಸಮಾಚಾರ. ಆಮೇಲೆ ಮಿಕ್ಕವರ ಸಮಾಚಾರ. ಭುಜಂಗರಾವ! ಗೌರಿಯ ಸಮಾಚಾರವನ್ನು ತಕ್ಕೊಳ್ಳಲಿಕ್ಕೆ ನಿಮಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿರುವೆ.

ಗೌರಾಂಬಿಕಾ : ಹೀಗೆ ಭುಜಂಗನಿಗೆ ಅಜ್ಞಾಪಿಸಲಿಕ್ಕೆ ನಾನೇನು ನಿಮ್ಮ ಜಂಗಮ ಜಿಂದಗಿಯಲ್ಲ. ಸ್ವತಂತ್ರವಾದ ಅಧಿಕಾರದ ಮೇಲೆ ಯಾರ ಅಧಿಕಾರವೂ ನಡೆಯಲಾರದು.

ರೌದ್ರದಾಮ : ಗೌರೀ! ನಿನ್ನ ವಾಗ್ಬಾಣಗಳು ನನ್ನ ಹೃದಯವನ್ನು ಅತ್ಯಂತವಾಗಿ ಚೂರ್ಣೀಕರಿಸುತ್ತಲಿವೆ.

ಗೌರಾಂಬಿಕಾ : ಅಂತೇ ವಾಗ್ಬಾಣಗಳನ್ನು ಬಿಡುತ್ತೇನೆ ಅದರೂ ನಿನ್ನ ಹೃದಯವು ಮಾತ್ರ ರೂಪಾಂತರ ಹೊಂದಲಾರದು.

ರುದ್ರದಾಮ : (ಕಿವಿಯಲ್ಲಿ) ಭುಂಜಗರಾವ! ಗೌರಿಯನ್ನು ಹಂಚಿಕೆಯಿಂದ ಹಿಡಿಯಬೇಕು. ನಾನು ಹತ್ತುನಿಮಿಷಗಳಲ್ಲಿ ಬರುವೆ. ಗೌರೀ ಹುಕ್ಕ ಬುಕ್ಕರ ರಕ್ತ ಮಾಂಸವನ್ನು ಹಚ್ಚುವ ವರೆಗೆ ಹೃದಯದ ನೋವು ಗುಣವಾಗಲಾರದು (ಹೋಗುವನು)

ಭುಜಂಗ ಗೌರೀ....

ಗೌರಾಂಬಿಕಾ : ಭುಜಂಗಾ....

ಭುಜಂಗ ಖಡ್ಗವನ್ನು ಕೆಳಗಿಡು.

ಗೌರಾಂಬಿಕ : ಖಡ್ಗವನ್ನು ಕೆಳಗಿಡು.

ಭುಜಂಗ ಪರಿಣಾಮವು ಒಳಿತಾಗಲಿಕ್ಕಿಲ್ಲ.

ಗೌರಾಂಬಿಕ : ಅದಕ್ಕೆ ನನ್ನ ಖಡ್ಗವೇ ಉತ್ತರವನ್ನು ಕೊಡುವದು.

ಭುಜಂಗ ಗೌರೀ! ಸುಮ್ಮನೇ ದೇಹ ನಾಶಮಾಡಿಕೊಳ್ಳಬೇಡ.

ಗೌರಾಂಬಿಕಾ : ಭುಜಂಗಾ! ಬುದ್ಧಿವಾದವು ಹಿಂದಾಗಲಿ ಕೃತಿಯು ಮುಂದಾಗಲಿ ಖಡ್ಗದ ರುಚಿಯನ್ನು ತಕ್ಕೊಳಲಿಕ್ಕೆ ಸಿದ್ಧನಾಗು.

ರೌದ್ರದಾಮ : (ಹುಕ್ಕನನ್ನು ತಕ್ಕೊಂಡು ಬರುವನು) ಗೌರೀ! ಇದೋ ನೋಡು. ಖಡ್ಗವನ್ನು ಕೆಳಗಿಡದಿದ್ದರೆ ಹುಕ್ಕನು ಪ್ರಾಣಕ್ಕೆರವಾಗುವನು.

ಗೌರಾಂಬಿಕಾ : ನೀನೆಂಥ ನಿಷ್ಕರುಣಿಯು, ಕುಲ ಕಂಟಕನು, ದೇಶ ಘಾತುಕನು ತೆಗೆದುಕೋ ಖಡ್ಗವನ್ನು (ಖಡ್ಗ ಒಗೆಯುವಳು)

ರೌದ್ರದಾಮ : ಕಟ್ಟಿರೀ ಗೌರಿಯನ್ನು. ಅನುಮಾನ ಮಾಡಬೇಡಿ. ಭುಜಂಗರಾವ! ಹುಕ್ಕನ ರುಂಡವನ್ನು ಚಂಡಾಡಲಿಕ್ಕೆ ಸಿದ್ಧರಾಗಿ ನಿಂತು ಕೊಳ್ಳಿರಿ ಲಲಿತೇ! ನೋಡುತ್ತಿರು ದೈವದ ವಿಚಿತ್ರ ಲೀಲೆಯನ್ನು (ಕಾರಾಗೃಹವನ್ನು ಒಡೆದು ಮಾಧವಾಚಾರ್ಯ, ಶಿವಾಂಗಿ, ಬುಕ್ಕ ಬರುವರು)

ಮಾಧವ ರೌದ್ರದಾಮಾ! ನೋಡು ದೈವದ ವಿಚಿತ್ರ ಲೀಲೆಯನ್ನು

ರೌದ್ರದಾಮ : ಎಲೋ! ನೋಡುತ್ತಿರುವಿರೇನು? ಎಲ್ಲರನ್ನು ತುಂಡರಿಸಿ ಚೆಲ್ಲಿರಿ. ಕರಾಳ ತೂತೂರಿಯನ್ನು ಊದಿ ಹೆಚ್ಚಿನ ಸೈನ್ಯವನ್ನು ಬರಮಾಡು. (ಕರಾಳ ತುತೂರಿ ಊದಲು ಹೋಗುವನು. ಬುಕ್ಕನು ತುತೂರಿಯನ್ನು ಕಸಿದು ಕೊಳ್ಳುವನು) (ಖಡ್ಗಯುದ್ಧವಾಗುವುದು) (ಎಲ್ಲರೂ ಹೋಗುವರು) (ಮಾಧವನು ನಿಲ್ಲುವನು) ಎಲೋ! ಹಾರುವನನ್ನು ಕಟ್ಟಿ ಹಾಕಿರಿ.

ಮಾಧವ ತ್ರಿಲೋಚನನನ್ನು ಸದೈವ ಧ್ಯಾನಿಸುವ ಶಿವಸ್ವರೂಪಿಯಾದ ಈ ಮಾಧವನನ್ನು ಬಂಧಿಸುವುದು ನಿಮಗೆ ಸಾಧ್ಯವೇ?

ಪಾಪಿಯೇ ಭವಪಾಶದ ಕಟ್ಟನ್ನು ಕಿತ್ತು ಹಾಕಿದ ಈ ಮಾಧವನನ್ನು ಕಟ್ಟುವುದು ಸಾಧ್ಯವೇ.

ರೌದ್ರದಾಮ : ಎಲೋ! ಖಡ್ಗಧಾರಿಗಳಾಗಿ ಇವನನ್ನು ಸುತ್ತು ಹಾಕಿರಿ.

ಮಾಧವ ತ್ರಿಶೂಲಧರನ ಪ್ರತಿಬಿಂಬವನ್ನು ಮುತ್ತುವದು ನಿಮಗೆ ಸಾಧ್ಯವೆ? ಎಲ್ಲವೋ! ನನ್ನನ್ನು ಬಂಧಿಸುವಿರಾ! ಈ ರಾಕ್ಷಸನ ಸೇವೆಯನ್ನು ಮಾಡಿ ನೀವಾವ ಸುಖವನ್ನು ಸಾಧಿಸಿಕೊಂಡಿರುವಿರಿ. ನಿಮ್ಮನ್ನು, ನಿಮ್ಮ ಪರಿವಾರವನ್ನು, ನಿಮ್ಮ ನಾಡನ್ನು, ಪಾರತಂತ್ರದ ಕಾಡ್ಗಿಚ್ಚಿನಲ್ಲಿ ನೂಕುತ್ತಿರುವ ಈ ಧರ್ಮಲಂಡನ ಸೇವೆಯನ್ನು ಮಾಡಿ ಮನುಷ್ಯತ್ವವನ್ನು ಕಳೆದುಕೊಳ್ಳುತ್ತೀರಿ.

ರೌದ್ರದಾಮ ಎಲೋ! ಹೀಗೇಕೆ ಕಲ್ಲು ಗೊಂಬೆಗಳಂತೆ ನಿಂತಿರುವಿರಿ.

ಸಿಪಾಯಿ ಸರಕಾರ! ಇವರ ಮೇಲೆ ಕೈ ಎತ್ತುವುದು ನಮ್ಮಿಂದ ಆಗದು.

ರೌದ್ರದಾಮ : ಹೇಡಿಗಳೇ, ಖಡ್ಗಗಳನ್ನು ಕೆಳಗಿಟ್ಟು ಸೇವೆಗೆ ಶರಣು ಹೊಡೆದು ಹೋಗಿರಿ. (ಮಾಧವಾರ್ಯನು ನಗುವನು) ನಗು, ನಗು ನಾವು ಮೂವರೆ ನಿನ್ನನ್ನು ಮಣ್ಣುಗೂಡಿಸುವೆವು.

ಮಾಧವ ಮೂವರೇಕೆ ನಿನ್ನಂಥ ಸಹಸ್ರಾವಧಿ ಕೀಟಕಗಳು ನನಗೇನು ಮಾಡುವವು. ಎಲೋ, ಮೂಢಾ! ಸ್ವಾರ್ಥಕ್ಕಾಗಿ ಭಗಿನಿಯ ಪ್ರೇಮವನ್ನು ತ್ಯಜಿಸಿದಿ. ಮಿತ್ರದ್ರೋಹವನ್ನು ಮಾಡಿದಿ. ಸ್ವಾರ್ಥಕ್ಕಾಗಿ ರಾಜ ನಿಷ್ಠೆಯನ್ನು ಕೊಲೆ ಮಾಡಿದಿ. ಕಡೆಗೆ ದೇಶ ಮಾತೆಯ ಜೀವಾಳಕ್ಕೆ ಕೊಡಲಿಯ ಪೆಟ್ಟನ್ನು ಹಾಕಲುದ್ಯುಕ್ತನಾಗಿರುವಿ. ಸ್ವಾರ್ಥಮದಿರೆಯ ಸೇವನೆಯಿಂದ ಎಚ್ಚರದಪ್ಪಿದ ಚಾಂಡಾಲಾ! ತಾಯಿ ತಂದೆಗಳನ್ನು ಪುನಃ ಪುನ್ನಾಮ ನರಕಕ್ಕೆ ಗುರಿಮಾಡಿ ಕತ್ತೆಯಂತ ಜೀವಿಸುವ ಜನ್ಮಕ್ಕೆ ಧಿಃಕ್ಕಾರ.

ರೌದ್ರದಾಮ ನಿನ್ನ ಪುರಾಣ ಪ್ರಾರಂಭವಾಯಿತೇ.

ಮಾಧವ ಅದಕ್ಕೋಸ್ಕರವಾಗಿಯೇ ಹಿಂದುಳಿದಿರುವೆ

ರೌದ್ರದಾಮ : ಜೀವವನ್ನು ಕಳೆದುಕೊಳ್ಳುವದಕ್ಕಾಗಿ ಹಿಂದುಳಿದಿರುವಿ.

ಮಾಧವ ಏತಕ್ಕೆ ಪುಟಿ ಪುಟಿದು ಬೀಳುವಿ? ನಿಮ್ಮಂಥಾ ಪಾಪಿಗಳ ಖಡ್ಗವು ಈ ದೇಹವನ್ನು ಸ್ಪರ್ಶಿಸಲಾರದು. ಭುವನೇಶ್ವರಿ ಮಾತೆಯ ಆಶೀರ್ವಾದದ ವಜ್ರಕವಚವು ಈ ದೇಹಕ್ಕಿರುವುದು. ಪಂಪಾಪತಿಯ ವರದ ಹಸ್ತವು ನನ್ನ ಶಿರದ ಮೇಲಿರುವದು. ಈ ಮಾಧವನನ್ನು ಕೊಲ್ಲುವಂಥ ಅದಾವ ಪ್ರಾಣಿಯು ಈ ವಿಶ್ವದಲ್ಲಿರುವದು. ಪಾಪಾತ್ಮಾ!

-: ಪದ್ಯ :-

ಕಾಲ ಬೆದರಿ ಗಮನಿಸುವಾ ಪಾಪಿಯಾ
ಹರನ ಭಕುತಗೆ
ಹರನಾಮದ ಬಲವಿದು ಕಾಣು ! ಕುಜಾತಾ
ಮುರಾರಿ ಪದ ಮಹಿಮೆಯ ನೋಡು

೫ನೇ ಪ್ರವೇಶ

ಸ್ಥಳ : ಉಪವನ, ಸಮಯ : ಪ್ರಾತಃಕಾಲ

ಕೆಂಜೋಡಿ : ಬೀರಣ್ಣಾ! ಹುಕ್ಕದೋರಿನ್ನ ನೋಡಾಣ ಅಕ್ಕರತಿ ಬರತೈತೆ. ಇಷ್ಟ ಅಂತ ಹೇಳಾಕ ಬರಾಣಿಲ್ಲ. ಹುಕ್ಕ ದೊರಿ ಸೆರೆಮನ್ಯಾಗ ಸಿಕ್ಕಾಗ ನಮ್ಮ ಎಲ್ಲಾರ ದಿಕ್ಕು ತಪ್ಪಿತ್ತು. ಹುಕ್ಕ ದೊರೆ ನೋಡಾಣ ಚಂದಪ್ಪನ ಕಂಡ್ಹಂಗೆ ಆತು.

ಬೀರಣ್ಣ ಕೆಂಜೋಡಪ್ಪಣ್ಣಾ! ಬುಕ್ಕದೋರಿ ಅಂತು ಬೆಲ್ಲದ ಅಚ್ಚು.

ಮಲಸರ್ಜ ಹುಕ್ಕಪ್ಪ ಬುಕ್ಕಪ್ಪನವರು ಥೇಟ್ ರಾಮ ಲಚಮಣರು. ಏಣ್ಣಾ! ಗುರುಗಳಾದ್ರು ಕಡಿಮೇ... ಅಬ್ಬಬ್ಬಾ.... ಅವರ ದನಿ ಕೇಳಾಣ

ಒಬ್ಬರಾರ ತಲಿ ಬಾಗಿಸದೆ ಉಳಿಯಾಣ. ಯಣ್ಣಾ! ಹುಕ್ಕ ಬುಕ್ಕಪ್ಪದೊರೆಗಳಿಗೆಲ್ಲಾ ವಿದ್ಯಾ ಗುರುಗೋಳು ಕಲಿಸ್ಯಾರಂತ. ಶಿವಾಂಗೆವ್ವ ಹೇಳತ್ತಿದ್ದಳು ಬಾಣಾ ಬಿಡಾಕ, ಪಟ್ಟಾ ತಿರವಾಕ ಕುದರಿಮ್ಯಾಗ ಕುಂಡ್ರಾಕ ಇದ್ದಾ ಮಾಡಾಕಯಿಟ್ಟಿ ಇದ್ಯಾಕಲಿಸ್ಯಾರಪಾ.

ಬೀರಣ್ಣ ಮಲಸರ್ಜಾ! ಮೊನ್ನೆ ಹುಕ್ಕ ದೊರಿನ್ನ ಬಿಡಿಸಿಕೊಂಡು ಬಂದೇವಲ್ಲಾ ಆಗ್ಗೆ ಗುರುಗಳು ಸಂಭ್ರಮದಿಂದ ಬಪ್ಪರೆ ಬೀರಾ! ನಿನಗೆ ಕಲ್ಯಾಣ ಆಗಲಿ ಅಂತಾ ಬೆನ್ನ ಚಪ್ಪರಿಸದರಪಾ. ಆಗ ಇಟ್ಟ ಆನಂದಾತು.

ಕೆಂಚೋಡಿ ಆಗದೇನು ಮಾಡೀತು ನಿನ ಮಂಜಾಳ ಹೋಗಲಿ ಗುರುಗೋಳು ಅಂತಿಂಥವರ ಬಾಳ ಅಂತಃಕರಣ ಮಾಡತಾರ.

ಬೀರಣ್ಣ ಕೆಂಚೋಡೆಪ್ಪಣ್ಣಾ! ಗುರುಗೋಳ ಪರಬಾವರ ಕಡಿಮೇ. ಮೊನ್ನೆ ಗುಡ್ಡದಾಗ ಶಿಂಯಾನ ಕಾಲಾಗ ಮುಳ್ಳು ತಕ್ಕೊಂತ ಕುಂತಿದ್ರು ಸಿಂಯ್ಯಾ ಸುಮಾಕ ಬೆಕ್ಕಿನ್ಹಾಂಗ ಬಿದ್ದಿತ್ತಪಾ. ಅದನ್ನ ನೋಡಾಣ ಕಣ್ಣಾಗ ನೀರು ದಳಾದಳಾ ಬಿದ್ದುವಪಾ ಗುರವಿನ ಪಾದ ಪರಭಾವ ಇಷ್ಟಂತ ಹೇಳಾಕ ಬರಾಣೆಲ್ಲ.

ಕೆಂಚೋಡಿ : ಬೀರಣ್ಣಾ! ಇದಕಿನ ಹೆಚ್ಚಿನ ಚಮತ್ಕಾರಾ ನೋಡಿನಿ.

ಬೀರಣ್ಣ : ಯಂಣ್ಣಾ! ಗಡಾ ಹೇಳು ಅದೇನು?

ಕೆಂಚೋಡಿ ಬೀರಣ್ಣಾ! ಆ ಮಾತಂಗಿ ಕೊಳದಾಗ ಅಬಬ ಮೈಮ್ಯಾಗ ಇನ್ನೂ ಮುಳ್ಳು ಬರತೈತೆ. ಆ ಮಾತಂಗಿ ಕೊಳದಾಗ ತೊಪ್ಪಲಾ ತರಾಕ ಹೋಗಿದ್ದೆ. ಮಕಾ ಮಕಾ ಮೂರಾಚೆಂಜಿಯ್ಯಳ್ಯಾ ಹುಕ್ಕಪ್ಪ ದೊರಿಸುಮಾಕ ಎದುರಿಗೆ ಕುಂತಿದ್ದು. ಗುರುಗೋಳು ಚಕಳಿ ಮಕಳಿ ಹಾಕಿಕೊಂಡು ಕಣ್ಣ ಮುಚಿಕೊಂಡು ಅತಂರ್ಲೆ ಕುಂತಿದ್ರಿಪ್ಪಾ! ಚೇ.... ಚೇ....ಚೇ....

ಬೀರಣ್ಣ : ಅಂತರಲೇ ಕುಂತಿದ್ದರss...........

ಕೆಂಜೋಡಿ : ಅಂತರ್ಲೆ ಕುಂತ ಬಿಟ್ಟಿದ್ದರಪಾ

ಮಲ್ಲಸರ್ಜ ಬೀರಣ್ಣ ಗುರುಗೋಳ ಹೆಸರು ತಗೊಂಡು ಅಂಗಾರ ಹಚಗೊಂಡು ಮೈಯಾಗಿನ ಜಡ್ಡು ಕಿತ್ತಿಹೋಗತೈತೆ ಏನ ನಿನ ಮಂಜಾಳ ಹೋಗಲಿ. ಈಗ ಆಡ ಕುರಿಗಳು ಎಟ್ಟಾರು ಹಿಂಡಾಕ ಹತ್ಯಾವೋ.... ಆ ನಮ್ಮ ಸಣ್ಣ ಕಳಗಿ ಅಂದರೇನು ಸರತಿಗೆ ಎದ್ಯಾಡ್ಡ ಚರಗಿ ಹಾಲ ಹಿಂಡತೈತ.

ಬೀರಣ್ಣ ಹೌದು ಮಲ್ಲಸರ್ಜಾ! ನಮ್ಮ ಕುರಿಯಾಡ ಐತೆಲ್ಲಾ ಕೊಡಾ ಹಾಲು ಹಿಂಡತೈತೆ ಈಗೇನಪಾ ಸಿಕ್ಕಾಂಗ ಹಾಲ ಕುಡಿಯಾಣ ಶಕ್ತಿ ಬೆಳಸಾಣಾ. (ಮರಾಳ ಬರುವನು)

ಮರಾಳ ಬೀರಣ್ಣಾ! ಪಟ್ಟಾ ತಿರುವಲಿಕ್ಕೆ ಎಲ್ಲರಿಗೂ ಸರಿಯಾಗಿ ಬರುವದೇ?

ಬೀರಣ್ಣ ಮರಾಳಪ್ಪಾ ಬರದ ಏನ ಮಾಡೀತು ಮನಸ್ಯಾಗ ಮಿಕ್ಕೈತೆ ನಂ ಕೆಂಜೋಡಪ್ಪಾ ಯಿನ್ನೂರ ಆಳಿಗೆ ಕಲಿಸಿ ತಯಾರ ಮಾಡ್ಯಾನ.

ಮರಾಳ ಬೇಗನೇ ಯುದ್ಧಕ್ಕ ಹೊರಡಬೇಕಾಗುತ್ತದೆ.

ಬೀರಣ್ಣ ಬೇಕಾದರ ಇವತ್ತಯುದ್ಧಕ ಹೊರಡೋಣ. ಮೊನ್ನೆ ಒಮ್ಮೆ ಕೈ ತೋರಿಸ್ಯವ. ಈ ಸಾರ ರೌದ್ರಪ್ಪ ಮಂತ್ರಪ್ಪನ ಹೊಟ್ಟೆ ಹಾರಿಸಬೇಕು. ದೊಡ್ಡ ಯುದ್ದ ಆಗಲಿ ಮರಾಳಣ್ಣಾ! ಕುರುಬ ಮಕ್ಕಳು ಕದನಕ್ಕಂಜತಾರ ಅಂತ ತಿಳಿದಿಯೇನ.

ಮರಾಳ ಯುದ್ಧವೆಂದರೆ ಹುಡಗರ ಆಟವಲ್ಲಾ ಬೀರಣ್ಣ ಆನೆಗುಂದಿಯ ಗಂಡಾಳುಗಳು ಯುದ್ಧಕಲೆಯನ್ನು ಬಲ್ಲಿದವರು ನೀವು ಹೊಸಬರು.

ಬೀರಣ್ಣ ಹೊಸಬರು ಹೊಸಬರು ಅಂದ್ರೇನು? ಹೊಸಬರು ಹಳಬರಾಗುವರು ಆ ಮಕ್ಕಳ ಹುಟ್ಟಿದ ಗಳಿಗ್ಗೆ ಹುಲಿಗೆಜ್ಜೆ

ಕಟ್ಟಿದರೇನು? ಯಣ್ಣಾ ನೀ ಅದ್ರೂ ನುರಿತ ಗಡಿಯೇ ಬೇಕಾದ್ರ ನನ್ನಗೂಡ ಕತ್ತಿತಿರುವು ಪ್ರತಿ ಏಸು? ಆಗಲಿ ಒಂದ ಕೈನೋಡು ಮತ್ತ

ಮರಾಳ — ನೀವೆಲ್ಲರೂ ಶೌರ್ಯ ತೋರಿಸಿದರೇನೇ ನಿಮ್ಮ ನಾಡಿಗೆ ಸುಖವಾಗುವುದು.

ಬೀರಣ್ಣ — ಹೌದಪ್ಪಾ! ಅಂದಲ್ಲ ತಲೆ ಹೋಗಲಿ, ಮನಿ ಹೋಗಲಿ ಹಂಪೆಪ್ಪನ ಹೆಸರು ತಗೊಂಡು ಕಾದಾಡೋಣ. ನಾಡಿನಾಗ ಬಂಟರಾಗಿ ಗುರುಗಳು ಹೇಳಿದಂಗ ಹೊಸ ರಾಜ್ಯದ ಹುಟ್ಟಿಸೋಣ. ಭೂಮಿತಾಯಿ ನೆಟ್ಟಿಗಿದ್ದರ ಎಲ್ಲಾ ನೆಟ್ಟಗೆ. ಹುಕ್ಕಪ್ಪದೊರಿಗಳು ಅರಸರಾದರ ನಾಡನ್ಯಾಗ ಕೊರತಿಯೇನು?

ಕೆಂಜೋಡಿ — ಆ ಮ್ಯಾಗ ಎಲ್ಲಿ ನೋಡಿದರು ನಾಡಿನ್ಯಾಗ ಸಂಭ್ರಮ, ಸಂಭ್ರಮ.

ಬೀರಣ್ಣಾ — ಗುರುಗೋಳು ಹೇಳ್ಯಾರ ನಮ್ಮ ನಾಡಿನ್ಯಾಗ ಬಂಗಾರದ ಹೊಗಿ ಹಾವುತೈತಂತ.

ಮಲ್ಲಸರ್ಜ — ಹಂಪೆಪ್ಪನ ಪುಣ್ಯದಿಂದ ಅಟ್ಟಾದರೆ ಕೇಳತೀಯೇನು? ಬಂಗಾರ ಕುಡರೆ ಕಬ್ಬಿಣಾಗಿ ಹೋಗಲಿ (ಜೈ ಭುವನೇಶ್ವರಿ)

ಬೀರಣ್ಣ — ಏ ಗುರುಗಳು ಬಂದಂತೆ ಕಾಣತೈತೆ (ಮಾಧವ ಬರುವನು)

ಮಾಧವ — ಎಲೋ ನಿಮ್ಮ ಜನರೆಲ್ಲರೂ ಕೂಡಿರುವಿರೋ

ಬೀರಣ್ಣ — ಹೂಂನ್ರಿ ದ್ಯಾಪ್ರ ಎಲ್ಲಾ ಬಂದಬಿಟ್ಟಾರ ಮರಾಳಪ್ಪ ದಿನಾ ಅವರಿಗೆ ಕತ್ತಿ ತಿರುವಾತ ಕಲಿಸತಾರ

ಮಾಧವ — ನೀವೆಲ್ಲರು ಕತ್ತಿಯನ್ನು ತಿರುವಿರಿ ನೋಡುವಾ

ಬೀರಣ್ಣ — ಹೂನ್ರಿ ದ್ಯಾವರ. ಎಲೋ ಎಲ್ಲಾರೂ ಬರ್ರ್ಯೋ (ಪದವನ್ನುತ್ತ ತಿರುವರು)

ಮಾಧವ — ಭಾಪು! ಭಾಪು! ವೀರರೇ ನೀವು ನಿಜವಾಗಿಯೂ ಕೀರ್ತಿಯನ್ನು ಹೊಂದುವಿರಿ. ಹೋಗಿರಿ ಎಲೋ ನೀವು ಯುದ್ಧಕ್ಕೆ ಬೇಗನೇ ಹೊರಡಬೇಕಾಗುವುದು.

ಕೆಂಜೋಡಿ ಹಂಗs ಆಗಲಿ ದ್ಯಾವರು ನಮ್ಮದಂತೂ ತಯಾರೀನs .. (ಹೋಗುವರು)

ಮಾಧವ ಮರಾಳಾ.. ಮರಾಳಾ... ಬುಕ್ಕನನ್ನು ಇತ್ತಕಡೆ ಕಳುಹಿಸಿಕೊಡು (ಮರಾಳ ಹೋಗುವನು) ಭಗವಾನ್ ಶ್ರೀರಾಮಚಂದ್ರನು ಕಪಿಸೈನ್ಯ ಸಹಾಯದಿಂದ ವಿಜಯವನ್ನು ಸಂಪಾದಿಸಿದಂತೆ ನನ್ನಹುಕ್ಕನು ಕುರುಬ ಜನರ ಸಹಾಯದಿಂದ ನಿಶ್ಚಯವಾಗಿ ವಿಜಯವನ್ನು ಸಂಪಾದಿಸುವನು (ಬುಕ್ಕನು ಬಂದು ನಮಸ್ಕರಿಸುವನು) ಕುಮಾರಾ! ನೀನು ವೇಷಾಂತರದಿಂದ ಆನೆಗುಂದಿಗೆ ಹೋಗಿ ಗೌರಾಂಬಿಕೆಯನ್ನು ಕಂಡು ಯಾವತ್ತೂ ಪರಿಸ್ಥಿತಿಯನ್ನು ತಿಳಿದುಕೊಂಡು ಬಾ.

ಬುಕ್ಕ ಮಹದಾಜ್ಞೆ (ಹೋಗುವನು)

೬ನೇ ಪ್ರವೇಶ

(ಸ್ಥಳ : ರೌದ್ರದಾಮನ ವಿಲಾಸ ಮಂದಿರ)

ರೌದ್ರದಾಮ : (ಉಸುರ್ಗರೆದು) ಒಂದು ವಾರ ಕಳೆದುಹೋಯಿತು. ಶಿವಾಂಗಿಯ ಸುದ್ದಿಯೇ ಇಲ್ಲ. ಗೌರಿಯ ಉಗ್ರಸ್ವರೂಪವು ಇನ್ನು ಕಡಿಮೆಯಾಗಿಲ್ಲ. ಮಲೀಕ ನಾಯಬನ ಉಪಟಳವು ಹೆಚ್ಚಾಗಿ ಬಿಟ್ಟಿದೆ. ಅತ್ತ ಹುಕ್ಕನು ಕುರುಬರನ್ನು ಕೂಡಿ ಹಾಕುತ್ತಿರುವನು. ಪದಚ್ಯುತನಾದ ವರಂಗೊಳದಿಂದ ಕೃಷ್ಣದೇವನು ತನ್ನ ಸೈನ್ಯದೊಡನೆ ಬಂದು ಹುಕ್ಕನನ್ನು ಕೂಡಿಕೊಂಡಿರುವನಂತೆ. (ಕರಾಳ ಬರುವನು)

ಕರಾಳ ಪ್ರಧಾನಜೀ! ಶಿವಾಂಗಿಯ ಸುಳಿವೇ ಹತ್ತಲೊಲ್ಲದು.

ರೌದ್ರದಾಮ : ಕರಾಳಜೀ! ನಿನ್ನ ಹುಚ್ಚುತನದ ಪ್ರೇಮವೇ ನನ್ನ ಕಾರಸ್ಥಾನದ ನಾಶಕ್ಕೆ ಕಾರಣವಾಯಿತು. ಚತುರೆಯಾದ ಶಿವಾಂಗಿಯ ಚಪಲ

ನೇತ್ರ ಕಟಾಕ್ಷಕ್ಕೆ ನಿನ್ನ ಮನಸ್ಸು ಮೋಹವನ್ನು ತಾಳಿ ಎಲ್ಲ ಗುಪ್ತ ಸಂಗತಿಗಳನ್ನು ಹೊರಗೆಡವಿ ಬಿಟ್ಟಿತು. ಕಾಲಕಾಲಕ್ಕೆ ಸರಿಯಾಗಿ ಬಂದು ನಿನ್ನಿಂದ ಗುಪ್ತವೃತ್ತಾಂತವನ್ನು ತಿಳಿದುಕೊಂಡು ಹೋಗಿ ಮಾಧವನಿಗೆ ತಿಳಿಸುತ್ತಿದ್ದಳು. ಅಂತೇ ನನ್ನ ಒಂದಾದರೂ ಕಾರಸ್ಥಾನ ಕೈಗೂಡಲಿಲ್ಲ. ನೀಚಾ!

ಕರಾಳ : ಸರಕಾರ! ಇದೊಂದು ಸಲ ನನ್ನ ಎಲ್ಲ ಅಪರಾಧಗಳನ್ನು ಕ್ಷಮಿಸಿ ಕಾಪಾಡಬೇಕು.

ರೌದ್ರದಾಮ : (ಸ್ವಗತ) ಇವನ ಮೇಲೆ ಸಿಟ್ಟಾಗಿ ಮಾಡುವದೇನು? (ಪ್ರಕಟ) ಕರಾಳಾ ಇನ್ನು ಮುಂದೆ ಮಾತ್ರ ಶಿವಾಂಗಿಯ ಮೋಹ ಜಾಲದಲ್ಲಿ ಬೀಳಬೇಡ. ಇರಲಿ ಕರಾಳಾ! ಉತ್ತರದೇಶದಿಂದ ಬಂದಿರುವ ಮಂಗಲ ಮೂರ್ತಿಯೆಂಬ ಜ್ಯೋತಿಷಿಯು ಆರ್ಯ ವಿದ್ಯಾಶಾಲೆಯಲ್ಲಿ ಇಳಿದು ಕೊಂಡಿರುವನು. ನೀವು ಸ್ವತಃ ಹೋಗಿ ಆತನನ್ನು ಕರೆದುಕೊಂಡು ಬನ್ನಿ. ಆತನು ನಿನ್ನೆ ನನ್ನ ಕೆಲ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಹೇಳಿದನು. ಅವನ ವಿಷಯವಾಗಿ ವಿಶ್ವಾಸವು ನನ್ನಲ್ಲಿ ಹುಟ್ಟಿರುತ್ತದೆ. ನಾನು ಅವನ ಕಡೆಯಿಂದ ಒಂದು ಕಾರ್ಯದ ಶುಭ ಮುಹೂರ್ತವನ್ನು ಈ ದಿನ ತೆಗೆಯಿಸುವೆ.

ಸಿಪಾಯಿ ಪ್ರತಿನಿಧಿಗಳ ಆಗಮನವಾಗುವುದಿದೆ.

ರೌದ್ರದಾಮ : ಒಳ್ಳೆದು ಕರಾಳಜಿ! ಲೆಕ್ಕಪತ್ರಗಳು ಸಿದ್ಧವಾಗಿರುವವಷ್ಟೇ?

ಕರಾಳ : ನಾನು ಅವುಗಳನ್ನು ಸಿದ್ಧಪಡಿಸಿ ಒಂದು ವಾರವಾಯಿತು. ಇಡೀ ದೇಶದ ಲೆಕ್ಕವನ್ನು ಮೂರು ದಿವಸಗಳಲ್ಲಿ ಸಿದ್ಧ ಪಡಿಸುವಷ್ಟು ಶಕ್ತಿಯು ನನ್ನ ಲೆಕ್ಕಣಿಕೆಯಲ್ಲಿರುವುದು. ಸರಕಾರ! ಕಾಳಿದಾಸನು ಕಾಳಿಕಾದೇವಿಯ ವರದಿಂದ ಸುಪ್ರಸಿದ್ಧ ಕವಿಯಾಗಿ ಹೋದನು. ನಾನು ನಿಮ್ಮ ಆಶ್ರಯದಿಂದ ಸುಪ್ರಸಿದ್ಧ ಕರಣಿಕನಾಗಿ ಹೋಗುವೆನು.

ರೌದ್ರದಾಮ : ಸಾಕುಮಾಡು, ನಿನ್ನ ವಿದ್ಯೆಯು ಸೀತಾ ನದಿಯಂತೆ ಗುಪ್ತವಾಗಿ ಪ್ರವಹಿಸಲಿ. ಮೊದಲು ಲೆಕ್ಕದ ಹೊತ್ತಿಗೆಗಳನ್ನು ತೆಗೆದುಕೊಂಡು ಬಾ. ನಾನು ಪ್ರತಿನಿಧಿಗಳನ್ನು ಕರೆದುಕೊಂಡು ಬರುವೆ (ಕರಾಳ ಹೋಗುವವನು) ಎಲೋ ಯಾರಿರುವಿರಿ.... (ಸಿಪಾಯಿ ಬರುವನು) ಎಲೋ ಕಂಪಲಿಯ ಸರಕಾರ ಬರುವದು ಯಾವತ್ತೂ ವ್ಯವಸ್ಥೆಗಳನ್ನು ಚನ್ನಾಗಿ ಮಾಡಬೇಕು. (ಸಿಪಾಯಿ ಹೋಗುವವನು) (ರೌದ್ರದಾಮನು ಮಲೀಕ ನಾಯಬನನ್ನು ಕರೆತರುವನು)

ಸಿಪಾಯಿ : ಸರಕಾರವು ಹೀಗೆ ದಯಮಾಡಿಸಬೇಕು.

ಮಲೀಕ ಹವೆಯಲ್ಲಿ ಉಷ್ಣತೆಯು ಹೆಚ್ಚಾಗಿಲ್ಲವೇ? ಉತ್ತರ ಹಿಂದುಸ್ಥಾನಕ್ಕಿಂತ ದಕ್ಷಿಣ ಹಿಂದೂಸ್ಥಾನದಲ್ಲಿ ಶೆಕೆಯು ವಿಶೇಷವಾಗಿ ಕಾಣುತ್ತದೆ.

ರೌದ್ರದಾಮ : ಅಹುದು ಖಾನಸಾಹೇಬ! ಇನ್ನೂ ಕೆಳಗಿನ ಸೀಮೆಯಲ್ಲಿ ಉಷ್ಣತೆಯು ಹೆಚ್ಚಾಗಿರುವುದು (ಸಿಪಾಯಿಯು ಪೇಯಗಳನ್ನು ತಂದು ಕೊಡುವನು)

ಮಲೀಕ ರೌದ್ರದಾಮಜೀ! ಇನ್ನು ಎರಡು ತಾಸು ಹೊತ್ತು ಏರಿಲ್ಲ ಈಗಾಗಲೇ ಬಿಸಿಲು ಹೆಚ್ಚಾಗಿದೆ. (ಪೇಯ ಕುಡಿಯುವನು) ಸುಲ್ತಾನರ ಮುಕ್ಕಾಂನಿಂದ ಹುಕುಂ ಬಂದಿದೆ.

ರೌದ್ರದಾಮ : ಅದೇನಿರುವದು.

ಮಲೀಕ ಬಾವುದ್ದೀನರ ಬಂಧ ಮುಕ್ತಮಾಡಿದ ದೋಷಿಯನ್ನು ಖೈದು ಮಾಡಿ ಕಳುಹಿಸಬೇಕೆಂದು ಹುಕುಂ ಕೊಟ್ಟಿರುವರು ಮತ್ತು ಕಾರಗೃಹದ ಅಧಿಕಾರಿಯನ್ನು ಸಹ

ರೌದ್ರದಾಮ : ಕಾರಾಗೃಹದ ಅಧಿಕಾರಿಯನ್ನು........

ಮಲೀಕ ಅಹುದು ಅದರಲ್ಲಿ ಆತನ ಅಂಗವಿರುವದೆಂದು ಸರಕಾರಕ್ಕೆ ಸಂಶಯ ಬಂದಿರುವುದು. ರೌದ್ರದಾಮಜೀ! ಯಾವನಿಗೋಸ್ಕರ

ಸುಲ್ತಾನರು ದಂಡೆತ್ತಿಬಂದಿದ್ದರು. ಅಂಥವನನ್ನು ಬಂಧ ಮುಕ್ತಮಾಡಿದ ದೋಷಿಯು ಸಣ್ಣಪುಟ್ಟ ಅಪರಾಧಿಯೇ.... ಅಪರಾಧಿಯ ಪತ್ತೆ ಆಗದಿದ್ದರೆ ನೀವು ಕೂಡಾ ಸಂಕಟಕ್ಕೊಳಗಾಗಬಹುದು.

ರೌದ್ರದಾಮ : ಅಂತೆಯೇ ನಾನು ಮುಂಜಾಗ್ರತೆಯಿಂದ ವ್ಯವಸ್ಥೆಯನ್ನು ಮಾಡಿಸಿರುವೆ.

ಮಲೀಕ ವಿಚಾರವೇನು ನಡೆದಿದೆ......

ರೌದ್ರದಾಮ : ಸರಕಾರ! ವಿಚಾರ ಏನೂ ಇಲ್ಲ. ಇನ್ನೂ ಮೂರು ದಿನಗಳಲ್ಲಿ ಅಪರಾಧಿಯನ್ನು ತಂದು ತಮ್ಮ ಮುಂದೆ ನಿಲ್ಲಿಸುವೆ.

ಮಲೀಕ ಆದಿರಲಿ. ರೌದ್ರದಾಮಜೀ. ಯಾವತ್ತೂ ಖರ್ಚಿನ ಲೆಕ್ಕಪತ್ರವು ತಯಾರ ಆಗಿರುವದೇ....?

ರೌದ್ರದಾಮ : ತಯಾರಾಗಿರುವವು ಸರಕಾರದ ನಜರಿಗೆ ಹಾಕಲು ಅವುಗಳನ್ನು ತರಿಸುವದಕ್ಕೆ ಕಳುಹಿಸಿರುವೆನು.

ಮಲೀಕ : ರೌದ್ರದಾಮಜೀ! ಬೊಕ್ಕಸದಲ್ಲಿರುವ ಹತ್ತು ಸಾವಿರ ವರಹಗಳನ್ನು ಕಂಪಲಿಗೆ ಈವರೆಗೂ ಕಳುಹಿಸಿ ಕೊಡಲಿಲ್ಲ. ಜಂಬುಕೇಶ್ವರರ ಚಿನ್ನ ವಜ್ರಾಭರಣಗಳ ತಪಾಸಣೆಯಾಯಿತೇ.....?

ರೌದ್ರದಾಮ : ಖಾನಸಾಹೇಬ! ಅವುಗಳ ಅರ್ಥಮರ್ಥ ತಪಾಸಣೆಯಾಗುವಷ್ಟರಲ್ಲಿ ಕಾರಾಗೃಹದಿಂದ ರಾಜಕುಮಾರಿಯು ಪಾರಾಗಿ ಹೋದ ಬಗ್ಗೆ ಚಿಂತೆಯಲ್ಲಿ.....

ಮಲೀಕ ರಾಜಕುಮಾರಿಯನ್ನು ಯಾರು ಬಿಡಿಸಿಕೊಂಡು ಹೋದರು.

ರೌದ್ರದಾಮ : ಹುಕ್ಕನ ಗುರುವಾದ ಆ ಮಾಧವನೆಂಬ ಹಾರುವನು.

ಮಲೀಕ ಹುಕ್ಕನೂ ಸಹಾ ಪಾರಾಗಿ ಹೋದನೇ?......

ರೌದ್ರದಾಮ : ಅಹುದು

ಮಲೀಕ ನೀವೇನು ಮಲಗಿಕೊಂಡಿದ್ದಿರೋ? ರೌದ್ರದಾಮಜಿ! ನಿಮ್ಮಿಂದ ವ್ಯವಸ್ಥೆಯನ್ನು ಮಾಡುವುದು ಆಗುವುದಿಲ್ಲ. ಇದೇ ಏನು ನಿಮ್ಮ ಸರ್ವಾಧಿಕಾರತ್ವದ ಬೆಳಕು? ನೋಡಿ ಇನ್ನು ಒಂದು ವಾರದಲ್ಲಿ ಅಪರಾಧಿಯ ತಪಾಸಣೆಯಾಗದಿದ್ದರೆ ನಿಮ್ಮ ಅಧಿಕಾರಕ್ಕೆ ಎರವಾಗುವಿರಿ ಬಾವುದ್ದೀನನ ಪ್ರಕರಣದಿಂದ ಈ ಮೊದಲೇ ಕ್ರೋಧವಶರಾದ ಸುಲ್ತಾನರು ಹುಕ್ಕ, ಲಲಿತಾ ಕುಮಾರಿಯರು ಪಾರಾದರೆಂಬ ವಾರ್ತೆಯನ್ನು ಕೇಳಿದ ಕೂಡಲೇ ನಿಮ್ಮ ಸ್ಥಿತಿ ಏನಾದೀತು? ಇನ್ನು ಮುಂದೆ ಬಹು ಜೋಕೆಯಿಂದ ವರ್ತಿಸಬೇಕು. (ಕರಾಳ ಬರುವನು) ಥಣಾಯಕ ಕರಾಳ ಇವನೇ ಕಾರಾಗೃಹದ ಅಧಿಕಾರಿಯಾಗಿರುವನಲ್ಲವೆ?

ರೌದ್ರದಾಮ : ಅಹುದು ಸರಕಾರ! ಆ ಕೆಲಸದಿಂದ ಇವನನ್ನು ತೆಗೆದು ಹಾಕಿ ಲೆಕ್ಕತಪಾಸಣೆಯ ಕೆಲಸಕ್ಕೆ ಈತನನ್ನು ನೇಮಿಸಿರುವೆನು.

ಮಲೀಕ ಖಡ್ಗ ಬಹಾದ್ದೂರನಿರುವಂತೆ ಲೆಕ್ಕಣಿಕೆಯ ಬಹಾದ್ದೂರ-ನಿರಬಹುದು.

ರೌದ್ರದಾಮ : ಸರಕಾರ! ಲೆಕ್ಕ ಪತ್ರಗಳನ್ನು ಚೆನ್ನಾಗಿ ಇಡುವ ಕಾರ್ಯದಲ್ಲಿ ಕರಾಳನು ಹುಷಾರನಿರುವನು.

ಕರಾಳ ಇದು ತೆರಿಗೆಯ ಲೆಕ್ಕ. ಇದು ಧಾನ್ಯ ಭಾಂಡಾರದ ಲೆಕ್ಕ. ಗ್ರಾಮ ಮಂಡಲ ಮಹಾ ಮಂಡಲದಿಂದ ವಸೂಲಾಗಿ ಬಂದ ಲೆಕ್ಕ ಸುವರ್ಣ ನಾಣ್ಯದ ಲೆಕ್ಕ, ವಾರ್ಷಿಕ ಅಂದಾಜ ಪತ್ರಿಕಾ ಬೊಕ್ಕಸದ ಲೆಕ್ಕ, ಸದ್ಯಕ್ಕೆ ಆನೆಗುಂದಿಯ ಬೊಕ್ಕಸದಲ್ಲಿ ಶಿಲ್ಕು ಏನೂ ಇಲ್ಲ.

ಮಲೀಕ ಯೇನು ಪತ್ತು ಸಾವಿರ ವರಾಹಗಳು ಬೊಕ್ಕಸದಲ್ಲಿ ಶಿಲ್ಕು ಬಿದ್ದಿದ್ದಿಲ್ಲವೇ?

ರೌದ್ರದಾಮ : ಅಹುದು ಸರಕಾರ! ಜಂಬುಕೇಶ್ವರನ ಖಾತೆಯಲ್ಲಿ ಸರಕಾರಕ್ಕೆ ಸಾಲವಿತ್ತು ಆದ್ದರಿಂದ ಸದರೀ ಸಾಲವನ್ನು ಶಿಲ್ಕಿನ ಹಣದಿಂದ ಮುಟ್ಟಿಸಲ್ಪಟ್ಟಿತು.

ಕರಾಳ : (ಸ್ವಗತ) ಕರಾಳನ ಲೆಕ್ಕಣಿಕೆಯ ಹೊಟ್ಟೆಯಲ್ಲಿ ಹತ್ತು ಸಾವಿರ ವರಹಗಳು ಹೊಕ್ಕಿರುವವು. ಹತ್ತು ಸಾವಿರ ವರಾಹಗಳೇಕೆ ಹತ್ತು ಲಕ್ಷ ವರಹಗಳನ್ನು ಗಪ್ ಮಾಡಿ ಬೊಕ್ಕಸವನ್ನು ಜಳ ಜಳ ತೊಳೆದು ಬಿಡುವಷ್ಟು ಶಕ್ತಿಯು ಈ ಕರಾಳನ ಲೆಕ್ಕಣಿಕೆಯಲ್ಲಿರುವದು.

ರೌದ್ರದಾಮ : ಸರಕಾರಿ ಧಾನ್ಯ ಭಾಂಡಾರದ ಲೆಕ್ಕ

ಮಲೀಕ ಸರಕಾರಿ ಭಾಂಡಾರದಲ್ಲಿ ಎಷ್ಟು ಹೇರು ಧಾನ್ಯವಿರುವವು ಆವಾವ ತರದ ಧಾನ್ಯಗಳಿರುವವು (ರೌದ್ರದಾಮ ತೋರಿಸುವನು)

ಕರಾಳ : (ಸ್ವ) ಸುವರ್ಣನಾಣ್ಯಗಳನ್ನು ನುಂಗಿ ನೀರು ಕುಡಿದ ಈ ಲೆಕ್ಕಣಿಕೆಯು ಧಾನ್ಯದ ತೌಡುಮಾಡದೇ ಬಿಟ್ಟೀತೆ?

ರೌದ್ರದಾಮ : ಸರಕಾರಿ ಭಾಂಡಾರಗಳು ಹುಕ್ಕನಿಂದ ಲೂಟಿ ಮಾಡಲ್ಪಟ್ಟಿರುವವು. ಉಳಿದ ಧಾನ್ಯಗಳು ಕೆಟ್ಟಿದ್ದರಿಂದ ಬಡಬಗ್ಗರಿಗೆ ದಾನ ಮಾಡಲ್ಪಟ್ಟಿತು.

ಕರಾಳ : (ಸ್ವ) ಅಂತೂ ಜಮಾ ಬಂಡಿಗಾಲಿ.

ಮಲೀಕ ಗ್ರಾಮಮಂಡಲ, ಮಹಾಮಂಡಲಗಳಿಂದ ಬರತಕ್ಕ ಹಣವೆಷ್ಟು?

ಕರಾಳ : (ಸ್ವ) ಮಹಾಮಂಡಲ ಖಾತೆಯ ಮೇಲೆ ದೊಡ್ಡದೊಂದು ಗೆರೆ ಎಳೆಯಲ್ಪಟ್ಟಿರುವದು. ಒಟ್ಟಿನ ಮೇಲೆ ಬಂಡಿಗಾಲಿ ಜಮಾದ ಕಡೆಗೆ ಕ್ಷೇಯಾಭಿವೃದ್ಧಿ ಖರ್ಚಿನ ಕಡೆಗೆ.

ರೌದ್ರದಾಮ : ಸರಕಾರ! ಮಹಾಮಂಡಲಾಧಿಪತಿಯು ನಾಲ್ಕು ವರ್ಷದ ಹಣವನ್ನು ಕಳುಹಿಸಿವನು. ಹಣವು ಮುಟ್ಟಿದ್ದಕ್ಕೆ ಮೃತ ಮಹಾರಾಜರ ರುಜು ಇರುವದು.

ಕರಾಳ (ಸ್ವ) ಕರಾಳ ರೂಪೀ ಜಂಬೂಕೇಶ್ವರನ ರುಜುವು ಹಾಕಲ್ಪಟ್ಟಿರುತ್ತದೆ.

ಮಲೀಕ : (ಸ್ವ) ರೌದ್ರದಾಮನು ಕಪಟನಿರಲಿಕ್ಕಿಲ್ಲವಷ್ಟೇ? (ಪ್ರ) ರೌದ್ರದಾಮಜೀ ಮುಂದೆ ರಾಜ ಶಕಟವನ್ನು ನಡೆಯಿಸುವ ಬಗೆ.

ರೌದ್ರದಾಮ : ಸರಕಾರವು ಮನಸ್ಸು ಮಾಡಿದರೆ ದ್ರವ್ಯದ ಕೊರತೆಯೇ ಉಳಿಯುವದಿಲ್ಲ.

ಮಲೀಕ : ಪ್ರಜಾಜನರ ಮೇಲೆ ಹೊಸ ಹೊಸ ತೆರಿಗೆಯನ್ನು ಹಾಕಲೇಬೇಕೆನ್ನುವಿರಾ।

ರೌದ್ರದಾಮ : ಬೇರೆ ರೀತಿಯಾಗಿ ಧನ ಪ್ರಾಪ್ತಿಯಾಗುವ ಚಿನ್ಹವಿದೆ.

ಮಲೀಕ ಅದಾವದು ಹೇಳಿರಿ.....

ರೌದ್ರದಾಮ : ಇದೆಲ್ಲವುಗಳನ್ನು ಹೊರಸಿಕೊಂಡು ಹೋಗಿ. (ದಫ್ತಾರ ಒಯ್ಯುವರು) ಸರಕಾರ. ಅಂಜನಾದ್ರಿಯೆಂಬ ಸಣ್ಣ ಪರ್ವತವಿದೆ. ಅಲ್ಲಿ ಒಂದು ಗುಹೆ ಇರುವದು. ಆ ಗುಹೆಯಲ್ಲಿ ವಿಪುಲವಾದ ದ್ರವ್ಯವಿರುವದು. ಆ ಗುಹೆಗೆ ಒಂದು ಬಂಡೆಗಲ್ಲು ಆನಿಸಲ್ಪಟ್ಟಿರುವದು. ಯಾವನಿಗೆ ಆ ದ್ರವ್ಯದ ಲಾಭವಿರುವದು ಅಂಥವನು ಆ ಕಲ್ಲನ್ನು ಮುಟ್ಟಿದ ಕೂಡಲೇ ಕಲ್ಲು ಭೂಮಿಯ ಮೇಲೆ ಬೀಳುವದು.

ಮಲೀಕ ಇದು ನಿಮ್ಮ ಭ್ರಮೆ.

ರೌದ್ರದಾಮ : ಸರಕಾರ! ಒಮ್ಮೆ ಪರೀಕ್ಷೆ ಮಾಡಲಿಕ್ಕೆ ಅಡ್ಡಿ ಇಲ್ಲ.

ಮಲೀಕ ಹಾಗಾದರೆ ಎಷ್ಟೋ ಜನರು ಪ್ರಯತ್ನ ಮಾಡಿರಬಹುದು.

ರೌದ್ರದಾಮ : ಜಂಬುಕೇಶ್ವರ ಮಹಾರಾಜರೇ ಪ್ರಯತ್ನವನ್ನು ಮಾಡಿದರು. ಆ ಕಲ್ಲನ್ನು ಅಗಿಸಿ ತೆಗೆಯಿಸಬೇಕೆಂದು ಅವರು ಪ್ರಯತ್ನಿಸಿದರೂ ಅದು ಸಫಲವಾಗಲಿಲ್ಲ. ಸರಕಾರ ನಾವು ಒಮ್ಮೆ ಪ್ರಯತ್ನ ಮಾಡಿ ನೋಡುವಾ.

ಮಲೀಕ ಒಳ್ಳೇದು. ಈ ಅಬ್ಬರದಲ್ಲಿ ಮುಖ್ಯಕೆಲಸವನ್ನು ಮರೆಯಬೇಡಿ.

ರೌದ್ರದಾಮ : ಎಲೋ! ಯಾರಿರುವಿರಿ ಸೇನಾ ಸಾಗರನನ್ನು ಕರೆದುಕೊಂಡು ಬಾ. (ಭುಜಂಗ ಬರುವನು) ಸೇನಾಪತಿಗಳೇ ಸರಕಾರವು ಸಾಯಂಕಾಲಕ್ಕೆ ಕಂಪಲಿಗೆ ಹೊರಡುವುದು ಪ್ರಯಾಣದ ಸಿದ್ಧತೆಯಾಗಬೇಕು.

ಚೋಪದಾರ : ಸರಕಾರವು ಹೀಗೆ ದಯಮಾಡಿಸಬೇಕು. (ರೌದ್ರದಾಮ ಮಲೀಕನನ್ನು ಕಳುಹಿಸಿ ನಗುತ್ತ ಬರುವನು)

ರೌದ್ರದಾಮ : ರೌದ್ರದಾಮನ ಕೈಯೊಳಗಿಂದ ಯಾರೂ ಪಾರಾಗಲಾರರು ಕರಾಳಜೀ! ಅರಮನೆಯ ಉದ್ಯಾನದಲ್ಲಿರುವ ಸಿಂಹವನ್ನು ತೆಗೆದುಕೊಂಡು ಹೋಗಿ ಅದನ್ನು ಅಂಜನಾದ್ರಿಯ ಗುಹೆಯಲ್ಲಿರಿಸಬೇಕು. ಗುಹೆಯ ಬಾಯಿಗೆ ಬಂಡೆಗಲ್ಲನ್ನು ಆನಿಸಬೇಕು. ಇನ್ನು ನಾಲ್ಕೈದು ದಿವಸಗಳಲ್ಲಿ ಈ ಕೆಲಸವಾಗಲಿಕ್ಕೇ ಬೇಕು. ಇದೇ ನಮ್ಮ ಕೊನೆಯ ಬ್ರಹ್ಮಾಸ್ತ್ರ.

ಕರಾಳ ಅದರ ಚಿಂತೆಯನ್ನು ಬಿಡಿ.

ರೌದ್ರದಾಮ : ಕರಾಳಜೀ! ನಿಮ್ಮ ಜಮಾಖರ್ಚಿನ ಪದ್ಧತಿಯು ಅದ್ವಿತೀಯವಾಗಿರುವದು.

ಕರಾಳ ಅದ್ವಿತಿಯವಾಗಿರುವುದು.ಇಷ್ಟೆ ಅಲ್ಲಾ ಸರಕಾರ ನನ್ನ ಹೆಸರು ರಾಷ್ಟ್ರೇತಿಹಾಸದಲ್ಲಿ ಬರೆಯಲ್ಪಟ್ಟಿದೆ. ಅದಕ್ಕೆ ನನ್ನ ಜಮಾ ಖರ್ಚಿನ ಪದ್ಧತಿಯೇ ಕಾರಣ ಸರಕಾರ! ನನ್ನ ಜಮಾಖರ್ಚಿನ ಪದ್ಧತಿಯು "ಆನೆಗುಂದಿಯ ಜಮಾ ಖರ್ಚು" ಎಂಬ ನಾಣ್ಣುಡಿಗೆ ಕಾರಣವಾಗಬಹುದು.

ರೌದ್ರದಾಮ : ತಾವು ಅಂಥಾ ನಿಪುಣರಿರುವಿರಿ ಕರಾಳಜೀ! ಆ ಜೋಯಿಸ-ರಾಜರನ್ನು ಕರೆದುಕೊಂಡು ಬರಲಿಕ್ಕೆ ಆಗಲೇ ನಿಮಗೆ ಹೇಳಿದೆನಷ್ಟೇ! ಈಗ ಹೋಗಿ ಆತನನ್ನು ಕರೆದುಕೊಂಡು ಬನ್ನಿ (ಸ್ವಲ್ಪ ನಿಂತು) ಈ ಶುಭದಿನದಲ್ಲಿ ಗೌರಿಯ ಕಡೆಯಿಂದ ಭುಜಂಗನ ಕೊರಳಿಗೆ ಮಾಲೆ ಹಾಕಿಸಲಿಕ್ಕೇಬೇಕು. ವಾತಾವರಣವು ಶಾಂತವಾದ ನಂತರ ಲೋಕರೂಢಿಗನುಸರಿಸಿ ವಿವಾಹ ಕಾರ್ಯವನ್ನು ನೆರವೇರಿಸಬೇಕು. ಇದೇ ನಿಶ್ಚಯ. ಅಂದರೇನೇ ಗೌರಿಗೆ ತಕ್ಕ ಪ್ರಾಯಶ್ಚಿತವನ್ನು ಕೊಟ್ಟಂತಾಗುವುದು.

ಗೌರಾಂಬಿಕಾ : (ಪ್ರವೇಶಿಸಿ) ನನ್ನನ್ನೇತಕ್ಕೆ ಕರೆ ಕಳುಹಿಸಿದ್ದಿ

ರೌದ್ರದಾಮ : ಗೌರೀ ಅನ್ನತ್ಯಾಗ ಮಾಡಿರುವಿ ಏಕೆ?

ಗೌರಾಂಬಿಕಾ : ದುರ್ಜನನಾದ ನಿನ್ನ ಅನ್ನವನ್ನು ಸೇವಿಸಬಾರದೆಂದು

ರೌದ್ರದಾಮ : ಇದುವರೆಗೆ ಸೇವಿಸಿರುವ ಅನ್ನ ಯಾರದು?

ಗೌರಾಂಬಿಕಾ : ನನ್ನ ಪರಮಪೂಜ್ಯರಾದ ಮಾತಾಪಿತೃಗಳದು

ರೌದ್ರದಾಮ : ಈಗಲಾದರೂ ಅವರ ಪುಣ್ಯವಲ್ಲವೇ?

ಗೌರಾಂಬಿಕಾ : ಪರಮ ಪುಣ್ಯದ ಬುತ್ತಿಯು ತೀರಿರುವುದು. ಆ ಪವಿತ್ರವಾದ ಬುತ್ತಿಯು ನಿನ್ನ ಸ್ಪರ್ಶದಿಂದ ಅಪವಿತ್ರವಾಗಿರುವುದು.

ರೌದ್ರದಾಮ : ಗೌರೀ! ಔಧತ್ಯವನ್ನು ಸಹಿಸುವುದು ಇನ್ನು ಮಾತ್ರ ನನ್ನಿಂದಾಗದು. ನಿಶ್ಚಯವಾಗಿ ಹೇಳು.

ಗೌರಾಂಬಿಕಾ : ಹೀಗೆ ಪದೇ ಪದೇ ಉದ್ಗಾರವನ್ನು ತೆಗೆಯುವದಕ್ಕಿಂತ ಕೃತಿಯಿಂದ ತೋರಿಸಿದರಾಯಿತು.

ರೌದ್ರದಾಮ : ಅದನ್ನೇ ಮಾಡುವೆ ತಡೆ ಗೌರೀ! ನಿನ್ನ ಕೈಯನ್ನು ಭುಜಂಗರಾಯನ ಕೈಯಲ್ಲಿ ಕೊಟ್ಟು ನಿನ್ನ ಉಪಟಳವನ್ನು ತಪ್ಪಿಸಿಕೊಳ್ಳುವೆ.

ಗೌರಾಂಬಿಕಾ : ರೌದ್ರದಾಮ! ನನ್ನನ್ನು ನಿನ್ನ ಖಡ್ಗದಿಂದ ತುಂಡರಿಸಿಬಿಡು ಅಂದರೇನೇ ಗೌರಿಯ ಉಪಟಳ ತಪ್ಪುವದು.

ರೌದ್ರದಾಮ : ಗೌರೀ ಅದು ನನ್ನ ಇಚ್ಛೆ ನಿನ್ನ ಕೈಯಿಂದ ಮಾಲೆಯನ್ನು ಭುಜಂಗರಾಯನ ಕೊರಳಿಗೆ ಹಾಕಿಸುವೆನು ಗೌರೀ! ಗಾಂಧರ್ವ ವಿವಾಹವು ಕ್ಷತ್ರಿಯರಿಗೆ ಸಮ್ಮತವಾಗಿರುವದು.

ಗೌರಾಂಬಿಕಾ : ರೌದ್ರದಾಮ! ಉತ್ತರ ಭಾರತದಲ್ಲಿ ಆಗಿ ಹೋದ ಜಯಚಂದರಾಜನ ಕಥೆಯನ್ನು ಕೇಳುತ್ತಿದ್ದೆನು. ಆ ಪಿಶಾಚಿಯ ಎರಡನೇ ಅವತಾರ ನೀನಾಗಿರಬಹುದು. ಮಗಳಿಗೆ ವೈಧವ್ಯವನ್ನು ಬರಮಾಡಿದ ಆ ದುರಾತ್ಮನ ಚಿತ್ರವು ರಾಷ್ಟ್ರೇತಿಹಾಸದಲ್ಲಿ ಚಿತ್ರಿಸಲ್ಪಟ್ಟಿರುವದು. ಆ ವಿದ್ರೂಪವಾದ ಚಿತ್ರದ ಜೊತೆಯಲ್ಲಿ ನಿನ್ನದೊಂದು ಚಿತ್ರವು ಚಿತ್ರಿಸಲ್ಪಡುವುದು.

ರೌದ್ರದಾಮ : ಗೌರೀ! ಒಂದು ಚಿತ್ರವೇಕೆ? ನನ್ನ ಪ್ರತಿಯೊಂದು ಭಾವದ ಮಹಾತ್ವಾಕಾಂಕ್ಷೆಯ ಚಿತ್ರವು ಚಿತ್ರಿಸಲ್ಪಡಲಿ. ನನ್ನ ಭಾವ ಚಿತ್ರಕ್ಕೆ ಹತ್ತು ತಲೆಗಳನ್ನು ಮಾಡಲಿ, ಸಾವಿರ ತೋಳುಗಳನ್ನು ಜೋಡಿಸಲಿ, ಇಲ್ಲವೇ ಅದಕ್ಕೆ ಒಂದೇ ಕಾಲನ್ನು ಮಾಡಲಿ ಇಂಥ ಕಲ್ಪನೆಗೆ ಕ್ಷತ್ರಿಯನು ಬೆದರಲಾರನು.

ಗೌರಾಂಬಿಕಾ : ನೀನು ಕ್ಷತ್ರಿಯನೇ ರೌದ್ರದಾಮಾ! ಸಂಯುಕ್ತಾ ಪಿತನಾದ ಜಯಚಂದನು ಅಚ್ಚ ರಜಪೂತನಿದ್ದಂತೆ ನೀನು ಅಚ್ಚ ಕ್ಷತ್ರಿಯನಾಗಿರುವಿ ರೌದ್ರದಾಮಾ...................

ರೌದ್ರದಾಮ : ಗೌರೀ! ಭುಜಂಗರಾಯನು ಬರುತ್ತಿರುವನು. ಅವನು ಬಂದ ಕೂಡಲೇ ಈ ಮಾಲೆಯನ್ನು ಅವನ ಕೊರಳಿಗೆ ಹಾಕು

ಗೌರಾಂಬಿಕಾ : ಈ ದೇಹದಲ್ಲಿ ಜೀವವು ಸಂಚರಿಸುವವರೆಗೆ ಭುಜಂಗನ ಕೊರಳಿಗೆ ಮಾಲೆಯನ್ನು ಹಾಕಲಾರೆನು (ಭುಜಂಗ ಮಾಲೆ ಹಿಡಿದುಕೊಂಡು ಬರುವನು)

ರೌದ್ರದಾಮ : ಗೌರೀ! ಗಾಂಧರ್ವ ವಿವಾಹಕ್ಕೆ ಸಾಕ್ಷಿಯ ಅವಶ್ಯಕತೆ ಇಲ್ಲ (ಸ್ವಗತ) ಇನ್ನೂ ಜೋಯಿಸರಾಜರು ಬರಲಿಲ್ಲಾ ಒಳ್ಳೇದು ನಾನೇ ಹೋಗಿ ಕರೆದುಕೊಂಡು ಬರುವೆ (ಹೋಗುವನು)

ಭುಜಂಗ ಗೌರೀ.....

ಗೌರಾಂಬಿಕ ಯಾಕೆ ಭುಜಂಗ....

ಭುಜಂಗ ಕೊಂಚ ಕಾಲದಲ್ಲಿಯೇ ನಿನ್ನ ದೇಹದ ಸ್ವಾಮಿಯಾಗುವ ಈ ಭುಜಂಗನನ್ನು ಏಕ ವಚನದಿಂದ ಕರೆಯಬೇಕೇ? ಗೌರೀ ನೀನು ಹಟತೊಟ್ಟು ನನ್ನನ್ನು ತಿರಸ್ಕರಿಸಿದರೆ, ನಿಮ್ಮಣ್ಣನು ಪ್ರಾಣಕ್ಕೆರವಾಗುವನು ತಿಳಿಯಿತೇ.......

ಗೌರಾಂಬಿಕಾ : ನಿಮ್ಮ ರಾಕ್ಷಸೀ ಕೃತಿಗಳೇ ನನಗೆ ತಿಳಿಯಲಾರದು.

ಭುಜಂಗ ಈ ತೊಡಕೇ ನನ್ನ ನಿನ್ನ ಜನ್ಮದ ತೊಡಕೆಂದು ತಿಳಿ. ಗೌರೀ! ಶಕುಂತಲೆಯಂತೆ ಶೋಭಿಸುವ ನೀನು ಈ ಅಭಿನವ ದುಷ್ಯಂತನನ್ನು ವರಿಸು.

ಗೌರಾಂಬಿಕ ನನ್ನ ಪಾದಧೂಳಿಯನ್ನು ನಿನ್ನ ಶಿರದ ಮೇಲೆ ಧರಿಸುವಷ್ಟು ಯೋಗ್ಯತೆಯನ್ನೂ ಸಂಪಾದಿಸಿಲ್ಲ.... ಆಮೇಲೆ.

ಭುಜಂಗ ಗೌರೀ! ದರ್ಪೋಕ್ತಿಯನ್ನು, ಸಾಕುಮಾಡು ಇದೋ ನಿನ್ನನ್ನು

ವೇಷಾಧಾರಿಬುಕ್ಕ: ಏನಯ್ಯ ಪ್ರಧಾನರು ಇರುವರೋ?

ಭುಜಂಗ : ಜೋಯಿಸರಾಜರಾದ ಮಂಗಳಮೂರ್ತಿಗಳೇನು? ಬರಬೇಕು ಈ ಪೀಠವನ್ನು ಅಲಂಕರಿಸಬೇಕು.

ವೇ.ಬುಕ್ಕ ಸೇನಾಪತಿಗಳೇ ಇವರಾರು....? ಪ್ರಧಾನರ ತಂಗಮ್ಮರಾದ ಇವರೇ ಗೌರಾಂಬಿಕಾ ದೇವಿಯವರೇನು?

ಭುಜಂಗ ಅಹುದು ಅಮ್ಮಣ್ಣಿಯವರೇ ಕುಳಿತುಕೊಳ್ಳಿ

ವೇ. ಮರಾಳ : ಬುದ್ಧಿ ಒಳಗೆ ಬರಲೇನು

ವೇ. ಬುಕ್ಕ ಬಾ ಬಾಕಿಲವನ್ನು ಇಕ್ಕಿಕೊಂಡು ಬಾ.

ಭುಜಂಗ ಅವರಾರು? ಬಾಕಿಲವನ್ನಿಕ್ಕಲಿಕ್ಕೆ ಹೇಳಿದಿರಿ ಪ್ರಧಾನರು ಬರತಕ್ಕವರಿದ್ದಾರೆ.

ವೇ.ಬುಕ್ಕ ಬರಲಿರುವ ಮಹಾಶಯ ಅವರು ನನ್ನ ಮಿತ್ರರಾದ ಮಾರ್ತಾಂಡ ಭಟ್ಟರು

ಭುಜಂಗ ಬಾಕಿಲವನ್ನು ಇಕ್ಕಲಿಕ್ಕೆ ಏಕೆ ಹೇಳಿದಿರಿ.

ವೇ.ಮರಾಳ : ಈ ಮನೆಗೆ ಹಿತ್ತಲ ಬಾಕಿಲ ಇಲ್ಲವೇ ಸಾಮುದ್ರಿಕೆಯನ್ನು ಹೇಳುವಾಗ ಮುಂಚೀ ಬಾಕಿಲವನ್ನು ಇಕ್ಕಲಿಕ್ಕೇಬೇಕು, ನಮ್ಮ ಗುರುಗಳ ಆಜ್ಞೆಯಂತೆ ನಾವು ನಡೆಯುವೆವು.

ಭುಜಂಗ ಯಾರ ಸಾಮುದ್ರಿಕೆಯನ್ನು ಹೇಳಬೇಕೆನ್ನುವಿರಿ.

ವೇ.ಬುಕ್ಕ ಮಹಾಶಯಾ! ತಮ್ಮದು.

ಭುಜಂಗ ಹಾಗಾದರೆ ನೋಡಿ (ಕೈ ತೋರಿಸುವನು)

ವೇ. ಬುಕ್ಕ ನೀವು ಒಳ್ಳೇ . ದೊಡ್ಡ ಮನುಷ್ಯರಾಗುವಿರಿ ಸುಂದರಳಾದ ಹೆಂಡತಿಯು ದೊರೆಯುವಳು. ನೂರು ವರ್ಷದ ಆಯುಷ್ಯ

ವೇ. ಮರಾಳ : ಈಶನ ಕೃಪೆಯಿಂದ ಆರೆಕ್ಷಣ (ಕುತ್ತಿಗೆ ಹಿಡಿಯುವುದು.)

ಭುಜಂಗ ಯಾರು... ಅಯ್ಯೋ... ಅಮ್ಮಾ.....

ವೇ. ಮರಾಳ : ಮೂರ್ಖ ಒದರಬೇಡ ಸುಮ್ಮನಿರು (ಬುಕ್ಕ - ಮರಾಳ ಕೂಡಿ ಹಗ್ಗದಿಂದ ಕಟ್ಟುವರು)

ವೇ. ಬುಕ್ಕ ಕುಮಾರಿಯವರು ಹಿತ್ತಲ ಬಾಕಿಲದಲ್ಲಿ ನಿಂತಿರುವ ಕುದುರೆಯನ್ನು ಹತ್ತಿ ಹೊಡೆಯಬೇಕು ಭುವನೇಶ್ವರಿ ಮಾತಾಜಿಕಿ ಜೈ (ಗೌರಾಂಬಿಕೆಯು ಮಾಲೆ ಹಾಕುವಳು)

ಭುಜಂಗ ಏನು ಗೌರೀ ಬಡ ಬ್ರಾಹ್ಮಣನ ಕೊರಳಲ್ಲಿ ಮಾಲೆ ಹಾಕಿದೆಯಾ?

ವೇ.ಮರಾಳ : ಬಡಬ್ರಾಹ್ಮಣನಲ್ಲ, ಬಡಬ್ರಾಹ್ಮಣರನ್ನು ಸಲುಹಲು ಜನ್ಮವೆತ್ತಿರುವ ಬುಕ್ಕದೊರೆಯು (ಭುವನೇಶ್ವರಿ ಮಾತಾಜೀಕಿ ಜೈ ಎಂದು ಹೋಗುವರು)

ರೌದ್ರದಾಮ : ಭುಜಂಗರಾವ! ಬಾಕಿಲವನ್ನು ತೆರೆಯಿರಿ.

ಕರಾಳ ಭುಜಂಗರಾವ, ಮಂಗಳಮೂರ್ತಿ ಜೋಯಿಸರಾಜ, ಬಾಕಿಲವನ್ನು ತೆರೆಯಿರಿ.

ಭುಜಂಗ ಹಿತ್ತಲ ಬಾಕಿಲದಿಂದ ಬನ್ನಿ ಗೌರಾಂಬಿಕಾದೇವಿಯನ್ನು ಬುಕ್ಕನು... (ಕರಾಳ, ರೌದ್ರಾದಾಮರು ಬರುವರು)

ರೌದ್ರದಾಮ : ಜೋಯಿಸರಾಜರೆಲ್ಲಿ?

ಭುಜಂಗ ಬೇಗ ಬನ್ನಿ ಈ ಕಟ್ಟನ್ನು ಬಿಚ್ಚಿರಿ ಅವನು ಜೋಯಿಸನಲ್ಲಾ ವೇಷಧಾರಿಯಾದ ಬುಕ್ಕನು ಅಯ್ಯೋ ಅಮ್ಮಾ ಎಷ್ಟು ಘಟ್ಟಿಯಾಗಿ ಬಿಗಿದಿರುವರು. ರಕ್ತ ಚಿಮ್ಮುತ್ತಿರುವುದು.

ರೌದ್ರದಾಮ : ಬುಕ್ಕನು..... ನಾನೆಷ್ಟು ಮೋಸಹೋದೆ

ಕರಾಳ ಥೂ! ಮಂಜಾಳ ಹೋಗಲಿ. ರಾತ್ರಿ ಕಳವು ಮಾಡುವವರನ್ನ ನೋಡಿದ್ದೆ. ಹಗಲಿನಲ್ಲಿ ರಾಜಮಂದಿರವಲ್ಲಿ ಒಡಕೊಂಡುಹೋದ ಬಂಟನಾವ ಬುಕ್ಕನು ಕಳ್ಳರ ಗಂಡನು.

ಸಿಪಾಯಿ : ಗೌರಾಂಬಿಕಾದೇವಿಯವರು ಈಗ ಬರುತ್ತೇನೆಂದು ಹೇಳಿ ಕುದುರೆಯನ್ನು ಹತ್ತಿ ಹೋದರು.

ರೌದ್ರದಾಮ : ಅವಳನ್ನೇಕೆ ಅಡ್ಡೈಸಲಿಲ್ಲಾ

ಸಿಪಾಯಿ ಸರಕಾರ! ಅಮ್ಮನವರನ್ನು ನಾವ್ಹೇಗೆ ಅಡ್ಡೈಸಬೇಕು.

ಭುಜಂಗ ಅವರ ಜೊತೆಯಲ್ಲಿ ಯಾರು ಇದ್ದಿಲ್ಲವೋ?

ಸಿಪಾಯಿ ಯಾರೂ ಇದ್ದಿದ್ದಿಲ್ಲ ಹಿಂದಿನಿಂದ ರಾಜ ಜೋಯಿಸರು, ಅವರ ಗೆಳೆಯರು ಕೂಡಿಕೊಂಡು ಹೋದರು.

ಭುಜಂಗ　ಅವರನ್ನೇಕೆ ಬಂಧಿಸಲಿಲ್ಲ? ಅಪ್ಪಣೆಯಿಲ್ಲದೇ ಹೇಗೆ ಬಿಟ್ಟೆ?

ಸಿಪಾಯಿ　ಧಣೇರ ಸಂಗಡ ದಿನಾ ಬರುವವರು.

ಭುಜಂಗ　ಪ್ರಧಾನಜೀ! ಅಣ್ಣ ತಮ್ಮಂದಿರಂಥ ಕಪಟಿಗಳನ್ನು ನಾನೆಲ್ಲಿಯೂ ನೋಡಲಿಲ್ಲ. ಅವರ ನಾಶವಾಗದ ವಿನಹ ನನ್ನ ಮನಸ್ಸಿಗೆ ಶಾಂತಿ ಇಲ್ಲ. ಏನು ಮಾಡಲಿ. ಅವರ ಗಂಟಲ ಸೀಳಿ ರಕ್ತವನ್ನು ಕುಡಿಯಲ್ಯಾ? ಪ್ರಧಾನಜೀ! ಮೋಸದ ಮೂರ್ತಿಗಳಾದ ಅವರನ್ನು ಮಣ್ಣುಗೂಡಿಸಲಿಲೇ ಬೇಕು.

ರೌದ್ರದಾಮ :　(ಉಸುರ್ಗರೆದು) ನನಗೇನೂ ತಿಳಿಯದಾಗಿದೆ. ತಲೆ ತಿರುಗ ಹತ್ತಿದೆ. ಮಸ್ತಕ ಉರಿಯ ಹತ್ತಿದೆ. ನಡೆಯಿರಿ. ಸಾಯಂಕಾಲಕ್ಕೆ ಭೇಟಿಯಾಗಿರಿ (ಭುಜಂಗ ಹೋಗುವನು)

ಕರಾಳ　ಥೂ ನಿಂಮಂಜಾಳ ಹೋಗಲಿ. ಕೈಯಾಗ ಸಿಕ್ಕಬ್ಯಾಟಿ ಬಿಟ್ಟು ಪುಲಿ ಹೊಡಿಯಲಿಕ್ಕೆ ಹೋಗುವಾ ಎಂದು ಮೀಶಿ ಹುರಿ ಹಾಕುವಂತೆ ಥೂ ನಿಂಮಂಜಾಳ ಹೋಗಲಿ ಹೇಗಿದೆ ಜೋಯಿಸರಾಜನ ಕೈ.

೭ನೇ ಪ್ರವೇಶ

ಸ್ಥಳ: ಮೌಲ್ಯವಂತದ ಮುಂಭಾಗ

ಲಲಿತ　ತಡೆ ಗೌರಾಂಬಿಕೆ! ಪೂರ್ಣ ವಿಚಾರ ಮಾಡಿ ಯುದ್ಧಕ್ಕೆ ಹೊರಡುವದನ್ನು ನಿಶ್ಚಯಿಸು

ಗೌರಾಂಬಿಕಾ :　ದೇವೀ ವಿಚಾರವೇತರದು. ನಾನಾದರೂ ನಿನ್ನಂತ ಕ್ಷಾತ್ರ ಕುಮಾರಿ ಸತ್ಪಕ್ಷದ ಸೇವೆಯನ್ನು ಸ್ವೀಕರಿಸುವೆ. ಸಮರ ಸೇವೆಯನ್ನು ಮಾಡುವದು ನನ್ನ ಧರ್ಮ

ಶಿವಾಂಗಿ ದೇವಿಯರೇ! ಪತಿರಾಜರ ಅಪ್ಪಣೆಯನ್ನು ಪಡೆದಿರುವಿರೇನು? ಲಲಿತ ದೇವಿಯವರು ಇನ್ನು ಸ್ವತಂತ್ರರಿರುವರು

ಲಲಿತಾ ಇದೇನೇ ಗೌರಿಯು ಉಪವಾಸ ಮಾಡಬೇಕೇ....

ಶಿವಾಂಗಿ ದೇವಿಯವರೇ ತಮಗಿನ್ನೂ ಗೊತ್ತಾಗಿಲ್ಲವೇನು? ಗೌರಾಂಬಿಕಾ ದೇವಿಯವರು ಅಭಿನವ ಶಕುಂತಲೆಯರಾಗಿರುವರು ಬುಕ್ಕರಾಯರು ದುಷ್ಯಂತರಾಗಿರುವರು. ದೇವಿಯವರೇ ಇವರ ಗಾಂಧರ್ವ ವಿವಾಹ ಪ್ರಸಂಗದ ಶಬ್ದ ಚಿತ್ರವು ಆವನಾದರೊಬ್ಬ ಕವಿಯಿಂದ ರಚಿಸಲ್ಪಟ್ಟರೆ ನಿಶ್ಚಯವಾಗಿ ಆ ಕವಿಯು ಅತಿ ಶಯೋಕ್ತಿಯ ದೋಷಕ್ಕೆ ಗುರಿಯಾಗುವನು.

ಗೌರಾಂಬಿಕಾ : ಶಿವಾಂಗೀ! ಸಾಕುಮಾಡು ಹುಡುಗಾಟಿಕೆಯನ್ನು

ಶಿವಾಂಗಿ ಅಮ್ಮಯ್ಯಾ ಸಿಟ್ಟು ಬಂದಿತು. ನಾನೇನು ಮಾಡಲಿ ನನ್ನ ಒಡಕು ಬಾಯಲ್ಲಿ ಮಾತುಗಳೇ ನಿಲ್ಲುವುದಿಲ್ಲ ಲಲಿತಾದೇವಿ! ಬುಕ್ಕರಾಯರು ಅರ್ಜುನನಂತೇ ಬ್ರಾಹ್ಮಣ ವೇಷದಲ್ಲಿರಿಸಿಕೊಂಡು ಹೋಗಿದ್ದರು. ಪುರಾಣದ ಉದಾಹರಣೆ ಏಕೆ? ಮೊನ್ನೆ ಮೊನ್ನೆ ಜರುಗಿದ ಉದಾಹರಣೆಯನ್ನೇ ಹೇಳುವೆನು. ಸಂಯುಕ್ತ ಕುಮಾರಿಯನ್ನು ಅಪಹರಿಸುವದಕ್ಕಾಗಿ ಪೃಥ್ವಿರಾಜನು ಹೇಗೆ ವೇಷ ಪಲ್ಲಟಿಸಿ ಕೊಂಡು ಹೋಗಿದ್ದನೋ ಹಾಗೇ ಬುಕ್ಕರಾಯರು ವೇಷಪಲ್ಲಟಿಸಿಕೊಂಡು ಹೋಗಿದ್ದರು. ವತ್ಸಲಾ-ಹರಣವಾಯಿತು. ಶಕುಂತಲೆಯ ಗಾಂಧರ್ವ ವಿವಾಹವಾಯಿತು.

ಲಲಿತಾ ಗೌರಾಂಬಿಕಾ! ಹೀಗಿದ್ದ ಮೇಲೆ ನನ್ನ ಒಪ್ಪಿಗೆಯೇತಕ್ಕೆ ಬೇಕು. ಅದೋ ಅಲ್ಲಿ ಬರುತ್ತಿರುವ ಬುಕ್ಕರಾಯರ ಅಪ್ಪಣೆಯನ್ನಾದರೂ ತೆಗೆದುಕೋ ಒಪ್ಪಿಗೆಯನ್ನಾದರೂ ತೆಗೆದುಕೋ ಸಹೋದರಿ! ನಿನಗೆ ಆ ವಿರುಪಾಕ್ಷನು ಸದಾ ಮಂಗಳವನ್ನೀಯಲಿ

ಗೌರಾಂಬಿಕಾ : ದೇವಾ ಪಂಪಾಪತೇ ನನ್ನ ಅಣ್ಣನಿಗೆ ಸುಬುದ್ಧಿಯನ್ನು ಕೊಡು. ಜಗದೀಶಾ ಅವನು ನನ್ನ ಸಹೋದರನಲ್ಲವೇ ಅವನೆಷ್ಟು ಪರಿಯಾಗಿ ನನ್ನನ್ನು ಪೀಡಿಸಿದರೂ ಚಿಂತೆಯಿಲ್ಲಾ. ಅವನು ನನ್ನ ಸಹೋದರನು. ಒಂದು ವೇಳೆ ಯುದ್ಧದಲ್ಲಿ ಆತನಿಗೆ ಏನಾದರೂ.... ವಿಚಾರಬೇಡ ಪಂಪಾಪತೇ ನೀನೇ ನನ್ನ ಅಣ್ಣನಿಗೆ ಸುಬುದ್ಧಿಯನ್ನು ಕೊಡು.
ಆತನಿಗೆ ಪಶ್ಚಾತ್ತಾಪವಾಗಲಿಕ್ಕಿಲ್ಲವೆ

ಬುಕ್ಕ ಗೌರೀ! ಪಶ್ಚಾತ್ತಾಪವು ಯಾರಿಗೆ? ನಿಮ್ಮಣ್ಣನಿಗೆ? ಮಾನವರೂಪಿ ಪಿಶಾಚಿಗೆ? ಪಶ್ಚಾತ್ತಾಪದ ಒಂದು ಕಣವು ಕೂಡಾ ಅವನ ಹೃದಯದಲ್ಲಿ ಹುಟ್ಟಲಾರದು. ಅದಿರಲಿ! ಗೌರೀ! ಯುದ್ಧದಲ್ಲಿ ಒಂದು ವೇಳೆ ನಿಮ್ಮಣ್ಣನಿಗೆ ಜಯವಾಗಬಹುದು.

ಗೌರಾಂಬಿಕಾ : ಧರ್ಮದೇವತೆಯ ಮೈತ್ರಿಯನ್ನು ತ್ಯಜಿಸಿ ಜಯಲಕ್ಷ್ಮಿಯು ಅಧರ್ಮ ರಾಕ್ಷಸಿಯನ್ನು ಸ್ನೇಹ ಮಾಡುವಳೇ? ಎಲ್ಲಿ ಧರ್ಮವೋ ಅಲ್ಲಿಯೇ ಜಯ (ತೂತೂರಿ ಸಪ್ಪಳ)

ಬುಕ್ಕ ಅದೋ ಕೇಳಿದ್ದಿಯಾ? ಧರ್ಮಧ್ವಜವನ್ನು ಸ್ಥಾಪಿಸುವದಕ್ಕಾಗಿ ಸಕಲ ಸೈನ್ಯವು ಸಿದ್ಧವಾಗಿ ನಿಂತಿರುವದು. ನನಗೆ ನಿನ್ನ ಪ್ರೇಮ ಬೆಂಬಲವಿರುವುದು (ಗೌರಿ ಹೋಗುವಳು - ಮಾಧವ ಹುಕ್ಕ ಬರುವರು)

ಮಾಧವ ಕುಮಾರಾ! ವರಂಗೂಳದ ಕೃಷ್ಣರಾಜರೊಡನೆ ಎಷ್ಟು ಜನ ಕಲಿಗಳು ಬಂದಿರುವರು

ಹುಕ್ಕ ಗುರು ಮಹಾರಾಜ! ೫೦೦ ಜನ ಸೈನಿಕರು ಬಂದಿರುವರು. ಗುರು ಮಹಾರಾಜ ನಾಳಿನ ದಿವಸವೇ ಆನೆಗುಂದಿಯನ್ನು ಮುತ್ತಲಿಕ್ಕೇ ಬೇಕು.

ಶಿವಾಂಗಿ (ಪ್ರವೇಶಿಸಿ) ಗುರು ಮಹಾರಾಜ! ರೌದ್ರವಾಮ ಮಲೀಕನಾಯಬ, ಕರಾಳ ಓೀಗೆ ಮೂವರೇ ಇತ್ತ ಕಡೆಗೆ ಬರುತ್ತಿರುವರೆಂದು ಮರಾಳನು ಹೇಳಿದನು.

ಹುಕ್ಕ ಅವರೇಕೆ ಇತ್ತ ಕಡೆ ಬರುತ್ತಿರುವರು (ಕೈಯಲ್ಲಿ ಧನುಷ್ಯ ತಕ್ಕೊಳ್ಳುವನು)

ಮಾಧವ ಕುಮಾರ ತಡೆ! ಹೀಗೆ ಅವಸರಮಾಡಬೇಡ ಅವರ ಆಗಮನದ ಕಾರಣವು ವಿದಿತವಾದ ನಂತರ ಧನುಷ್ಯಕ್ಕೆ ಕೈಹಾಕು.

ಶಿವಾಂಗಿ ಮಹಾರಾಜ! ಇತ್ತನೋಡಿ ಆ ಗುಹೆಯ ಬಾಗಿಲಕ್ಕೆ ಬಂಡೆಗಲ್ಲುಗಳನ್ನು ಯಾರು ಹಾಕಿರುವರು

ಮಾಧವ ಯಾರಾದರೂ ಹಾಕಿರಬಹುದು. ಕುಮಾರ ನಡೆ ನಾವೂ ಆ ಕಡೆಗೆ ಹೋಗುವಾ

ಕರಾಳ (ಬಂದು) ಈ ಗುಹೆಯಲ್ಲಿ ಸಿಂಹವನ್ನು ಹಾಕಿ ಎರಡು ದಿವಸಗಳಾದವು. ಅದು ಎಲ್ಲಿ ಸತ್ತಿರುವುದೋ ಏನೋ (ರೌದ್ರದಾಮ, ಮಲೀಕ ಬರುವರು)

ರೌದ್ರದಾಮ : ಸರಕಾರ! ಇದೇ ಆ ಗುಹೆಯು. ದೈವದ ಪರೀಕ್ಷೆಯಾಗಲಿ

ಮಲೀಕ ರೌದ್ರದಾಮಜೀ! ಆ ಅಪರಿಮಿತ ಸಂಪತ್ತು ನಮ್ಮ ವಶವಾದರೆ ಕೇಳುವದೇನು? ನಾನು ದಕ್ಷಿಣ ಹಿಂದುಸ್ತಾನದ ಸುಲ್ತಾನನಾಗುವೆ

ಕರಾಳ ತಗಂಡಿತ್ರಪ್ಪಾ ಈಗ ಇವನಿಗೂ ಪೂರಾ ಹುಚ್ಚ ತಗೊಂಡಿತು

ರೌದ್ರದಾಮ : ಸರಕಾರ! ತಡಮಾಡಬೇಡಿ ದೈವದ ಪರೀಕ್ಷೆಯಾಗಲಿ

ಮಲೀಕ ಅಲ್ಲಾಹೋ ಅಕಬರ

ಮಾಧವ ಹಾ ತಡೆ ಮಹಮ್ಮದೀ ವೀರಾ! ಮುಂದಕ್ಕೆ ಒಂದು ಹೆಜ್ಜೆಯನ್ನಿಕ್ಕಬೇಡ

ಮಲೀಕ ಯಾರು? ತಡೆಯೆಂದು ನನಗೆ ಆಜ್ಞೆ ಮಾಡುವವರು.

ಮಾಧವ ನಾನು ಮಾಧವಾರ್ಯ. ಹುಕ್ಕನ ಗುರುವಾದ ಮಾಧವಾಚಾರ್ಯ. ಮಹಮ್ಮದೀ ವೀರಾ ಆ ಗುಹೆಯ ಕಲ್ಲನ್ನು ಮುಟ್ಟಬೇಡಾ

ರೌದ್ರದಾಮ ಅದೇಕೆ? ಅವರ ಮೇಲೆ ನಿನ್ನ ಸ್ವಾಮಿತ್ವವಿರುವದೇ?

ಮಾಧವಾ	ಚಾಂಡಲಾ! ಸ್ವಾಮಿತ್ವದ ವಿಷಯವಾಗಿ ಪ್ರಶ್ನೆಮಾಡುವೆಯಾ? ಅಖಿಲ ಬ್ರಹ್ಮಾಂಡದ ಮೇಲೆ ಸ್ವಾಮಿತ್ವವನ್ನು ನಡೆಸುವ ಭುವನೇಶ್ವರಿ ಮಾತೆಯ ವರಪ್ರದಾನದಿಂದ ವಿಶ್ವದ ಸ್ವಾಮಿತ್ವವೇ ನನ್ನ ಕಡೆಗೆ ಬಂದಿರುವದು. ಆದರೆ ರೌದ್ರದಾಮಾ! ನಶ್ವರವಾದ ವಿಶ್ವದ ಸ್ವಾಮಿತ್ವವನ್ನು ತಕ್ಕೊಂಡು ನನಗೇನು ಮಾಡಬೇಕಾಗಿದೆ. ಕನ್ನಡ ನಾಡಿನವಷ್ಟೇ ಅಲ್ಲ. ಅಖಿಲ ಭಾರತದ ಸ್ವಾಮಿತ್ವವನ್ನು ಹುಕ್ಕನಿಗೆ ಒಪ್ಪಿಸಬೇಕೆಂದು ನಾನು ಪ್ರಯತ್ನಿಸುತ್ತಿರುವೆ.

ಕರಾಳ	ಇವನೇನೋ ದೊಡ್ಡ ಋಷಿಯಾಗಿಬಿಟ್ಟಿರುವನು.

ಮಾಧವ	ಕುಮಾರಾ! ಬಾಣವನ್ನು ಬಿಟ್ಟು ಆ ಬಂಡೆಗಲ್ಲನ್ನು ನೆಲಕ್ಕೆ ಉರುಳಿಸು (ಹುಕ್ಕನು ಬಾಣ ಹೊಡೆದು ಕಲ್ಲನ್ನು ಕೆಳಕ್ಕೆ ಬೀಳಿಸುವನು ಗವಿಯೊಳಗಿಂದ ಸಿಂಹವು ನಾದ ಮಾಡುತ್ತ ಹೊರಗೆ ಬರುವುದು ಪುನಃ ಹುಕ್ಕನು ಅದನ್ನು ಹೊಡೆಯ ಹೋಗುವನು)

ಮಾಧವ	ಹಾ! ಕುಮಾರಾ ತಡೆ. ಮೃಗರಾಜನು ಬಹಳ ಹಸಿದಿರುವನು (ಅದರ ಮೈಮೇಲೆ ಕೈ ಆಡಿಸುತ್ತ) ಓಂ ಶಾಂತಿಃ ಶಾಂತಿಃ ಶಾಂತಿಃ (ಸಿಂಹವು ಮೃದುವಾಗಿ ಪುನಃ ಗವಿಯೊಳಗೆ ಸೇರುವದು)

ಮಲೀಕ	ಹಿಂದು ಫಕೀರರೇ ನಿಮ್ಮ ಹಿಂದೂ ಧರ್ಮವನ್ನು ದ್ವೇಷಿಸುವದಿಲ್ಲ

೬ನೇ ಪ್ರವೇಶ

ಸಮಯ: ಪೂರ್ವರಾತ್ರಿ

(ಕರಾಳನು ಜೋಳಿಗೆಯನ್ನು ತೆಗೆದುಕೊಂಡು ಬರುವನು)

ಕರಾಳ	ದಂಡನಾಯಕನಾಗಿ ಕೈಯಲ್ಲಿ ಖಡ್ಗ ಹಿಡಿದುಕೊಂಡು ಮೆರೆದಾಡಿದನು ಈಗ ಈ ಖಡ್ಗಕ್ಕೆ ರಜೆಯನ್ನು ಕೊಟ್ಟು ಪುನಃ ಲೆಕ್ಕಣಿಕೆಯನ್ನು ಹಿಡಿದನು. ಕರಣಿಕರೊಡೆಯನೆಂಬ ಬಿರುದನ್ನು

ಧರಿಸಿ ಆನೆಗುಂದಿಯ ಜಮಾಖರ್ಚು ಎಂಬು ನಾಣ್ಣುಡಿಗೆ ಜನ್ಮಕೊಟ್ಟ ಲೆಕ್ಕಣಿಕೆಯ ಕೆಲಸವೂ ಮುಗಿಯಿತು. ಈಗ ಗುಪ್ತಚಾರನ ಕೆಲಸವು ನನ್ನ ಕಡೆಗೆ ಬಂದಿರುವದು. ಗುಪ್ತಾಚಾರನೆಂದರೆ ಬಹುರೂಪಿಯೇ. ಸರಿ ಇರಲಿ ಹುಕ್ಕನಾಯಕನ ಬಿಡಾರಕ್ಕೆ ಹೋಗಿ ಗುಪ್ತ ಸಂಗತಿಗಳನ್ನು ಸೆಳೆದುಕೊಂಡು ಬರಬೇಕೆಂದು ಪ್ರಧಾನ ರೌದ್ರದಾಮರು ಅಪ್ಪಣೆಯನ್ನು ಕೊಟ್ಟಿರುವರು. ಈ ಜೋಳಿಗೆಯಲ್ಲಿ ನಮಗೆ ಬೇಕಾಗುವ ಸಾಮಾನುಗಳಿರುವವು (ಜೋಳಿಗೆ ಬಿಚ್ಚಿ) ಇದು ಸೀರೇ, ಇದು ಕುಪ್ಪಸ, ಸ್ತ್ರೀ ವೇಷದ ಸಾಮಾನುಗಳು ಇವು ಬೇರೆ - ಗಡ್ಡ, ಮೀಶೆ, ಪೇಟಾ ಇತ್ಯಾದಿ ಯಾರೋ ಬರುತ್ತಿರುವಂತೆ ಕಾಣುತ್ತದೆ. ಇವರಾರು ಇಷ್ಟು ರಾತ್ರಿಯಲ್ಲಿ ಇಲ್ಲಿಗೆ ಬರುವವರು (ಶಿವಾಂಗಿ ಬರುವಳು)

ಶಿವಾಂಗಿ — ಯಾರು! ಕರಾಳನೇನು?

ಕರಾಳ — ಇದರ ಉಸಾಬರಿಯನ್ನು ಮಾಡದೇ ಹಾದಿಯನ್ನು ಹಿಡಿ ಶಿವಾಂಗೀ. ನೀನೇನು ಜಕ್ಕಣಿ ಇರುವಿಯೋ ಯಕ್ಷಿಣಿ ಇರುವೆಯೋ ಅಥವಾ ಭೂತರಾಜನ ಮೊಮ್ಮಗಳಿರುವೆಯೋ ಹೇಳು.

ಶಿವಾಂಗಿ — ಹೀಗೇಕೆ ಕೇಳುವಿ?

ಕರಾಳ — ರಾತ್ರಿ ಅನ್ನುವದಿಲ್ಲಾ ಹಗಲು ಅನ್ನುವದಿಲ್ಲಾ ಯಾವಾಗಲೂ ನನ್ನ ಬೆನ್ನ ಹತ್ತಿರುವಿ, ನಾನು ಸುಡಗಾಡಿಗೆ ಹೋದರೂ ನನ್ನ ಬೆನ್ನ ಹಿಂದೆ ಸಿದ್ಧಳಾಗಿ ನಿಲ್ಲುವಿ. ಆಶ್ರಮದಲ್ಲಿ ಶಿವಾಂಗೀ, ಆನೇಗುಂದಿಯಲ್ಲಿ ಶಿವಾಂಗೀ, ಸೆರೆಮನೆಯಲ್ಲಿ ಶಿವಾಂಗೀ, ಅರಮನೆಯಲ್ಲಿ ಶಿವಾಂಗೀ, ಕರಾಳನ ಬೆನ್ನಹಿಂದೆ ಶಿವಾಂಗೀ, ಆದಕ್ಕೋಸ್ಕರ ಕೇಳುವ ನೀನೇನು ಭೂತರಾಜನ ಮೊಮ್ಮಗಳೇ?

ಶಿವಾಂಗಿ — ಇಷ್ಟೇಕೆ ನನ್ನ ದೆಶೆಯಿಂದ ಬೇಜಾರ ಬಂದಿರುವದು ತಮಗೆ ಕರಾಳರಾಯ.

ಕರಾಳ ಮತ್ತ ಸುರಮಾಡಿದಿಯಲ್ಲಾ ಸುಮ್ಮನೆ ಕರಾಳ್ಯಾ ಅಂತ ಬಾಯ್ತುಂಬ ಕರೆ. ಬಾಯಿಯಿಂದ ರಾಯರನ್ನುವದು ಒಳಗಿಂದೊಳಗೆ ಚುರುಮರಿ ತಿನಿಸಲಿಕ್ಕೆ ಹಚ್ಚುವುದು ಸಾಕು! ನಿನ್ನ ಶೋಬತಿಯೋ ಬೇಡ

ಶಿವಾಂಗಿ ಹಾಗಾದರೆ ಹೋಗಲ್ಯಾ?

ಕರಾಳ ಹೋಗು ದಯಮಾಡಿ ಹೋಗು.

ಶಿವಾಂಗಿ (ವೈಯ್ಯಾರದಿಂದ) ಹೋಗಲ್ಯಾ?

ಕರಾಳ ಹೋಗು ಸುರಕ್ಷಿತವಾಗಿ ಹೋಗು ಮಹಾರಾಯಳೇ. ನನ್ನನ್ನಿಷ್ಟು ಉಗಳಿಬಿಡು. ನಿನಗೊಂದು ಧೀರ್ಘ ನಮಸ್ಕಾರ (ಹೋಗುವಳು) ಹಾ, ಈ ಖೋಡಿ ಮೀಶಿ ಅಡ್ಡಾಗುವದು, ಮೀಶೆಯನ್ನಷ್ಟು ಬೋಳಿಸಿಕೊಂಡು ಬರಲಿಕ್ಕೆ ಮರೆತು ಬಿಟ್ಟೆನು. ಈಗ ಎಲ್ಲಾರು ಮೀಶಿಗೆ ರಜೆಯನ್ನು ಕೊಡುತ್ತಿರುವರು, ನಮ್ಮಂಥ ಗುಪ್ತಾಚಾರರು ಸ್ತ್ರೀವೇಷ ಧರಿಸುವ ನಟಗಳು ಮೊಟ್ಟಮೊದಲು ಮೀಸೆಯನ್ನು ಬೋಳಿಸಿಕೊಳ್ಳಲಿಕ್ಕೇ ಬೇಕು. ಸದ್ಯಕ್ಕೆ ಮೀಸೆ ಇದ್ದರೂ ಇರುವದಿಲ್ಲವೆಂದು ಕಲ್ಪಿಸಿದರಾಯಿತು (ಸ್ತ್ರೀ ವೇಷ ಧರಿಸಿ) ಅಮ್ಮಯ್ಯಾ! ಏನು ನನ್ನ ಸೌಂದರ್ಯ ಶ್ರೀಮನ್ನಾರಾಯಣನು ಧರಿಸಿದ್ದ ಮೋಹಿನಿ ವೇಷವಾದರೂ ಇಷ್ಟು ಮೋಹಕವಾಗಿರಲಿಕ್ಕಿಲ್ಲ ಸ್ತ್ರೀ ವೇಷದಲ್ಲಿರುವ ನನ್ನ ಮುದ್ದು ಮುಖವು ಕಮಲ ಪುಷ್ಪವಂತೆ ಎದ್ದು ಕಾಣುತ್ತಿರುವದು ಕಮಲ ಪುಷ್ಪಕ್ಕೆ ಎರಗಿದ ಗುಂಗು ಹುಳದಂತೆ ಈ ಮೀಸೆಗಳು ಶೋಭಿಸುತ್ತಿರುವವು. ಆಹಾ! ಏನು ನನ್ನ ಸೌಂದರ್ಯ (ನೋಡಿ) ಅಬ್ಬಾ ಪ್ರಧಾನರು ಬರುವಂತೆ ಕಾಣುತ್ತವೆ ಇವರೆಲ್ಲಿಗೆ ಹೊರಟಿರಬಹುದು. ಇವರ ಕಣ್ಣಿಗೆ ಬೀಳದಲೆ ಮರೆಯಾಗಿ ನಿಲ್ಲುವಾ (ರೌದ್ರದಾಮ ಬರುವನು)

ರೌದ್ರದಾಮ : (ಪ್ರವೇಶಿಸಿ) ಶಿವಾಂಗಿ ನನ್ನ ಸಕಲ ಕಾರಸ್ಥಾನಗಳನ್ನು ಬುಡಮೇಲು ಮಾಡಿದ ಶಿವಾಂಗಿ ಇದೀಗ ಆನೆಗುಂದಿಯಿಂದ

ಆ ಹೊಯ್ಕಾಲಿಯು ಘೊರಬಿದ್ದಳು. ನೋಡು ನೋಡುವಷ್ಟರಲ್ಲಿ ಮರೆಯಾಗಿ ಬಿಟ್ಟಳು ಆ ದುಷ್ಟೆಯು ಆನೆಗುಂದಿಯಲ್ಲಿ ಗುಪ್ತವಾಗಿ ಸಂಚರಿಸಿ ಎಲ್ಲ ಪರಿಸ್ಥಿತಿಯನ್ನು ತಿಳಿದುಕೊಂಡು ಹೋಗುವಳು. ಹೋಗು ಗಯ್ಯಾಳಿ! ನೀನು ಪಾತಾಳದಲ್ಲಿ ಹೊಕ್ಕರೂ ನಿನ್ನನ್ನು ಸಂಹರಿಸದೆ ಬಿಡುವದಿಲ್ಲ - ಆ ಗಿಡದಡಿಯಲ್ಲಿ ಸಪ್ಪಳವಾಗುತ್ತಿರುವುದು. ಗುಜುಗುಂಟು (ಸ್ತ್ರೀ ವೇಷಧರಿಸಿದ ಕರಾಳನನ್ನು ಹಿಡಿದು ತಂದು) ಹುಚ್ಚುಮುಂಡೆ! ನನ್ನ ಮುಂದೆ ನಿನ್ನ ಆಟವು ಸಾಗದು, ನಿಲ್ಲು ನಿನ್ನ ರುಂಡವನ್ನು ಹಾರಿಸುವೆನು.

ಕರಾಳ ಸರಕಾರ! ನಾನು ಶಿವಾಂಗಿಯಲ್ಲ ವೇಷಧಾರಿಯಾದ ಕರಾಳ.

ರೌದ್ರದಾಮ : ಗಯ್ಯಾಳೀ ಇನ್ನೂ ನಿನ್ನ ತುಂಟತನವನ್ನು ಪಚ್ಚುವೆಯ! ಹುಚ್ಚುಮುಂಡೆ ನಿನ್ನ ಸೊಂಟವನ್ನು ಮುರಿಯುವೆ.

ಕರಾಳ ಅಯ್ಯಯ್ಯೋ ಸರಕಾರ! ನಾನು ಶಿವಾಂಗಿಯಲ್ಲ ವೇಷಧಾರಿಯಾದ ಕರಾಳ ಕ್ರೋಧಾಂಧನಾದ ನಿಮಗೆ......

ರೌದ್ರದಾಮ : ನಿಜವಾಗಿ ಇವನು ಕರಾಳನು

ಕರಾಳ (ಅಳುತ್ತ) ಅಹುದು ಸರಕಾರ!

ರೌದ್ರದಾಮ : ಬಾಯಿಮುಚ್ಚು ಕತ್ತೇ, ನೀನು ಇಲ್ಲಿಗೆ ಬಂದು ಎಷ್ಟು ಹೊತ್ತಾಯಿತು. ಶಿವಾಂಗಿಯನ್ನು ಕಾಣಲಿಲ್ಲವೇ

ಕರಾಳ ಇಲ್ಲ ಸರಕಾರ! ನಾನೇನು ನೋಡಲೇ ಇಲ್ಲ.

ರೌದ್ರದಾಮ : ಬೇಗನೆ ಕಾರ್ಯವನ್ನು ಮುಗಿಸಿಕೊಂಡು ಬೆಳಗಾಗುವವರೊಳಗೆ ಭೆಟ್ಟಿಯಾಗತಕ್ಕದ್ದು. ಶಿವಾಂಗಿ! ನನ್ನ ಸರ್ವಸ್ವವನ್ನು ನಾಶಮಾಡಿದ ಶಿವಾಂಗಿ........

ಕರಾಳ ಕ್ರೋಧ ಸಂತಪ್ತನಾದ ಈತನ ತಲೆಯು ತಿರಿಗಿರುವುದೇ ನಿಶ್ಚಯ ದಾಸಾಳದ ಹೂವನ್ನು ಗುಲಾಬಿಯ ಹೂವೆಂದು ತಿಳಿಯುವ

ಇವನ ಬುದ್ಧಿಗೆ ಬೆಲೆಯೇ ಇಲ್ಲ. ಲತಾಂಗಿಯಾದ ಶಿವಾಂಗಿ ವೇಷಧಾರಿಯಾದ ಈ ಓಡಂಬಿಯತ್ತ ಥೂ! ನಿನ ಮಂಜಾಳ ಹೋಗಲಿ ಮೂರ್ಖಾ!! ಆ ಮೂರ್ಖನು ಕುಣಿಸಿದಂತೆ ಕುಣಿಯುವವನಾದ ನಾನು ಶತಮೂರ್ಖ. ಸಾಕು ಸ್ತ್ರೀವೇಷವನ್ನು ಧರಿಸುವುದು ಬೇಡ (ವೇಷ ತೆಗೆದೊಗೆದು) ಮುಸಲ್ಮಾನ ವೇಷವನ್ನು ಧರಿಸಿ ಹುಕ್ಕನ ಬಿಡಾರವನ್ನು ಸೇರತಕ್ಕದ್ದು ಅಲ್ಲಿ ನಮ್ಮ ಕಪಟ ನಾಟಕವನ್ನು ಪ್ರಯೋಗಿಸತಕ್ಕದ್ದು (ಮುಸಲ್ಮಾನ ವೇಷಧರಿಸಿ) ಅರೆ ವ್ಹಾ ಈ ವೇಷವು ನನಗೆ ಎಷ್ಟು ಚೆಂದವಾಗಿ ಕಾಣಿಸುತ್ತದೆ. ಈ ವೇಷವನ್ನು ಧರಿಸಿದ ಕೂಡಲೇ ಮೈಯಲ್ಲಿ ಹುರುಪು ಬಂದು ಬಿಟ್ಟಿದೆ. ಈ ಹುರುಪನ್ನು ಆರಿಸಕೊಡಬಾರದು ಪ್ರತ್ಯಕ್ಷ ನಾನು ದಿಲ್ಲಿ ಸುಲ್ತಾನನು ಪಾನಂ ದಿಲ್ಲಿ ಸುಲ್ತಾನನು (ತಿರುಗಾಡುವಷ್ಟರಲ್ಲಿ ಮಲೀಕನಾಯಬನು ಕಷ್ಣವಸ್ತ್ರದಿಂದ ಬರುವನು) ತುಮ್‌ಕೌನ್ ಹೈ ದೋಸ್ತ್‌ಕಿ ದುಷ್ಮನ್?

ಮಲೀಕ — ತುಮ್ ಕೌನ್‌ಹೈ

ಕರಾಳ — ಮೈ..... ಮೈ..... ಸುಲ್ತಾನಕಾ ಪ್ರತಿನಿಧಿ ಹೈ ಹಮಾರ ನಾಮ ಖಾನ್ ಬಹಾದ್ದೂರ್ ಮಲೀಕ ಸಾಯಬ

ಮಲೀಕ — (ಸ್ವ) ಬದ್ಮಾಷ್ (ಪ್ರ) ಆಪ್‌ತೋ ಮಲಿಕ ಸಾಯಬ ಸುಭೇದಾರ ಸವಾರಿ ಕಂಹಾ ಜಾತ ಹೈ?

ಕರಾಳ — ಹಮಕೋ ಪೂಛನೇ ವಾಲೆ ತುಮ್ ಕೌನ್ ಹೋ?

ಮಲೀಕ — ಏ ದೇಖೋ (ಬುರ್ಕ ತೆಗೆಯುವನು) ಬೇಪಕೂಫ್ (ಕುತ್ತಿಗೆ ಹಿಡಿದು)

ಕರಾಳ — ಸರಕಾರ! ನನ್ನನ್ನು ಕ್ಷಮಿಸಬೇಕು. ನಾನು ತಮ್ಮ ಚರಣ ಸೇವಕನು ವೇಷಪಲ್ಲಟಿಸುವ ಕಲೆಯನ್ನು ಅಭ್ಯಾಸ ಮಾಡುತ್ತಿದ್ದೆ.

ಮಲೀಕ — ಇರಲಿ ರೌದ್ರದಾಮನು ಯಾವ ಕಡೆಗೆ ಹೋದನು?

ಕರಾಳ ಆ ಕಡೆಗೆ ಹೋದನು. ನಿಶ್ಚಯವಾಗಿ ಆ ಕಡೆಗೇ ಹೋದನು.

ಮಲೀಕ ಅಚ್ಛಾ! (ಹೋಗುವನು)

ಕರಾಳ ಸಾಕಪ್ಪಾ ಸಾಕು ಗುಪ್ತಾಚಾರದ ಕೆಲಸವು ನನ್ನಿಂದಾಗದು. ಮಧ್ಯರಾತ್ರಿಯಾಗಿದೆ, ಮನೆಗೆಹೋಗಿ ಸ್ವಸ್ಥವಾಗಿ ಬಿದ್ದುಕೊಳ್ಳುವಾ. ಇವರ ರಾಜಕಾರಣವು ಬೇಡ ಇವರ ಸಹವಾಸವೂ ಬೇಡ (ಹೋಗುವನು)

ಶಿವಾಂಗಿ (ಪ್ರವೇಶಿಸಿ) ಇಲ್ಲಿ ನಡೆಯುವ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕಾಗಿ ಆ ಮರದ ಹಿಂದೆ ಅಡಗಿಕೊಂಡು ಕುಳಿತಿದ್ದೆ. ವಿಶೇಷ ಏನೂ ಕಂಡುಬರಲಿಲ್ಲ. ಕರಾಳನ ಮರ್ದಶೆಯನ್ನು ಕಣ್ಣಾರೆ ಕಂಡ ರೌದ್ರದಾಮನು ನನ್ನ ಶೋಧಕ್ಕಾಗಿ ಘೊರಟಿರುವನು. ಮಲೀಕನಾಯಬರು ರೌದ್ರದಾಮನ ಶೋಧನೆಯಲ್ಲಿದ್ದಂತೆ ಕಾಣುತ್ತದೆ. ಇರಲಿ ಮಧ್ಯರಾತ್ರಿಯಾಯಿತು ಇನ್ನು ತಡಮಾಡದೇ ಬಿಡಾರವನ್ನು ಸೇರತಕ್ಕದ್ದು (ಹೋಗಹತ್ತವಳು).

ರೌದ್ರದಾಮ : ತಡೆ ಅಘಟೆ! ಕಾಲನ ಕೈಯೊಳಗಿನಿಂದ ಪಾರಾಗಿ ಹೋಗಲಾರಿ. ನಿನ್ನನ್ನು ಎಷ್ಟು ಪರಿಯಾಗಿ ಶೋಧಿಸಿದರೂ ಕಣ್ಣಿಗೆ ಬೀಳದ್ದರಿಂದ ಆನೆಗುಂದಿಗೆ ಹಿಂದಿರುಗಿದ್ದೆ ಆದರೆ ನಿನ್ನ ದುರ್ದೈವವೇ ನಿನ್ನನ್ನು ನನ್ನ ಎದುರಿನಲ್ಲಿ ತಂದು ನಿಲ್ಲಿಸಿರುತ್ತದೆ.

ಶಿವಾಂಗಿ ನನ್ನನ್ನೇಕೆ ಇಷ್ಟು ಪರಿಯಾಗಿ ಶೋಧಿಸುವ ಶ್ರಮವನ್ನು ವಹಿಸಿದಿರಿ?

ರೌದ್ರದಾಮ : ಒರೆಯಿಂದ ಹೊರಬಿದ್ದ ಈ ಖಡ್ಗವೇ ನಿನಗೆ ಉತ್ತರವನ್ನು ಕೊಡುವದು. ದಾಸೀಪುತ್ರಿ ನೀಚ ಸೂತ ಕುಲದ ಕುನ್ನಿಯೇ.....

ಶಿವಾಂಗಿ ದಾಸೀ ಪುತ್ರಿಯಲ್ಲ ಜೋಕೇ ರೌದ್ರದಾಮಾ! ದಾಸೀ ಪುತ್ರಿಯಿಂದ ಇಂಥ ಸಾಹಸದ ಕೆಲಸಗಳು ಜರುಗಿಸಲ್ಪಡುವವೇ? ಮೂಢಾ! ಅಖಂಡವಾದ ಸೇವಾ

ವೃತ್ತಿಯಿಂದ ವೀರತ್ವದ ತೇಜವು ನೊಂದಿ ಷಂಡತ್ವ, ಶೀತ ರಕ್ತವು ಸೂತ ಸಮಾಜದ ರಕ್ತವಾಹಿನಿಯಲ್ಲಿ ಹರಿಯುವದೆಂದು ತಿಳಿ. ಅಂಥ ನಿಸ್ಸತ್ವವಾದ ಸಮಾಜದಲ್ಲಿ ವೀರ ಕನ್ಯೆಯು ಜನಿಸಬಹುದೇ? ಹಿಮದ ಹೊಟ್ಟೆಯಿಂದ ಅಗ್ನಿ ಹುಟ್ಟಬಹುದೇ? ದಿವ್ಯ ತೇಜದಿಂದ ಚಮಕಿಸುವ ಕ್ಷಾತ್ರ ತೇಜದಲ್ಲಿ ನನ್ನ ಜನ್ಮವಾಗಿರುವದು

ರೌದ್ರದಾಮ : ಅದಾವ ಕ್ಷೌತ್ರಮಾತೆಯು ನಿನಗೆ ಜನ್ಮ ಕೊಟ್ಟಿರುವಳು?

ಶಿವಾಂಗಿ ಯಾವ ವೀರಮಾತೆಯ ಚಂಡ ವಿಕ್ರಮರಾದ ಹುಕ್ಕಬುಕ್ಕರಿಗೆ ಜನ್ಮವನ್ನು ಕೊಟ್ಟಿರುವಳೋ ಆ ವೀರಮಾತೆಯೇ ನನಗೆ ಜನ್ಮ ಕೊಟ್ಟಿರುವಳು ನನ್ನಹೆಸರು ಶಿಂಗಲಾ ಕುಮಾರಿ.

ರೌದ್ರದಾಮ ಏನು? ಶಿಂಗಲಾಕುಮಾರೀ (ಸ್ವ) ಶಿವಾಂಗಿಯು ಸಾಮಾನ್ಯ ಕನ್ಯೆಯೆಂದು ತಿಳಿಯಬೇಡ ಎಂದು ಜಂಬುಕೇಶ್ವರರು ನನ್ನ ಮುಂದೆ ಎಷ್ಟೋಸಲ ಉದ್ಗಾರ ತೆಗೆದಿದ್ದರು. ಈವರೆಗೂ ಇದು ತಿಳಿಯದೇ ಹೋಯಿತು. ಹೋಗಲಿ (ಪ್ರಕಟ) ಅದು ಏನೇ ಇರಲಿ ನಾನು ನಿನ್ನನ್ನು ಶಿವಾಂಗಿಯೆಂದೇ ಕರೆಯುವೆ.

ಶಿವಾಂಗಿ ನನ್ನನ್ನು ಶಿವಾಂಗಿ ಎಂದು ಕರೆ ಶಿಂಗಲಾ ಕರೆ ನನಗದರ ಚಿಂತೆ ಇಲ್ಲ. ಆದರೆ ಕ್ಷಾತ್ರಕುಮಾರಿ ಎಂಬುದನ್ನು ಮರೆಯಬೇಡ.

ರೌದ್ರದಾಮ : ಕ್ಷಾತ್ರಕುಮಾರೀ! ನನ್ನ ವೈರಿಯ ಸಹೋದರಿ! ನನ್ನ ಮಹಾತ್ವಾಕಾಂಕ್ಷೆಗಳಿಗೆ ಅರದಾಳ ಹಾಕಿದ ಮಾರಿ! ನಿನ್ನನ್ನು ಕೊಂದು ಹಾಕಿದರೆ ನನಗಾವ ದೋಷವು ಸೋಂಕಲಾರದು.

ಶಿವಾಂಗಿ ದೋಷ! ನಿನಗೇಕೆ ಅದರ ವಿಚಾರ! ಪಾಪದ ಖಣಿಯೇ! ನರಕದ ಹುಳಕ್ಕೆ ಹೇಸಿಕೆಯ ವಿಚಾರವೇಕೆ? ನಿನ್ನ ಖಡ್ಗದ ಗರುವವನ್ನು ಮುರಿಯುವಷ್ಟು ಶಕ್ತಿಯು ಈ ನನ್ನ ಖಡ್ಗದಲ್ಲಿರುವದು.

ರೌದ್ರದಾಮ : ಅಹಹ! ಸುಂದರಿ (ಖಡ್ಗ ಒರೆಗಾಣಿಸಿ) ಚಂದ್ರಮುಖಿಯಾದ ನಿನ್ನ ಪಕ್ಷವನ್ನು ಕಟ್ಟಿ ಚಂದ್ರಮನು ತನ್ನ ಶೀತಲ ಕಿರಣಗಳಿಂದ

ನನ್ನ ಕ್ರೋಧಾಗ್ನಿಯನ್ನು ನಂದಿಸಿದನು. ಆ ಚಂದ್ರಮನು ಮನ್ಮಥನ ಮಿತ್ರನೆಂಬುದನ್ನು ನನ್ನ ಅನುಭವಕ್ಕೆ ತಂದುಕೊಟ್ಟನು ಕ್ಷಾತ್ರಕುಮಾರೀ! ಶಿಂಗಲಾ! ಅಹಹ ಈ ಸೌಂದರ್ಯವನ್ನು ಶಿವಾಂಗಿಯೆಂಬ ಬುರುಕಿಯಲ್ಲಿ ಬಚ್ಚಿಟ್ಟಿದ್ದೀಯಾ! ಶಿಂಗಲಾ! ವೈರಿಯ ಹೆಂಡತಿಯಾದ ಜಾನಕಿಯನ್ನು ಕಂಡು ಮೋಹವಶನಾದ ದಶಕಂಠನ ಹೃದಯದಲ್ಲಿ ಉದ್ಭವಿಸಿರುವ ವಿಕಾರವೇ ಈಗ ನನ್ನ ಹೃದಯದಲ್ಲಿ ಉದ್ಭವಿಸಿರುವವು.

ಶಿವಾಂಗಿ ದುರ್ಮುಖಾ! ಪಾಪಿಯೇ......

ರೌದ್ರದಾಮ : ಬೇಡ ನನ್ನನ್ನು ನಿಂದಿಸಬೇಡ. ಹೃದಯದಲ್ಲಿ ಕ್ರೋಧಾಗ್ನಿಯು ಹೊತ್ತುತ್ತಲಿದೆ. ಕಾಮಾಗ್ನಿಯು ಪ್ರಜ್ವಲಿಸುತ್ತಲಿದೆ. ಈ ಶೀತಲ ಚಂದ್ರಿಕೆಯಾದರೂ ಮಧ್ಯಾನ್ಹದ ಪ್ರಖರತೆಯಂತೆ ನನ್ನ ದೇಹವನ್ನು ಸುಡುತ್ತಲಿರುವದು. ಶಿಂಗಲೆಯ ಅಧರಾಮೃತ ಪಾನ ಆಮೇಲೆ ಶಿಂಗಲೆಯ ರಕ್ತದಲ್ಲಿ ಸ್ನಾನ. ಅಂದರೇನೆ ಈ ದೇಹತಾಪ ನಿವಾರಣೆಯಾಗುವದು. (ಮೈಮೇಲೆ ಹೋಗುವನು)

ಶಿವಾಂಗಿ ಈ ಅಸೀಬಾಲೆಯ ಕಂಠಾಲಿಂಗನ?

ರೌದ್ರದಾಮ : ನಿನ್ನ ಅಸಿಬಾಲೆಯ ಕಂಠಾಲಿಂಗನವನ್ನು ನನ್ನ ಖಡ್ಗ ತಕ್ಕೊಳ್ಳುವದು (ಖಡ್ಗ ಯುದ್ಧವಾಗಿ ಶಿವಾಂಗಿಯಖಡ್ಗ ಕೆಳಗೆ ಬೀಳುವದು) ಶಿಂಗಲಾ! ನನ್ನ ಮೇಲೆ ಪರಮೇಶ್ವರನಿಗೆ ದಯಹುಟ್ಟಿ ನಿನ್ನ ಕೈಯೊಳಗಿನ ಖಡ್ಗ ಕಳಚಿ ಬೀಳುವಂತೆ ಮಾಡಿದನು. ಇನ್ನು ನಿರಾತಂಕವಾಗಿ ಈ ರೂಪಸಿಯನ್ನು ಹೂಂ ಸುಂದರೀ ಹರಿಣದಂತೆ ಬೆದರಬೇಡ ನಿನ್ನ ಆವದೇತರ ವಿಕಾರವ ನನ್ನ ಕಾಮವಿಕಾರಕ್ಕೆ ಪುಷ್ಟಿಯನ್ನು ಕೊಡುವದು. ಶಿಂಗಲಾ! ಕಾಮಪುರುಷನಿಗೊಮ್ಮೆ ಸಮಯವನ್ನು ಸಾಧಿಸಿ ಕೊಡುವದು ನಿಸರ್ಗ ಕರ್ತವ್ಯವಾಗಿದೆ. ಒಂದೇ ಸಮನೇ ತಳಮಳಗೊಳ್ಳುತ್ತಿರುವ ಹೃದಯಕ್ಕೆ ಶಾಂತಿಯನ್ನು (ಎಂದು

ಮೈಮೇಲೆ ಹೋಗುವಷ್ಟರಲ್ಲಿ ಮಲೀಕಸಾಯಬ ಬಂದು ರೌದ್ರದಾಮನ ಕುತ್ತಿಗೆ ಹಿಡಿದು)

ಮಲೀಕ ಈವರೆಗೂ ನಡೆದ ಪ್ರಸಂಗ ಚಿತ್ರವನ್ನು ಕಣ್ಣಾರೆ ಕಂಡೆ. ಅಮ್ಮಾ ಹೇಳು ಈ ಪಾಪಿಯ ಹೊಟ್ಟೆಯನ್ನು ಹರಿದು ಇವನ ರಕ್ತವನ್ನು ಹರಿಸಲ್ಯಾ ಶಿರವನ್ನು ಹರಿಸಿ ಈ ಪಾಪಿಯ ಪ್ರಾಣವನ್ನು ಹೀರಲ್ಯಾ ಹೇಳು ಅಮ್ಮಾ.

ಶಿವಾಂಗಿ ಧನ್ಯ ಮಹಾನುಭಾವ! ನೀನು ನನ್ನ ವಚನವನ್ನು ಪಾಲಿಸುವೆಯಾ ಹೇಳು?

ಮಲೀಕ ಅಮ್ಮಾ ನಿಶ್ಚಯವಾಗಿ ಪಾಲಿಸುವೆ.

ಶಿವಾಂಗಿ ಹಾಗಾದರೆ ಇವನ ಕೂದಲೆಳೆಗೆ ಧಕ್ಕೆ ಹತ್ತದಂತೆ ಕಾಯ್ದು ಇವನನ್ನು ಆನೆಗುಂದಿಗೆ ಮುಟ್ಟಿಸಿರಿ. ಕಾಮ, ಕ್ರೋಧಗಳ ವಿಕಾರಗಳ ಹೊಡೆತದಿಂದ ಇವನೀಗ ಅಶಕ್ತನಾಗಿರುವನು, ಆದ್ದರಿಂದ ಇವನನ್ನು ಕೊಲ್ಲದೇ ಕಾಪಾಡಿರಿ.

ಮಲೀಕ : ಧನ್ಯ! ಹಿಂದೂ ಲಲನಾಮಣಿಗಳೇ! ಔದಾರ್ಯ ರಸದಿಂದ ತುಂಬಿ ತುಳುಕುವ ನಿಮ್ಮ ಪಿತೃಹೃದಯಕ್ಕೆ ನನ್ನ ಶತಶಃ ಧನ್ಯವಾದಗಳು. ಎಲೋ ಪಾಪಿ! ನಿನ್ನ ಮಸ್ತಕವನ್ನು ನೆಲಕ್ಕೆ ಮುಟ್ಟಿಸಿ ಈ ಮಾತೆಯ ಕ್ಷಮೆಯನ್ನು ಬೇಡಿಕೊಳ್ಳು. (ಬಲಾತ್ಕಾರದಿಂದ ನಮಸ್ಕರಿಸಿ ಒಯ್ಯುವನು) (ತೆರೆ ಬೀಳುವುದು)

(ರೌದ್ರದಾಮನ ಬಿಡಾರ)

ರೌದ್ರದಾಮ : (ಪ್ರವೇಶಿಸಿ) ಅವಮಾನಕ್ಕಿಂತ ಮರಣವೇ ಲೇಸು

ಕರಾಳ : ತಮ್ಮ ಸೈನ್ಯವನ್ನು ತಕ್ಕೊಂಡು ಕಂಪಲಿಗೆ ಹೋಗುವೆನು.

ರೌದ್ರದಾಮ : ಕರಾಳಜೀ! ಕಾಲವೇ ಪ್ರತಿಕೂಲವಾದ ಮೇಲೆ ಮಾಡುವದೇನು? (ತೆರೆಯಲ್ಲಿ ತುತೂರಿಯ ಧ್ವನಿ) ಕರಾಳಜೀ! ಹೇಗಾದರೂ ಮಾಡಿ ಶಿವಾಂಗಿಯನ್ನು ಮಾತ್ರ ಕೊಲ್ಲಲಿಕ್ಕೆ ಬೇಕು

ಅಂದರೆ ಆನಂದದಿಂದ ಪ್ರಾಣಬಿಡುವೆನು. (ವಚನ ಕೊಡುವನು ಭುಜಂಗನು ಬರುವನು)

ಭುಜಂಗ ಪ್ರಧಾನಜೀ! ಹುಕ್ಕನ ಸೈನ್ಯವು ಸಮುದ್ರದ ತೆರೆಗಳಂತೆ ಅಬ್ಬರದಿಂದ ಬರುತ್ತಿರುವದು.

ರೌದ್ರದಾಮ : ಭುಜಂಗರಾವ! ದೈವಬಲ ತಪ್ಪಿದ ಮೇಲೆ ಮಾಡುವದೇನು? ನಡೆಯಿರಿ. ವೈರಿಗಳೊಡನೆ ಕಾದಾಡಿ ಸಮರದಲ್ಲಿ ಮಡಿಯುವಾ ಹರ ಹರ ಮಹಾದೇವ! (ಯುದ್ಧವಾಗುವುದು) (ರೌದ್ರದಾಮನು ಸಾಯುವನು)

ಗೌರಾಂಬಿಕಾ : (ಪ್ರವೇಶಿಸಿ) ಹಾಯ್ ಹಾಯ್ ಸಹೋದರಾ......

ಮಾಧವ ಕುಮಾರೀ! ನಿಮ್ಮ ಜೀವಿತ ನಾಟಕದಲ್ಲಿ ಇದೊಂದು ಶೋಕರಸ ಪ್ರವೇಶ.

ಓಂ ಶಾಂತಿಃ ಶಾಂತಿಃ ಶಾಂತಿಃ

(೩ನೇ ಅಂಕ ಸಮಾಪ್ತ)

೪ನೇ ಅಂಕ

೧ನೇ ಪ್ರವೇಶ

ಸ್ಥಳ: ವಿದ್ಯಾನಗರದೊಳಗಿನ ಅರಮನೆ. ಸಮಯ: ಮೊದಲ ಪ್ರಹರ

(ಹುಕ್ಕನು ಕುಳಿತಿರುವನು, ಲಲಿತಾ ಗಾಳಿ ಹಾಕುತ್ತಿರುವಳು)

ಹುಕ್ಕ — ರಾಜಕುಮಾರೀ! ನಿನ್ನ ಕೋಮಲವಾದ ಕರಗಳಿಗೆ ಶ್ರಮ ಉಂಟಾಗಲಿಕ್ಕಿಲ್ಲವೇ? ಗಾಳಿ ಹಾಕುವದನ್ನು ಸಾಕುಮಾಡು ಭಗವಾನ್ ಭಾಸ್ಕರನು ತನ್ನ ಪ್ರಚಂಡವಾದ ಕಿರಣಗಳ ಪ್ರಖರತೆಯಿಂದ ಜೀವಜಗತ್ತನ್ನು ದಹಿಸುತ್ತಿರುವಾಗ ನಿಸರ್ಗ ದೇವಿಯು ಗಾಳಿಯನ್ನು ಹಾಕುವಳು. ಮಾರುತನು ವಾತಾವರಣದೊಳಗಿನಿಂದ ಬಂದು ನನ್ನ ಹೃದಯವನ್ನು ಆಶಿಸುತ್ತಿರುವನು. ಮನಮೋಹಿನಿ ಬಿಸಿಲು ಮಳೆಗಳೆನ್ನದೇ ಸಮರ ಸೇವೆಯನ್ನು ಮಾಡುವ ಕಗ್ಗಕುರುಬರ ಸೇನಾಪತಿಗೆ ಕೋಮಲ ಹಸ್ತದಿಂದ ಹಾಕಲ್ಪಡುವ ಗಾಳಿಯು ಉಪಯೋಗವಾಗಲಿಕ್ಕಿಲ್ಲ.

ಲಲಿತಾ — ಮಹಾರಾಜ! ತಮಗೆ ಯೋಗ್ಯವಾದ ಸೇವೆಯು ನನ್ನಿಂದ ಮಾಡಲಿಕ್ಕಿಲ್ಲವೇ? ಹೇಳಿ ತಮಗೆ ಈ ಸೇವೆಯು ರುಚಿಸಲಿಕ್ಕಿಲ್ಲವೇ? ಮಹಾರಾಜ! ಕಗ್ಗ ಕುರುಬರಕ್ಕಿಂತ ಕಡೆಯಾದ ಕಪಿಗಳ ಒಡೆಯನಾದ ಶ್ರೀರಾಮನು ಜಾನಕಿ ದೇವಿಯ ಕೋಮಲಸೇವೆಯಿಂದ ಆನಂದನಾಗುತ್ತಿದ್ದಿಲ್ಲವೇ?

ಪುಕ್ಕ — ಲಲಿತಾ! ನಾನು ನಿನ್ನ ಸೇವೆಯನ್ನು ಸೇರುವದಿಲ್ಲವೆಂದು ತಿಳಿದೆಯಾ? ಲತಾಂಗಿಯಾದ ಲಲಿತೆ ನೋಡು ನೀನು ಬಹಳ ವೇಳೆಯವರೆಗೆ ನಿನ್ನ ದೇಹವನ್ನು ನಿಲ್ಲಿಸಿದ್ದರಿಂದ ಅದುಹೇಗೆ ಹೊಯ್ದಾಡುತ್ತಿರುವದು. ತಾರುಣ್ಯ ಸಿಂಧುವೇ ನಿನ್ನ ದೇಹದ ಮೇಲೆ ಕರುಣೆಯನ್ನಿಟ್ಟು ಅದಕ್ಕೆ ವಿಶ್ರಾಂತಿಯನ್ನು ಕೊಡು.

ಲಲಿತಾ — ಮಹಾರಾಜ! ಇದೇನು ಚೇಷ್ಟೆ?

ಪುಕ್ಕ — ಚೇಷ್ಟೆಯಲ್ಲ. ಸತ್ಯವನ್ನೇ ಸಾರಿದೆ ಇದೋ ನೋಡು ಬಳಿಯಲ್ಲಿರುವ ಗುಲಾಬಿಯ ಹೂವಿನ ಮೇಲೆ ಕಾಣುವ ಇಬ್ಬನಿಯ ಹನಿಗಳಂತೆ ಬೆವರಿನ ಅಂವಗಳು ನಿನ್ನ ಮುಖಮಂಡಲದಲ್ಲಿ ಕಾಣುವವು. ನಿನಗೆ ಬಹಳೇ ಆಯಾಸವಾಗಿದೆ. ನೀನೀ ಪೀಠವನ್ನಲಂಕರಿಸು. ನಾನು ಗಾಳಿ ಹಾಕುವೆನು.

ಲಲಿತಾ — ಸಾಕುಮಾಡಿ ಇಂಥ ಚೇಷ್ಟೆಯು ನನಗೆ ಸೇರುವದಿಲ್ಲ.

ಪುಕ್ಕ — ಶ್ರೀಮನ್ನಾರಾಯಣನು ತನ್ನ ಸೇವೆಯಲ್ಲಿರುವ ಇಂದಿರಾದೇವಿಯ ಶ್ರಮವನ್ನು ಹರಿಸುವದಕ್ಕಾಗಿ ಅವಳನ್ನು ತನ್ನ ಹೃದಯ ಸಿಂಹಾಸನದ ಮೇಲೆ ಕೂಡ್ರಿಸಿ ಕೊಂಡನು ಅಂದಮೇಲೆ ನಿನ್ನನ್ನು ಪೀಠದ ಮೇಲೆ ಕುಳ್ಳಿರಿಸುವುದು ಬೇಡವೇ?

ಲಲಿತಾ — ಮನೋಹರಾ! ನನ್ನ ದೇವನ ಪೂಜೆಯನ್ನು ಮುಗಿಸಲು ಅವಕಾಶವನ್ನು ಕೊಡುವದಿಲ್ಲವೇ?

ಪುಕ್ಕ — ನೀನು ನಿನ್ನ ದೇವನ ಪೂಜೆಯನ್ನು ಮುಗಿಸಿದ ನಂತರ ನಾನು ನನ್ನ ದೇವಿಯ ಪೂಜೆಯನ್ನು ಮಾಡುವೆ.

ಲಲಿತಾ — ಮಹಾರಾಜ! ನನ್ನ ದೇವನ ಕೊರಳಲ್ಲಿ ಹಾಕಲು ಒಂದು ಸುಂದರವಾದ ಮಾಲೆಯನ್ನು ಮಾಡಿರುವೆ.

ಹುಕ್ಕ ಇದೇ ನೋಡು ಸ್ತ್ರೀಯರ ಸ್ವಾರ್ಥ ನನ್ನ ದೇವಿಯ ಕೊರಳಲ್ಲಿ ಹಾಕಲಿಕ್ಕೆ ನನಗೊಂದು ಮಾಲೆಯನ್ನು ಮಾಡಿ ತಂದು ಕೊಟ್ಟಿದ್ದರೇ ತಮಗೇನು ಶ್ರಮವಾಗುತ್ತಿದ್ದಿಲ್ಲ. ಶಿವಾಂಗಿಯು ನನಗೋಸ್ಕರವಾಗಿ ಹೂ ಮಾಲೆಯನ್ನು ಮಾಡಿಟ್ಟಿರುವಳು.

ಲಲಿತಾ : ಒಳ್ಳೇದು ಹಾರವನ್ನು ನೀವೇಕೆ ಮಾಡಿಕೊಟ್ಟಿರಿ ಎಂದು ನಾದಿನಿಯರನ್ನು ಕೇಳುತ್ತೇನೆ.

ಹುಕ್ಕ : ಏನು? ಶಿವಾಂಗಿ ನಿಮ್ಮ ನಾದಿನಿಯಾಗಿಬಿಟ್ಟಳೇ?

ಲಲಿತಾ ತಮಗಿನ್ನು ಗೊತ್ತಿಲ್ಲವೇನು? ಶಿವಾಂಗಿಯು ನಿಮ್ಮ ಸಹೋದರಿಯು. ಶಿವಾಂಗಿಯೇ ಶಿಂಗಲಾಕುಮಾರಿಯು.

ಹುಕ್ಕ : ಅಹಹ ಭಗಿನೀ ಪ್ರೇಮ ನಿಕ್ಷೇಪವು ಶಿಂಗಲಾಕುಮಾರಿ.

ಲಲಿತಾ ಅಹುದು ಮಹಾರಾಜ (ಕಿವಿಯಲ್ಲಿ ಹೇಳುವಳು)

ಹುಕ್ಕ ಧನ್ಯ! ಸದ್ಗುರೋತ್ತಮಾ. ನಾನು ಅನಂತ ಜನ್ಮಗಳನ್ನು ತಾಳಿ ನಿನ್ನ ಸೇವೆಯನ್ನು ಮಾಡಿದರೂ ತಮ್ಮ ಉಪಕಾರವು ತೀರಿಸಲ್ಪಡಲಾರದು.

ಲಲಿತಾ : ಮಹಾರಾಜ! ಈ ಆನಂದದ ಭರದಲ್ಲಿ (ಹೋಗುವಳು)

ಹುಕ್ಕ : ಅ ಹ ಹಾಗುರುದೇವಾ! ಇದೆಲ್ಲವೂ ನಿನ್ನ ಕೃಪಾ ಪ್ರಸಾದವು. ಪ್ರಿಯೇ! ಈ ಸುಮಂಗಲ ಪ್ರಸಂಗವು ಪ್ರಾಪ್ತವಾಮದಕ್ಕೆ ಸದ್ಗುರುವಿನ ಕೃಪೆಯೇ ಕಾರಣವಲ್ಲವೇ?

ಲಲಿತಾ ಅಹುದು ಮಹಾರಾಜ. ಈ ಕುಸುಮ ಮಾಲೆಯು ಎಷ್ಟು ಸುದೈವಿಯಾಗಿರುವುದು ನೋಡಿ ನನಗಿಂತ ಮುಂಚಿತವಾಗಿ ತಮ್ಮ ಹೃದಯವನ್ನು (ಕೊರಳಲ್ಲಿ ಹಾಕಿ)

-: ಪದ್ಯ :-

ವರಸುಮ ಮಾಲೆ ಭಲಾ
ನೀನೇ ಸುದೈವಿ ಮಾಲಾ
ಸುಮಶ್ರೀಕಾಂತಿ ನೋಡೋ ತೇಜಾ
ಮಾಲಿನಿ ತಾ ಸುಮಮಾಲಾ

ಹುಕ್ಕ — ಪ್ರಿಯೇ ಈ ಸೌಭಾಗ್ಯ ವೈಜಯಂತಿಯ ಮಾಲೆಯನ್ನು ನಿನ್ನ ಕೊರಳಲ್ಲಿ ಹಾಕುವೆನು. (ಮಾಧವನು ಬರುವನು)

ಮಾಧವ — ಪಾರ್ವತಿ ಪರಮೇಶ್ವರರಂತೆ ಕಂಗೊಳಿಸುವ ಹುಕ್ಕ ಲಲಿತೆಯರಿಗೆ ಸದಾ ಮಂಗಳವಾಗಲಿ. ಕುಮಾರ ರಾಷ್ಟ್ರಮಾತೆ ಜೊತೆಗೆ ಸ್ವಾತಂತ್ರ್ಯ ಭಾಗ್ಯವನ್ನು ಒದಗಿಸಿಕೊಟ್ಟ ಮಾತೃಋಣದಿಂದ ಮುಕ್ತನಾದ ನಿಮ್ಮ ಪ್ರೇಮ ಸೌಭಾಗ್ಯ ಮಾಂಗಲ್ಯವನ್ನು ಲಲಿತಾಕುಮಾರಿಯ ಕೊರಳಲ್ಲಿ ಕಟ್ಟುವದನ್ನು ಕಂಡು ನನ್ನ ಕಣ್ಣುಗಳು ಧನ್ಯವಾದವು. ಮೊದಲು ದೇಶಸೇವೆ. ಆಮೇಲೆ ಪ್ರೇಮ ಸೇವೆ ಎಂಬ ದಿವ್ಯ ಉದಾಹರಣೆಯನ್ನು ಜಗತ್ತಿಗೆ ಹಾಕಿ ಕೊಟ್ಟಿರುವಿ.

ಹುಕ್ಕ — ಗುರುಮಹಾರಾಜ! ಇದೆಲ್ಲವು ಈ ಪವಿತ್ರಪಾದ ಪ್ರಭಾವವು ಮಹಾರಾಜ! ತ್ರಿಭುವನ ಕೀರ್ತಿ ಸಂಪನ್ನರಾಗಿ ಹೋದ ಪಾಂಡವರ ದಿವ್ಯ ಚರಿತ್ರಕ್ಕೆ ಕರ್ಮಯೋಗಿಯಾದ ಶ್ರೀ ಕೃಷ್ಣನ ಪ್ರಭಾವವೇ ಕಾರಣವಲ್ಲವೇ? ಜಗತ್ತಿಗೆ ದಿವ್ಯ ತತ್ವದ ಪಾಠವನ್ನು ಕಲಿಸಿಕೊಟ್ಟ ಶ್ರೀ ರಾಮಚಂದ್ರನ ಶೀಲಧರ್ಮಕ್ಕೆ ವಶಿಷ್ಠ ವಿಶ್ವಾಮಿತ್ರರ ದಿವ್ಯಬೋಧನೆಯೇ ಕಾರಣವಲ್ಲವೇ? ಮಹಾರಾಜ! ದಿವ್ಯಜ್ಞಾನಿಗಳಾದ ತಮ್ಮ ಪ್ರಭಾವದಿಂದ ಅಂಕುರಿಸಿದ ಧರ್ಮ ಸಾಮ್ರಾಜ್ಯಾಂಕುರವು ತಮ್ಮ ಕೃಪಾಜಲದಿಂದಲೇ ಪ್ರೋಕ್ಷಿತವಾಗಿ ಉನ್ನತವಾದ ವೃಕ್ಷವು ಆಗುವದು. ಮಾಧವಾರ್ಯರು ಸೂತ್ರಧಾರರು. ಹುಕ್ಕ ಬುಕ್ಕರು ಕೇವಲ ಗೊಂಬೆಗಳು. (ಬುಕ್ಕ ಗೌರಾಂಬಿಕ ಬರುವರು) ಮಾಧವ

ಕುಮಾರಿ! ಕುಸುಮ ಮಾಲೆಯನ್ನು ಬುಕ್ಕನ ಕೊರಳಿಗೆ ಹಾಕಿ ಮಾಧವನ ಮನಸ್ಸಿಗೆ ಆನಂದವನ್ನುಂಟು ಮಾಡು. ಗುರು ಸಮ್ಮುಖದಲ್ಲಿ ಮಾಡುವ ಮಾಲಿಕಾರ್ಪಣೆಗೆ ಹೆಚ್ಚು ಮಹತ್ವ ಬರುವದು.

ಗೌರಾಂಬಿಕ — ಸದ್ಗುರೋತ್ತಮರ ಆಶೀರ್ವಾದ ಪ್ರಭೆಯಿಂದ ಪ್ರಕಾಶಿಸುವ ಈ ಮಾಲೆಯನ್ನು .... (ಬುಕ್ಕನ ಕೊರಳಿಗೆ ಹಾಕುವಳು)

೨ನೇ ಪ್ರವೇಶ

ಸಮಯ : ಪ್ರಾತಃಕಾಲ

(ಕುರುಬರ ತಂಡ ಹಾಡುತ್ತ ಬರುವುದು)

ಬೀರಣ್ಣ — ಯೇನು ಕೆಂಜೋಡಣ್ಣ! ಇಕಾ ನೋಡು ಈ ಬಂಗಾರದ ಖಡೆ. ಯುದ್ಧವಾಗ ನಾವು ಗೆದ್ದದ್ದರಿಂದ ಗುರುಗೋಳು ಬಂಗಾರದ ಖಡೆ ಕೊಟ್ಟಾರ

ಕೆಂಜೋಡಿ — ಬೀರಾ! ಒಮ್ಮೆ ಗುರುಗಳು ಕೇಳಿದರು ಏನ ಇನಾಂ ಬೇಕೋ ಕೆಂಜೋಡಿ ಅಂತಾ ಕೇಳಿದ್ರಪಾ ಆಗ ನಾ ಅಂದೆ ದ್ಯಾವರು ನಮ್ಮ ನಿಯಾಕಿಗೆ ದಾಗೀಣ ಬೇಕ್ರಿ ಅಂದೆ ಆಗ ಅವರು ಎಷ್ಟು ದಾಗೀಣ ಕೊಟ್ರಂದೀ ಬಂಗಾರ ಬಳಿ, ಬಂಗಾರವಂಕಿ, ಬಂಗಾರ ಡಾಬಾ, ವಾಲೀಜೋಡ, ಮುತ್ತಿನ ಮೂಗತಿ, ಮ್ಯಾಗ ಎಡ್ಡು ಜರದ ಸೀರಿ ಇವೆಲ್ಲಾ ತಗೊಂಡು ಮನಿಗೆವ್ಹಾದೆ.

ಬೀರಣ್ಣ — ಎಣ್ಣಾ ಇವೆಲ್ಲಾ ನಾಗವ್ವತ್ತಿಗೇನು?

ಕೆಂಜೋಡಿ — ಹೋಗೋ, ಮಂಜಾಳ ಹೋಗಲಿ ಅವೆಲ್ಲಾ ನೋಡಾಣ ನಿಮ್ಮ ಅತ್ತಿಬಾಯಿ ತಗದಳು.

ಬೀರಣ್ಣ — ಪಾಪಾ! ಬಾಯಿ ತೆಗಿದೇನು ಮಾಡ್ಯಾಳು ದಾಗೀನೆ ನೋಡಾಣ ಹೆಣ್ಣ ದೆವ್ವ ಸುದ್ದಾಬಾಯಿ ತೆಗಿತಾವ ನಾಗವ್ವತ್ತಿ ಮನಸ್ಯಾಳು ಪಾಪ ಬಾಯಿ ತೆಗಿದ ಏನ ಮಾಡ್ಯಾಳು ಹೂ ಮುಂದ?

ಕೆಂಜೋಡಿ	ಆ ಮ್ಯಾಗ ಕಾರಹುಣ್ಣಿಮಿ ಎತ್ತ ಸಿಂಗಾರಾ ಮಾಡಿದ್ದಂಗ ನಿಮ್ಮತ್ತಿನ ಸಿಂಗಾರಾ ಮಾಡಿ ಗುರುಗೋಳ ದರಶನಕ್ಕೆ ಕರಕೊಂಡ ಹೋಗಿ ಗುರುವಿನ ಪಾದದ ಮ್ಯಾಗ ಕೆಡವಿದೆ. ಆಗ ಗುರುಗೋಳು ಹಿರಿಹಿರಿ ಹಿಗ್ಗಿ ಆ ಹಿಗ್ಗಿನ್ಯಾಗ ಹರಕಿ ಕೊಟ್ಟರು.
ಬೀರಣ್ಣ	ಯೇನಂತಾ ಹರಕಿ ಕೊಟ್ಟರು?
ಕೆಂಜೋಡಿ	ಗುರುಗೋಳ ಹೀಂಗಂದ್ರು: ಕೆಂಜೋಡಿ ನೀನು ಇನ್ನು ಎಂಟ ಮಂವಿ ಬಂಟರಾಗುವಂಥಾ ಮಕ್ಕಳನ್ನು ಹಡಿ ಗುರುಗೋಳ ಮನಸ್ಸಾ ಅಲ್ಲಪಾ ಅವಾ ಹಂಪಪ್ಪ......
ಕರಿಯಾ	ಬೀರಣ್ಣ ನನ್ನದೀಟು ಕೇಳು.
ಕೆಂಜೋಡಿ	ಹೂ ಹೇಳು ಘಗನ.
ಬೀರಣ್ಣ	ಕರಿಯಣ್ಣ ! ಗುರುಗೋಳು ಏನು ಕೊಟ್ಟರು.
ಕೆಂಜೋಡಿ	ಯಂಣಾ! ಗುರುಗಳೋ ಏ ಮಗನ ಕರಿಯಾ ನಿನಗೇನು ಬೇಕು ಇನಾಮು ಅಂತಕೇಳಿದರು ದ್ಯಾವರು ತಮ್ಮ ಮಗ ಬಾಲ್ಯಾಗ ವಸ್ತಾ ಬೇಕ್ರಿ ಅಂದೆ. ಬಾಲ್ದೊಡವಿ ವಸ್ತಾ ಎಷ್ಟು ಕೊಟ್ರಪಾ ಅಂದರೆ ಮುತ್ತಿನ ಮುರವಾ, ಬಂಗಾರದ ನಾಗ ಮುರಗಿ, ಬಂಗಾರದ ಉಡದಾರ, ಕಡೇ, ತೋಡೇವು ಇದರಂತೆ ಯಾರ ಏನೇನು ಬೇಡ್ತಾರ ಅದರಂತೆ ಕೊಟ್ರಪಾ.
ಬೀರಣ್ಣ	ಇಂಥಾ ಮಹಾತ್ಮರು ಇರೋ ನಾಡಿನ ಪುಣ್ಯ ಖರೇ ಪುಣ್ಯ.
ಮಲ್ಲಸರ್ಜ	ಇದಿರಲಿ ಬಿಡು ಬಂಗಾರದ ಮಳಿ ಸುರಸತೀನಿ ಅಂತಾ ಗುರುಗೋಳು ತಪಾ ಮಾಡಕ ಕುಂತಾರ ಮೂರು ವಾರಾ ಆತು. ಕಣ್ಮುಚ್ಚಿಕೊಂಡು ಸುಮ್ಮಕ ಕುಂತಾರ. ಅನ್ನಯಿಲ್ಲಾ, ನೀರಯಿಲ್ಲಾ, ನೀಡಿಕಿಲ್ಲಾ ಏನಪಾ ಮಾರಾಯಾ ಹಂಪೆಪ್ಪನ ಮನಸ್ಸಾ ಆಗಿ ಹುಟ್ಟಿ ಬಂದಾನ.

ಕೆಂಜೋಡಿ ಇಂಥ ಮಹಾತ್ಮರು ಇರೋತನಕಾ ನಾಡಿಗೇನು ಕೊರತಿ, ದುಸಕಾಲ ಕೇಳಬೇಡ, ನೀರಿನ ಅರಬು ಅಂತು ಇಲ್ಲೇ ಇಲ್ಲ ಪಿಡಗಿನ ಸುದ್ದಿ ಅಂತೂ ತೆಗಿಬ್ಯಾಡಾ, ದ್ಯಾವರು ಇಂತಾ ಮಹಾತ್ಮರಿಗೆ ಚಿರಂಜೀವಿ ಮಾಡಬೇಕು.

ಬೀರಣ್ಣ ಕೆಂಜೋಡಣ್ಣ ! ನೀ ಗುರುಗೋಳ ಮ್ಯಾಲ ಕಟ್ಟಿದ ಲಾವಣಿ ಅನ್ನಪಾ.

ಕೆಂಜೋಡಿ ಒಟ್ಟೂರು ಕೂಡೇ ಅನ್ನುನು.

ಡಾಂಗರಿಕ ಹೇಳಿಲ್ಲಾ ಅಂದಿರಿ ಕೇಳಲಿಲ್ಲಾ ಅಂದಿರಿ ನಾಳೆ ಬೆಳಗ್ಗೆ ಯಾವತ್ತರೂ ವಾಲಿ ಭಾಂಡಾರದ ಕಡೆಗೆ ಬರಬೇಕು. ಬಂಗಾರದ ಮಳೆ ಬೀಳುವುದು. ಈ ವಿದ್ಯಾನಗರವು ವಿಜಯನಗರ ಎಂದು ಹೊಸ ಹೆಸರನ್ನು ತಾಳುವುದು. (ಝಾಂಗಟೆ ಹೊಡಿಯುವನು. ಪರದೆ ಬೀಳುವುದು.)

೩ನೇ ಪ್ರವೇಶ

(ಹುಕ್ಕುಬುಕ್ಕರು ಬಿಚ್ಚುಗತ್ತಿಯಿಂದ ಪಹರೆ ಮಾಡುತ್ತಿರುವರು. ಮಾಧವಾರ್ಯರು ಸಮಾಧಿಸ್ತರಾಗಿ ಅಂತರ್‌ದೃಷ್ಟಿಯಲ್ಲಿ ದಿವ್ಯ ತೇಜವು ಕಂಡು ಆ ಸ್ಥಳವನ್ನು ಪ್ರಕಾಶಮಯ ಮಾಡುವುದು.)

ಮಾಧವ (ಎದ್ದು) ಅಹಾ ! ಮಾತೇ...

ಸೀಸ ಪದ್ಯ

ಅಮ್ಮಾ ಧರ್ಮಕಾರ್ಯಕ್ಕಾಗಿ ಸುವರ್ಣವೃಷ್ಟಿಯನ್ನು ಸುರಿಸು.

(ಭುವನೇಶ್ವರಿ ದರ್ಶನ)

ಭುವನೇಶ್ವರಿ : ಬಾಳಾ ಮಾಧವಾ! ನಿನಗೆ ಮುಂದಿನ ಜನ್ಮದಲ್ಲಿ ಅಪಾರ ಸಂಪತ್ತಿನ ಸಹಾಯವು ದೊರೆಯುವುದು.

ಮಾಧವ   ಅಮ್ಮಾ !ಧರ್ಮ ಸಾಮ್ರಾಜ್ಯಕ್ಕೋಸ್ಕರವಾಗಿ ಈ ಮಾಧವನು ಕ್ಷಣದಲ್ಲಿಯೇ ಚತುರ್ಥಾಶ್ರಮವನ್ನು ಸ್ವೀಕರಿಸುವನು ಮಾತೆ ನನಗೆ ಹೊಸ ಜನ್ಮ ಪ್ರಾಪ್ತವಾಯಿತಲ್ಲವೆ?

ಭುವನೇಶ್ವರಿ :   ದಿವ್ಯ ಜ್ಞಾನಿಯಾದ ನಿನ್ನ ಇಚ್ಛೆಯು ಪೂರ್ಣವಾಗಲೆಂದು ವರಪ್ರದಾನ ಮಾಡಿರುವೆ. ಇನ್ನು ತುಸುವೇಳೆಯಲ್ಲಿ ಸುವರ್ಣ ವೃಷ್ಟಿಯಾಗುವದು ಚತುರ್ಥಾಶ್ರಮವನ್ನು ಸ್ವೀಕರಿಸಿದ ನಿನ್ನನ್ನು ಲೋಕವು ವಿದ್ಯಾರಣ್ಯರೆಂದು ಕರೆಯಲಿ.

ಮಾಧವ   ಭುವನೇಶ್ವರಿ ಮಾತಾಕಿಜೈ (ಹುಕ್ಕ ಬುಕ್ಕರು ಬಂದು ನಮಸ್ಕರಿಸುವರು) ಧರ್ಮಕಾರ್ಯಕ್ಕಾಗಿ ಮಾತೆಯ ವರಪ್ರದಾನ ವಾಗಿರುವದು. ಸಕಲರನ್ನು ಬೇಗನೆ ಬರಮಾಡು. ಉಷಃಕಾಲದ ಮಾರುತನು ಮಾತೆಯ ಸಂದೇಶವನ್ನು ಬೀರುತ್ತಿರುವನು.

ಹುಕ್ಕ   ಬುಕ್ಕರಾಯಾ! ಸಕಲರನ್ನು ಬೇಗನೆ ಬರಮಾಡು. ಸದ್ಗುರೋತ್ತಮಾ. (ನಮಸ್ಕರಿಸುವನು)

ಮಾಧವ   ಕುಮಾರ ! ಭುವನೇಶ್ವರಿ ಮಾತೆಯ ಆಶಿರ್ವಾದದ ಕವಚವು ನಿನಗಿರುವುದು. ನಿಮ್ಮಿಬ್ಬರ ಭಾವೀ ಸಂತಾನಕ್ಕಾದರೂ ಮಾತೆಯ ಆಶೀರ್ವಾದದ ಕವಚವು ಇಯಿರುವುದು. (ಎಲ್ಲರೂ ಬರುವರು) ಎಲವೋ ಮಾತೆಯ ಜಯ ಜಯಕಾರವನ್ನು ಹೀಗೆ ಮಾಡಬೇಕಲ್ಲ ಜಯ ಜಯ ಕಾರದ ದನಿಯಿಂದ ಸದಾನಂದದಲ್ಲಿ ನಗ್ನವಾಗಿದ್ದ ಈಶ್ವರೀ ಶಕ್ತಿಯು ಜಾಗ್ರತಿಯನ್ನು ಹೊಂದಬೇಕು. ಜಯ ಜಯಕಾರದ ಶಬ್ದಗಳು ಹವೆಯಲ್ಲಿ ತೆರೆಗಳನ್ನು ಎಬ್ಬಿಸುತ್ತ ಆಸೇತು ಹಿಮಾಚಲದವರನ್ನು ಪವಿತ್ರಗೊಳಿಸಲಿ. ಅದೋ ನೋಡಿ ಗಗನ ಮಂಡಲವನ್ನು ಭೇದಿಸಿ ಜಗನ್ಮಾತೆಯು ತನ್ನ ವರದ ಹಸ್ತದಿಂದ ... ಹೂಂ ಭುವನೇಶ್ವರಿ ಮಾತಾಕಿ ಜಯ. (ಐಸಲ ಅನ್ನುವರು) ದಿವ್ಯ ಪ್ರಕಾಶ ಕಂಡು ಸುವರ್ಣವೃಷ್ಟಿಯಾಗುವದು.

(ಪರದೆ ಬೀಳುವುದು)

೬ನೇ ಪ್ರವೇಶ

(ಸ್ಥಳ : ವಿದ್ಯಾನಗರ ಬೀದಿ)

ಬೀರಣ್ಣ — ಏನು ಅಜ್ಜಯ್ಯಾ! ಮೊಮ್ಮಗನನ್ನು ಕರೆದುಕೊಂಡು ಎತ್ತ ಹೊರಟಿರುವಿ. ಜನರ ಗಲಾಟೆಯಲ್ಲಿ ಸಿಕ್ಕು ಜಿಲಿಜಿಲಿಯಾಗುವಿ ಎಲ್ಲಿಗೆ ಹೋಗಬೇಕೆಂದು ಹೊರಟಿ.

ಮುದುಕ — ಹುಕ್ಕಪ್ಪ ದೊರಿ ಸಿಂಹಾಸನ ಏರತಾರಂತೆ ಅದನ್ನ ನೋಡಾಕ ಹೊಕ್ಕೀನಿ. (ಪದ ಅನ್ನುವನು) ತಮ್ಮಾ ನೀನು ಯಾರು?

ಬೀರಣ್ಣಾ — ನಿಮ್ಮ ಹಳೇಮನಿ ಸಿದ್ದಣ್ಣನ ಮಗಾ ಬೀರಾ!

ಮುದುಕ — ಛೇ ಹೋಗ! ಹಂಗಾರ ಏನ ಹೇಳಲಿ ಅಲ್ಲಿಗೇ ನನ್ನ ಕರಕೊಂಡು ಹೋಗು.

ಬೀರಣ್ಣ — ಹೂಂ ಯಜ್ಜಾ! ಆ ಪದಾ ಇನ್ನೊಮ್ಮೆ ಪೂರಾ ಅನ್ನು (ತೆರೆಯಲ್ಲಿ ನಗಾರಿಸಪ್ಪಳ) ಅರಮನಿಯಾಗ ನಗಾರಿ ನುಡಿಯಾಕ ಹತ್ತು. ಹೂಂ ಹೋಗೋಣ ನಡಿ.

(ಹೋಗುವರು)

೭ನೆಯ ಪ್ರವೇಶ

(ವಿಜಯನಗರದ ಸಭಾಮಂದಿರ ಯಾವತ್ತರೂ ಕುಳಿತಿರುವರು.)

ಮಾಧವ — ವೀರಶಿರೋಮಣಿಗಳೇ! ಕನ್ನಡ ನಾಡಿನ ಸೌಭಾಗ್ಯದ ಮಂಗಲ ದಿನವು ತಮ್ಮೆಲ್ಲರ ಅಲೌಕಿಕವಾದ ತೇಜಸ್ಸಿನಿಂದ ಉದಯವಾಗಿರುವುದು. ವಿಜಯನಗರ ಸಾಮ್ರಾಜ್ಯಾಂಕುರವು ಅಂಕುರಿಸಲಿಕ್ಕೆ ರಣವೀರ ರಕ್ತದ ಮಾಂಸವು ಪೌಷ್ಟಿಕ ಪ್ರದವಾಯಿತು. ಭುವನೇಶ್ವರಿ ಮಾತೆಯ ವರಪ್ರದಾನದಿಂದ ಎಂದೂ ಮರೆಯದ ಕರ್ನಾಟಕ ಸಾಮ್ರಾಜ್ಯವು ನಾಡಿನ ಹೃತ್ಪಟಲದಲ್ಲಿ ಬೇರೂರಿರುವುದು. ವೀರರೇ! ಭುವನೇಶ್ವರಿ ಮಾತೆಯನ್ನು ಸ್ಮರಿಸುತ್ತ ನಿಮ್ಮ ಸಾನಂದವನ್ನು ತೋರ್ಪಡಿಸಿರಿ.

(ಜಯ ಜಯಕಾರ) ಕುಮಾರಾ! ಕರ್ನಾಟಕ ಸಾಮ್ರಾಜ್ಯದ ಭುವನೇಶ್ವರಿ ಮಾತೆಯ ವರಪ್ರದಾನದಿಂದ ಪ್ರಭಾ ಪೂರ್ಣವಾಗಿರುವ ಈ ಸಿಂಹಾಸನವನ್ನೇರಿ ಸಕಲರಿಗೂ ಆನಂದವನ್ನು ನೀಡು. (ಹುಕ್ಕನು ಸಿಂಹಾಸನ ಏರುವನು) (ಮಾಧವನು ಹುಕ್ಕನ ತಲೆಯ ಮೇಲೆ ಕಿರೀಟ ಹಾಕುವನು) ಭುವನೇಶ್ವರಿ ಮಾತಾಕಿ ಜಯ!

ಚೋಪದಾರ : ರಾಜಾಧಿರಾಜ ಹುಕ್ಕಮಹಾರಾಜ ಕಂಪಲಿ ಸುಭೇದಾರರ ಆಗಮನ.

ಮಾಧವ ಬುಕ್ಕರಾಯ ಹೋಗಿ ಮಲೀಕನಾಯಬರನ್ನು ಎದುರುಗೊಂಡು ಕರೆದು ಕೊಂಡು ಬಾ (ಕರೆತರುವನು)

ಹುಕ್ಕ ಬರಬೇಕು. ಖಾನಬಹಾದ್ದೂರರು ಈ ಪೀಠವನು ಅಲಂಕರಿಸಬೇಕು.

(ನೃತ್ಯವಾಗುವದು)

ಮಲೀಕ ವೀರರೇ! ತಮಗೆ ಆನಂದದಾಯಕ ವೃತ್ತಾಂತವನ್ನು ನಿವೇದಿಸಲು ಮನಸ್ಸಿಗೆ ಬಹು ಆನಂದವಾಗುವದು. ದಿಲ್ಲಿಯ ಸುಲ್ತಾನ ಮಹಮ್ಮದ ತುಘಲಕನು ಹುಕ್ಕ ದೊರೆಗಳನ್ನು "ದಕ್ಷಿಣ ಭಾರತ ಕಾ ರಾಜಾ" ಎಂದು ಪ್ರಕಟಿಸಲಿಕ್ಕೆ ತಮ್ಮ ಒಪ್ಪಿಗೆಯನ್ನುಕೊಟ್ಟಿರುವರು. ಹಾಗೂ ವಸ್ತ್ರಗಳನ್ನು ಅರ್ಪಿಸಲು ಸಹ ಕಳುಹಿಸಿಕೊಟ್ಟಿರುವರು. ನಾನು ರಾಜಧಾನಿಗೆ ಹೊರಡುವೆನು. ಹುಕ್ಕದೊರೆಗಳು - ಕಂಪಲಿಯ ಸಂಬಂಧವಾಗಿ ಇಂತಿಷ್ಟು ಹಣವನ್ನು ಕಳುಹಿಸಿ ಕೊಡಬೇಕೆಂದು ದಿಲ್ಲಿಗೆ ಹೋಗಿ ಸುಲ್ತಾನರ ಆಜ್ಞೆಯಂತೆ ಹಿಂದಿನಿಂದ ಕಳುಹಿಸುವೆನು. ಹುಕ್ಕ ದೊರೆಗಳಲ್ಲಿಯೂ ನಮ್ಮಲ್ಲಿಯೂ ಇರುವಂಥ ಮಿತ್ರತ್ವಕ್ಕೆ ಕೊನೆಯವರೆಗೂ ಹಿಂದೂ ಮುಸಲ್ಮಾನರಲ್ಲಿ ಕಂಗೊಳಿಸುತ್ತಿರಲೆಂದು ಖುದಾನಲ್ಲಿ ಪ್ರಾರ್ಥಿಸುತ್ತೇನೆ.

ಮಾಧವ ಸಜ್ಜನರೇ! ಕರ್ನಾಟಕ ಸಾಮ್ರಾಜ್ಯ ವೃಕ್ಷದ ಆನಂದದಾಯಕವಾದ ಛಾಯೆಯಲ್ಲಿ ಧರ್ಮಕ್ಕೂ, ನ್ಯಾಯಕ್ಕೂ,

ವಿದ್ಯೆಕ್ಕೂ, ಯೋಗ್ಯವಾದ ಮರ್ಯಾದೆಯು ದೊರೆಯುವದು. ಕರ್ನಾಟಕ ಸಾಮ್ರಾಜ್ಯವೆಂದರೆ, ಧರ್ಮ ಸಾಮ್ರಾಜ್ಯ ನ್ಯಾಯ ಸಾಮ್ರಾಜ್ಯ, ಬುಕ್ಕ ಕುಮಾರನ ಪ್ರಜಾ ಜನರಲ್ಲಿ ಎಷ್ಟೋ ಜನ ಹರಿಭಕ್ತರು, ಎಷ್ಟೋ ಜನ ಹರಭಕ್ತರು ಇರುವರು, ಹರಿಹರರಲ್ಲಿ ಭೇದವಿಲ್ಲೆಂಬುದು ಜಗತ್ತಿಗೆ ತೋರಿಸುವದಕ್ಕಾಗಿ ಹರಿಹರರು ಒಂದೇ ರೂಪದಿಂದ ಹರಿಹರದಲ್ಲಿ ವಾಸಮಾಡಿರುವರು. ಇದೇ ಭೂಕೈಲಾಸ. ಇದೇ ವೈಕುಂಠ. ಸಜ್ಜನರೇ! ಪರಮಾತ್ಮನ ಪ್ರತಿನಿಧಿ ಎನಿಸುವ ರಾಜನು ಕೂಡಾ ಹಾಗೇ ಇರಬೇಕಲ್ಲವೇ! ಅದಕ್ಕೋಸ್ಕರವಾಗಿ ಬುಕ್ಕನಿಗೆ ಹರಿಹರ ಎಂದು ನಾಮಕರಣ ಮಾಡುವೆ.

ಎಲ್ಲರೂ ರಾಜಾಧಿರಾಜ ಹರಿಹರ ಮಹಾರಾಜಕಿ ಜಯ್!

ಮಾಧವ : ಬುಕ್ಕರಾಯ! ಸಿಂಹಾಸನ ಪರವಾಗಿ ಖಾನಬಹಾದ್ದೂರ ಮಲೀಕ ನಾಯಬರಿಗೆ ಪೂಮಾಲೆಯನ್ನು ಹಾಕಿ ನಿರೋಪವನ್ನು ಕೊಡು. (ಬುಕ್ಕನು ಮಾಲೆ ಹಾಕುವನು. ಮಲೀಕ ನಾಯಬ ಹೋಗುವನು) ಕುಮಾರಾ ! ಸಕಲವೂ ಪಂಪಾಪತಿಯ ಹೆಸರಿನಿಂದಲೇ ನಡೆಯತಕ್ಕದ್ದು. ಮಾನವನ ಪ್ರತಿಕಾರ್ಯವನ್ನು ಶಿವಾರ್ಪಣವೆಂದು ಮಾಡತಕ್ಕದ್ದಲ್ಲವೇ? ಆದ್ದರಿಂದ ಕರ್ನಾಟಕ ಸಾಮ್ರಾಜ್ಯದ ನಾಣ್ಯಗಳ ಮೇಲೆ "ವಿರೂಪಾಕ್ಷ" ಎಂಬ ಹೆಸರು ಕಂಗೊಳಿಸುತ್ತಿರಲಿ.

ಬುಕ್ಕ ಸದ್ಗುರುವಿನ ಆಜ್ಞೆಯು ಶಿರಸಾಮಾನ್ಯವಾಗಿರುವದು.

ಮಾಧವ ಭುವನೇಶ್ವರಿ ಮಾತೆಯ ವರಪ್ರದಾನ ಪ್ರಭಾವದಿಂದ ವಿಜಯನಗರದ ಸಾಮ್ರಾಜ್ಯವು ದಿನೇ ದಿನೇ ವರ್ಧಿಸುತ್ತಿರಲೆಂದು ಆ ಜಗದೀಶನನ್ನು ಪ್ರಾರ್ಥಿಸಿರಿ.

ಮಂಗಲ

ಸಮಾಪ್ತ

ಶುಭಮಸ್ತು



ದಿ. ಕಂದಗಲ್ಲ ಹಣಮಂತರಾಯರು ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಅತ್ಯಂತ ಹಿರಿಯ ನಾಟಕಕಾರರು. ನಾಲ್ಕೈದು ದಶಕಗಳ ಹಿಂದೆ ಅವರ ನಾಟಕಗಳನ್ನು ಆಡದ ಕಂಪನಿಗಳೇ ಇರಲಿಲ್ಲ. ತಮ್ಮ ಪೌರಾಣಿಕ ನಾಟಕಗಳ ಮೂಲಕ ಮಹಾಭಾರತದ ಕಥೆಯನ್ನು ನಾಡಿನ ಹಳ್ಳಿ ಹಳ್ಳಿಗೂ ಪರಿಚಯಿಸಿದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ಅವರು ಸೃಷ್ಟಿಸಿದ ಭೀಮ, ಅರ್ಜುನ, ಅಶ್ವತ್ಥಾಮ, ಬಭ್ರುವಾಹನ, ಕರ್ಣ, ಚಿತ್ರಾಂಗದೆ, ದ್ರೌಪದಿಯರು ಜನಮನದಲ್ಲಿ ಅಚ್ಚೊತ್ತಿ ಉಳಿದಿರುವಂತೆ, ಆ ಪಾತ್ರಗಳನ್ನು ಅಭಿನಯಿಸಿದ ಅನೇಕ ಪ್ರತಿಭಾವಂತ ನಟ-ನಟಿಯರು ರಂಗಭೂಮಿಯಲ್ಲಿ ತಾರಾಮೌಲ್ಯ ಗಳಿಸಿ ಪ್ರಸಿದ್ಧಿಗೆ ಬಂದರು. ಬದಲಾದ ಅಭಿರುಚಿಯೊಂದಿಗೆ ಕಂದಗಲ್ಲರ ನಾಟಕಗಳು ಈಗ ವೃತ್ತಿರಂಗಭೂಮಿಯಿಂದ ಮರೆಯಾಗಿದ್ದರೂ, ಗ್ರಾಮೀಣ ಪ್ರದೇಶಗಳಲ್ಲಿ ಅವುಗಳ ಆಕರ್ಷಣೆ ಇನ್ನೂ ಕಡಿಮೆಯಾಗಿಲ್ಲವೆಂಬುದೇ ಒಂದು ಅಗ್ಗಳಿಕೆ.

ಪೌರಾಣಿಕ ನಾಟಕಗಳ ಜೊತೆಗೆ ಕಂದಗಲ್ಲರು ಆ ಕಾಲದ ಜ್ವಲಂತ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ.

"ವರಪ್ರದಾನ" ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೊದಲ ದಿನಗಳನ್ನು ಕುರಿತ ಕಂದಗಲ್ಲರ ಐತಿಹಾಸಿಕ ನಾಟಕ. ದೇಶಾಭಿಮಾನ, ನಾಡ ಅಭಿಮಾನಗಳನ್ನು ಉದ್ದೀಪಿಸುವ ಈ ನಾಟಕ ಭಾರತದ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳವಳಿಗಳಿಗೆ ಪರೋಕ್ಷವಾಗಿ ನೀಡಿದ ಒತ್ತಾಸೆ ಸ್ಮರಣೀಯವಾದುದು.

- ಗಿರಡ್ಡಿ ಗೋವಿಂದರಾಜು